ರಾಷ್ಟ್ರ ಜಾಗೃತಿಯ ದೈನಿಕ


ಹೊಸ ದಿಗಂತ


ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಶುಕ್ರವಾರ, 8 ಮೇ 2026
ಸಂಪುಟ 16, ಸಂಚಿಕೆ 44, ಪುಟಗಳು 16
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

13 ಯುದ್ಧ ವಿಮಾನ ಧ್ವಂಸ
ಆಪರೇಷನ್ ಸಿಂದೂರ್‌ನಲ್ಲಿ ಪಾಕ್‌ಗೆ ಭಾರೀ ಹೊಡೆತ: ಐಎಎಫ್

• ಪುಟ 9







ಕೃಷಿ ಬಜೆಟ್‌ನಲ್ಲಿ ಭರಪೂರ ಅನುದಾನ

ಕಾರ್ಯಕರ್ತರಿಂದ ಅಭಿಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಇತಿಹಾಸದಲ್ಲೇ ಕೃಷಿ ಬಜೆಟ್ ಮಂಡಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನರಗುಂದ ಮತಕ್ಷೇತ್ರದ ಅಭಿವೃದ್ಧಿಗಾಗಿ ಅಂದಾಜು ಒಟ್ಟು ರೂ.523.75 ಕೋಟಿ ಅನುದಾನ ನೀಡಿದ್ದಾರೆ.

ಅನೇಕ ಅಭಿವೃದ್ಧಿ ಪರ ಕೆಲಸ ಕಾರ್ಯಗಳ ಯಶಸ್ವಿಗೆ ಶಾಸಕ ಸಿ.ಸಿ.ಪಾಟೀಲ ಅವರು ಬಿ.ಎಸ್. ಯಡಿಯೂರಪ್ಪ ಅವರಿಗೆ ಸಾರಥಿಯಾಗಿ ಬೆನ್ನಿಗೆ ನಿಂತಿದ್ದ ಅನೇಕ ಪ್ರಸಂಗಗಳಿವೆ. ಯಡಿಯೂರಪ್ಪ ಅವರು ಕೊಟ್ಟ ಮಾತಿಗೆ ತಪ್ಪುವವರಲ್ಲ, ಮಾಡಬೇಕಾದ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿಯೇ ಬಿಟ್ಟಿದ್ದಾರೆ. ಯಡಿಯೂರಪ್ಪ ಅವರು ನಂಬಿದವರನ್ನು ಯಾರನ್ನು ಕೈ ಬಿಟ್ಟಿಲ್ಲ, ಎಲ್ಲರನ್ನೂ ಬೆಳೆಸಿದ್ದಾರೆ. ಅವರ ಸಂಪುಟದಲ್ಲಿ ಚೆನ್ನಾಗಿ ಕೆಲಸ ಮಾಡಿದ ಮಾಜಿ ಮುಖ್ಯಮಂತ್ರಿಗಳಾದ ಸದಾನಂದಗೌಡ್ರು, ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ ಇವರೆಲ್ಲರನ್ನೂ ಮುಖ್ಯಮಂತ್ರಿ ಮಾಡಿದ್ದೇ ಬಿ.ಎಸ್.ಯಡಿಯೂರಪ್ಪ.



'ಯಡಿಯೂರಪ್ಪ ಅಭಿಮಾನೋತ್ಸವ' | ರಾಜಕೀಯ ಪಯಣಕ್ಕೆ 50ರ ಸಂಭ್ರಮ

ಮುಳುಗಡೆ ಪ್ರದೇಶದ ನಿರಾಶ್ರಿತರ ಬದುಕಿಗೆ

ಪುನರುಜ್ಜೀವನ ಕಟ್ಟಿಕೊಟ್ಟ ಯಡಿಯೂರಪ್ಪ

• **ನರಗುಂದ:** 2019-20ನೇ ಸಾಲಿನಲ್ಲಿ ಭಾರೀ ಮಳೆಯ ಪರಿಣಾಮ ಕರ್ನಾಟಕ ಉತ್ತರ ಭಾಗದಲ್ಲಿ ನದಿ ತೀರದ ಅನೇಕ ಗ್ರಾಮಗಳು ಸೇರಿದಂತೆ ಹೊಲದಲ್ಲಿ ರೈತರು ಬೆಳೆದ ಬೆಳೆಗಳು ಸಹ ಸಂಪೂರ್ಣ ಪ್ರವಾಹಕ್ಕೆ ಕೊಚ್ಚಿಕೊಂಡು ಹೋದವು. ಅದೇ ಸಂದರ್ಭದಲ್ಲಿ ತಾಲೂಕಿನ ಕೊಣ್ಣೂರ ಗ್ರಾಮದ ಎಡಬಲ ಗ್ರಾಮಗಳೆಲ್ಲವೂ ಮಲಪ್ರಭಾ ನದಿಯಿಂದ ಹೊರ ಬಿಟ್ಟ 19 ಸಾವಿರ ಕ್ಯೂಸೆಕ್ ನೀರಿನಿಂದ ಸಂಪೂರ್ಣ ಮುಳುಗಡೆಯಾದವು.

ಹೊಲಗಳಲ್ಲಿ ಬೆಳೆದ ಬೆಳೆಗಳಂತೂ ಪ್ರವಾಹದ ರಭಸಕ್ಕೆ ಕೊಚ್ಚಿಕೊಂಡು ಹೋದಾಗ ಜನರ ಬದುಕು ಮೂರಾಬಟ್ಟೆಯಾಯಿತು. ಮುಳುಗಡೆಗೊಳಗಾದ ಜನರು ಬೀದಿಗೆ ಬಂದು ನಿರಾಶ್ರಿತರಾದರು. ಸಂತ್ರಸ್ತರ ಹಸಿವು ತಣಿಸಲು ಆಗಿನ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಚಿವರಾಗಿದ್ದ ಸಿ.ಸಿ.ಪಾಟೀಲ ಅವರ ಮನವಿ ಮೇರೆಗೆ ಗಂಜಿ ಕೇಂದ್ರ ಹಾಗೂ ಆರೋಗ್ಯ ಕೇಂದ್ರಗಳನ್ನು ತೆರೆಯಲಾಯಿತು. ಪ್ರವಾಹದಲ್ಲಿ ಸಿಲುಕಿಕೊಂಡವರ ರಕ್ಷಣೆಗಾಗಿ ಎನ್‌ಡಿಆರ್‌ಎಫ್ ತಂಡಗಳನ್ನು ಕರೆಸಲಾಯಿತು.

ಕರ್ನಾಟಕ ಉತ್ತರ ಭಾಗವು ಪ್ರವಾಹಕ್ಕೆ ಸಿಲುಕಿದ್ದ ಸಂದರ್ಭದಲ್ಲಿ ನೀರಿನ ಹರಿವು ಮತ್ತು ಪ್ರವಾಹದ ಸ್ಥಿತಿಗತಿಯ ಜೊತೆಗೆ ತೊಂದರೆಗೊಳಗಾದ ನಿರಾಶ್ರಿತರ ಸಂಕಷ್ಟ ಅರಿಯಲು ಸ್ವತಃ ಮುಖ್ಯಮಂತ್ರಿ ಬಿ. ಎಸ್.ಯಡಿಯೂರಪ್ಪನವರೇ ಕರ್ನಾಟಕದಾದ್ಯಂತ ಪ್ರವಾಸ ಕೈಗೊಂಡರು. ಆಗ ನರಗುಂದ ಮತಕ್ಷೇತ್ರದ ಶಾಸಕರು, ಸಚಿವರು ಆಗಿದ್ದ ಸಿ.ಸಿ.ಪಾಟೀಲ ಅವರು ಮುಖ್ಯಮಂತ್ರಿಗಳನ್ನೇ ಕೊಣ್ಣೂರ ಗ್ರಾಮದ ಪ್ರವಾಹ ಪರಿಸ್ಥಿತಿಯನ್ನು ವೀಕ್ಷಿಸಲು ಬರುವಂತೆ ಆಗ್ರಹ ಮಾಡಿದಾಗ ಯಡಿಯೂರಪ್ಪನವರು ಕೊಣ್ಣೂರ ಗ್ರಾಮದ ಪ್ರವಾಹದ ನದಿ ತೀರದಲ್ಲಿ ನಿಂತುಕೊಂಡು ಪ್ರವಾಹ ವೀಕ್ಷಿಸಿದರು. ಸಂಕಷ್ಟದಲ್ಲಿದ್ದ ಜನರ ಅಹವಾಲನ್ನು ಸ್ವೀಕರಿಸಿ, ಯೋಗ್ಯ ಪರಿಹಾರ ನೀಡುವ ಭರವಸೆ ನೀಡಿದರು.

ಪ್ರವಾಹದಲ್ಲಿ ಬಿದ್ದ ಮನೆಗಳಿಗೆ, ಪುನಃ ಮನೆ ಕಟ್ಟಿಸಿಕೊಳ್ಳಲು ರೂ.5 ಲಕ್ಷ ಮತ್ತು ಅಲ್ಪ ಸ್ವಲ್ಪ ಬಿದ್ದ ಮನೆಗಳಿಗೆ ರೂ.50 ಸಾವಿರ ರೂ. ಯಡಿಯೂರಪ್ಪನವರ ಬಿಜೆಪಿ ಸರ್ಕಾರ ನೀಡಿತು. ಯಡಿಯೂರಪ್ಪನವರು ಕೊಟ್ಟ ಪರಿಹಾರಕ್ಕೆ ಸಾಕಷ್ಟು ಜನರು ಖುಷಿ ಪಟ್ಟು ಮನೆ ನಿರ್ಮಿಸಿಕೊಂಡರು. ಮನೆ ಕಟ್ಟಿಕೊಳ್ಳೋವರೆಗೂ ಬಾಡಿಗೆ ಮನೆಯಲ್ಲಿದ್ದವರಿಗೆ ಬಾಡಿಗೆ ಹಣವನ್ನು ನೀಡಿದರು. ಬಿ.ಎಸ್.ಯಡಿಯೂರಪ್ಪನವರು ರೈತಾಪಿ ವರ್ಗದ ಜನತೆಯ ಮೇಲೆ ಎಷ್ಟೊಂದು ಕಾಳಜಿ, ಪ್ರೀತಿಯನ್ನು ಹೊಂದಿದ್ದರು ಎನ್ನುವುದು ತಿಳಿಯುತ್ತದೆ.




ಸಂತ್ರಸ್ತ ಬಗ್ಗೆ ವಿಶೇಷ ಮುತುವರ್ಜಿ ವಹಿಸಿದ್ದ ಬಿಎಸ್‌ವೈ

2008-09-10ರಲ್ಲಿ ಸತತ ಎರಡು ವರ್ಷ ಮಲಪ್ರಭಾ ಹಾಗೂ ಬೆಣ್ಣೆಹಳ್ಳದ ಪ್ರವಾಹ ಬಂದಾಗ ಮಲಪ್ರಭಾ ನದಿಯ ಕೆಳ ಭಾಗದ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿನ ಅನೇಕ ಹಳ್ಳಿಗಳು ವಿಶೇಷವಾಗಿ ನರಗುಂದ ಮತಕ್ಷೇತ್ರದ 13 ಗ್ರಾಮಗಳು ನಿರಂತರ ಮುಳುಗಡೆಗೆ ಒಳಗಾಗುತ್ತಿದ್ದವು. ಪ್ರವಾಹಕ್ಕೆ ಸಿಲುಕಿದ ಕುರ್ಲಗೇರಿ, ಸುರಕೋಡ, ಬೂದಿಹಾಳ ಗ್ರಾಮದ ಸಂತ್ರಸ್ತರು ಪಟ್ಟಣದ ಬಸವೇಶ್ವರ ಸಮುದಾಯ ಭವನದಲ್ಲಿ ಆಶ್ರಯ ಪಡೆದಿದ್ದರು.

ನಿರಾಶ್ರಿತರ ಕೇಂದ್ರಕ್ಕೆ ಯಡಿಯೂರಪ್ಪನವರು ಭೇಟಿಯಾಗಿ ನಾವು ನಿಮ್ಮ ಜೊತೆಗೆ ಸದಾ ಇದ್ದೇವೆ ಭಯ ಬೇಡ ಎಂಬ ಭರವಸೆಯೊಂದಿಗೆ ಧೈರ್ಯವನ್ನು ನೀಡಿದ್ದರು. ಇಂತಹ ಕಷ್ಟಗಳನ್ನೆಲ್ಲ ಅರಿತ ಮತಕ್ಷೇತ್ರದ ಶಾಸಕ ಸಿ.ಸಿ.ಪಾಟೀಲ ಅವರು ವಿಶೇಷ ಮುತುವರ್ಜಿ ವಹಿಸಿ ಆಗಿನ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪನವರನ್ನು ವ್ಯಯಕ್ತಿವಾಗಿ ಭೇಟಿಯಾಗಿ, ಮುಳುಗಡೆ ಗ್ರಾಮಗಳನ್ನು ಅಲ್ಲಿನ ಜನರ ಬದುಕಿನ ಸುರಕ್ಷತೆಗಾಗಿ ಸ್ಥಳಾಂತರಗೊಳಿಸಬೇಕು. ಮತ್ತು ಇದೊಂದು ಶಾಶ್ವತ ಪರಿಹಾರವು ಆಗಿದೆ ಎಂದುಯಡಿಯೂರಪ್ಪ ಅವರಿಗೆ ಮನವರಿಕೆ ಮಾಡಿದಾಗ ನರಗುಂದ ಮತಕ್ಷೇತ್ರದ 13 ಗ್ರಾಮಗಳನ್ನು ಸಂಪೂರ್ಣ ಸ್ಥಳಾಂತರಿಸಲಾಯಿತು. ಇದೇ ಮಾದರಿಯಲ್ಲಿ ರಾಜ್ಯ ಅನೇಕ ಕಡೆಗಳಲ್ಲಿ ಮುಳುಗಡೆ ಗ್ರಾಮಗಳನ್ನು ಸ್ಥಳಾಂತರ ಮಾಡಲಾಯಿತು.

ನರಗುಂದ ಮತಕ್ಷೇತ್ರದಲ್ಲಿ ರೋಣ ಹಾಗೂ ಗದಗ ತಾಲೂಕಿನ 13 ನೆರೆ ಪೀಡಿತ ಗ್ರಾಮಗಳನ್ನು ಸ್ಥಳಾಂತರಿಸಲು ಒಟ್ಟು 648 ಎಕರೆ ಜಮೀನು ಖರೀದಿಸಿ, 6238 ಆಶ್ರಯ ಮನೆಗಳನ್ನು ರೂ.126.54 ಕೋಟಿ ವೆಚ್ಚದಲ್ಲಿ ಕುರ್ಲಗೇರಿ, ಸುರಕೋಡ, ಬೂದಿಹಾಳ, ಮೆಣಸಗಿ, ಅಮರಗೋಳ, ಬೋಪಳಾಪೂರ, ಹೊಳೆಹಡಗಲಿ, ಯಾಸ ಹಡಗಲಿ, ಮಾಳವಾಡ, ಬಿ.ಎಸ್. ಬೇಲೇರಿ, ಹೊಳೆಮಣ್ಣೂರ, ಕುರುವಿನಕೊಪ್ಪ ಮತ್ತು ಹುನಗುಂಡಿ ಗ್ರಾಮಗಳನ್ನು ನಿರ್ಮಾಣ ಮಾಡಿ, ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ, ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಅವತ್ತಿನ ಮುಖ್ಯಮಂತ್ರಿ, ಬಿ.ಎಸ್.ಯಡಿಯೂರಪ್ಪ ಹಾಗೂ ಶಾಸಕ ಸಿ.ಸಿ.ಪಾಟೀಲ ಜನರ ಕಷ್ಟಗಳಿಗೆ ಶಾಶ್ವತ ಪರಿಹಾರ ನೀಡಿದ ಜನನಾಯಕರಾಗಿದ್ದಾರೆ.



ನನ್ನ ರಾಜಕೀಯ ಗುರು ಯಡಿಯೂರಪ್ಪ

ರಾಜ್ಯದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಕೃಪಾಶೀರ್ವಾದ ಹಾಗೂ ಮಾರ್ಗದರ್ಶನದಲ್ಲಿ ನರಗುಂದ ವಿಧಾನಸಭೆ-68 ಮತಕ್ಷೇತ್ರಕ್ಕೆ 4 ಬಾರಿ ಕರ್ನಾಟಕ ವಿಧಾನಸಭೆಗೆ ಶಾಸಕನಾಗಿ ಆಯ್ಕೆಯಾಗಿದ್ದೇನೆ. 2004ರಲ್ಲಿ ಮೊದಲ ಬಾರಿ ಶಾಸಕನಾಗಿ ಆಯ್ಕೆ ಆದಾಗಿನಿಂದ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿರೋವರೆಗೂ ನಾನು ಸದಾ ಒಂದಿಲ್ಲೊಂದು ಅಧಿಕಾರದಲ್ಲಿ ಅವರ ಜೊತೆಯಲ್ಲಿಯೇ ಇದ್ದೇನೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಣೆ. ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹುದ್ದೆ ನಿರ್ವಹಣೆ. ಹಾಗೂ ಯಡಿಯೂರಪ್ಪ ಅವರ ಬೆಂಬಲದಿಂದ ಸಂಪುಟದರ್ಜೆ ಸಚಿವನಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆಯ ನಿರ್ವಹಣೆ. ಗದಗ ಜಿಲ್ಲಾ ಭಾರತೀಯ ಜನತಾಪಾರ್ಟಿಯ ಜಿಲ್ಲಾ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ನನ್ನ ರಾಜಕೀಯ ಬೆಳವಣಿಗೆಯ ಗುರು ಬಿ.ಎಸ್.ಯಡಿಯೂರಪ್ಪನವರೇ ಆಗಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾಗಿದ್ದ ಸಿ.ಸಿ.ಪಾಟೀಲ ಅವರು ಬಾಲ ಸಂಜೀವಿನಿ ಯೋಜನೆ ಜಾರಿಗೆ ತರುವುದರ ಜೊತೆಗೆ ಭಾಗ್ಯಲಕ್ಷ್ಮೀ ಯೋಜನೆಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಹುಟ್ಟಿದ ಮೊದಲೆರಡು ಪ್ರತಿ ಹೆಣ್ಣು ಮಗುವಿಗೆ ತಲಾ ಒಂದು ಲಕ್ಷ ರೂಗಳ ಭಾಗ್ಯಲಕ್ಷ್ಮೀ ಬಾಂಡ್ ಅಥವಾ ಸುಕನ್ಯಾ ಸಮೃದ್ಧಿ ಯೋಜನೆ ಪಾಸ್‌ಬುಕ್ ವಿತರಣಾ ಯೋಜನೆ ಜಾರಿಗೆ ತರಲಾಯಿತು.18 ವರ್ಷ ದಾಟಿದ ಹೆಣ್ಣು ಮಗುವಿನ ಮುಂದಿನ ಭವಿಷ್ಯಕ್ಕೆ ಅನುಕೂಲ ಆಗಲೆಂದು ಈ ಯೋಜನೆಗೆ ಒತ್ತು ನೀಡಲಾಗಿದೆ.

ನೆರೆ ಹಾವಳಿ ಹಾಗೂ ಕೋವಿಡ್ ಸಾಂಕ್ರಾಮಿಕಕ್ಕೆ ತುತ್ತಾದ ಸಂದರ್ಭದಲ್ಲಿ ಕೈಗೊಂಡ ಜನಪರ ಕಾರ್ಯಕ್ರಮಗಳಾದ ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ಕಾಲುವೆಗಳ ವಿಸ್ತರಣೆ ಹಾಗೂ ಮರುನಿರ್ಮಾಣ ಕಾಮಗಾರಿಗಳನ್ನು ಇ.ಆರ್. ಎಂ-02 ದಲ್ಲಿ ಸುಮಾರು 1000 ಕೋಟಿ ರೂ.ಗಳ ಪ್ಯಾಕೇಜ್ ಅನುದಾನದಲ್ಲಿ ನರಗುಂದ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಾಲುವೆಗಳ ಕಾಮಗಾರಿಗಳಿಗಾಗಿ ಸುಮಾರು 100 ಕೋಟಿ ರೂಗಳ ಅನುದಾನವನ್ನು ಮೀಸಲಿರಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

ನರಗುಂದ ಮತಕ್ಷೇತ್ರದ ಅಭಿವೃದ್ಧಿಗಾಗಿ ಬಿ.ಎಸ್.ಯಡಿಯೂರಪ್ಪನವರು ತಮ್ಮ ಆಡಳಿತ ಅವಧಿಯಲ್ಲಿ ಅಂದಾಜು ಒಟ್ಟು ರೂ.523.75 ಕೋಟಿ ಅನುದಾನ ನೀಡಿದ್ದಾರೆ ಎಂದು ಶಾಸಕ ಸಿ.ಸಿ.ಪಾಟೀಲ ಹೇಳಿದ್ದಾರೆ.

ಜಗನ್ನಾಥರಾವ ಜೋಶಿ ಸ್ಮಾರಕ ನಿರ್ಮಾಣಕ್ಕೆ

ರೂ.1 ಕೋಟಿ ಅನುದಾನ ನೀಡಿದ್ದ ಬಿಎಸ್‌ವೈ

- ಊರೂರು ಸಂಚರಿಸಿ ಪಕ್ಷ ಕಟ್ಟಿ ಬೆಳೆಸಿದ ನಾಯಕ
- ನಿರಾಶ್ರಿತರ ಕಷ್ಟ ಅರಿಯಲು ರಾಜ್ಯಾದ್ಯಂತ ಪ್ರವಾಸ
- ರೈತಾಪಿ ವರ್ಗದ ಮೇಲೆ ಕಾಳಜಿ ಅಪಾರ
- ನರಗುಂದ ಮತಕ್ಷೇತ್ರದ ಅಭಿವೃದ್ಧಿಗೆ 523.75 ಕೋಟಿ ರೂ. ಅನುದಾನ

• **ನರಗುಂದ:** ಪಟ್ಟಣದ ದಂಡಾಪೂರ ಬಡಾವಣೆಯ 1ನೇ ಗಲ್ಲಿಯಲ್ಲಿನ ಶ್ರೀ ಜಗನ್ನಾಥರಾವ ಜೋಶಿ ಅವರ ಸ್ವಂತ ಮನೆಯು ಮೂಲ ಸಂಬಂಧಿಕರು ಪುಣೆ ನಗರದ ಕಡೆ ನೌಕರಿ ನಿಮಿತ್ತ ಹೋದ ನಂತರ ಆ ಮಣ್ಣಿನ ಹಳೆಯದಾದ ಮನೆ ಕುಸಿದು ಬಿದ್ದು ಅನಾಥವಾಗಿತ್ತು.

ಸಂಘದ ಹಿರಿಯರ ಮಾರ್ಗದರ್ಶನದಂತೆ ನರಗುಂದ ದಂಡಾಪೂರ 1ನೇ ಗಲ್ಲಿಯಲ್ಲಿನ ಶ್ರೀ ಜಗನ್ನಾಥರಾವ ಜೋಶಿ ಅವರ ಸ್ವಂತಃ ಮನೆಯ ಜಾಗೆಯಲ್ಲಿ ಸಂಘ ಕಾರ್ಯಕ್ಕಾಗಿ ಸ್ಮಾರಕ ಭವನ ನಿರ್ಮಿಸುವಂತೆ ಸಂಘದ ಕಾರ್ಯಕರ್ತರ ಮನಸ್ಸಿಚ್ಛೆ ಮೇರೆಗೆ ಸಿ.ಸಿ.ಪಾಟೀಲ ಅವರು ಸ್ಮಾರಕ ಭವನ ನಿರ್ಮಾಣಕ್ಕೆ ನಿರ್ಧಾರ ಮಾಡಿದರು. ನಂತರ ಮುಖ್ಯಮಂತ್ರಿ ಆಗಿದ್ದ ಬಿ.ಎಸ್. ಯಡಿಯೂರಪ್ಪ ಅವರ ಮನವೊಲಿಸಿ 2011-12ರ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ 1 ಕೋಟಿ ರೂ.ಅನುದಾನವನ್ನು ಸ್ಮಾರಕ ಭವನ ನಿರ್ಮಾಣಕ್ಕೆ ಮೀಸಲಿಟ್ಟರು. 2014-15ರ ಅವಧಿಯಲ್ಲಿ ಭವ್ಯವಾದ ನೂತನ ಸ್ಮಾರಕ ಭವನ ನಿರ್ಮಾಣ ಆಯಿತು. ಇಂದು ಸಂಘದ ಕಾರ್ಯ ಚಟುವಟಿಕೆಗಳಿಗೆ ಜಗನ್ನಾಥ ಸ್ಮಾರಕ ಭವನವು ಎಲ್ಲ ಕಾರ್ಯಕರ್ತರಿಗೆ

ಕೇಂದ್ರ ಬಿಂದುವಾಗಿದೆ. ಜಗನ್ನಾಥರಾಯರು ತಮ್ಮ ತಾಯಿ ಜೊತೆ ಇದೇ ಮನೆಯಲ್ಲಿ ಹೆಚ್ಚು ವಾಸವಾಗಿದ್ದರು ಎನ್ನುವುದು ಗಮನಾರ್ಹ.

ಯಡಿಯೂರಪ್ಪ ಅವರು ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಬೆಳೆಯಲು ನಿರಂತರ ಹಗಲಿರುಳು ಸೈಕಲ್ ಮೇಲೆ ಪ್ರವಾಸ ಮಾಡುತ್ತಾ ಕೆಲಸ ಕಾರ್ಯ ಮಾಡಿದ್ದಾರೆ. ಇವರಿಗೆ ಪಕ್ಷ ಕಟ್ಟಿ ಬೆಳೆಸಲು ಹೆಚ್ಚು ಪ್ರೇರಣೆ ಅಂದರೆ ಸಂಸ್ಥಾಪಕರಾದ ಡಾ.ಶ್ಯಾಮಪ್ರಕಾಶ ಮುಖರ್ಜಿ, ಪಂಡಿತ ದೀನದಯಾಳ ಉಪಾಧ್ಯಾಯರು ಮತ್ತು ಜಗನ್ನಾಥರಾವ ಜೋಶಿ ಅವರು ಆಗಿದ್ದಾರೆ. ಆಗಿನ ಸಂದರ್ಭದಲ್ಲಿ ಯಡಿಯೂರಪ್ಪ ಅವರು ಮೂವರು ವ್ಯಕ್ತಿಗಳ ಆದರ್ಶ ಮತ್ತು ದೇಶಾಭಿಮಾನವನ್ನು ಗೌರವಿಸುತ್ತಾ ಭಾರತ ಮಾತೆಯ ಫೋಟೋಗಳನ್ನು ಇಟ್ಟುಕೊಂಡು ಊರೂರು ಸಂಚರಿಸುತ್ತಾ ಪಕ್ಷವನ್ನು ಕಟ್ಟಿ ಬೆಳೆಸಿದ್ದಾರೆ.

ಆ ಭವ್ಯವಾದ ಸ್ಮಾರಕ ಭವನ ನಿರ್ಮಾಣಕ್ಕೆ ನನಗೆ ಹಲವಾರು ಸಂಘದ ಹಿರಿಯರು, ಪಕ್ಷದ ಪ್ರಮುಖರು, ಕಾರ್ಯಕರ್ತರು ಬೆಂಬಲ ನೀಡಿದ್ದನ್ನು ಸ್ಮರಿಸುತ್ತಿದ್ದೇನೆ. ಇದರ ಪರಿಣಾಮವಾಗಿ ಭವ್ಯವಾಗಿ ನಿರ್ಮಾಣಗೊಂಡ ಶ್ರೀ ಜಗನ್ನಾಥರಾವ ಜೋಶಿ ಸ್ಮಾರಕ ಭವನ 2015 ಜೂನ್ 23ರಂದು ಉದ್ಘಾಟನೆಗೊಂಡಿದೆ. ಬಹಳ ಸುಂದರವಾಗಿ ವ್ಯವಸ್ಥಿತ ರೂಪದಲ್ಲಿ ಶ್ರೀ ಜಗನ್ನಾಥರಾವ ಜೋಶಿ ಭವನ ನಿರ್ಮಿಸಲಾಗಿದೆ. ಕಟ್ಟಡದ ಉದ್ಘಾಟನಾ ಸಮಾರಂಭವು ತಾಲೂಕು ಕ್ರೀಡಾಂಗಣದ ಮೈದಾನದಲ್ಲಿ ಜರುಗಿತು. ಆ ಸಂದರ್ಭದಲ್ಲಿ ಗಣ್ಯ ವ್ಯಕ್ತಿಗಳಾದ ಗೌರವಾನ್ವಿತ ರಾಜ್ಯಪಾಲ ವಝುಬಾಯಿ ವಾಲಾ, ಭಾಜಪ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಅಮಿತ್ ಶಾ, ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾಗಿದ್ದ ಮಂಗೇಶ್ ಬೇಂಡೆ, ಪ್ರಚಾರಕರಾದ ಶಂಕರಾನಂದಜಿ, ಆಗಿನ ಸಿಎಂ ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ, ಸಂಸದರಾಗಿದ್ದ ವಿ.ಅನಂತಕುಮಾರ, ಸಂಸದ ಪ್ರಹ್ಲಾದ ಜೋಶಿ, ಸ್ಥಳೀಯ ಗಣ್ಯವ್ಯಕ್ತಿ ಜಿ.ಬಿ. ಕುಲಕರ್ಣಿ ಸೇರಿದಂತೆ ಅನೇಕರು ಆಗಮಿಸಿದ್ದರು.

ಸಂಘದ ಕಾರ್ಯಕರ್ತರು ಮತ್ತು ನೂರಾರು ಸ್ವಯಂಸೇವಕರು ಭಾಗವಹಿಸಿದ್ದರು. ಉದ್ಘಾಟನಾ ಕಾರ್ಯಕ್ರಮವು ಇತಿಹಾಸದಲ್ಲಿ ನೆನಪು ಉಳಿಯುವಂತೆ ದಾಖಲಾಯಿತು. ಸಂಘ ಕಾರ್ಯಕ್ಕೆ ಕೇಂದ್ರ ಬಿಂದು ಆಗಲೆಂದು ಸ್ಮಾರಕ ಭವನ ನಿರ್ಮಾಣ ಆಗಿದೆ. ಇದು ಯಡಿಯೂರಪ್ಪ ಅವರ ಕಾಳಜಿ ಎತ್ತಿ ತೋರಿಸುತ್ತದೆ.

ಕಳಸಾ ಬಂಡೂರಿ ಯೋಜನೆಗೆ ಬೆನ್ನೆಲುಬಾಗಿದ್ದ ಯಡಿಯೂರಪ್ಪ

ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಾಗ ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರಾಗಿದ್ದ ಬಿ.ಎಸ್.ಯಡಿಯೂರಪ್ಪರನವರು ಈ ಯೋಜನೆ ಕುರಿತು ತಮಗಿರುವ ಬದ್ಧತೆಯನ್ನು ಪ್ರದರ್ಶಿಸಿ, ರೂ.100 ಕೋಟಿಗಳ ಅನುದಾನ ಘೋಷಿಸಿದ್ದಾರೆ.

ನಗರದ ಪಂಚಗೃಹ ಗುಡ್ಡದ ಹಿರೇಮಠದಲ್ಲಿ 2000ನೇ ಇಸ್ವಿಯಲ್ಲಿ ಕಳಸಾ ಬಂಡೂರಿ ಯೋಜನೆ ಹೋರಾಟವು ಪೂಜ್ಯಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಮತ್ತು ವಿಜಯ ಕುಲಕರ್ಣಿ ನೇತೃತ್ವದಲ್ಲಿ ಹೋರಾಟ ಪ್ರಾರಂಭಗೊಂಡಿತು. ಈ ರೈತರ ಹೋರಾಟಕ್ಕೆ ಭಾರತೀಯ ಜನತಾ ಪಕ್ಷದ ಪ್ರಮುಖರಾದ ಸ್ಥಳೀಯ ಶಾಸಕ ಸಿ.ಸಿ.ಪಾಟೀಲ, ಬಸವರಾಜ ಬೊಮ್ಮಾಯಿ ಸೇರಿದಂತೆ ಅನೇಕ ಬಿಜೆಪಿ ನಾಯಕರು ಸಾಥ್ ನೀಡಿದರು.

ಈಗಿನ ಚನ್ನಮ್ಮಾಜಿ ವೃತ್ತದಲ್ಲಿ 69 ದಿನಗಳ ಕಾಲ ನಡೆದ ಉಪವಾಸ ಸತ್ಯಾಗ್ರಹದಲ್ಲಿ ಶಾಸಕ ಸಿ.ಸಿ.ಪಾಟೀಲ ಪಾಲ್ಗೊಂಡಿದ್ದರು. ಪಕ್ಷಾತೀತವಾಗಿ, ಎಲ್ಲ ವರ್ಗದ ಜನರಿಂದ, ವಿವಿಧ ಸಂಘಟನೆಗಳಿಂದ ಅಭೂತಪೂರ್ವವಾದ ಜನ ಬೆಂಬಲ ಹೋರಾಟಕ್ಕೆ ಸಿಕ್ಕಿತು. ಬಿಜೆಪಿ ನಾಯಕರು ರೈತರನ್ನು ಕರೆದುಕೊಂಡು ಕಳಸಾ ಬಂಡೂರಿ ಯೋಜನೆ ಜಾರಿಗಾಗಿ ಸರ್ಕಾರವನ್ನು ಎಚ್ಚರಿಸಲು ಹಳೇ ಧಾರವಾಡ ಜಿಲ್ಲೆಯಾದ್ಯಂತ ಪಾದಯಾತ್ರೆಯನ್ನು ಮಾಡಿದರು. ಇದಕ್ಕೆ ಜಾತಿಭೇದ ಎನ್ನದೇ ಎಲ್ಲ ವರ್ಗದ ಜನರ ಬೆಂಬಲವು ಸಾಕಷ್ಟು ಸಂಖ್ಯೆಯಲ್ಲಿ ಸಿಕ್ಕಿತು.

ಕಳಸಾ-ಬಂಡೂರಿ ಯೋಜನೆ ಇತಿಹಾಸದಲ್ಲಿ 2006ರ ನವೆಂಬರ್ 22 ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನವಾಗಿದ್ದು, ಅಂದಿನ ಉಪಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಮತ್ತು ಜಲಸಂಪನ್ಮೂಲ ಸಚಿವರಾದ ಕೆ.ಎಸ್.ಈಶ್ವರಪ್ಪನವರು ಬೆಳಗಾವಿ ಜಿಲ್ಲೆಯ ಕಣಕುಂಬಿಯಲ್ಲಿ ಕಾಮಗಾರಿಯ ಭೂಮಿಪೂಜೆ ನೆರವೇರಿಸಿ ಯೋಜನೆಗೆ ಅಡಿಗಲ್ಲು ಹಾಕಿದರು. ತದ ನಂತರದಲ್ಲಿ ರಾಜ್ಯದಲ್ಲಿ ಸರ್ಕಾರ ಬದಲಾದ ಮೇಲೆ ಈ ಯೋಜನೆ ವಿವಾದದ ಸುಳಿಯಲ್ಲಿ ಸಿಲುಕಿ ನ್ಯಾಯಾಧೀಕರಣ ರಚನೆಯಾಯಿತು.

ಈ ನಡುವೆ ನಡೆದ ಮಹತ್ವದ ಬೆಳವಣಿಗೆಯಲ್ಲಿ, 2018ರ ಆಗಸ್ಟ್ 14ರಂದು ಮಹದಾಯಿ ನ್ಯಾಯಮಂಡಳಿಯ ನೀರು ಹಂಚಿಕೆ ತೀರ್ಪನ್ನು ಆಧರಿಸಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿತು. ಆ ಮೂಲಕ ಈ ಯೋಜನೆಗೆ ಕಾನೂನಾತ್ಮಕ ಸ್ಪಂದನೆ ದೊರೆತ ಹಿನ್ನೆಲೆಯಲ್ಲಿ ಬಿ.ಎಸ್.ಯಡಿಯೂರಪ್ಪನವರು ರೂ.500 ಕೋಟಿಗಳನ್ನು ಮತ್ತು ನಂತರದ ದಿನಗಳಲ್ಲಿ ಬಿಜೆಪಿ ಸರ್ಕಾರ ಕಳಸಾ ಬಂಡೂರಿ ನಾಲಾ ಯೋಜನೆಯ ಅನುಷ್ಠಾನಕ್ಕಾಗಿ ರೂ.1,000 ಕೋಟಿಗಳ ಅನುದಾನ ಘೋಷಿಸಿ, ರೈತರಲ್ಲಿ ಆಶಾಭಾವನೆ ಇಮ್ಮಡಿಗೊಳಿಸಿದ್ದಾರೆ.

ಕೇಂದ್ರ ಜಲ ಆಯೋಗದ ಡಿಪಿಆರ್ ಸಿಕ್ಕಿದೆ. ಕಾಮಗಾರಿ ಕೈಗೊಳ್ಳಲು ಬಜೆಟ್‌ನಲ್ಲಿ ಅನುದಾನವು ಇದೆ. ಇನ್ನೇನು ಕಾಮಗಾರಿ ಪ್ರಾರಂಭ ಮಾಡುವುದೊಂದೇ ಬಾಕಿಯಿದೆ. ಈ ಯೋಜನೆಗೆ ಇಷ್ಟೊಂದು ಯಶಸ್ಸಿನ ಹಂತಕ್ಕೆ ಬಂದು ತಲುಪಲು ಯಡಿಯೂರಪ್ಪನವರು ಹಾಗೂ ಶಾಸಕ ಸಿ.ಸಿ. ಪಾಟೀಲರ ಪ್ರಯತ್ನ ಸಾಕಷ್ಟಿದೆ.



ಸಿ.ಸಿ.ಪಾಟೀಲ್

ಶಾಸಕರು, ನರಗುಂದ ಮತಕ್ಷೇತ್ರ,
ಮಾಜಿ ಸಚಿವರು, ಕರ್ನಾಟಕ ಸರ್ಕಾರ

> ರಾಷ್ಟ್ರೀಯ ವಿಚಾರದಡಿ ಪಕ್ಷವನ್ನು ತಳಮಟ್ಟದಿಂದ ಕಟ್ಟಿ ಬೆಳೆಸಿದ್ದಾರೆ. ದಕ್ಷಿಣ ಭಾರತದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದ ಕೆಚ್ಚೆದೆಯ ನಾಯಕ. ಯುವಕರ ಕಣ್ಮಣಿ. ಸರ್ವವ್ಯಾಪಿ ಸರ್ವರನ್ನು ಸ್ಪರ್ಶಿಸಿ ಎನ್ನುವಂತೆ ಸಮಾಜದ ಸರ್ವಜನಾಂಗದ ಅಭಿವೃದ್ಧಿಯನ್ನು ಬಯಸಿದ ಜನನಾಯಕ. ಅಧಿಕಾರದಲ್ಲಿದ್ದಾಗ ಅವರೆಲ್ಲರ ಏಳ್ಗೆಗಾಗಿ ಹಲವಾರು ಜನಪರ ಯೋಜನೆಗಳನ್ನು ಜಾರಿಗೆ ತಂದ ಧೀಮಂತ ನಾಯಕ ಯಡಿಯೂರಪ್ಪ.
>
> ■ ಉಮೇಶಗೌಡ ಪಾಟೀಲ,
> ಭಾಜಪ ಮುಖಂಡರು, ನರಗುಂದ ಮತಕ್ಷೇತ್ರ



ಹುಬ್ಬಳ್ಳಿ
ಶುಕ್ರವಾರ, 8 ಮೇ 2026
ಸಂಪುಟ 16, ಸಂಚಿಕೆ 44, ಪುಟಗಳು 16
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಮೇ 12ಕ್ಕೆ ಅಸ್ಸಾಂ ಸಿಎಂ ಪ್ರಮಾಣ | 02
ಪ್ರವಾಸಿ ಹಡಗಿನಲ್ಲಿ ಹಂಟಾವೈರಸ್ | 02
ಬಿಹಾರ ಸಂಪುಟಕ್ಕೆ ನಿತೀಶ್ ಪುತ್ರ ಸೇರ್ಪಡೆ | 02

ಸೋಮನಾಥ ಎಂಬ ಭಾರತದ ಅಜೇಯ ಚೈತನ್ಯ

ನರೇಂದ್ರ ಮೋದಿ, ಪ್ರಧಾನ ಮಂತ್ರಿ



2026ರ ಆರಂಭದಲ್ಲಿ, ಸೋಮನಾಥ ದೇವಾಲಯದ ಮೇಲಿನ ಮೊದಲ ದಾಳಿಗೆ ಸಾವಿರ ವರ್ಷಗಳು ತುಂಬಿದ ನೆನಪಿಗಾಗಿ ನಡೆದ ಸೋಮನಾಥ ಸ್ವಾಭಿಮಾನ ಪರ್ವದಲ್ಲಿ ನಾನು ಭಾಗವಹಿಸಿದ್ದೆ. ಈಗ, ಭಾರತದ ಅಂದಿನ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ್ ಅವರು ಪುನರ್ ನಿರ್ಮಿತ ದೇವಾಲಯವನ್ನು ಉದ್ಘಾಟಿಸಿ 75 ವರ್ಷಗಳಾದ ಸಂದರ್ಭದಲ್ಲಿ, ಮೇ 11ರಂದು ನಾನು ಮತ್ತೆ ಸೋಮನಾಥಕ್ಕೆ ಭೇಟಿ ನೀಡಲಿದ್ದೇನೆ. ಅರ್ಧ ವರ್ಷದೊಳಗೆ, ಸೋಮನಾಥಕ್ಕೆ ಸಂಬಂಧಿಸಿದ ಎರಡು ಪ್ರಮುಖ ಮೈಲಿಗಲ್ಲುಗಳಿಗೆ ಮತ್ತು ಅದರ ವಿನಾಶದಿಂದ ಪುನರುತ್ಥಾನದವರೆಗೆ ಅಥವಾ ನಾವು ವಿಧ್ವಂಸದಿಂದ ಸೃಜನೆಯತ್ತ ಎಂದು ಕರೆಯುವ ಪಯಣಕ್ಕೆ



ಸಾಕ್ಷಿಯಾಗುತ್ತಿರುವುದು ನನ್ನ ಸೌಭಾಗ್ಯವಾಗಿದೆ.

ಸೋಮನಾಥವು ನಮಗೆ ನಾಗರಿಕತೆಯ ಸಂದೇಶ ನೀಡುತ್ತದೆ. ಅದರ ಮುಂದಿರುವ ವಿಶಾಲ ಸಮುದ್ರವು ಕಾಲಾತೀತತೆಯ ಭಾವವನ್ನು ಮೂಡಿಸುತ್ತದೆ. ಎಂತಹ ಭೀಕರ ಬಿರುಗಾಳಿಯೇ ಇರಲಿ ಅಥವಾ ಸಮುದ್ರದ ಅಲೆಗಳು ಎಷ್ಟೇ ಪ್ರಕ್ಷುಬ್ಧವಾಗಿರಲಿ, ಮನುಷ್ಯ ಯಾವಾಗಲೂ ಘನತೆ ಮತ್ತು ಶಕ್ತಿಯೊಂದಿಗೆ



ಮರಳಿ ಮೇಲೆದ್ದು ಬರಬಹುದು ಎಂದು ಆ ಅಲೆಗಳು ನಮಗೆ ಸಾರುತ್ತಿವೆ. ಕಡಲ ಅಲೆಗಳು ಮತ್ತೆ ತೀರಕ್ಕೆ ಮರಳುವ ರೀತಿ, ಜನರ ಚೈತನ್ಯವನ್ನು ದೀರ್ಘಕಾಲದವರೆಗೆ ಹತ್ತಿಕ್ಕಲು ಸಾಧ್ಯವಿಲ್ಲ ಎಂಬುದನ್ನು ಪ್ರತಿ ಪೀಳಿಗೆಗೂ ನೆನಪಿಸುವಂತಿದೆ.

ನಮ್ಮ ಪುರಾತನ ಗ್ರಂಥಗಳು ಹೇಳುವಂತೆ: ಪ್ರಭಾಸಂ ಚ ಪರಿಕ್ರಮ್ಯ ಪೃಥಿವೀಕ್ರಮಸಂಭವಮ್. ಇದರರ್ಥ, ಪವಿತ್ರ ಪ್ರಭಾಸ ಕ್ಷೇತ್ರದ(ಸೋಮನಾಥ) ಪ್ರದಕ್ಷಿಣೆಯು ಇಡೀ ಭೂಮಂಡಲದ ಪ್ರದಕ್ಷಿಣೆಗೆ ಸಮಾನವಾದುದು! ಇಲ್ಲಿಗೆ ಜನರು ಪ್ರಾರ್ಥನೆ ಸಲ್ಲಿಸಲು ಬಂದಾಗಲೆಲ್ಲಾ, ಎಂದಿಗೂ ಆರಿಹೋಗದ ನಾಗರಿಕತೆಯ ಜ್ವಾಲೆಯ ನಿರಂತರತೆಯನ್ನು ಅನುಭವಿಸಿದ್ದಾರೆ. ಸಾಮ್ರಾಜ್ಯಗಳು ಉದಯಿಸಿದವು ಮತ್ತು ಪತನಗೊಂಡವು, ಕಾಲದ ಅಲೆಗಳು ಬದಲಾದವು, ಇತಿಹಾಸವು ಆಕ್ರಮಣ ಮತ್ತು ಏರುಪೇರುಗಳ ನಡುವೆ ಸಾಗಿತು ಆದರೂ, ಸೋಮನಾಥವು ನಮ್ಮ ಪ್ರಜ್ಞೆಯಲ್ಲಿ ಚಿರಸ್ಥಾಯಿಯಾಗಿ ಉಳಿದುಬಂದಿದೆ. ದಬ್ಬಾಳಿಕೆಯ ಮುಂದೆ ಎದೆಯುಬ್ಬಿಸಿ ನಿಂತ ಅಸಂಖ್ಯಾತ ಮಹನೀಯರನ್ನು ಸ್ಮರಿಸುವ ಸಮಯವಿದು.

ಲಕುಲೀಶ ಮತ್ತು ಸೋಮ ಶರ್ಮನ್ ಅವರು ಪ್ರಭಾಸ ಕ್ಷೇತ್ರವನ್ನು ತತ್ವಶಾಸ್ತ್ರದ ಮಹಾನ್ ಕೇಂದ್ರವಾಗಿ ಪರಿವರ್ತಿಸಿದ್ದರು. ವಲ್ಲಭಿಯ ಚಕ್ರವರ್ತಿ ಮಹಾರಾಜ ನಾಲ್ಕನೇ ಧರಸೇನ ಶತಮಾನಗಳ ಹಿಂದೆ ಇಲ್ಲಿ ಎರಡನೇ ದೇವಾಲಯವನ್ನು ನಿರ್ಮಿಸಿದನು.

ಪುಟ 09

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಉತ್ತರಾಷಾಢ

ದಿನದ ಮಾತು

ದುರಾಸೆಯು ನಮ್ಮ ಒಳ್ಳೆಯ ಗುಣಗಳನ್ನು ಅಳಿಸಿಬಿಡುತ್ತದೆ.
▲ಮಹಾವೀರ

ಹೋನ್ಸಾಲ್ -ಇಂಧನ್ -ಬದ್ಲಾ ಮತ್ತು ಬಂಗಾಳ!

ಉಘೇ ವೀರ ಭೂಮಿಗೆ
• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ದಿ

ಪ.ಬಂಗಾಳ ವಿಧಾನಸಭೆ ವಿಸರ್ಜಿಸಿದ ರಾಜ್ಯಪಾಲ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಬೆಳವಣಿಗೆಗಳು ತೀವ್ರಗೊಂಡಿರುವ ನಡುವೆಯೇ ರಾಜ್ಯಪಾಲ ಆರ್.ಎನ್. ರವಿ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಸಚಿವ ಸಂಪುಟವನ್ನು ವಜಾಗೊಳಿಸಿ, ರಾಜ್ಯ ವಿಧಾನಸಭೆಯನ್ನು ವಿಸರ್ಜಿಸಿರುವುದಾಗಿ ಘೋಷಿಸಿದ್ದಾರೆ. ಭಾರತೀಯ ಸಂವಿಧಾನದ 174(2)(ಬಿ) ವಿಧಿಯ ಅನ್ವಯ ಮೇ 7, 2026ರಿಂದ ಜಾರಿಗೆ ಬರುವಂತೆ ಈ ಆದೇಶ ಹೊರಡಿಸಲಾಗಿದೆ. 2026ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಿದ್ದರೂ ಮುಖ್ಯಮಂತ್ರಿ ಸ್ಥಾನ ತೊರೆಯಲು ಮಮತಾ ಬ್ಯಾನರ್ಜಿ ನಿರಾಕರಿಸಿದ್ದರು. ಪುಟ ೫

ಹೆಚ್ಚುವರಿ ಟಿಕೆಟ್ ಬೇಡಿಕೆ ಹಿನ್ನೆಲೆ ಸ್ಥಳಾಂತರ: ಬಿಸಿಸಿಐ

• **ಹೊಸದಿಲ್ಲಿ:** ಪ್ಲೇಆಫ್ ಹಾಗೂ ಫೈನಲ್ ಪಂದ್ಯಕ್ಕಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ 10 ಸಾವಿರ ಹೆಚ್ಚುವರಿ ಟಿಕೆಟ್ ಕೇಳಿತ್ತು, ಹಾಗಾಗಿಯೇ ಪ್ಲೇಆಫ್ ಹಾಗೂ ಫೈನಲ್ ಪಂದ್ಯಗಳನ್ನು ಬೆಂಗಳೂರಿನಿಂದ ಸ್ಥಳಾಂತರಿಸಲಾಗಿದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ದೇವಜೀತ್ ಸೈಕಿಯಾ ತಿಳಿಸಿದ್ದಾರೆ.

• ಪುಟ 09

ದೇಶ ವಿರೋಧಿ ಚಟುವಟಿಕೆ ವಿರುದ್ಧ ಕ್ರಮ ಕೈಗೊಳ್ಳಿ

• ಪುಟ 02

ಲಿಪುಲೇಖ್ ವಿವಾದ ಬಗ್ಗೆ ಮಾತುಕತೆಗೆ ಸಿದ್ಧ: ಭಾರತ

• ಪುಟ 02

ವಂಚನೆ: ಪಂಜಾಬ್‌ನ ಹಲವೆಡೆ ಇಡಿ ದಾಳಿ

• ಪುಟ 02

ಮಹಿಳಾ ಶಾಸಕಿಯನ್ನು ಅಪ್ಪಿಕೊಳ್ಳಲು ಯತ್ನಿಸಿದ ಕಾಂಗ್ರೆಸ್ ನಾಯಕ

• ಪುಟ 02

ಧಾರ್ಮಿಕ ವಿಚಾರ ಪ್ರಶ್ನಿಸಿದರೆ ಧರ್ಮ ಒಡೆಯುತ್ತದೆ

• ಪುಟ 02

1,400 ಕೋಟಿ ಮೌಲ್ಯದ ಅಕ್ರಮ ಹಣ ವಶ: ಇಡಿ

• ಪುಟ 02

ಆಪರೇಷನ್ ಸಿಂದೂರ್‌ನಲ್ಲಿ ಪಾಕ್‌ಗೆ ಭಾರೀ ಹೊಡೆತ: ಐಎಎಫ್
13 ಯುದ್ಧವಿಮಾನ ಧ್ವಂಸ

- ಪಹಲ್ಗಾಮ್ ಉಗ್ರ ದಾಳಿಗೆ ಪ್ರತೀಕಾರ
- ಮೊದಲ ಬಾರಿಗೆ ಬಹಿರಂಗಪಡಿಸಿದ ಭಾರತೀಯ ವಾಯುಪಡೆ
- 11 ಏರ್‌ಫೀಲ್ಡ್‌ಗಳ ಮೇಲೆ ನಿಖರ ದಾಳಿ; 9 ಉಗ್ರ ಶಿಬಿರಗಳೂ ನೆಲಸಮ

• **ಹೊಸದಿಲ್ಲಿ:** ಆಪರೇಷನ್ ಸಿಂದೂರ ವೇಳೆ ಭಾರತ ನಡೆಸಿದ ಕಾರ್ಯಾಚರಣೆಯಿಂದಾಗಿ ಪಾಕಿಸ್ತಾನಕ್ಕೆ ಭಾರೀ ನಷ್ಟವಾಗಿದ್ದು, ಪಾಕಿಸ್ತಾನದ 13 ಯುದ್ಧವಿಮಾನಗಳನ್ನು ಧ್ವಂಸಗೊಳಿಸಿ, 11 ಏರ್‌ಫೀಲ್ಡ್‌ಗಳ ಮೇಲೆ ಯಶಸ್ವಿ ದಾಳಿ ನಡೆಸಲಾಗಿದೆ ಎಂದು ಭಾರತೀಯ ವಾಯುಪಡೆಯ ಉಪ ಮುಖ್ಯಸ್ಥ ಏರ್ ಮಾರ್ಷಲ್ ಅವಧೇಶ್ ಕುಮಾರ್ ಭಾರ್ತಿ ತಿಳಿಸಿದ್ದಾರೆ.

ಆಪರೇಷನ್ ಸಿಂದೂರಕ್ಕೆ ಒಂದು ವರ್ಷ

ಕಾರ್ಯಾಚರಣೆಯ ಮೊದಲ ವಾರ್ಷಿಕೋತ್ಸವದ ಅಂಗವಾಗಿ ಗುರುವಾರ ನಡೆದ ವಿಶೇಷ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಾಕಿಸ್ತಾನ ಹಾಗೂ ಪಾಕ್ ಆಕ್ರಮಿತ ಕಾಶ್ಮೀರದಲ್ಲಿದ್ದ ಒಟ್ಟು 9 ಉಗ್ರ ಶಿಬಿರಗಳನ್ನು ನಿಖರ ದಾಳಿಗಳ ಮೂಲಕ ಸಂಪೂರ್ಣವಾಗಿ ನಾಶಪಡಿಸಲಾಗಿದೆ. ಅದರ ಸಾಕ್ಷ್ಯಗಳು ಸಾರ್ವಜನಿಕ ವಲಯದಲ್ಲಿವೆ. ನಂತರ ಪಾಕಿಸ್ತಾನದ ಸೈನಿಕ ಮೂಲಸೌಕರ್ಯಗಳನ್ನು ಗುರಿ ಯಾಗಿಸಿ 11 ಏರ್‌ಫೀಲ್ಡ್‌ಗಳ ಮೇಲೆ ದಾಳಿ ನಡೆಸಲಾಯಿತು' ಎಂದು ವಿವರಿಸಿದರು. ಭಾರತೀಯ ಸೇನೆ, ವಾಯುಪಡೆ ಹಾಗೂ ನೌಕಾಪಡೆಗಳ ಜಂಟಿ ಕಾರ್ಯಾಚರಣೆಯಾಗಿದ್ದ ಆಪರೇಷನ್ ಸಿಂದೂರ, ಕಳೆದ ವರ್ಷ ಪಹಲ್ಗಾಮ್ ಉಗ್ರ ದಾಳಿಯ ಬಳಿಕ ನಡೆಸಲಾಗಿತ್ತು. ಉಗ್ರ ಚಟುವಟಿಕೆಗಳಿಗೆ ತಕ್ಕ ಪ್ರತಿಕ್ರಿಯೆ ನೀಡುವ ಉದ್ದೇಶದಿಂದ ಭಾರತ ಈ ಕಾರ್ಯಾಚರಣೆ ಆರಂಭಿಸಿತ್ತು. ಪುಟ ೫



- ಪಹಲ್ಗಾಮ್ ಉಗ್ರ ದಾಳಿಯ ಬಳಿಕ ಭಾರತ ಆರಂಭಿಸಿದ ಕಾರ್ಯಾಚರಣೆ
- ಪಾಕ್ ಹಾಗೂ ಪಾಕ್ ಆಕ್ರಮಿತ ಕಾಶ್ಮೀರದ 9 ಉಗ್ರ ಶಿಬಿರಗಳ ನಾಶ
- 11 ಪಾಕಿಸ್ತಾನಿ ಏರ್‌ಫೀಲ್ಡ್‌ಗಳ ಮೇಲೆ ನಿಖರ ದಾಳಿ
- ನೆಲ ಹಾಗೂ ಗಗನದಲ್ಲಿ ಸೇರಿ 13 ಯುದ್ಧವಿಮಾನ ಧ್ವಂಸ
- 300 ಕಿ.ಮೀ. ದೂರದಿಂದ ಹೈ ವ್ಯಾಲ್ಯೂ ಏರ್‌ಬೋರ್ನ್ ಅಸೆಟ್ ಹೊಡೆತ
- ಭಾರತೀಯ ಮೂಲಸೌಕರ್ಯಗಳಿಗೆ ದೊಡ್ಡ ಮಟ್ಟದ ಹಾನಿ ಇಲ್ಲ
- ಸೇನೆ, ವಾಯುಪಡೆ, ನೌಕಾಪಡೆಗಳ ಜಂಟಿ ಕಾರ್ಯಾಚರಣೆ

ಪಾಕ್‌ಗೆ ತಕ್ಕ ಪ್ರತ್ಯುತ್ತರ: ಪ್ರಧಾನಿ ಮೋದಿ

• **ಹೊಸದಿಲ್ಲಿ:** ಭಯೋತ್ಪಾದನೆಗೆ ಭಾರತದ ಪ್ರತ್ಯುತ್ತರ ಅತ್ಯಂತ ದೃಢ ಮತ್ತು ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡುವಲ್ಲಿ ನಮ್ಮ ಬದ್ಧತೆ ಅಚಲವೆಂಬುದನ್ನು ಆಪರೇಷನ್ ಸಿಂದೂರ್



ಸಾಕ್ಷೀಕರಿಸಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ವರ್ಷದ ನಂತರವು ಭಯೋತ್ಪಾದನೆಯ ಪರಾಭವ ಮತ್ತು ಅದಕ್ಕೆ ಪೂರಕವಾದ ವಾತಾವರಣವನ್ನು ದಮನಿಸುವ ವಿಚಾರದಲ್ಲಿ ಭಾರತ ದೃಢ ಸಂಕಲ್ಪಬದ್ಧವಾಗಿದೆ. ವರ್ಷದ ಹಿಂದೆ ಆಪರೇಷನ್ ಸಿಂದೂರ್‌ನಲ್ಲಿ ಭಾರತದ ಸಶಸ್ತ್ರ ಪಡೆಗಳು ಸರಿಸಾಟಿರಹಿತ ಶೌರ್ಯ, ದಾಳಿ ಕಾರ್ಯಾಚರಣೆಯಲ್ಲಿ ನಿಖರತೆ ಮೆರೆದಿದ್ದರು. ಪುಟ ೫

ಯಾವುದೇ ಉಗ್ರ ನೆಲೆ ಸುರಕ್ಷಿತವಾಗಿಲ್ಲ: ಸೇನೆ

• ಪುಟ ೭

ಬಂಗಾಳದಲ್ಲಿ ಹಿಂಸಾಚಾರ, ಬಿಜೆಪಿಗರೇ ಗುರಿ
ಸುವೇಂದು ಅಧಿಕಾರಿ ಆಪ್ತನ ಗುಂಡಿಕ್ಕಿ ಹತ್ಯೆ

• **ಕೋಲ್ಕತ:** ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣಾ ಫಲಿತಾಂಶ ಹೊರಬಂದ 48 ಗಂಟೆಗಳ ಬಳಿಕವೂ ಹಿಂಸಾಚಾರ ಮುಂದುವರಿದಿದ್ದು, ಬುಧವಾರ ರಾತ್ರಿ ಬಿಜೆಪಿ ನಾಯಕ ಸುವೇಂದು



ಅಧಿಕಾರಿಯ ಆಪ್ತ ಸಹಾಯಕ ಚಂದ್ರನಾಥ್ ರಾಥ್‌ರನ್ನು ಗುಂಡಿಟ್ಟು ಹತ್ಯೆ ಮಾಡಲಾಗಿದೆ. ಸಂಭಾವ್ಯ ಮುಖ್ಯಮಂತ್ರಿ ಸುವೇಂದು ಆಪ್ತನ ಹತ್ಯೆ, ಬಂಗಾಳ ರಾಜಕೀಯದಲ್ಲಿ ಆತಂಕ ಸೃಷ್ಟಿಸಿದೆ.

ಭವಾನಿಪುರ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಗೆದ್ದ ಬಿಜೆಪಿ ಅಭ್ಯರ್ಥಿ ಸುವೇಂದು ಅವರ ಆಪ್ತನ ಹತ್ಯೆಯನ್ನು ಖಂಡಿಸಿದ ಬಿಜೆಪಿ, ಗುರಿಯಾಗಿಸಿ ನಡೆಸಿದ ಹತ್ಯೆಯೆಂದು ಆರೋಪಿಸಿದೆ. ಪುಟ ೫



> ಇದೊಂದು ನಿರ್ದಯ ಹತ್ಯೆ. ಭವಾನಿಪುರದಲ್ಲಿ ಮಮತಾರನ್ನು ಸೋಲಿಸಿದ ಕಾರಣಕ್ಕಾಗಿ ನನ್ನ ಆಪ್ತನ ಹತ್ಯೆ ಮಾಡಿಸಿದ್ದಾರೆ. ಕಳೆದ 15 ವರ್ಷಗಳ ಮಹಾಜಂಗಲ್ ರಾಜ್‌ನ ಪರಿಣಾಮ. ಇಂತಹ ಅಪರಾಧಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ.
> ■ **ಸುವೇಂದು ಅಧಿಕಾರಿ,** ಬಿಜೆಪಿ ನಾಯಕ



ಇನ್ನೂ ಇಬ್ಬರ ಮೇಲೆ ದಾಳಿ, ಚಾಕು ಇರಿತ!

ಫಲಿತಾಂಶದ ನಂತರ ಹಲವು ಜಿಲ್ಲೆಗಳಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ದಾಳಿಗಳು ಮುಂದುವರಿದಿವೆ. ಪಕ್ಷದ ಕಾರ್ಯಕರ್ತರು ಕಾನೂನನ್ನು ಕೈಗೆತ್ತಿಕೊಳ್ಳಬಾರದು. ನಾವಿಲ್ಲಿ ಮಾತನಾಡುತ್ತಿದ್ದಾಗಲೇ ಬಸಿರ್‌ಹಾಟ್‌ನಲ್ಲಿ ನಮ್ಮ ಕಾರ್ಯಕರ್ತನಿಗೆ ಗುಂಡು ಹಾರಿಸಲಾಗಿದ್ದು, ಬರಾನಗರದಲ್ಲಿ ಇನ್ನೊಬ್ಬನ ಮೇಲೆ ಚಾಕು ಇರಿತವಾಗಿದೆ ಎಂದು ಸುವೇಂದು ತಿಳಿಸಿದ್ದಾರೆ. ಪುಟ ೫

ಬಾಂಬ್ ದಾಳಿ: 5 ಬಿಜೆಪಿ ಕಾರ್ಯಕರ್ತರಿಗೆ ಗಾಯ

• ಪುಟ ೫

ಆರೆಸ್ಸೆಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅಭಿಮತ
ಸಮಗ್ರ ಪ್ರಗತಿಗೆ ಧರ್ಮ ಅಡಿಪಾಯ

• **ಮೈಸೂರು:** ಧರ್ಮವು ಮಾನವನ ಸರ್ವಾಂಗೀಣ ಪ್ರಗತಿಯ ಅಡಿಪಾಯವಾಗಿದೆ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ತಿಳಿಸಿದರು.

ಗುರುವಾರ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದಲ್ಲಿ ಆಯೋಜಿಸಲಾಗಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸದಲ್ಲಿ ಪಾಲ್ಗೊಂಡು ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ ವಿಷಯ ಕುರಿತು ಮಾತನಾಡಿದ ಅವರು, ದಯೆ ಇದ್ದಲ್ಲಿ ಧರ್ಮವಿರುತ್ತದೆ. ಆಶ್ರಯ ಅರಸಿ ಬಂದ ಹಕ್ಕಿಯನ್ನು ರಕ್ಷಿಸಲು ತನ್ನನ್ನೇ ಅರ್ಪಿಸಿಕೊಂಡ ಶಿಬಿ ಚಕ್ರವರ್ತಿಯ ತ್ಯಾಗ, ದಯೆ ನಮಗೆ ಬರಬೇಕು. ತ್ಯಾಗ, ಕರುಣೆ, ದಯೆಯಲ್ಲಿಯೇ ಸೌಹಾರ್ದವಿದೆ ಎಂದರು. ಮೋಕ್ಷ, ಅರ್ಥ, ಕಾಮ ಪುರುಷಾರ್ಥದಲ್ಲಿ ಧರ್ಮವೂ ಸೇರಿದೆ. ಸೌಹಾರ್ದತೆಯು ಹಿತವಾದ ಸಂಗೀತದಂತೆ ಇರಬೇಕು. ನಾವು ಸಂಯಮ ಕಳೆದುಕೊಂಡರೆ ಏಕಭಾವ ಮೂಡುವುದಿಲ್ಲ. ಪುಟ ೫

ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸ



> ನಾವು ಧರ್ಮವನ್ನು ರಕ್ಷಣೆ ಮಾಡಿದರೆ, ಧರ್ಮ ನಮ್ಮನ್ನು ರಕ್ಷಣೆ ಮಾಡುತ್ತದೆ. ಧರ್ಮವಿಲ್ಲದೆ ಮನುಷ್ಯನ ಜೀವನ ಸಾರ್ಥಕವಾಗುವುದಿಲ್ಲ. ಧರ್ಮ ಶಾಂತಿ, ನೆಮ್ಮದಿಯನ್ನು ನೀಡುತ್ತದೆ. ಧರ್ಮವಿದ್ದಲ್ಲಿ ಸಂತೋಷ, ಸಮೃದ್ಧಿ ಇರುತ್ತದೆ.
> ■ **ಮೋಹನ್ ಭಾಗವತ್,** ಆರೆಸ್ಸೆಸ್ ಸರಸಂಘಚಾಲಕ

ಸೌದಿ ಬೆಂಬಲಿಸದ ಕಾರಣ ಪ್ರಾಜೆಕ್ಟ್ ಫ್ರೀಡಮ್ ಸ್ಥಗಿತ

ಹಾರ್ಮುಜ್ ತೆರೆಯಲು ನೌಕಾ ದಾಳಿ ಘೋಷಿಸಿದ್ದ ಡೊನಾಲ್ಡ್ ಟ್ರಂಪ್

• **ದುಬೈ:** ಸೌದಿ ಸಾಮ್ರಾಜ್ಯ ತನ್ನ ವಾಯು ಪ್ರದೇಶದಲ್ಲಿ ಅಮೆರಿಕ ಯುದ್ಧ ವಿಮಾನಗಳಿಗೆ ಪ್ರವೇಶ ನಿರಾಕರಿಸಿದ ಹಿನ್ನೆಲೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್



ತಮ್ಮ ಪ್ರಾಜೆಕ್ಟ್ ಫ್ರೀಡಮ್ ನೌಕಾ ಕಾರ್ಯಾಚರಣೆಯನ್ನು ತಾತ್ಕಾಲಿಕ ಸ್ಥಗಿತಗೊಳಿಸಿದ್ದಾರೆ.

ಹಾರ್ಮುಜ್ ತೆರೆಯಲು ಅಮೆರಿಕ ದಾಳಿ ನಡೆಸಿದರೆ, ಅದರಲ್ಲಿ ಸೌದಿ ಪಾತ್ರ ಇರುವುದಿಲ್ಲ. ಸೌದಿ ಈ ದಾಳಿಯನ್ನು ಬೆಂಬಲಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಇರಾನ್‌ಗೆ ಸೌದಿ ರವಾನಿಸಿದೆ. ತನ್ನ ವಾಯು ಪ್ರದೇಶದೊಳಗೆ ಅಮೆರಿಕ ಯುದ್ಧ ವಿಮಾನಗಳು ಪ್ರವೇಶಿಸಲು ಬಿಡುವುದಿಲ್ಲವೆಂದು ಸೌದಿ ಅರೇಬಿಯಾ ನೇರವಾಗಿ ಕಡ್ಡಿ ಮುರಿದಂತೆ ಟ್ರಂಪ್‌ಗೆ ತಿಳಿಸಿದೆ. ಇದರಿಂದ ಟ್ರಂಪ್ ಫ್ರೀಡಮ್ ನೌಕಾ ಕಾರ್ಯಾಚರಣೆಗೆ ತಾತ್ಕಾಲಿಕ ಬ್ರೇಕ್ ಹಾಕಿದ್ದಾರೆ. ಪುಟ ೫

ರಾಜ್ಯ ಶಿಕ್ಷಣ ನೀತಿಗಾಗಿ ಸಂಪುಟ ಉಪ ಸಮಿತಿ

• **ಬೆಂಗಳೂರು:** ರಾಜ್ಯ ಶಿಕ್ಷಣ ನೀತಿ ಅನುಷ್ಠಾನಗೊಳಿಸುವ ಸಂಬಂಧ ಪ್ರೊ. ಸುಖದೇವ್ ಥೋರಟ್ ಆಯೋಗದ ವರದಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಸಂಪುಟ ಉಪ ಸಮಿತಿ ರಚಿಸಲು ಸರ್ಕಾರ ನಿರ್ಧಾರ ಕೈಗೊಂಡಿದೆ.



ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವ ದಲ್ಲಿ ನಡೆದ ಸಂಪುಟ ಸಭೆಯಲ್ಲಿ ರಾಜ್ಯದಲ್ಲಿ ರಾಜ್ಯ ಶಿಕ್ಷಣ ನೀತಿ ಜಾರಿಗೊಳಿಸುವ ಬಗ್ಗೆ ರಚನೆಯಾಗಿರುವ ಆಯೋಗದ ಅಂತಿಮ ವರದಿಯ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ವರದಿಯ ಶಿಫಾರಸುಗಳ ಅನುಷ್ಠಾನದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರದಿಯ ಶಿಫಾರಸುಗಳನ್ನು ಅನುಷ್ಠಾನ ಮಾಡಲು ಸಂಪುಟ ಉಪ ಸಮಿತಿ ರಚಿಸಲು ಸೂಚಿಸಿದ್ದು, ಇದು 8 ಸಂಪುಟಗಳ ವರದಿಯಾಗಿದೆ. ಎಲ್ಲವನ್ನೂ ಪರಾಮರ್ಶೆ ನಡೆಸಿ ಶಿಫಾರಸು ಮಾಡಬೇಕಿರುವುದರಿಂದ ಇದೇ ಶೈಕ್ಷಣಿಕ ವರ್ಷದಲ್ಲಿ ಅನುಷ್ಠಾನದ ಬಗ್ಗೆ ಸ್ಪಷ್ಟನೆ ಇಲ್ಲ ಎಂದು ಕಾನೂನು ಸಚಿವ ಎಚ್.ಕೆ ಪಾಟೀಲ ತಿಳಿಸಿದರು. ಪುಟ ೫

ಸರ್ಕಾರ ರಚನೆಗೆ ಬೇಕಾದ ಬೆಂಬಲ ಇಲ್ಲ: ವಿಜಯ್‌ಗೆ ರಾಜ್ಯಪಾಲ
ತ.ನಾಡಲ್ಲಿ ದಳಪತಿ ಸರ್ಕಾರ್ ಕಸರತ್ತು

• **ಚೆನ್ನೈ:** ತಮಿಳುನಾಡಿನಲ್ಲಿ ಬಹುಮತವಿಲ್ಲದೆ ಸರ್ಕಾರ ರಚಿಸಲು ಟಿವಿಕೆ ಮುಖ್ಯಸ್ಥ ವಿಜಯ್ ಸಲ್ಲಿಸಿದ ಮನವಿಯನ್ನು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ತಿರಸ್ಕರಿಸಿದ್ದಾರೆ. ಇದರಿಂದಾಗಿ ಗುರುವಾರ ನಡೆಯಬೇಕಾಗಿದ್ದ ದಳಪತಿ ವಿಜಯ್ ಪ್ರಮಾಣವಚನ ಕಾರ್ಯಕ್ರಮ ಮುಂದೂಡಲ್ಪಟ್ಟಿತು. ಸರಳ ಬಹುಮತಕ್ಕಿಂತ ಕಡಿಮೆ ಸ್ಥಾನಗಳಿದ್ದರೂ, ವಿಧಾನಸಭಾ ಚುನಾವಣೆಯಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಟಿವಿಕೆಗೆ ಸರ್ಕಾರ ರಚಿಸಲು ಮೊದಲ ಅವಕಾಶ ನೀಡುವುದಾಗಿ ವಿಜಯ್‌ಗೆ ರಾಜ್ಯಪಾಲರು ಭರವಸೆ ನೀಡಿರುವುದಾಗಿ ಮೂಲಗಳು ತಿಳಿಸಿವೆ.

ಕೇವಲ 112 ಶಾಸಕರೊಂದಿಗೆ ಸರ್ಕಾರ ರಚಿಸಲು ಅನುಮತಿ ಕೇಳಿದರೆ ಅನುಮತಿ ನೀಡಲು ಸಾಧ್ಯವಾಗುವುದಿಲ್ಲ, ಕನಿಷ್ಠಪಕ್ಷ 118 ಶಾಸಕರಾದರೂ ನಿಮ್ಮೊಂದಿಗಿದ್ದಾರೆಂದು ಅವರ ಸಹಿ ಸಂಗ್ರಹಿಸಿಕೊಂಡು ಬಂದರೆ, ತಾನು ಸರ್ಕಾರ ರಚಿಸಲು ತಕ್ಷಣವೇ ಅನುಮತಿ ನೀಡುವುದಾಗಿ ರಾಜ್ಯಪಾಲರು ವಿಜಯ್‌ಗೆ ಸಲಹೆ ನೀಡಿದ್ದಾರೆಂದು ತಿಳಿದುಬಂದಿದೆ. ಆದರೆ ಸರ್ಕಾರ ರಚಿಸಲು ಅವಕಾಶ ನೀಡಿ, ವಿಧಾನಸಭೆಯಲ್ಲಿ ಬಹುಮತ ಸಾಬೀತು ಮಾಡುವುದಾಗಿ ವಿಜಯ್ ಮನವಿ ಮಾಡಿದ್ದು, ರಾಜ್ಯಪಾಲರು ತಮ್ಮ ಒಪ್ಪಿಗೆಯನ್ನು ನೀಡಿಲ್ಲ. 234 ಸದಸ್ಯರ ತಮಿಳುನಾಡು ವಿಧಾನಸಭೆಯಲ್ಲಿ ಟಿವಿಕೆ 108 ಸ್ಥಾನಗಳನ್ನು ಗೆದ್ದು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ, ಸರ್ಕಾರ ರಚನೆಗೆ ಬೇಕಾದ 118 ಸಂಖ್ಯೆಗೆ ಇನ್ನೂ 10 ಸ್ಥಾನಗಳ ಕೊರತೆಯಿದೆ. ಪುಟ ೫



- ಸಂಖ್ಯಾಬಲದ ಕೊರತೆಯಿಂದ ಸರ್ಕಾರ ರಚನೆಗೆ ತಡೆ
- ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ರದ್ದು

24 ತಾಸಿನಲ್ಲಿ 2ನೇ ಬಾರಿ ರಾಜ್ಯಪಾಲರ ಭೇಟಿ

24 ಗಂಟೆಗಳೊಳಗೆ ಎರಡನೇ ಬಾರಿ ವಿಜಯ್ ಅವರು ಲೋಕಭವನಕ್ಕೆ ಭೇಟಿ ನೀಡಿ ರಾಜ್ಯಪಾಲರನ್ನು ಭೇಟಿಯಾದರು. ಬಳಿಕ ಲೋಕಭವನ ಹೊರಡಿಸಿದ ಪ್ರಕಟಣೆಯಲ್ಲಿ, ''ಸರ್ಕಾರ ರಚನೆಗೆ ಅಗತ್ಯವಾದ ಬಹುಮತ ಬೆಂಬಲ ಇನ್ನೂ ಸ್ಪಷ್ಟವಾಗಿಲ್ಲ'' ಎಂದು ಹೇಳಲಾಗಿದೆ.

ಕಾಂಗ್ರೆಸ್ ಹಳೆಯ ಸ್ವಭಾವ ಬದಲಾಗಿಲ್ಲ: ಡಿಎಂಕೆ

• **ಚೆನ್ನೈ:** ಕಾಂಗ್ರೆಸ್ ಪಕ್ಷ ತನ್ನ ಹಳೆಯ ರಾಜಕೀಯ ಸ್ವಭಾವವನ್ನು ಇನ್ನೂ ಬದಲಿಸಿಕೊಂಡಿಲ್ಲ ಎಂದು ಡಿಎಂಕೆ ತೀವ್ರ ಟೀಕೆ ಮಾಡಿದೆ. ಪಕ್ಷದ ಸಾಮಾನ್ಯ ಸಭೆಯಲ್ಲಿ ಈ ಸಂಬಂಧ ನಿರ್ಣಯ ಅಂಗೀಕರಿಸಲಾಗಿದ್ದು, ಕಾಂಗ್ರೆಸ್ ವಿರುದ್ಧ ದ್ರೋಹದ ಆರೋಪ ಮಾಡಲಾಗಿದೆ. ಪುಟ ೫

ಪುದುಚೇರಿ ರೆಸಾರ್ಟ್‌ಗೆ 28 ಎಐಎಡಿಎಂಕೆ ಶಾಸಕರು

• ಪುಟ ೫

ಜರ್ಮನ್ ತಂತ್ರಜ್ಞಾನದ 140 ಅಡಿ ಅಗಲದ ಬೃಹತ್ ವೇದಿಕೆ ನಿರ್ಮಾಣ
ಬಿಎಸ್‌ವೈ ಅಭಿಮಾನೋತ್ಸವಕ್ಕೆ ಭಾರೀ ಸಿದ್ಧತೆ

ಎಂ.ಜಿ. ತಿಪ್ಪೇಸ್ವಾಮಿ

• **ಚಿತ್ರದುರ್ಗ:** ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಅಭಿಮಾನೋತ್ಸವ ಸಮಾರಂಭ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಭರದ ಸಿದ್ಧತೆಗಳು ನಡೆಯುತ್ತಿವೆ. ಅಭಿಮಾನಿಗಳು ಅತ್ಯಂತ ಉತ್ಸಾಹದಿಂದ ವಿವಿಧ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಸಂಸದ ಗೋವಿಂದ ಕಾರಜೋಳ ಕಾರ್ಯಕ್ರಮದ ನೇತೃತ್ವ ವಹಿಸಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮ ಸ್ಥಳಕ್ಕೆ ಪ್ರತಿದಿನ ಭೇಟಿ ನೀಡಿ ಕಾರ್ಯಕ್ರಮದ ಸಿದ್ಧತೆ ಕುರಿತು ಪರಿಶೀಲಿಸುತ್ತಿದ್ದಾರೆ. ನಗರದ ಹೊರವಲಯದ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದ ಮೈದಾನ ಬಿ.ಎಸ್. ಯಡಿಯೂರಪ್ಪನವರ ಅಭಿಮಾನೋತ್ಸವ ಆಚರಣೆಗೆ ಜರ್ಮನ್ ತಂತ್ರಜ್ಞಾನದಲ್ಲಿ 60 ಅಡಿ ಎತ್ತರ, 200 ಅಡಿ ಉದ್ದ, 140 ಅಡಿ ಅಗಲದ ವಿನೂತನ ಶೈಲಿಯ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದೆ. ಪುಟ ೫





ಒಂದು ಸಾವಿರ ಊಟದ ಕೌಂಟರ್

ವೇದಿಕೆ ಇಕ್ಕೆಲಗಳಲ್ಲಿ 25 ಕಡೆಗಳಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ. ಇವುಗಳಲ್ಲಿ ಸುಮಾರು 1 ಸಾವಿರದಷ್ಟು ಊಟದ ಕೌಂಟರ್‌ಗಳನ್ನು ತೆರೆಯಲಾಗಿದೆ. ಕಾರ್ಯಕ್ರಮ ನಿರ್ವಹಣೆಗೆ 22 ಸಮಿತಿಗಳನ್ನು ರಚಿಸಲಾಗಿದೆ. ಇವುಗಳಲ್ಲಿ ಸುಮಾರು 2000 ಸಂಖ್ಯೆಯ ಪ್ರಬಂಧಕರು ಸ್ವಯಂ ಪ್ರೇರಣೆಯಿಂದ ಕೆಲಸ ಮಾಡುತ್ತಿದ್ದಾರೆ.

ಹೈದರಾಬಾದ್ ಫ್ಯಾನ್

ಬಿಸಿಲಿನ ಝಳದಿಂದ ಜನರಿಗೆ ರಕ್ಷಣೆ ನೀಡುವ ಉದ್ದೇಶದಿಂದ ಹೈದರಾಬಾದ್‌ನಿಂದ ನೂತನ ತಂತ್ರಜ್ಞಾನದ ಫ್ಯಾನ್‌ಗಳನ್ನು ತರಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ಜನರಿಗೆ ಅವರು ಕುಳಿತಿರುವ ಕಡೆಗೆ ಕುಡಿಯುವ ನೀರು, ಮಜ್ಜಿಗೆ ಪ್ಯಾಕೇಟ್ ವಿತರಿಸುವ ವ್ಯವಸ್ಥೆ ಮಾಡಲಾಗಿದೆ. ಬನ್, ಬಾಳೆಹಣ್ಣು ನೀಡಲಾಗುವುದು. ಇದಕ್ಕಾಗಿ ಹಲವು ಪ್ರಬಂಧಕರನ್ನು ನೇಮಿಸಲಾಗಿದೆ.

ಇಂದು ಬಿಎಸ್‌ವೈ ಪುರಪ್ರವೇಶ

• ಪುಟ ೫

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,70,000 (2,65,000) ಅಪರಂಜಿ ಚಿನ್ನ: 1,53,000 (1,51,310) ಆಭರಣ ಚಿನ್ನ: 1,40,250 (1,38,700) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 77,844 (114↓) ಎನ್‌ಎಸ್‌ಇ 24,326 (4↓)

$1 = ₹95.29

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಶುಕ್ರವಾರ, 8 ಮೇ 2026
ಸಂಪುಟ 16, ಸಂಚಿಕೆ 44, ಪುಟಗಳು 16
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ಬಂಧುತ್ವ ನೆಲೆಗೊಳ್ಳಬೇಕು
ಮೋಹನ್ ಭಾಗವತ್ ಸಲಹೆ
• ಪುಟ ೮

ಕಿರುಸುದ್ದಿ

ಇಂದಿನಿಂದ ಮ್ಯಾಡ್ಸ್ ಮೀಟ್ 2ಕೆ26

ಹುಬ್ಬಳ್ಳಿ: ನಗರದ ಕೆಎಲ್ಇ ಐಎಂಎಸ್ ಆರ್ ಎಂಬಿಎ ಕಾಲೇಜ್ ವತಿಯಿಂದ ಮೇ 8 ಹಾಗೂ 9 ರಂದು ರಾಜ್ಯ ಮಟ್ಟದ ಮ್ಯಾನೇಜ್‌ಮೆಂಟ್ ಉತ್ಸವ ಮ್ಯಾಡ್ಸ್ ಮೀಟ್ 2ಕೆ26 ಹಮ್ಮಿಕೊಳ್ಳಲಾಗಿದೆ ಎಂದು ಕೆಎಲ್ಇ ಐಎಂಎಸ್ ಆರ್ ನಿರ್ದೇಶಕ ಡಾ. ರಾಜೇಂದ್ರ ಪ್ರಸಾದ ಹನಗಂಡಿ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವೋದ್ಯಮಿಗಳ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಳೆದ 9 ವರ್ಷದಿಂದ ಈ ಸ್ಪರ್ಧೆ ಏರ್ಪಡಿಸಲಾಗುತ್ತಿದೆ. ಇದರಿಂದ ನವೋದ್ಯಮಿಗಳಲ್ಲಿರುವ ಹೊಸ ಕೌಶಲ್ಯ, ಆಲೋಚನೆಗಳ ಗುರುತಿಸುವ ಕಾರ್ಯ ಮಾಡಲಾಗುತ್ತಿದೆ ಎಂದರು.

ಎರಡು ದಿನ ಕಾರ್ಯಕ್ರಮದಲ್ಲಿ ಐದು ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಕರ್ಟನ್ ರೈಸರ್, ರೈಸಿಂಗ್ ಪಲಾಡಿನ್, ಮ್ಯಾಚ್ ವಿಜ್, ನೋವಸ್ ದಿ ಸೋಶಿಯಲ್ ಎಂಟರ್ ಪ್ರಿನರ್, ಸ್ಟಾರ್ಟಾಥಾನ್ ನೋವಾಸ್ ದಿ ಸೋಶಿಯಲ್ ಎಂಟರ್ ಪ್ರಿನರ್ ಸ್ಪರ್ಧೆ ಏರ್ಪಡಿಸಲಾಗಿದೆ. ವಿಜೇತ ತಂಡಕ್ಕೆ 15 ಸಾವಿರ ಬಹುಮಾನ ನೀಡಲಾಗುವುದು. ಈಗಾಗಲೇ ರಾಜ್ಯದ 20ಕ್ಕೂ ಹೆಚ್ಚು ತಂಡಗಳು ನೋಂದಣಿ ಮಾಡಿಸಿವೆ ಎಂದು ತಿಳಿಸಿದರು.

ಮೇ 8 ರಂದು ಬೆಳಗ್ಗೆ 10 ಗಂಟೆಗೆ ಮ್ಯಾಡ್ಸ್ ಮೀಟ್ 2ಕೆ26 ಉತ್ಸವಕ್ಕೆ ಚಾಲನೆ ದೊರೆಯಲಿದೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ವ್ಯವಸ್ಥಾಪಕ ನಿರ್ದೇಶಕರಾದ ಗರೀಮಾ ಪನ್ವಾರ ಚಾಲನೆ ನೀಡುವರು. ಚಾಯಿ ಲೈಫ್ ಸ್ಟೈಲ್‌ನ ಕೋ ಫೌಂಡರ್ ಡಾ. ಪಾರ್ವತಿ ವೇಣು, ಕೆಎಲ್ ಇ ಐಎಂಎಸ್ ಆರ್ ಸ್ಥಾನಿಕ ಆಡಳಿತ ಮಂಡಳಿ ಸದಸ್ಯ ಶಂಕರಣ್ಣ ಮುನವಳ್ಳಿ ಭಾವಹಿಸುವರು. ಮೇ 9 ರಂದು ನಡೆಯುವ ಸಮಾರೋಪ ಸಮಾರಂಭಕ್ಕೆ ನಟಿ ಅನುಪ್ರಭಾಕರ ಹಾಗೂ ಕೆಎಲ್ ಇ ಐಎಂಎಸ್ ಆರ್ ಸ್ಥಾನಿಕ ಮಂಡಳಿ ಕಾರ್ಯಾಧ್ಯಕ್ಷ ಎಸ್.ಸಿ. ಮೆಟಗುಡ್ಡ ಅಧ್ಯಕ್ಷತೆ ವಹಿಸುವರು ಎಂದರು.

ಅಮಿತ್ ಅಂಗಡಿ, ಅಮಿತ್ ಮಹಾಜನ್, ಡಾ. ಅರುಣ ಬಟ್ಟೂರ ಇದ್ದರು.

ಜಗದೀಶ ಹಿರೇಮನಿ ನಿಧನಕ್ಕೆ ಸಂತಾಪ

ಹುಬ್ಬಳ್ಳಿ: ಭಾರತೀಯ ಜನತಾ ಪಕ್ಷದ ಮಾಜಿ ರಾಜ್ಯ ಕಾರ್ಯದರ್ಶಿ ಹಾಗೂ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ ಜಗದೀಶ ಹಿರೇಮನಿ ಅವರ ಅಕಾಲಿಕ ನಿಧನದ ವಾರ್ತೆ ಕೇಳಿ ಅತ್ಯಂತ ಆಘಾತ ಮತ್ತು ತೀವ್ರ ದುಃಖವಾಗಿದೆ ಎಂದು ಬಿಜೆಪಿ ಧಾರವಾಡ ವಿಭಾಗ ಪ್ರಭಾರಿ ಜಯತೀರ್ಥ ಕಟ್ಟಿ ಅವರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಈ ಕುರಿತು ಸಂತಾಪ ಸೂಚಿಸಿರುವ ಅವರು, ಜಗದೀಶ್ ಹಿರೇಮನಿ ಅವರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸಕ್ರಿಯರಾಗಿದ್ದವರು. ಅವರ ನಿಧನವು ರಾಜ್ಯದ ಬಿಜೆಪಿಗೆ ಮತ್ತು ಸಫಾಯಿ ಕರ್ಮಚಾರಿಗಳ ಹೋರಾಟದ ಸಮುದಾಯಕ್ಕೆ ತುಂಬಲಾರದ ನಷ್ಟವಾಗಿದೆ. ಅವರು ಸದಾ ಶ್ರಮಜೀವಿಗಳ ಧ್ವನಿಯಾಗಿ ಕೆಲಸ ಮಾಡುತ್ತಿದ್ದರು. ಅವರು ಪ್ರಸ್ತುತ ಎಸ್ಐಆರ್ ರಾಜ್ಯ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ವಿದ್ಯಾರ್ಥಿ ಪರಿಷತ್ ಹಾಗೂ ಸಂಘ ಪರಿವಾರದಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡು, ಸಾಮಾಜಿಕ ನ್ಯಾಯದ ಪರವಾಗಿ ಧ್ವನಿ ಎತ್ತುತ್ತಿದ್ದ ಅವರ ಸೇವೆ ಸ್ಮರಣೀಯ ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಮತ್ತು ಅವರ ಕುಟುಂಬ ವರ್ಗದವರಿಗೆ ಈ ನೋವನ್ನು ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ ಎಂದಿದ್ದಾರೆ.

ಗೃಹಿಣಿ ಕಾಣೆ

ಧಾರವಾಡ: ಮನೆಯಿಂದ ಹೋರಹೋದ ಗೃಹಣಿ ಕಾಣೆಯಾದ ಘಟನೆ ನಡೆದಿದೆ. ಮೂಲತಃ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಉಳ್ಳಿಗೇರಿ ಗ್ರಾಮದ ಹಾಗೂ ಧಾರವಾಡ ನಾರಾಯಣಪುರ ನಿವಾಸಿ ನೇತ್ರಾವತಿ ಮುತ್ತಪ್ಪ ಉಳ್ಳಿಗೇರಿ (29) ಕಾಣೆಯಾದ ಗೃಹಣಿ.

ಏ.26ಕ್ಕೆ ಸಂಜೆ ಮನೆಯಿಂದ ಹೊರಹೋದ ನೇತ್ರವಾತಿ ವಾಪಸ್ ಬಾರದೆ, ಎಲ್ಲಿಗೋ ಹೋಗಿ ಕಾಣೆಯಾದ ಕುರಿತು ಆಕೆಯ ಪತಿ ಮುತ್ತಪ್ಪ ಉಳ್ಳಿಗೇರಿ ನೀಡಿದ ದೂರಿನ ಮೇರೆಗೆ ಉಪನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 5 ಫೂಟ್ ಎತ್ತರ, ತಲೆಯಲ್ಲಿ ಉದ್ದ ಕಪ್ಪು ಕೂದಲು, ದುಂಡು ಮುಖ, ಗೋಧಿ ಮೈಬಣ್ಣ ಹೊಂದಿದ ನೇತ್ರಾವತಿ ಕನ್ನಡ ಮಾತನಾಡುತ್ತಾಳೆ. ಸುಳಿವು ಸಿಕ್ಕವರು ಕಂಟ್ರೋಲ್ ರೂಂ;0836-2233555 /100, ಉಪನಗರ ಠಾಣೆ 0836-2233511/9480802033 ಅಥವಾ ಸಂಬಂಧಿಕರ 9902871110ಕ್ಕೆ ಸಂಪರ್ಕಿಸಲು ಕೋರಿದೆ.



ಧಾರವಾಡ: ರಂಗ ಸಾಮ್ರಾಟ ನಾಟಕ ಶಾಲೆ ಮತ್ತು ಕನ್ನಡ-ಸಂಸ್ಕೃತಿ ಇಲಾಖೆ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ನಾಟಕೋತ್ಸವವನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರದ ಮುಖ್ಯಸ್ಥ ಬಸವರಾಜ ನಾಲತ್ತವಾಡ ಉದ್ಘಾಟಿಸಿದರು. ಮಕ್ಕಳ ನಾಟಕೋತ್ಸವಕ್ಕೆ ರಂಗನಟ ಉಮೇಶ ನಾಯಕ ಚಾಲನೆ ನೀಡಿದರು. ಚಿಲಿಪಿಲಿ ಸಂಸ್ಥೆಯ ಅಧ್ಯಕ್ಷ ಶಂಕರ ಹಲಗತ್ತಿ ಅಧ್ಯಕ್ಷತೆ ವಹಿಸಿದ್ದರು. ಶಿಬಿರದ ನಿರ್ದೇಶಕ ಸಿಕಂದರ ದಂಡಿನ, ಮಲ್ಲಿಕಾರ್ಜನ ಚಿಕ್ಕಮಠ, ಪ್ರಮೀಳಾ ಚಕ್ಕಣ್ಣವರ, ಯಲ್ಲಪ್ಪ ಬೆಂಡಿಗೇರಿ, ಪ್ರಭಾವತಿ ಅಂಗಡಿ, ಜಯಲಕ್ಷ್ಮೀ ಎಚ್. ಪಾಲ್ಗೊಂಡಿದ್ದರು. ಮಕ್ಕಳ ನಾಟಕ ಪ್ರದರ್ಶನ ನಡೆಯಿತು.

ಕನ್ನಡಕ್ಕೆ ಕಸಾಪ ಕೊಡುಗೆ ಅಪಾರ

ಧಾರವಾಡ: ಅಖಂಡ ಕರ್ನಾಟಕ ರಾಜ್ಯ ನಿರ್ಮಾಣದಲ್ಲಿ ಹಾಗೂ ಕನ್ನಡಿಗರನ್ನು ಒಗ್ಗೂಡಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ ಕೊಡುಗೆ ಅಪಾರ ಎಂದು ಸಾಹಿತಿ ಡಾ.ಶ್ಯಾಮಸುಂದರ ಬಿದರಕುಂದಿ ಹೇಳಿದರು. ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಕರ್ನಾಟಕ ಮೊದಲು ಮರಾಠರು, ಪೇಶ್ವೆಗಳು, ಆದಿಲ್ ಶಾಹಿಗಳು, ಮೈಸೂರು ಒಡೆಯರು ಮತ್ತು ಆಂಗ್ಲರ ಆಡಳಿತಕ್ಕೆ ಒಳಪಟ್ಟು ಮರಾಠಿ, ಉರ್ದು, ತೆಲುಗು ಭಾಷೆಗಳ ಪ್ರಭಾವಕ್ಕೆ ಒಳಗಾಗಿದ್ದಾಗಿ ಹೇಳಿದರು. ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ವಿದ್ಯಾವರ್ಧಕ ಸಂಘ, ಸಾಹಿತ್ಯ ವಲಯ ಮತ್ತು ರಾಜಕೀಯ ಮುಖಂಡರ ಒಗ್ಗೂಡಿ ಏಕೀಕರಣ ಚಳುವಳಿ ನಡೆಸಿದ ಕಾರಣ ಅಖಂಡ ಕರ್ನಾಟಕ ನಿರ್ಮಾಣವಾಗಿದೆ ಎಂದರು. ಸಾಹಿತ್ಯ ಪರಿಷತ್ ಕನ್ನಡ ಸಾಹಿತ್ಯ ಪರಿಷತ್ ರಾಷ್ಟ್ರೀಯ, ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಸಾಹಿತ್ಯ ಸಮ್ಮೇಳನ, ವಿಚಾರ ಸಂಕಿರಣ ಏರ್ಪಡಿಸುವ ಮೂಲಕ ಕನ್ನಡ ಅಭಿವೃದ್ಧಿಗೆ ಶ್ರಮಿಸಿದ್ದಾಗಿ ಹೇಳಿದರು. ಉದ್ಘಾಟಿಸಿದ ಕವಿವಿ ಕುಲಸಚಿವ ಡಾ. ಮೃತ್ಯುಂಜಯ ಅಗಡಿ ಮಾತನಾಡಿ, ಕನ್ನಡ ಅಸ್ಮಿತೆ ಉಳಿಸಿ, ಬೆಳೆಸುವ ಕೈಂಕರ್ಯದಲ್ಲಿ ಸಾಹಿತ್ಯ ಪರಿಷತ್ ಮುಂಚೂಣಿಯಲ್ಲಿದೆ ಎಂದರು. ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಅಧ್ಯಕ್ಷತೆ ವಹಿಸಿದ್ದರು. ಚಿಂತನ ಹತ್ತಿಕಾಳ, ಗುರು ತಿಗಡಿ, ಮಹಾಂತೇಶ ನರೇಗಲ್ಲ, ಪ್ರೊ. ಎನ್.ಆರ್. ಬಾಳಿಕಾಯಿ, ಸೋಮಶೇಖರ ಇಟಗಿ, ಎಚ್.ಎಸ್.ಬಡಿಗೇರ, ಸಿದ್ದರಾಮ ಹಿಪ್ಪರಗಿ ಅನೇಕರಿದ್ದರು. ಎಫ್.ಬಿ.ಕಣವಿ ನಾಡಗೀತೆ ಹಾಡಿದರು. ಪ್ರಮಿಳಾ ಜಕ್ಕಣ್ಣವರ ಪ್ರಾರ್ಥಿಸಿದರು. ಪ್ರೊ. ಕೆ.ಎಸ್.ಕೌಜಲಗಿ ಸ್ವಾಗತಿಸಿದರು. ಡಾ.ಜಿನದತ್ತ ಹಡಗಲಿ ನಿರೂಪಿಸಿದರು. ಡಾ. ಎಸ್.ಎಸ್.ದೊಡಮನಿ ವಂದಿಸಿದರು.



ಧಾರವಾಡ:ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ನಡೆಯಿತು. ಡಾಕ್ಟರೇಟ್ ಪುರಸ್ಕೃತ ಡಾ.ಪಾರ್ವತೆವ್ವ ಹೊಂಗಲ, ವಕೀಲರ ಸಂಘದ ಅಧ್ಯಕ್ಷ ಚಂದ್ರಶೇಖರ ನೆಗಿನಾಳ, ಕುಲಸಚಿವ ಡಾ. ಮೃತ್ಯುಂಜಯ ಅಗಡಿ, ಬಸವರಾಜ ಪೂಜಾರ, ಸಚಿನ್ ಕುಲಕರ್ಣಿ, ಎಸ್.ಎಚ್.ಚನ್ನೂರ, ಸುವರ್ಣ ಅಂಟಿನ, ಶಕ್ತಿ ಹಿರೇಮಠ, ಶ್ಯಾಮಸುಂದರ ಬಿದರಗುಂದಿ, ಚೈತ್ರಾ ದಂಡಿನ ಸೇರಿ ಅನೇಕರನ್ನು ಸನ್ಮಾನಿಸಲಾಯಿತು.

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ | ಎನ್.ಹೆಚ್. ಕೋನರಡ್ಡಿ ಸೂಚನೆ

ಬೀಜ ಗೊಬ್ಬರ ಕಡಿಮೆಯಾಗದಿರಲಿ

ನವಲಗುಂದ: ಭಾರೀ ಬಿಸಿಲು ಪ್ರಾರಂಭವಾಗಿದ್ದು ನವಲಗುಂದ ವಿಧಾನಸಭಾ ಕ್ಷೇತ್ರದ ನವಲಗುಂದ, ಅಣ್ಣಿಗೇರಿ ಹಾಗೂ ಹುಬ್ಬಳ್ಳಿ ತಾಲೂಕಿನಲ್ಲಿ ಕುಡಿಯುವ ನೀರು ಹಾಗೂ ರೈತರು ಜಮೀನಿನಲ್ಲಿ ಬಿತ್ತನೆಗೆ ಪ್ರಾರಂಭ ಮಾಡುವ ಮೊದಲು ಬೀಜ, ಗೊಬ್ಬರ ಕಡಿಮೆಯಾಗದಂತೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕೆಂದು ಶಾಸಕ ಎನ್.ಹೆಚ್. ಕೋನರಡ್ಡಿ ಹೇಳಿದರು.

ಅವರು ನವಲಗುಂದ ವಿಧಾನಸಭಾ ಕ್ಷೇತ್ರದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ (ಕೆ.ಡಿ.ಪಿ) ಭಾಗವಹಿಸಿ ಮಾತನಾಡಿದ ಅವರು, ಈಗಾಗಲೇ ಕ್ಷೇತ್ರದಲ್ಲಿ ಚಕ್ಕಡಿ ರಸ್ತೆಗಳನ್ನು ಅಗಲೀಕರಣ ಮಾಡಿ ಅಭಿವೃದ್ಧಿ ಪಡೆಸಿ ಅಂದಾಜು 300 ಕಿ.ಮೀ. ಗಿಂತ ಹೆಚ್ಚು ರಸ್ತೆಗಳನ್ನು ನಿರ್ಮಿಸಲಾಗಿದೆ. ರಸ್ತೆ ಅಭಿವೃದ್ಧಿ ಪಡೆಸಲು ಲೋಕೋಪಯೋಗಿ ಇಲಾಖೆಯಿಂದ 160 ಕೋಟಿ ರೂ.ಗಿಂತ ಹೆಚ್ಚಿನ ರಸ್ತೆಗಳನ್ನು ಅಭಿವೃದ್ಧಿ ಪಡೆಸಿದ್ದು ಡಾಂಬರ್ ಬೆಲೆ ಹೆಚ್ಚಾಗಿದ್ದರಿಂದ ಗುತ್ತಿಗೆದಾರರು ಡಾಂಬರೀಕರಣ ಮಾಡುವುದು ಬಾಕಿ ಉಳಿದಿದೆ. ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿ ಹುಬ್ಬಳ್ಳಿ ತಾಲೂಕಿನ ನಾಗರಹಳ್ಳಿಯಿಂದ ಶಿರಗುಪ್ಪಿ, ಇಂಗಳಹಳ್ಳಿ, ಕಿರೆಸೂರ, ಹೆಬಸೂರ, ಕಾಲವಾಡ, ಕರ್ಲವಾಡ, ಚಿಲಕವಾಡ, ಅರೇಕುರಹಟ್ಟಿ, ಯಮನೂರ, ನವಲಗುಂದ, ಗುಡಿಸಾಗರ, ನಾಗನೂರ, ಸೊಟಕನಾಳ, ಕಡದಳ್ಳಿ, ಅರಹಟ್ಟಿ ಮೂಲಕ ತಡಹಾಳ ವರೆಗೆ ಕಾಮಗಾರಿ ಪ್ರಾರಂಭವಾಗಿದೆ. ಯಮನೂರ ಹತ್ತಿರ ಜಾತ್ರೆಗೆ ಬರುವ ಭಕ್ತಾದಿಗಳಿಗೆ ಸ್ನಾನಘಟ್ಟ ನಿರ್ಮಿಸಿ ಯಮನೂರ ಆರತಿ ಎಂಬ ಹೆಸರಲ್ಲಿ ಮೆಟ್ಟಿಲುಗಳ ಮೂಲಕ ಹಳ್ಳದಲ್ಲಿ ಸರಳವಾಗಿ ಇಳಿದು ಸ್ನಾನ ಮಾಡಲು 11 ಕೋಟಿ ವೆಚ್ಚದಲ್ಲಿ ಹೊಸ ರೀತಿಯ ಕಾಮಗಾರಿ ಕೈಗೊಳ್ಳಲಾಗುತ್ತಿದೆ, ಶಿರಗುಪ್ಪಿ-ನಾಗರಹಳ್ಳಿ, ಹೆಬಸೂರ-ಬೆನ್ನೂರ, ಕಾಲವಾಡ-ಬೆಳಹಾರ-ಚಿಲಕವಾಡ, ಅರೇಕುರಹಟ್ಟಿ- ಚಿಲಕವಾಡ ಮುಂತಾದ ಕಡೆ ಬೆಣ್ಣೆಹಳ್ಳಕ್ಕೆ ದಾಟಲು ಸೇತುವೆ ಕಾಮಗಾರಿಗಳು ಪ್ರಾರಂಭವಾಗಿವೆ. ಅಮೃತ ಯೋಜನೆಯಡಿ ಕೆರೆ ಅಭಿವೃದ್ಧಿ ಪಡೆಸಲು ಈಗಾಗಲೇ ಬೆಳಹಾರ, ಗೊಬ್ಬರಗುಂಪಿ, ಹಣಸಿ, ಶಿರೂರ, ಗುಡಿಸಾಗರ, ಹೆಬ್ಬಾಳ, ಯಮನೂರ, ದಾಟನಾಳ, ಬಸಾಪೂರ, ಶಲವಡಿ, ಬ್ಯಾಹಟ್ಟಿ, ಹೆಬಸೂರ, ಸುಳ್ಳ, ಇಂಗಳಹಳ್ಳಿ, ಕೋಳಿವಾಡ, ಭದ್ರಪೂರ ಗ್ರಾಮಗಳಿಗೆ ಟೆಂಡರ್ ಕರೆದು ಕಾರ್ಯಾದೇಶ ನೀಡಲಾಗಿದ್ದು ಭೂಮಿಪೂಜೆ ನೆರವೇರಿಸಿ ಕಾಮಗಾರಿಗಳನ್ನು ಪ್ರಾರಂಭಿಸ ಬೇಕಿದೆ. ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 100 ಕೋಟಿ ರೂ. ಅನುದಾನದಲ್ಲಿ ರಸ್ತೆಗಳ ನಿರ್ಮಾಣ, ಎಲ್ಲ ಸಮಾಜದ ಸಮುದಾಯ ಭವನ, ನವಲಗುಂದ ಹಾಗೂ ಅಣ್ಣಿಗೇರಿ ಪುರಸಭೆ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಎಂದರು.

ತಹಶೀಲ್ದಾರ್‌ಗಳಾದ ಸುಧೀರ ಸಾಹುಕಾರ (ನವಲಗುಂದ), ಮಂಜುನಾಥ ದಾಸಪ್ಪನವರ (ಅಣ್ಣಿಗೇರಿ), ಜೆ.ಬಿ. ಮಜ್ಜಗಿ (ಹುಬ್ಬಳ್ಳಿ ಗ್ರಾಮೀಣ), ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ರವೀಂದ್ರಗೌಡಪಾಟೀಲ (ನವಲಗುಂದ, ಅಣ್ಣಿಗೇರಿ), ಆರ್. ಎಂ. ಹೊಸಮನಿ (ಹುಬ್ಬಳ್ಳಿ), ಸಿಪಿಐ ರವಿ ಕಪ್ಪತ್ತನವರ, ನವಲಗುಂದ ಗ್ಯಾರಂಟಿ ಸಮಿತಿ ಅಧ್ಯಕ್ಷ ವರ್ಧಮಾನಗೌಡ ಹಿರೇಗೌಡ್ರ, ಹುಬ್ಬಳ್ಳಿ ಗ್ರಾಮೀಣ ಅಧ್ಯಕ್ಷ ಶಿವಾನಂದ ಭೂಮಣ್ಣವರ, ಡಿಡಿಪಿಐ ಉಮೇಶ ಬೊಮ್ಮಕ್ಕನವರ, ನವಲಗುಂದ ಪಿಡಬ್ಲ್ಯೂ ಎಇಇ ಸೋಮನಗೌಡ ಪಾಟೀಲ, ಹುಬ್ಬಳ್ಳಿ ಪಿಡಬ್ಲ್ಯೂ ಎಇಇ ಸುಧಾಕರ ಕಟ್ಟಿಮನಿ ಸೇರಿದಂತೆ ಮುಂತಾದವರಿದ್ದರು.



ವಿದ್ಯಾರ್ಥಿಗಳಿಗೆ ಸನ್ಮಾನ ನವಲಗುಂದ ಕ್ಷೇತ್ರದ ಪಿಯುಸಿ ಹಾಗೂ ಎಸ್.ಎಸ್.ಎಲ್.ಸಿ. ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ಸೇವೆಯಿಂದ ಶಾಲಾ ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕ ಎಸ್.ಎಸ್. ಕೆಳದಿಮಠ ಅವರನ್ನು ಸನ್ಮಾನಿಸಲಾಯಿತು.

ರಂಗಭೂಮಿ ಪುನಶ್ಚೇತನಕ್ಕೆ ಆದ್ಯತೆ

ಧಾರವಾಡ: ವಿದ್ಯಾಕಾಶಿ ಧಾರವಾಡದ ಸಾಂಸ್ಕೃತಿಕ ರಾಯಭಾರಿ ಎಂದೇ ಹೆಸರಾದ ರಂಗಾಯಣದ ಅಭಿವೃದ್ಧಿ ಹಾಗೂ ರಂಗಭೂಮಿಯ ಬೆಳವಣಿಗೆ ಮತ್ತು ರಂಗಭೂಮಿ ಪುನಶ್ಚೇತನಕ್ಕೆ ಹಲವು ನೂತನ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ರಂಗಾಯಣದ ನೂತನ ನಿರ್ದೇಶಕ ಝುಕೀರ ನದಾಫ್ ತಿಳಿಸಿದರು.

ಗುರುವಾರ ರಂಗಾಯಣದಲ್ಲಿ ಸುದ್ದಿಗೋಷ್ಠಿ ಮಡೆಸಿದ ಅವರು, ರಂಗಾಯಣವನ್ನು ಕೇವಲ ಪ್ರದರ್ಶನಗಳಿಗೆ ಸೀಮಿತಗೊಳಿಸದೆ, ಯುವ ಸಮುದಾಯ ಮತ್ತು ಸಾರ್ವಜನಿಕರನ್ನು ಒಳಗೊಳ್ಳಲು ಹಲವು ಕಾರ್ಯಕ್ರಮ ರೂಪಿಸಿದೆ ಎಂದರು.

ಯುವ ಪ್ರತಿಭೆಗಳನ್ನು ರಂಗಭೂಮಿಯತ್ತ ಸೆಳೆಯಲು ಮತ್ತು ಅವರಿಗೆ ಸೂಕ್ತ ವೇದಿಕೆ ಕಲ್ಪಿಸಲು ಕಾಲೇಜು ಮಟ್ಟದಲ್ಲಿ ಅನಾವರಣ ಎಂಬ ರಂಗೋತ್ಸವ ಆಯೋಜಿಸಿ, ವಿದ್ಯಾರ್ಥಿಗಳಲ್ಲಿನ ನಟನಾ ಕೌಶಲಕ್ಕೆ ಈ ಮೂಲಕ ಹೊಸ ದಿಕ್ಕು ನೀಡುವುದಾಗಿ ತಿಳಿಸಿದರು. ರಂಗಭೂಮಿಯ ವೈವಿಧ್ಯತೆ ಮತ್ತು ಕಲಾವಿದರ ಧ್ವನಿಯನ್ನು ಜನಸಾಮಾನ್ಯರಿಗೆ ತಲುಪಿಸಲು ಈ ಹಿಂದಿನ ನಿರ್ದೇಶಕ ಡಾ. ಪ್ರಕಾಶ ಗರುಡ ಅವರ ರಂಗಧ್ವನಿ ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಧಾರವಾಡ ಅಂತಹ ಸಾಹಿತ್ಯಿಕ ಶ್ರೀಮಂತಿಕೆಯ ನೆಲದಲ್ಲಿ ವಿವಿಧ ಭಾಷೆಗಳ ಸಂಸ್ಕೃತಿಯನ್ನು ಪರಿಚಯಿಸಲು ಬಹುಭಾಷಾ ನಾಟಕೋತ್ಸವವನ್ನು ಆಯೋಜಿಸುವ ಗುರಿ ಹೊಂದಲಾಗಿದೆ. ಇದರಿಂದ ನೆರೆ ರಾಜ್ಯಗಳ ಹಾಗೂ ವಿವಿಧ ಭಾಷೆಗಳ ರಂಗಪ್ರಯೋಗಗಳನ್ನು ಇಲ್ಲಿನ ಪ್ರೇಕ್ಷಕರು ಸವಿಯಲು ಸಾಧ್ಯವಾಗಲಿದೆ ಎಂದರು.



ರಂಗಾಯಣದ ಆವರಣದಲ್ಲಿ ಮೂಲಭೂತ ಸೌಕರ್ಯಗಳ ಸುಧಾರಣೆ, ಹಳೆಯ ನಾಟಕಗಳ ಮರುಪ್ರದರ್ಶನದ ಬಗ್ಗೆಯೂ ಚರ್ಚೆ ನಡೆಸಲಾಗುತ್ತಿದೆ. ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶ ನೀಡುವ ಜೊತೆಗೆ, ರಂಗ ಶಿಕ್ಷಣದತ್ತ ಹೆಚ್ಚಿನ ಗಮನ ಹರಿಸಲಾಗುವುದು ಎಂದು ಅವರು, ಭರವಸೆ ನೀಡಿದರು.

ರಂಗಾಯಣವು ಕೇವಲ ಒಂದು ಸಂಸ್ಥೆಯಲ್ಲ, ಅದು ಕಲೆ ಮತ್ತು ಬದುಕನ್ನು ಜೋಡಿಸುವ ಕೊಂಡಿ. ಯುವಜನತೆಗೆ ರಂಗಭೂಮಿಯ ಬಗ್ಗೆ ಆಸಕ್ತಿ ಮೂಡಿಸಿ, ಈ ಪರಂಪರೆ ಮುಂದುವರೆಸುವ ನಿಟ್ಟಿನಲ್ಲಿ ಹೊಸ ಪ್ರಯೋಗಗಳಿಗೆ ಆದ್ಯತೆ ನೀಡುತ್ತಿದ್ದೇವೆ. ಮೈಸೂರು ಮಾದರಿ ಧಾರವಾಡ ರಂಗಾಯಣದ ಅಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯಗಳ ಒತ್ತು ನೀಡಿದ್ದು, ಸರ್ಕಾರದಿಂದ ಶಾಶ್ವತ ಅನುದಾನ ತರುವಲ್ಲಿ ಈ ಭಾಗದ ಶಾಸಕರು, ಸಚಿವರು, ಸಾಹಿತ್ಯ ವಲಯ, ರಂಗಕರ್ಮಿಗಳು ಜತೆ ಚರ್ಚಿಸಿ, ನಿಯೋಗ ಹೋಗಿ ಸರ್ಕಾರಕ್ಕೆ ಮನವಿ ಸಲ್ಲಿಸಲಿದೆ ಎಂದರು.


ಸುದ್ದಿಗೋಷ್ಠಿಯಲ್ಲಿ ರಂಗಾಯಣದ ಆಡಳಿತಾಧಿಕಾರಿ ಶಶಿಕಲಾ ಹುಡೇದರ ಇದ್ದರು.

ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಲಿ

ಕುಂದಗೋಳ: ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಹಾಗೂ ಶಕ್ತಿ ಯೋಜನೆ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾಗಿದ್ದು ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಿಸುವಂತೆ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಸತೀಶ ಕೊಬ್ಬಯ್ಯನವರ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಪಟ್ಟಣದ ತಾಲೂಕು ಪಂಚಾಯತ್ ಸಭಾಭವನದಲ್ಲಿ ಗುರುವಾರ ನಡೆದ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾ.ಪಂ ಪ್ರಭಾರಿ ಕಾರ್ಯನಿರ್ವಾಹಕ ಅಧಿಕಾರಿ ರೇಖಾ ಗಡ್ಡದವರು ಮಾತನಾಡಿ, ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಹಾಗೂ ಶಕ್ತಿ ಯೋಜನೆಗಳ ಪ್ರಗತಿ ಕುರಿತು ಇಲಾಖಾವಾರು ಮಾಹಿತಿ ಪಡೆದು ಬಾಕಿ ಉಳಿದ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡುವಂತೆ ನಿರ್ದೇಶನ ನೀಡಲಾಯಿತು. ಹೆಸ್ಕಾಂ ಪ್ರಭಾರಿ ಅಧಿಕಾರಿ ಪ್ರಕಾಶ ಬೋಳನ್ನವರ ಮಾತನಾಡಿ, ಗೃಹಜ್ಯೋತಿ ಯೋಜನೆಯ ತಮ್ಮ ಇಲಾಖಾ ವರದಿ ನಿಡುವಾಗ ಸದಸ್ಯ ಅಡಿವೆಪ್ಪ ಹೆಬಸೂರ ಮಾತನಾಡಿ ತಾಲೂಕಿನ ಸುಲ್ತಾನಪುರ ಗ್ರಾಮದ ಹೊಲದಲ್ಲಿ ಕಂಬಗಳು ಪೂರ್ಣ ವಾಲಿದ್ದರೂ, ರೈತರು ಮನವಿ ನೀಡಿದರೂ ತಾವು ಕಾರ್ಯ ಮಾಡಿಲ್ಲ, ನಿಮ್ಮಿಂದ ನಾವು ಜನರಿಗೆ ಉತ್ತರಿಸದಂತಾಗಿದೆ ಎಂದು ಆಕ್ರೋಶಗೊಂಡರು. ಆಗ ಅಧ್ಯಕ್ಷ ಕೊಬ್ಬಯ್ಯನವರು ಮಾತನಾಡಿ, ಅಧಿಕಾರಿಗಳು ಸಹನೆಯಿಂದ ಆದ್ಯತೆ ಮೇರೆಗೆ ಕೆಲಸಗಳನ್ನು ಮಾಡಲು ಪ್ರಯತ್ನಿಸಿ ಹಾರಿಕೆ ಉತ್ತರ ನೀಡಿದರೆ ನಮ್ಮ ಸದಸ್ಯರು ಸಾರ್ವಜನಿಕರಿಗೆ ಉತ್ತರ ಕೂಡುವುದು ಕಷ್ಟವಾಗುತ್ತದೆ ಕೂಡಲೆ ಅವುಗಳನ್ನು ಸರಿ ಪಡಿಸಿ ವರದಿ ನಿಡಲು ಸೂಚಿಸಿದರು. ಗೃಹಲಕ್ಷ್ಮೀಯೋಜನೆಯಡಿ3 ಯಜಮಾನಿಯರು ಮರಣ ಹೊಂದಿದ್ದಾರೆಂದು ಹಣ ಜಮೆಯಾಗದೆ ಉಳಿದಿದ್ದು ತಹಶೀಲ್ದಾರ್ ಜಿವಿತ ಪ್ರಮಾಣ ಪತ್ರ ಪಡೆದು ಸರಿ ಪಡೆಸಲಾಗುತ್ತದೆ, ಹೊಸದಾಗಿ 79 ಅರ್ಜಿ ಮಾನ್ಯ ಮಾಡಲಾಗಿದೆ ಹಾಗೂ ಐಟಿ, ಜಿಎಸಟಿ ಹೊಂದಿದ 94, ಮರಣ ಹೊಂದಿದ 54 ಯಜಮಾನಿಯರ ಕಂತು ಜಮೆಯಾಗಿಲ್ಲ, ಒಟ್ಟು 45,625 ಯಜಮಾನಿಯರಿಗೆ ಇದುವರೆಗೆ 29 ಕಂತುಗಳಲ್ಲಿ ಹಣ ಜಮೆಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಉಮಾ ಬಳ್ಳೊಳ್ಳಿ ತಿಳಿಸಿದರು. ತಾ.ಪಂ ಪ್ರಭಾರಿ ಕಾರ್ಯನಿರ್ವಾಹಕ ಅಧಿಕಾರಿ ರೇಖಾ ಗಡ್ಡದವರ, ಸಮಿತಿ ಸದಸ್ಯರಾದ ಅಡಿವೆಪ್ಪ ಹೆಬಸೂರ, ವೈ.ಜಿ ಪಾಟೀಲ, ಗೌಡಪ್ಪ ಪಾಣಿಗಟ್ಟಿ, ಗಿರೀಶ ಮುದಿಗೌಡ್ರ, ಯಲ್ಲಪ್ಪ ಸಿಂಗಣ್ಣವರ, ಶೇಕಪ್ಪ ಹಡಪದ, ಸಚಿನ ಪೂಜಾರ ಗೀತಾ ಕೋಟಿಗೌಡ್ರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಗಣಿತ ಶಾಸ್ತ್ರ ಜೀವನದ ಅವಿಭಾಜ್ಯ ಅಂಗ



ಹುಬ್ಬಳ್ಳಿ: ಗಣಿತ ಶಾಸ್ತ್ರವು ತರಗತಿಗಳ ವಿಷಯವಲ್ಲ, ಅದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ ಎಂದು ಕುವೆಂಪು ವಿಶ್ವವಿದ್ಯಾಲಯ ಪ್ರೊ. ಸಿ.ಎಸ್. ಬಾಗೇವಾಡಿ ಹೇಳಿದರು.

ಕೆ.ಎಲ್.ಇ. ಸಂಸ್ಥೆಯ ಪಿ.ಸಿ. ಜಾಬಿನ ವಿಜ್ಞಾನ ಮಹಾವಿದ್ಯಾಲಯದಲ್ಲಿ "ಗಣಿತದ ಮಹತ್ವ, ಅನ್ವಯಗಳು ಮತ್ತು ಅಭಿವೃದ್ಧಿ" ಕುರಿತಾದ ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಗಣಿತಶಾಸ್ತ್ರವು ಅಡಿಗೆ ಮನೆಯಿಂದ ಹಣಕಾಸಿನ ನಿರ್ವಹಣೆ, ಸಮಯದ ಯೋಜನೆ ಮತ್ತು ವಸ್ತುಗಳನ್ನು ಖರೀದಿಸುವಾಗ ಅನಿವಾರ್ಯವಾಗಿದೆ. ತಾಂತ್ರಿಕ ಶಿಕ್ಷಣ, ಕಂಪ್ಯೂಟರ ಶಿಕ್ಷಣ , ವೈದ್ಯಕೀಯ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ಗಣಿತಶಾಸ್ತ್ರವು ಮೂಲ ಅಡಿಪಾಯವಾಗಿದೆ ಎಂದರಲ್ಲದೆ, ಕೃತಕ ಬುದ್ಧಿಮತ್ತೆ, ಮಶಿನ್ ಲರ್ನಿಂಗ, ಗಣಿತ ಮಾದರಿಗಳ ಮೇಲೆ ಅವಲಂಬಿತವಾಗಿದೆ ಎಂಬುದನ್ನು ಉದಾಹರಣೆಗಳ ಮೂಲಕ ವಿವರಿಸಿದರು. ಸುತ್ತಮುತ್ತಲಿನ ಜಗತ್ತನ್ನು ಅರ್ಥೈಸಿಕೊಳ್ಳಲು ಗಣಿತಶಾಸ್ತ್ರವು ಒಂದು ಪ್ರಭಲ ಸಾಧನವಾಗಿದೆ ಎಂದರು.

ಸಮ್ಮೇಳನದ ಸ್ಮರಣ ಸಂಚಿಕೆಯನ್ನು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಸಂಧ್ಯಾ ಎಸ್. ಕುಲಕರ್ಣಿ ವಹಿಸಿದ್ದರು. ಪ್ರೊ. ಬಿ.ಜೆ. ಗಿರೀಶ, ಪ್ರೊ. ನಾಗರಾಜ ಎಚ್.ಜಿ. ಪ್ರೊ. ಎಸ್.ಕೆ. ನರಸಿಂಹ ಮೂರ್ತಿ, ಪ್ರೊ. ಬಿ.ಸಿ. ಪ್ರಸನ್ನಕುಮಾರ, ಪ್ರೊ. ಚಲವರಾಜ, ಪ್ರೊ. ಮಹೇಶ ಎಮ್. ಗಣಿತಶಾಸ್ತ್ರದ ವಿವಿಧ ವಿಷಯಗಳ ಕುರಿತು ಪ್ರಬಂಧಗಳನ್ನು ಮಂಡಿಸಿದರು. ವಿಭಾಗದ ಮುಖ್ಯಸ್ಥರು ಮತ್ತು ಸಮ್ಮೇಳದ ಸಂಯೋಜಕ ಡಾ. ರುದ್ರಸ್ವಾಮಿ ಎನ್.ಜಿ. ಸ್ವಾಗತಿಸಿ, ಪ್ರಾಸ್ತಾವಿಸಿದರು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಸಂಶೋಧಕರು ತಮ್ಮ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದರು. 150ಕ್ಕೂ ಹೆಚ್ಚಿನ ಪ್ರತಿನಿಧಿಗಳು ಸಮ್ಮೇಳನದ ಪ್ರಯೋಜನ ಪಡೆದುಕೊಂಡರು.

ಇಂದು ರಾಷ್ಟ್ರೀಯ ವಿಚಾರ ಸಂಕಿರಣ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಬಸವ ಪೀಠದಿಂದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಬಸವ ಜಯಂತಿ ಸಮಾರಂಭ ಮೇ 8 ಮತ್ತು 9ರಂದು ನಗರದ ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ ನಡೆಯಲಿದೆ.

ಮೇ 8ಕ್ಕೆ ಕನ್ನಡ ಸಾಹಿತ್ಯ ಪರಂಪರೆ ಮತ್ತು ಅನುಭಾವ ಎಂಬ ವಿಷಯದ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ಬಸವರಾಜ ಕಲ್ಗುಡಿ ಚಾಲನೆ ನೀಡಲಿದ್ದಾರೆ. ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ.ಜಯದೇವಿ ಜಂಗಮಶೆಟ್ಟಿ

ವಚನ ಸಂಗೀತ ನಡೆಸಿಕೊಡಲಿದ್ದು, ಕುಲಪತಿ ಡಾ. ಎ.ಎಂ.ಖಾನ್ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿ ಪ್ರೊ. ಎಂ.ಎಚ್.ಅಗಡಿ ಬಸವೇಶ್ವರ ಪೀಠದ ಸಂಯೋಜಕ ಪ್ರೊ. ನಿಜಲಿಂಗಪ್ಪ ಮಟ್ಟಿಹಾಳ ಭಾಗವಹಿಸಲಿದ್ದಾರೆ .

ಪರಿಕಲ್ಪನೆ ಮತ್ತು ಪರಂಪರೆ ವಿಷಯ ಕುರಿತು ಪ್ರೊ. ಬಸವರಾಜ ಕಲ್ಗುಡಿ, ವಚನ ಸಾಹಿತ್ಯದಲ್ಲಿ ಅನುಭಾವ ವಿಷಯ ಕುರಿತು ಅವಿನಾಶ ಕವಿ, ದಾಸ ಸಾಹಿತ್ಯದಲ್ಲಿ ಅನುಭಾವ ಕುರಿತು ಡಾ.ಗೀತಾ ವಸಂತ ಹಾಗೂ ಪ್ರೊ. ವೆಂಕಟಗಿರಿ ದಳವಾಯಿ ಅವರು ತಳಸಮುದಾಯದ ಸಾಹಿತ್ಯದಲ್ಲಿ ಅನುಭಾವ ಎಂಬ ವಿಷಯದ ಕುರಿತು ಮಾತನಾಡಲಿದ್ದಾರೆ. ಮೇ 9ರಂದು ಬಸವೇಶ್ವರ ಜಯಂತಿ ಮಹೋತ್ಸವದ ಕಾರ್ಯಕ್ರಮದಲ್ಲಿ ಗದಗ ತೋಂಟದಾರ್ಯ ಮಠದ ಡಾ.ಸಿದ್ಧರಾಮ ಶ್ರೀ ಸಾನ್ನಿಧ್ಯ ವಹಿಸಲಿದ್ದು, ಮುರಗೋಡದ ದುರದುಂಡೀಶ್ವರ ಮಠದ ನೀಲಕಂಠ ಶ್ರೀ, ಮುರುಘಾಮಠದ ಡಾ. ಮಲ್ಲಿಕಾರ್ಜುನ ಶ್ರೀ ಭಾಗವಹಿಸಲಿದ್ದಾರೆ.

ಇದೇ ವೇಳೆ ಡಾ.ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಡಾ. ವೀರಣ್ಣ ರಾಜೂರ ಅವರಿಗೆ ಶೈಕ್ಷಣಿಕ-ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕೊಡುಗೆಯನ್ನು ಪರಿಗಣಿಸಿ 2026ರ ಬಸವಶ್ರೀ ಪ್ರಶಸ್ತಿ ನೀಡಲಾಗುವುದು. ಮೇ 9ರಂದು ಸಂಜೆ 4ರ ಸಮಾರೋಪದಲ್ಲಿ ಡಾ. ಸಂಗಮೇಶ ಸವದತ್ತಿಮಠ, ಪ್ರೊ.ಎ.ಎಚ್.ಅಗಡಿ, ಕವಿವಿ ಮೌಲ್ಯಮಾಪನ ಕುಲಸಚಿವ ಡಾ.ಎ.ಎಂ.ಕಡಕೋಳ, ಹಣಕಾಸು ಅಧಿಕಾರಿ ಪ್ರದೀಪಕುಮಾರ, ಶಶಿಧರ ತೋಡಕರ ಭಾಗವಹಿಸಲಿದ್ದಾರೆ. ಸಂಜೆ 5ಕ್ಕೆ ರತಿಕಾ ನೃತ್ಯ ನಿಕೇತನದ ವಿದ್ಯಾರ್ಥಿಗಳು ವಚನ ನೃತ್ಯ ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ

ಧಾರವಾಡ: ಚುನಾವಣಾ ಆಯೋಗದ ನಿರ್ದೇಶನದಂತೆ 2025ರ ಮತದರಾರ ಪಟ್ಟಿಯಲ್ಲಿ ನೋಂದಣಿಯಾದ ಮತದಾರರನ್ನು 2002ರ ಮತದಾರರ ಪಟ್ಟಿಗೆ ತಾಳೆ ಮಾಡುವ ಕಾರ್ಯ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದ್ದಾರೆ.



ಪ್ರಕಟಣೆ ನೀಡಿದ ಅವರು, 2025ನೇ ಸಾಲಿನ ಮತದಾರರ ಪಟ್ಟಿಯಲ್ಲಿ 40 ವರ್ಷ, ಅದಕ್ಕೂ ಮೇಲ್ಪಟ್ಟ ಮತದಾರರನ್ನು ಮತ್ತು ಅವರ ಕುಟುಂಬದ ಸದಸ್ಯರನ್ನು 2002ರ ಮತದಾರರ ಪಟ್ಟಿಗೆ ತಾಳೆ ಮಾಡಿ ಅವರನ್ನು ಹೊಸ ಮತದಾರರ ಪಟ್ಟಿಗೆ ಸೇರ್ಪಡಿಸುವುದಾಗಿ ಹೇಳಿದ್ದಾರೆ. ಸರ್ಕಾರದ ಯಾವುದೇ ಗುರುತಿನ ಚೀಟಿ, ಪಿಂಚಣಿ ಪಾವತಿ ಆದೇಶ, ಶಾಶ್ವತ ನಿವಾಸ ಪತ್ರ, ಅಂಚೆ ಕಚೇರಿ, ಜನನ ಪ್ರಮಾಣ ಪತ್ರ, ಅರಣ್ಯ ಹಕ್ಕು ಪತ್ರ, ಒಬಿಸಿ, ಎಸ್ಸಿ-ಎಸ್ಟಿ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರದಿಂದ ನೀಡುವ ಪ್ರಮಾಣ ಪತ್ರ ಸ್ವೀಕರಿಸುವುದಾಗಿ ಹೇಳಿದ್ದಾರೆ.

ಮ್ಯಾಪಿಂಗ್ ಕಾರ್ಯ ಮಾಡಲು ಮೇ 8ರಿಂದ 10ರವರೆಗೆ ಮೂರು ದಿನಗಳು ವಿಶೇಷ ಅಭಿಯಾನ ಕೈಗೊಂಡಿದ್ದು, ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿ ಮತಗಟ್ಟೆಗಳಲ್ಲಿ ಮತಗಟ್ಟೆ ಅಧಿಕಾರಿಗಳು ಮ್ಯಾಪಿಂಗ್ ಕಾರ್ಯವನ್ನು ಕೈಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

ಒನ್ ಮಿಲಿಯನ್ ಸೂಲಗಿತ್ತಿಯರ ದಿನ

ಹುಬ್ಬಳ್ಳಿ: ನಗರದ ಕೆಎಲ್ಇ ಸೊಸೈಟಿಯ ನರ್ಸಿಂಗ್ ಸೈನ್ಸಸ್ ಸಂಸ್ಥೆಯಲ್ಲಿ ಅಂತರಾಷ್ಟ್ರೀಯ ಸೂಲಗಿತ್ತಿಯರ ದಿನದ ಅಂಗವಾಗಿ ಒನ್ ಮಿಲಿಯನ್ ಸೂಲಗಿತ್ತಿಯರ ದಿನ ಆಚರಿಸಲಾಯಿತು. ಮುಖ್ಯ ಅತಿಥಿಯಾಗಿ ಸೆಕ್ಯೂರ್ ಆಸ್ಪತ್ರೆಯ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆ ಡಾ. ಸೀಮಾ ಶ್ಯಾಮ್ ಭೈರಿ, ಹುಬ್ಬಳ್ಳಿಯ ಐಎಂಎ ಮಹಿಳಾ ವಿಭಾಗದ ಹಿರಿಯ ಸಲಹೆಗಾರ ಅರಿವಳಿಕೆ ತಜ್ಞೆ ಮತ್ತು ಅಧ್ಯಕ್ಷೆ ಡಾ. ಶೋಭಾ ಮುದರಡ್ಡಿ, ಯುನೈಟೆಡ್ ಕಿಂಗ್‌ಡಮ್‌ನ ಲುಟನ್ ಮತ್ತು ಡನ್‌ಸ್ಟೇಬಲ್

ವಿಶ್ವವಿದ್ಯಾಲಯ ಆಸ್ಪತ್ರೆಯ ಅಡ್ವಾನ್ಸ್‌ಡ್ ಕ್ರಿಟಿಕಲ್ ಕೇರ್ ಪ್ರಾಕ್ಟೀಷನರ್ ದೀಪಕ್ ಬಾಗಿ ಮತ್ತು ಹುಬ್ಬಳ್ಳಿಯ ಕೆ.ಎಲ್.ಇ. ಸೊಸೈಟಿಯ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್‌ನ ಪ್ರಾಂಶುಪಾಲ ಡಾ. ಸಂಜಯ್. ಎಂ. ಪೀರಾಪುರ್ ಇದ್ದರು.



ಮನೆಮನೆಯ ಮಕ್ಕಳಿಗೆ ಭಗವದ್ಗೀತೆ ಸಿನೆಮಾ ನಿರ್ಮಾಣ



ಹುಬ್ಬಳ್ಳಿ: ಶ್ರೀಮದ್ ಭದವದ್ಗೀತಾ ಸಿನಿ ಕ್ರಿಯೇಶನ್ಸ್ ಹುಬ್ಬಳ್ಳಿ ವತಿಯಿಂದ ಸರ್ವ ಶಾಸ್ತ್ರಮಯಿ ಶಿರೋಮಣಿ ಭಗವದ್ಗೀತಾ ಜ್ಞಾನದ ನೈತಿಕ ಮೌಲ್ಯಗಳು, ಜೀವನ ಮೌಲ್ಯಗಳು, ಆತ್ಮಜ್ಞಾನ, ಪರಮಾತ್ಮ ಜ್ಞಾನ, ಆತ್ಮಯೋಗ, ಪರಮಾತ್ಮಯೋಗ, ಸ್ಥಿತಪ್ರಜ್ಞ ಲಕ್ಷಣ, ಆಧ್ಯಾತ್ಮಿಕ ಚಿಂತನೆ, ಆಧ್ಯಾತ್ಮವನ್ನು ಜನತೆಗೆ ಸಹಜವಾಗಿ ದೃಶ್ಯ ಮಾಧ್ಯಮದ ಮೂಲಕ ಅರಿವು ಮೂಡಿಸುವ ನಿಟ್ಟಿನಲ್ಲಿ ಮನೆಮನೆಯ ಮಕ್ಕಳಿಗೆ ಭಗವದ್ಗೀತೆ ಎಂಬ ಸಿನಿಮಾವನ್ನು ನಿರ್ಮಾಣ ಮಾಡಲಾಗುತ್ತಿದ್ದು, ಇದರ ಶುಭಾರಂಭವು ಇಲ್ಲಿನ ಗಾಮನಗಟ್ಟಿ ರಸ್ತೆಯ ಭೈರಿದೇವರಕೊಪ್ಪ ಭಗವದ್ಗೀತಾ ಜ್ಞಾನಲೋಕದ ಪ್ರಾಂಗಣದಲ್ಲಿ ಗುರುವಾರ ಜರುಗಿತು.

ಕಾರ್ಯಕ್ರಮವನ್ನು ವೇದ ಪೀಠದ ಡಾ. ಕಂಠಿಪಲ್ಲಿ ಸಮೀರಾಚಾರ್ಯರು ಕ್ಲ್ಯಾಪ್ ಮಾಡುವುದರ ಮೂಲಕ ಶುಭಾರಂಭಿಸಿದರು. ಸಿನಿಮಾದ ನಿರ್ದೇಶಕ ಚಂದ್ರಹಾಸ ಆಳ್ವಾ, ಕ್ಯಾಮರಾಮನ್ ಮಂಜುನಾಥ, ಚಿತ್ರಕತೆ, ಸಂಭಾಷಣೆ, ಹಾಡುಗಳನ್ನು ರಚಿಸಿರುವ ಡಾ. ಬಸವರಾಜ ರಾಜಋಷಿಗಳು, ಬಾಲನಟಿ ದಿಯಾ ಹೆಗಡೆ ಹಾಗೂ ಈಶ್ವರೀಯ ವಿಶ್ವ ವಿದ್ಯಾಲಯದ ಸಂಚಾಲಕರಾಧ ಬ್ರಹ್ಮಕುಮಾರಿ ನಿರ್ಮಲಾಜಿ ಉಪಸ್ಥಿತರಿದ್ದರು.

ಭಕ್ತರಿಗೆ ಸನ್ಮಾರ್ಗದ ಸಂದೇಶ ನೀಡಿದ ಶ್ರೀಗಳು

ನವಲಗುಂದ: ನಾಡಿನೆಲ್ಲೆಡೆ ಆಧ್ಯಾತ್ಮ ಪ್ರವಚನ ಮೂಲಕ ಭಕ್ತ ಸಮೂಹದಲ್ಲಿ ಸನ್ಮಾರ್ಗದ ಸಂದೇಶ ನೀಡುವುದರೊಂದಿಗೆ ಅಪಾರ ಭಕ್ತರನ್ನು ಹೊಂದಿರುವ ಮಣಕವಾಡದ ಅಭಿನವ ಮೃತ್ಯುಂಜಯ ಶ್ರೀಗಳು ಪ್ರವಚಣ ಮಾಣಿಕ್ಯರೆಂಬ ಖ್ಯಾತಿ ಗಳಿಸಿದ್ದಾರೆಂದು ಪಂಚಗ್ರಹ ಹಿರೇಮಠದ ಸಿದ್ದೇಶ್ವರ ಶಿವಾಚಾರ್ಯ ಶ್ರೀಗಳು ಹೇಳಿದರು.

ಅವರು ಪಂಚಗ್ರಹ ಹಿರೇಮಠದ ಗುರುಪಟ್ಟಾಧಿಕಾರ ಮಹೋತ್ಸವ ಅಂಗವಾಗಿ ಆಯೋಜಿಸಿದ್ದ 11 ದಿನಗಳ ಪ್ರವಚನ ಕಾರ್ಯಕ್ರಮದಲ್ಲಿ ಮಣಕವಾಡ ಮೃತ್ಯುಂಜಯ ಶ್ರೀಗಳ ಜನ್ಮದಿನಾಚಣೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು. ಗವಿಮಠದ ಬಸವಲಿಂಗ ಶ್ರೀಗಳು ಮಾತನಾಡಿ, ಪ್ರವಚನ ನೀಡುವ ಮೂಲಕ ಪಟ್ಟಣದ ಭಕ್ತರಲ್ಲಿ ಆಧ್ಯಾತ್ಮಿಕ ಚಿಂತನೆಯಲ್ಲಿ ತೊಡಗಿಸಿ ಆಧ್ಯಾತ್ಮ ಜ್ಞಾನ ಬಿತ್ತರುಸುತ್ತಿರುವುದ ಭಕ್ತರಲ್ಲಿ ಹರ್ಷವನ್ನುಂಟು ಮಾಡಿದೆ ಎಂದರು. ಶಾಸಕ ಎನ್.ಎಚ್.ಕೋನರಡ್ಡಿ ಮಾತನಾಡಿ, ಕಳೆದ 6 ದಿನಗಳಿಂದ ಮಣಕವಾಡ ಶ್ರೀಗಳು ಪಟ್ಟನದಲ್ಲಿ ಪ್ರವಚನ ಆರಂಭಿಸಿದಾಗಿನಿಂದ ಸಾವಿರಾರು ಜನ ಪ್ರವಚನ ಆಲಿಸಲು ಬರುತ್ತಿರುವುದು ಜನತೆಲ್ಲಿರು ಆಧ್ಯಾತ್ಮತ ಹಸಿವಿಗೆ ಸಾಕ್ಷಿಯಾಗಿದೆ ಎಂದರು. ಹಿರೇಮಠದ ನಿಯೋಜಿತ ಪೀಠಾಧಿಕಾರಿ ವೀರಬಸವ ದೇವರು, ಹಿರಿಯರಾದ ಅಣ್ಣಪ್ಪ ಬಾಗಿ, ಸಿದ್ದಲಿಂಗಯ್ಯ ಹಿರೇಮಠ, ಎಂ,ಡಿ,ಕುಲಕರ್ಣಿ, ಶ್ರೀಶೈಲ ಮೂಲಿಮನಿ, ಗಂಗಪ್ಪ ಹಳ್ಳ, ಪಾಂಡಪ್ಪ ಕೋನರಡ್ಡಿ, ಮಲ್ಲಿಕಾರ್ಜುನ ಜಲಾದಿ, ಯಲ್ಲಪ್ಪ ಭೋವಿ, ಅಪ್ಪಣ್ಣ ಹಳ್ಳದ, ಬಸವರಾಜ ಈಟಿ, ಸಿದ್ದಲಿಂಗಪ್ಪ ಹಳ್ಳದ, ಎ.ಬಿ.ಕೊಪ್ಪದ, ಆರ್.ಎಸ್. ನೇಗಲಿ ಇತರರಿದ್ದರು.



ರಾಜ್ಯ ಶಿಕ್ಷಣ ನೀತಿಗಾಗಿ ಸಂಪುಟ ಉಪ ಸಮಿತಿ

ಪುಟ 1ರಿಂದ ಅಲ್ಲದೇ, ರಾಜ್ಯ ಶಿಕ್ಷಣ ನೀತಿ ಆಯೋಗದ ಅಂತಿಮ ವರದಿ ಬಗ್ಗೆ ಈ ಮೊದಲೇ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾವವಾಗಿತ್ತು. ಆದರೆ, ಕೆಲ ತಿದ್ದುಪಡಿಗಳೊಂದಿಗೆ ವರದಿ ಮಂಡಿಸುವಂತೆ ಎಂದು ಬಾರಿ ವಿಷಯವನ್ನು ಸಂಪುಟ ಸಭೆಯಲ್ಲಿ ಮುಂದೂಡಲಾಗಿತ್ತು. ಇದೀಗ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ. ಉಪ ಸಮಿತಿ ರಚನೆಗೆ ತೀರ್ಮಾನಿಸಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

ನರೇಗಾಗಾಗಿ ಕೋರ್ಟ್ ಮೊರೆ: ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರವು ಇನ್ನೂ ಅಧಿಸೂಚನೆ ಹೊರಡಿಸಿರುವುದಿಲ್ಲ. ಪರ್ಯಾಯವಾದ ಯಾವುದೇ ವ್ಯವಸ್ಥೆಯನ್ನೂ ಮಾಡಿಲ್ಲ. ಹೀಗಾಗಿ, ಕೇಂದ್ರ ಸರ್ಕಾರದ ನಿಲುವು ರಾಜ್ಯ ಸರ್ಕಾರಗಳ ಸಾಂವಿಧಾನಿಕ ಹಕ್ಕುಗಳನ್ನು ದಮನಿಸಿದಂತಾಗಿರುವುದರಿಂದ ಈ ವಿಚಾರವನ್ನು ಸಹ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಚಿವ ಸಂಪುಟವು ತೀರ್ಮಾನಿಸಿತು ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

ರಾಜ್ಯ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ-2005 ಮುಂದುವರಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅನಿವಾರ್ಯವಾಗಿದೆ. ಈ ಕುರಿತು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ರಾಜ್ಯ ಸರ್ಕಾರಕ್ಕೆ ಅವಕಾಶ ಕಲ್ಪಿಸುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗಲೂ ಸಚಿವ ಸಂಪುಟವು ನಿರ್ಧರಿಸಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ತಮಿಳುನಾಡಲ್ಲಿ ದಳಪತಿ ಸರ್ಕಾರ್ ಕಸರತ್ತು

ಪುಟ 1ರಿಂದ ಕಾಂಗ್ರೆಸ್ ತನ್ನ 5 ಶಾಸಕರ ಬೆಂಬಲವನ್ನು ಈಗಾಗಲೇ ಘೋಷಿಸಿದ್ದು, ಉಳಿದ ಬೆಂಬಲಕ್ಕಾಗಿ ಟಿವಿಕೆ ಎಡಪಕ್ಷಗಳು, ವಿಸಿಕೆ ಹಾಗೂ ಐಯುಎಂಎಲ್ ಕಡೆಗೆ ಮತ್ತೊಮ್ಮೆ ಕೈಚಾಚಿದೆ. ಈ ನಡುವೆ ವಿಸಿಕೆ ನಾಯಕ ತೋಲ್ ತಿರುಮಾವಲವನ್, ಅತಿದೊಡ್ಡ ಪಕ್ಷಕ್ಕೆ ಮೊದಲು ಸರ್ಕಾರ ರಚನೆ ಅವಕಾಶ ನೀಡುವುದು ಸಾಂವಿಧಾನಿಕ ಸಂಪ್ರದಾಯ. ರಾಜ್ಯಪಾಲರು ಮುಂಚಿತವಾಗಿ 118 ಶಾಸಕರ ಪಟ್ಟಿಯನ್ನು ಕೇಳಲು ಸಾಧ್ಯವಿಲ್ಲ ಎಂದು ರಾಜ್ಯಪಾಲರ ಕ್ರಮವನ್ನು ಟೀಕಿಸಿದರು. ಕಾಂಗ್ರೆಸ್ ಮತ್ತು ಎಡಪಕ್ಷಗಳ ಜತೆಗೂಡಿ ವಿಸಿಕೆ ರಾಜ್ಯಪಾಲರ ನಿರ್ಧಾರ ವಿರೋಧಿಸಿ ಪ್ರತಿಭಟನೆ ನಡೆಸಿದೆ.

ಬೆಂಗಾವಲು ತಿರಸ್ಕರಿಸಿದ ವಿಜಯ್: ಬುಧವಾರ ರಾತ್ರಿ ರಾಜ್ಯಪಾಲರ ಭೇಟಿಯ ನಂತರ ವಿಜಯ್ ಯಾವುದೇ ಕಾನ್ವಾಯ್ ಇಲ್ಲದೆಯೇ ತಮ್ಮ ನಿವಾಸಕ್ಕೆ ತೆರಳಿದ್ದು, ಸರ್ಕಾರ ರಚಿಸುವವರೆಗೂ ಬೆಂಗಾವಲು ಅಗತ್ಯವಿಲ್ಲದಂದು ವಿಜಯ್ ಬೆಂಗಾವಲು ತಿರಸ್ಕರಿಸಿದ್ದಾರೆ ಎನ್ನಲಾಗಿದೆ.

ಟಿವಿಕೆ ಸರ್ಕಾರ ರಚನೆಗೆ ಅಡ್ಡಿಯಾಗಲ್ಲ: ಟಿವಿಕೆ ವಿಜಯ್ ಸರ್ಕಾರ ರಚನೆಯಲ್ಲಿ ಮುಂದಿನ 6 ತಿಂಗಳ ಕಾಲ ನಾವು ಯಾವುದೇ ರೀತಿ ತೊಂದರೆ ಕೊಡುವುದಿಲ್ಲ, ನಾವು ಜನಾದೇಶ ಸ್ವೀಕರಿಸಿದ್ದು, ತಮಿಳುನಾಡಿನ ಜನತೆಯ ತೀರ್ಪನ್ನು ಗೌರವಿಸುತ್ತೇವೆ ಎಂದು ಡಿಎಂಕೆ ನಾಯಕ ಎಂ.ಕೆ.ಸ್ಟಾಲಿನ್ ಸ್ಪಷ್ಟಪಡಿಸಿದ್ದು, ಡಿಎಂಕೆ ಮತ್ತು ಎಐಎಡಿಎಂಕೆ ಮೈತ್ರಿ ಸರ್ಕಾರ ರಚನೆಯ ಊಹಾಪೋಹವನ್ನು ನಿರಾಕರಿಸಿದ್ದಾರೆ.

ಕಾಂಗ್ರೆಸ್ ಹಳೆಯ ಸ್ವಭಾವ ಬದಲಾಗಿಲ್ಲ: ಡಿಎಂಕೆ

ಪುಟ 1ರಿಂದ ನಮ್ಮ ಮೈತ್ರಿಯಲ್ಲಿ ಕಾಂಗ್ರೆಸ್‌ಗೆ ಒಂದು ರಾಜ್ಯಸಭಾ ಸ್ಥಾನ ಹಾಗೂ 28 ವಿಧಾನಸಭಾ ಕ್ಷೇತ್ರಗಳನ್ನು ನೀಡಲಾಗಿತ್ತು. ಆದರೆ ಕೇವಲ ಮೂರು ದಿನಗಳಲ್ಲೇ ಅದು ಪರ್ಯಾಯ ರಾಜಕೀಯ ಶಕ್ತಿಯತ್ತ ವಾಲಿ, ಮೈತ್ರಿ ಪಕ್ಷಗಳ ಶ್ರಮದಿಂದ ದೊರೆತ ಗೆಲುವನ್ನೇ ಅಪಾಯಕ್ಕೆ ಒಳಪಡಿಸಿತು ಎಂದು ನಿರ್ಣಯದಲ್ಲಿ ಉಲ್ಲೇಖಿಸಿದೆ. ಇದೇ ವೇಳೆ, ಸ್ಥಾನ ಹಂಚಿಕೆ ಮಾತುಕತೆಗಳ ಸಂದರ್ಭದಲ್ಲಿಯೇ ಮೈತ್ರಿ ವಿರೋಧಿ ಹೇಳಿಕೆಗಳನ್ನು ನೀಡಿದವರನ್ನು ಕಾಂಗ್ರೆಸ್ ನಿಯಂತ್ರಿಸಲಿಲ್ಲ ಎಂದು ಡಿಎಂಕೆ ಆರೋಪಿಸಿದೆ. ಪುದುಚೇರಿ ಚುನಾವಣೆಯಲ್ಲಿ ಡಿಎಂಕೆಗೆ ಮೀಸಲಾಗಿದ್ದ ಕ್ಷೇತ್ರಗಳಲ್ಲಿಯೇ ಕಾಂಗ್ರೆಸ್ ಅಭ್ಯರ್ಥಿಗಳು ಸ್ಪರ್ಧಿಸಿದ್ದನ್ನು ಉಲ್ಲೇಖಿಸಿ, 'ಚುನಾವಣೆಯ ಸಮಯದಲ್ಲಿಯೂ ಕಾಂಗ್ರೆಸ್ ಪ್ರಾಮಾಣಿಕವಾಗಿ ನಡೆದುಕೊಳ್ಳಲಿಲ್ಲ' ಎಂದು ಕಿಡಿಕಾರಿದೆ. ಮಾಜಿ ಸಿಎಂ ಎಂ.ಕೆ.ಸ್ಟಾಲಿನ್ ನೇತೃತ್ವದಲ್ಲಿ ಈ ಸಭೆ ನಡೆದಿದ್ದು, ಕಾಂಗ್ರೆಸ್ ಬೆನ್ನಿಗೆ ಚೂರಿ ಹಾಕಿದೆ ಎಂಬ ಸಾಲನ್ನೂ ನಿರ್ಣಯದಲ್ಲಿ ಸೇರಿಸಲಾಗಿದೆ. 'ಗೆಲುವಿನ ಬಳಿಕ ವೈಯಕ್ತಿಕವಾಗಿ ಬಂದು ಧನ್ಯವಾದ ಹೇಳುವ ಸೌಜನ್ಯವನ್ನೂ ಕಾಂಗ್ರೆಸ್ ತೋರಲಿಲ್ಲ. ಆದರೂ ಸ್ಟಾಲಿನ್ ಸಹನಶೀಲತೆ ಮತ್ತು ಹೊಣೆಗಾರಿಕೆಯಿಂದ ನಡೆದುಕೊಂಡರು' ಎಂದು ಡಿಎಂಕೆ ಹೇಳಿದೆ. ಡಿಎಂಕೆಯ ಈ ನಿರ್ಣಯ ತಮಿಳುನಾಡು ರಾಜಕೀಯದಲ್ಲಿ ಮೈತ್ರಿ ಸಂಬಂಧಗಳ ಕುರಿತು ಹೊಸ ಚರ್ಚೆಗೆ ಕಾರಣವಾಗಿದೆ.

ಪುದುಚೇರಿ ರೆಸಾರ್ಟ್‌ಗೆ 28 ಎಐಎಡಿಎಂಕೆ ಶಾಸಕರು

ಪುದುಚೇರಿ: ತಮಿಳುನಾಡಿನಲ್ಲಿ ಸರ್ಕಾರ ರಚನೆ ಕುರಿತ ರಾಜಕೀಯ ಚಟುವಟಿಕೆಗಳು ತೀವ್ರಗೊಳ್ಳುತ್ತಿದ್ದಂತೆ, ಎಐಎಡಿಎಂಕೆಯ 28 ಶಾಸಕರನ್ನು ಪುದುಚೇರಿಯ ಪೂರಣಕುಪ್ಪಂನ ಖಾಸಗಿ ರೆಸಾರ್ಟ್‌ಗೆ ಸ್ಥಳಾಂತರಿಸಲಾಗಿದೆ ಎಂದು ವರದಿಯಾಗಿದೆ. ಟಿವಿಕೆಗೆ ಬೆಂಬಲ ನೀಡುವ ವಿಚಾರದಲ್ಲಿ ಎಐಎಡಿಎಂಕೆ ಒಳಗೆ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿದ್ದು, ಕೆಲ ಶಾಸಕರು ವಿಜಯ್ ಪರ ಒಲವು ತೋರಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆ, ಹಿರಿಯ ನಾಯಕ ಸಿ.ವಿ.ಷಣ್ಮುಗಂ ಅವರ ಆಪ್ತ ಶಾಸಕರನ್ನು ಮುನ್ನೆಚ್ಚರಿಕಾ ಕ್ರಮವಾಗಿ ರೆಸಾರ್ಟ್‌ಗೆ ಕರೆದೊಯ್ಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪ.ಬಂಗಾಳ ವಿಧಾನಸಭೆ ವಿಸರ್ಜಿಸಿದ ರಾಜ್ಯಪಾಲ

ಪುಟ 1ರಿಂದ ವಿಧಾನಸಭೆಯ ಅವಧಿ ಪೂರ್ಣಗೊಂಡಿದ್ದರೂ ಸರ್ಕಾರ ರಾಜೀನಾಮೆ ನೀಡದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಾಂವಿಧಾನಿಕ ಅನಿಶ್ಚಿತತೆ ಉಂಟಾಗಿದೆ ಎಂದು ರಾಜ್ಯಪಾಲರು ತಮ್ಮ ಅಧಿಸೂಚನೆಯಲ್ಲಿ ಉಲ್ಲೇಖಿಸಿದ್ದಾರೆ. ಹೊಸ ಸರ್ಕಾರ ರಚನೆಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ವಿಧಾನಸಭೆ ವಿಸರ್ಜನೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಲಾಗಿದೆ. ಇದಕ್ಕೂ ಮುನ್ನ ಮಮತಾ ಬ್ಯಾನರ್ಜಿ ಅವರು ಚುನಾವಣಾ ಫಲಿತಾಂಶವನ್ನು ತಿರಸ್ಕರಿಸಿ, ಇದು ಜನಾದೇಶವಲ್ಲ, ಸಂಚು. ಚುನಾವಣಾ ಆಯೋಗದ ಬೆಂಬಲದೊಂದಿಗೆ ಬಿಜೆಪಿ ಅಕ್ರಮ ನಡೆಸಿದೆ. ಅಧಿಕೃತ ಫಲಿತಾಂಶಗಳಲ್ಲಿ ನಾವು ಸೋತಿರಬಹುದು, ಆದರೆ ನೈತಿಕವಾಗಿ ಗೆದ್ದಿದ್ದೇವೆ. ನಾನು ರಾಜೀನಾಮೆ ನೀಡುವುದಿಲ್ಲ ಎಂದು ವಾದ ಮಂಡಿಸಿದ್ದರು.

2 ಲಕ್ಷ ಆಸನ ವ್ಯವಸ್ಥೆ: ತಮ್ಮೇಶ್

ಬೆಂಗಳೂರು: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವಕ್ಕೆ ಚಿತ್ರದುರ್ಗದಲ್ಲಿ ಭರದಿಂದ ಸಿದ್ಧತೆ ನಡೆಯುತ್ತಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ ತಿಳಿಸಿದ್ದಾರೆ. ಮಾಧ್ಯಮಗಳ ಜತೆ ಗುರುವಾರ ಮಾತನಾಡಿ, ಈಗಾಗಲೇ ನಿರೀಕ್ಷೆಯಂತೆ 10 ಲಕ್ಷ ಜನರು ಬರಲಿದ್ದಾರೆ. ಆದರೆ ಎಲ್ಲ ತಯಾರಿ ನಾವು ಮಾಡಿದ್ದೇವೆ. ಸುಮಾರು 20 ಲಕ್ಷ ಚದರಡಿಯಷ್ಟು ಸಭಾಂಗಣ ಮತ್ತಿತರ ವ್ಯವಸ್ಥೆ ಮಾಡಲಾಗಿದೆ. ಎರಡು ಲಕ್ಷಕ್ಕೂ ಹೆಚ್ಚು ಅಧಿಕ ಆಸನ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕನೇಜಿ

ಭ್ರಷ್ಟಾಚಾರ ಎನ್ನುವುದು ನೀಗದ ದಾಹವಿದ್ದಂತೆ. ಒಮ್ಮೆ ಭ್ರಷ್ಟಾಚಾರಕ್ಕೆ ಇಳಿದ ವ್ಯಕ್ತಿ ಎಷ್ಟೇ ಹಣ ಮಾಡಿದರೂ ಮತ್ತಷ್ಟು ಮಾಡಬೇಕು ಎನ್ನುವ ದಾಹಕ್ಕೆ ಇಳಿಯುತ್ತಾನೆ - ಸಂತೋಷ್ ಹೆಗ್ಡೆ

- ಬದುಕಲು ಹಣ ಬೇಕು ನಿಜ, ಆದರೆ ಹಣ ಮಾಡುವುದಕ್ಕಾಗಿಯೇ ಬದುಕು ಅಂತ ಹೇಳುವಂತಿದೆ ಇಂದಿನ ಆಧುನಿಕತೆ ಎಂದು ಹೇಳಿಕೊಳ್ಳುವ ಬದುಕು. ದಿನಾ ದುಡಿದು ದುಡಿದು ಒಂದು ದಿನ ಮಡಿದು ಮುಗಿಯುತ್ತೆ ಈ ಬದುಕು!

ದಿನ ಭವಿಷ್ಯ

ಮೇಷ ಸಮಾಧಾನಕರ ದಿನ. ದೊಡ್ಡ ಪ್ರಗತಿ ಇಲ್ಲದಿದ್ದರೂ ಹಿನ್ನಡೆ ಕೂಡಾ ಇಲ್ಲ. ಕೌಟುಂಬಿಕ ಚಿಂತೆ ಪರಿಹಾರ. ಆರ್ಥಿಕ ಸ್ಥಿತಿ ತೃಪ್ತಿಕರ.

ವೃಷಭ ಇತರರ ಜತೆ ವ್ಯವಹಾರದಲ್ಲಿ ಎಚ್ಚರ ವಹಿಸಿ. ಮೋಸ ಹೋಗುವ ಸಾಧ್ಯತೆ. ಕೌಟುಂಬಿಕ ವಿಷಯದಲ್ಲಿ ಭಾವನಾತ್ಮಕ ಏರುಪೇರು.

ಮಿಥುನ ವಿರಾಮ ಸಿಗದಷ್ಟು ಕಾರ್ಯದ ಒತ್ತಡ. ಪ್ರೇಮದ ವಿಚಾರದಲ್ಲಿ ಪ್ರತಿಕೂಲ ಬೆಳವಣಿಗೆ. ನಾಜೂಕಿನಿಂದ ನಿಭಾಯಿಸಿ. ಬಂಧು ಜತೆ ವಿರಸ.

ಕಟಕ ಯಶ ಸಾಧಿಸಲು ತಾಳ್ಮೆ ಅವಶ್ಯ. ದುಡುಕಿನ ನಡೆ ಬೇಡ. ಆರ್ಥಿಕ ಹಿನ್ನಡೆ ಬಾಧಿಸಬಹುದು. ಮನೆಯವರ ಸಂಗದಲ್ಲಿ ಸಮಾಧಾನ.

ಸಿಂಹ ಕೆಲದಿನಗಳ ಕಷ್ಟದ ಬಳಿಕ ಖುಷಿ ತರುವ ಹೊಸ ಬೆಳವಣಿಗೆ. ಕೈಗೊಂಡ ನಿರ್ಧಾರದಲ್ಲಿ ಯಶಸ್ಸು. ಆರ್ಥಿಕ ಸ್ಥಿತಿ ಸಮಾಧಾನಕರ.

ಕನ್ಯಾ ಸಮಸ್ಯೆಯೊಂದು ಮನಃಶಾಂತಿ ಕೆಡಿಸಲಿದೆ. ಅದರ ಪರಿಹಾರವೂ ಕಷ್ಟವೆನಿಸುವುದು. ಆತುರ ಬೇಡ. ಕಾದುನೋಡುವ ತಂತ್ರ ಅನುಸರಿಸಿ.

ತುಲಾ ಅತೃಪ್ತಿ ತರುವ ಕೆಲವು ಬೆಳವಣಿಗೆ ನಡೆದೀತು. ಬಂದುದನ್ನು ಸಮಾಧಾನದಿಂದ ಸ್ವೀಕರಿಸಿ. ದುಡುಕಿನ ವರ್ತನೆ ತೋರದಿರಿ.

ವೃಶ್ಚಿಕ ಶುಭಕರ ಬೆಳವಣಿಗೆ. ಕ್ಲಿಷ್ಟವಾಗಿದ್ದ ಪರಿಸ್ಥಿತಿ ತಿಳಿಯಾಗಲಿದೆ. ಅನಿರೀಕ್ಷಿತ ದಿಕ್ಕಿನಿಂದ ಬೆಂಬಲ. ಆರ್ಥಿಕ ಉನ್ನತಿ. ಖರ್ಚು ನಿಯಂತ್ರಿಸಿರಿ.

ಧನು ದಿನವಿಡೀ ಏನೇನೋ ಅಡ್ಡಿಗಳು. ಮಹತ್ವದ ಕೆಲಸ ಮುಂದೂಡಿ. ದೊಡ್ಡ ಸಮಸ್ಯೆಗೆ ಸರಳ ಪರಿಹಾರವಿದೆ, ಅತ್ತ ಗಮನ ಹರಿಸಿರಿ.

ಮಕರ ಕೆಲ ಸಮಯದಿಂದ ಕಾಡುತ್ತಿದ್ದ ಸಮಸ್ಯೆಗೆ ಪರಿಹಾರ ಸಿಗಲಿದೆ. ಸೂಕ್ತ ನೆರವೂ ಸಿಗಲಿದೆ. ಯಾರ ಜತೆಗೂ ವಾಗ್ವಾದಕ್ಕೆ ಆಸ್ಪದ ನೀಡಬೇಡಿ.

ಕುಂಭ ನೆಗೆಟಿವ್ ಚಿಂತನೆ ಬಾಧಿಸಲಿದೆ. ಸಂಗಾತಿ ಜತೆ ಜಗಳಕ್ಕೆ ಆಸ್ಪದ ನೀಡದಿರಿ. ಹೊಂದಾಣಿಕೆ ಒಳಿತು. ಮಕ್ಕಳ ಸಾಧನೆಯ ತೃಪ್ತಿ. ಖರ್ಚು ಹೆಚ್ಚಳ.

ಮೀನ ಪ್ರತಿಕೂಲ ಪರಿಸ್ಥಿತಿ ಎದುರಿಸಿದರೂ ಅದನ್ನು ನಿಮ್ಮ ಪರವಾಗಿ ಬದಲಿಸಿಕೊಳ್ಳಿ. ಕೌಟುಂಬಿಕ ಸಾಮರಸ್ಯ ಕೆಡದಂತೆ ನೋಡಿಕೊಳ್ಳಿ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00

ಅದೃಷ್ಟ ಸಂಖ್ಯೆ : 4,7,2,0

ಕಾರ್ಯಕ್ರಮದಲ್ಲಿ ವಿವಿಧ ಕಲಾತಂಡಗಳ ಮೆರವಣಿಗೆ: ರಘು ಕೌಟಿಲ್ಯ

ಬಿಎಸ್‌ವೈ ಪುರಪ್ರವೇಶ

ಚಿತ್ರದುರ್ಗ: ಚಿತ್ರದುರ್ಗದಲ್ಲಿ ಮೇ 9 ರಂದು ನಡೆಯುವ ಬಿಎಸ್‌ವೈ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಮೇ 8ರಂದು ಬಿಎಸ್‌ವೈ ಪುರ ಪ್ರವೇಶ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ವಿವಿಧ ಕಲಾತಂಡಗಳು ಭಾಗವಹಿಸಲಿದ್ದು ಮೈಸೂರು ದಸರಾ ಜಂಬೂ ಸವಾರಿ ಮಾದರಿಯಲ್ಲಿ ಮೆರವಣಿಗೆ ನಡೆಸಲಾಗುವುದು ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ತಿಳಿಸಿದರು.

ನಗರದ ಹೊರವಲಯದ ಎಸ್‌ಜೆಎಂ ಕಾಲೇಜು ಆವರಣದಲ್ಲಿ ಮೆರವಣಿಗೆಗೆ ಸಿದ್ಧಪಡಿಸುತ್ತಿರುವ ಟ್ಯಾಬ್ಲೋಗಳನ್ನು ಪರಿಶೀಲಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ 50 ವರ್ಷಗಳ ರಾಜಕೀಯ ಜೀವನ ಹಿನ್ನೆಲೆಯಲ್ಲಿ ನಗರದ ಹೊರ ವಲಯದಲ್ಲಿ ಹಮ್ಮಿಕೊಂಡಿರುವ ಬಿಎಸ್‌ವೈ ಅಭಿಮಾನೋತ್ಸವ ಹಬ್ಬದ ರೀತಿಯಲ್ಲಿ ಆಚರಿಸಬೇಕು. ಈ ಹಿನ್ನೆಲೆಯಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಓಬಿಸಿ ಮೋರ್ಚ ಉಪಾಧ್ಯಕ್ಷ ವೆಂಕಟೇಶ್, ಬಿಜೆಪಿ ಕಾರ್ಯದರ್ಶಿ ಸಂಪತ್‌ಕುಮಾರ್, ಕೂಡಾ ಮಾಜಿ ಅಧ್ಯಕ್ಷ ಜಿ.ಟಿ. ಸುರೇಶ್, ಅಶ್ವಿನಿ, ಬಸವರಾಜ್, ಶ್ಯಾಮಲಾ ಶಿವಪ್ರಕಾಶ್, ಕವನ ರಾಘವೇಂದ್ರ, ಶೈಲಜಾರೆಡ್ಡಿ, ರಜನಿ ಹಾಜರಿದ್ದರು.

ಅಭಿಮಾನೋತ್ಸವದಲ್ಲಿ ಕಾರ್ಯಕರ್ತರಿಗೆ ಜವಾಬ್ದಾರಿ

ದಾವಣಗೆರೆ: ಕೋಟೆನಾಡು ಚಿತ್ರದುರ್ಗದಲ್ಲಿ ಮೇ 9 ರಂದು ಆಯೋಜಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ದಾವಣಗೆರೆ ಲೋಕಸಭಾ ಕ್ಷೇತ್ರದಿಂದ 25 ಸಾವಿರಕ್ಕೂ ಅಧಿಕ ಕಾರ್ಯಕರ್ತರನ್ನು ಕರೆದೊಯ್ಯಲಾಗುವುದು ಎಂದು ಕೇಂದ್ರದ ಮಾಜಿ ಸಚಿವ ಡಾ.ಜಿ.ಎಂ.ಸಿದ್ದೇಶ್ವರ ತಿಳಿಸಿದರು. ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 104 ಬಸ್, 500ಕ್ಕೂ ಅಧಿಕ ಕಾರು, ಟ್ರ್ಯಾಕ್ಟರ್‌ಗಳಲ್ಲಿ ಸುಮಾರು 25 ಸಾವಿರ ಜನರು ಕಾರ್ಯಕ್ರಮಕ್ಕೆ ತೆರಳಲಿದ್ದಾರೆ. ಜನರನ್ನು ಕಾರ್ಯಕ್ರಮಕ್ಕೆ ಕರೆದೊಯ್ಯಲು ಪ್ರತಿ ಹಳ್ಳಿಗೂ ಮೂವರು ಕಾರ್ಯಕರ್ತರಿಗೆ ಜವಾಬ್ದಾರಿ ನೀಡಲಾಗಿದೆ. ಪ್ರತಿ ಬಸ್ಸಿಗೂ ಉಸ್ತುವಾರಿಗಳನ್ನು ನೇಮಿಸಿದ್ದು, ಯಾವುದೇ ತೊಂದರೆಯಾಗದಂತೆ ನಿಗಾ ವಹಿಸಲಾಗಿದೆ ಎಂದರು. ರಾಜಕೀಯ ಜೀವನದಲ್ಲಿ 50 ವರ್ಷ ಪೂರೈಸಿರುವ ನಾಡು ಕಂಡ ಅಪರೂಪದ ರಾಜಕಾರಣಿ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯಕ್ಕೆ ನೂರಾರು ಹೊಸ ಯೋಜನೆಗಳನ್ನು ಜಾರಿಗೊಳಿಸಿದ್ದರು. ಸೈಕಲ್ ಮೇಲೆ ಓಡಾಡಿ ಪಕ್ಷವನ್ನು ರಾಜ್ಯಾದ್ಯಂತ ಸಂಘಟಿಸಿ, ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಯಡಿಯೂರಪ್ಪನವರ ಶ್ರಮ ಅಪಾರ ಎಂದು ಅವರು ತಿಳಿಸಿದರು. ಜಗಳೂರು ಮಾಜಿ ಶಾಸಕ ಹೆಚ್.ಪಿ.ರಾಜೇಶ್, ಮುಖಂಡರಾದ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ದೇವರಮನಿ ಶಿವಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ದೊಗ್ಗಳ್ಳಿ ವೀರೇಶ್, ಮುರುಗೇಶ್ ಆರಾಧ್ಯ, ಅಣಬೇರು ಜೀವನಮೂರ್ತಿ, ಅತಿಥ್ ಅಂಬರ್‌ಕರ್, ವೀರೇಶ್, ಶಿವನಗೌಡ ಪಾಟೀಲ್ ಸುದ್ದಿಗೋಷ್ಠಿಯಲ್ಲಿದ್ದರು.

ಪಾಂಡಿಚೇರಿ ಬಿಜೆಪಿ ಉಸ್ತುವಾರಿ ನಿರ್ಮಲ್‌ಕುಮಾರ್ ಸುರಾಣ ಹೇಳಿಕೆ

ನರೇಂದ್ರ ಮೋದಿಯಿಂದ ಬಂಗಾಳದಲ್ಲಿ ಬದಲಾವಣೆ



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಚಾಣಕ್ಯ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚುನಾವಣಾ ಪ್ರಚಾರದಲ್ಲಿ ಹೇಳಿದಂತೆಯೇ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಪಾಂಡಿಚೇರಿ ಬಿಜೆಪಿ ಉಸ್ತುವಾರಿಯಾಗಿದ್ದ ನಿರ್ಮಲ್‌ಕುಮಾರ್ ಸುರಾಣ ಹೇಳಿದ್ದಾರೆ.

ಪಂಚರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪಾಂಡಿಚೇರಿಯಲ್ಲಿ ಭರ್ಜರಿ ಜಯಗಳಿಸಿದ್ದಕ್ಕಾಗಿ ಶಿವಾಜಿನಗರ ಮಂಡಲ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ವಿಜಯೋತ್ಸವದಲ್ಲಿ ಮಾತನಾಡಿದ ಅವರು, ಪಶ್ಚಿಮ ಬಂಗಾಳದಲ್ಲಿ ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗಿತ್ತು. ಮಮತಾ ಬ್ಯಾನರ್ಜಿ ಅವರ ಆಡಳಿತದಿಂದ ರೋಸಿ ಹೋಗಿದ್ದ ಜನರು ಬದಲಾವಣೆಯನ್ನು ಬಯಸಿದ್ದರು. ಅಲ್ಲದೇ, ಕೇಂದ್ರ ಗೃಹ ಸಚಿವರಾಗಿರುವ ಅಮಿತ್ ಶಾ ಅವರೂ ಈ ಬಾರಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಧ್ವಜವನ್ನು ಹಾರಿಸುತ್ತೇವೆ, ಮಮತಾ ಬ್ಯಾನರ್ಜಿ ಸರ್ಕಾರವನ್ನು ಕಿತ್ತೊಗೆಯುತ್ತೇವೆ ಎಂದು ಶಪಥ ಮಾಡಿದ್ದರು. ಅದರಂತೆಯೇ ಬಂಗಾಳದಲ್ಲಿ ಈ ಬಾರಿ ಬಿಜೆಪಿ ಭರ್ಜರಿ ಯಶಸ್ಸುಗಳಿಸಿ ಅಧಿಕಾರಕ್ಕೆ ಬಂದಿದೆ ಎಂದರು.

ಇನ್ನು ಅಸ್ಸಾಂನಲ್ಲಿ ಬಿಜೆಪಿ ಸತತ ಎರಡನೇ ಬಾರಿ ಅಧಿಕಾರದ ಗದ್ದುಗೆ ಏರಿದೆ, ಇದೇ ಮೊದಲ ಬಾರಿ ಮುಸ್ಲಿಂ ಸಮುದಾಯದವರೂ ಅಸ್ಸಾಂನಲ್ಲಿ ಬಿಜೆಪಿಯನ್ನು ಬೆಂಬಲಿಸಿದ್ದಾರೆ. ಮುಸ್ಲಿಂರಲ್ಲಿಯೂ ಬದಲಾವಣೆ ಕಾಣುತ್ತಿದ್ದು, ಅಭಿವೃದ್ಧಿಯನ್ನು ಬಯಸಿ ಬಿಜೆಪಿ ಪಕ್ಷಕ್ಕೆ ಮತ ನೀಡಿದ್ದಾರೆ ಎಂದು ನಿರ್ಮಲ್ ಕುಮಾರ್ ಸುರಾಣ ಹೇಳಿದರು. ಈ ವಿಜಯೋತ್ಸವ ಕಾರ್ಯಕ್ರಮದಲ್ಲಿ ಶಿವಾಜಿನಗರ ಮಂಡಲ ಬಿಜೆಪಿ ಅಧ್ಯಕ್ಷ ಬಾಲಾಜಿ ಮಣಿ, ಮಾಜಿ ಮಹಾನಗರ ಪಾಲಿಕೆ ಸದಸ್ಯರಾದ ಗುಣಶೇಖರ್, ಸಂಪತ್, ಎಂ. ಗೋಪಿ, ಸೂರ್ಯಕಾಂತ್ ಸೇರಿದಂತೆ ನೂರಾರು ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.

ಸಂಪೂರ್ಣ ಚಿತ್ರಣವೇ ಬದಲು

ಪಾಂಡಿಚೇರಿಯಲ್ಲಿ, 10 ವರ್ಷದ ಕೆಳಗೆ ಯಾರೊಬ್ಬರು ಬಿಜೆಪಿ ಶಾಲನ್ನೂ ಹಾಕುತ್ತಿರಲಿಲ್ಲ. ಭಾರತ್ ಮಾತಾ ಕಿ ಜೈ ಅನ್ನುವಷ್ಟು ಸ್ವಾತಂತ್ರ್ಯವಿರಲಿಲ್ಲ. ಆದರೆ, ಕಳೆದ 10 ವರ್ಷಗಳಲ್ಲಿ ಅಲ್ಲಿಯ ಸಂಪೂರ್ಣ ಚಿತ್ರಣವೇ ಬದಲಾಗಿದೆ ಎಂದರು. ತಮಿಳುನಾಡು ಹಾಗೂ ಪಾಂಡಿಚೇರಿಯಲ್ಲಿ ಎರಡೂ ರಾಜ್ಯಗಳಲ್ಲಿ ತಮಿಳು ಮಾತನಾಡುತ್ತಿದ್ದರೂ, ತಮಿಳುನಾಡಿನ ಪ್ರಭಾವ ಇಲ್ಲಿ ಆಗಿಲ್ಲ. ಟಿವಿಕೆ ಪ್ರಭಾವವೂ ಇಲ್ಲಿ ಕೆಲಸ ಮಾಡಿಲ್ಲ ಎಂದು ಪಾಂಡಿಚೇರಿಯ ಚುನಾವಣಾ ಉಸ್ತುವಾರಿಯೂ ಆಗಿದ್ದ ನಿರ್ಮಲ್ ಕುಮಾರ್ ಸುರಾಣ ಹರ್ಷ ವ್ಯಕ್ತಪಡಿಸಿದರು.

13 ಯುದ್ಧವಿಮಾನ ಧ್ವಂಸ

ಪುಟ 1ರಿಂದ ಏರ್ ಮಾರ್ಷಲ್ ಭಾರ್ತಿ ಅವರು ನೀಡಿದ ಮಾಹಿತಿಯ ಪ್ರಕಾರ, ಪಾಕಿಸ್ತಾನದ 13 ಯುದ್ಧವಿಮಾನಗಳನ್ನು ಆಗಸದಲ್ಲಿ, ನೆಲದಲ್ಲೇ ಹೊಡೆದುರುಳಿಸಲಾಗಿತ್ತು. ಇದರಲ್ಲಿ ಅತ್ಯಾಧುನಿಕ ಹೈ ವ್ಯಾಲ್ಯೂ ಏರ್‌ಬೋರ್ನ್ ಅಸೆಟ್ ಕೂಡ ಸೇರಿದ್ದು, 300 ಕಿಲೋಮೀಟರ್‌ಗಿಂತ ಹೆಚ್ಚಿನ ದೂರದಿಂದ ಗುರಿ ಹೊಡೆದಿರುವುದು ಭಾರತೀಯ ವಾಯುಪಡೆಯ ದೀರ್ಘದೂರ ನಿಖರ ದಾಳಿ ಸಾಮರ್ಥ್ಯವನ್ನು ತೋರಿಸಿದೆ ಎಂದರು.

ಕಾರ್ಯಾಚರಣೆಯ ಯಶಸ್ಸಿನ ಕುರಿತು ಮಾತನಾಡಿ, 'ಯುದ್ಧದಲ್ಲಿ ಗೆಲುವು ಘೋಷಣೆಗಳಿಂದ ಸಿಗುವುದಿಲ್ಲ, ವಾಸ್ತವಾಂಶಗಳಿಂದ ಸಿಗುತ್ತದೆ. ಪಾಕಿಸ್ತಾನ ಪ್ರಚಾರ ನಡೆಸಬಹುದು, ಆದರೆ ನೆಲದ ಸತ್ಯ ಬೇರೆ. ನಾವು ಗುರಿಗಳನ್ನು ನಿಖರವಾಗಿ ಹೊಡೆದಿದ್ದೇವೆ' ಎಂದು ತಿರುಗೇಟು ನೀಡಿದರು. ಪಾಕಿಸ್ತಾನ ಪ್ರತಿದಾಳಿ ನಡೆಸಲು ಡ್ರೋನ್ ಹಾಗೂ ಯುಸಿಎವಿ ದಾಳಿಗಳನ್ನು ಪ್ರಯತ್ನಿಸಿತ್ತು. ಭಾರತೀಯ ವಾಯುಪಡೆ ಹಾಗೂ ವಾಯು ರಕ್ಷಣಾ ವ್ಯವಸ್ಥೆಗಳು ಅವುಗಳನ್ನು ಯಶಸ್ವಿಯಾಗಿ ವಿಫಲಗೊಳಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರತದ ನಾಗರಿಕ ಕಟ್ಟಡಗಳಿಗೆ ದೊಡ್ಡ ಮಟ್ಟದ ಹಾನಿಯಾಗಿಲ್ಲ ಎಂದೂ ಸ್ಪಷ್ಟಪಡಿಸಲಾಗಿದೆ. ಭವಿಷ್ಯದಲ್ಲಿ ಗಡಿಪಾರು ಉಗ್ರ ಚಟುವಟಿಕೆಗಳನ್ನು ಸಹಿಸಲಾಗುವುದಿಲ್ಲ ಎಂಬ ಬಲವಾದ ಸಂದೇಶವೂ ಆಗಿದೆ ಎಂದು ರಕ್ಷಣಾ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಪಾಕ್‌ಗೆ ತಕ್ಕ ಪ್ರತ್ಯುತ್ತರ: ಮೋದಿ

ಪುಟ 1ರಿಂದ ಪಹಲ್ಗಾಮ್‌ನಲ್ಲಿ ಅಮಾಯಕ ಭಾರತೀಯರ ಮೇಲೆ ದಾಳಿ ನಡೆಸಿದವರಿಗೆ ನಮ್ಮ ಸೇನಾ ಪಡೆ ತಕ್ಕ ಪ್ರತ್ಯುತ್ತರ ನೀಡಿದೆ ಮತ್ತು ಭಾರತೀಯ ಸೇನಾಪಡೆಯ ದಿಟ್ಟತನವನ್ನು ಇಡೀ ದೇಶ ಅಭಿವಂದಿಸಿದೆ ಎಂದು ಹೇಳಿದರು. ಪಾಕ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಮಿಲಿಟರಿ ಮತ್ತು ಭಯೋತ್ಪಾದಕ ಮೂಲಸೌಕರ್ಯಗಳ ವಿರುದ್ಧ ಭಾರತೀಯ ಮಿಲಿಟರಿ ಕಾರ್ಯಾಚರಣೆಯ ಪ್ರಥಮ ವಾರ್ಷಿಕೋತ್ಸವ ಕ್ಷಣಗಳಲ್ಲಿ ಪ್ರಧಾನಿ ಮೋದಿ ದೇಶದ ಸೇನಾಪಡೆಯ ಶಕ್ತಿ ಸಾಮರ್ಥ್ಯ ಬಗ್ಗೆ ಪುನರಪಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಯೋತ್ಪಾದನೆಗೆ ಭಾರತದ ಪ್ರತಿಕ್ರಿಯೆ ಅತ್ಯಂತ ದೃಢವೆಂಬುದನ್ನು ಆಪರೇಷನ್ ಸಿಂದೂರ್ ಸಾಬೀತುಪಡಿಸಿದೆ.

ಸಮಗ್ರ ಪ್ರಗತಿಗೆ ಧರ್ಮ ಅಡಿಪಾಯ

ಪುಟ 1ರಿಂದ ಎಲ್ಲರೂ ಒಂದೇ ಎನ್ನುವ ಸಮಭಾವವೇ ಸೌಹಾರ್ದತೆ ಎಂದು ಪ್ರತಿಪಾದಿಸಿದರು. ಸಾವಿರಾರು ವರ್ಷಗಳಿಂದಲೂ ಧರ್ಮ ರಕ್ಷಣೆಯಾಗಿ ಉಳಿದುಕೊಂಡುಬಂದಿದೆ.ನಾವುಧರ್ಮವನ್ನು ರಕ್ಷಣೆಮಾಡಿದರೆ, ಧರ್ಮ ನಮ್ಮನ್ನು ರಕ್ಷಣೆ ಮಾಡುತ್ತದೆ. ಧರ್ಮವಿಲ್ಲದೆ ಮನುಷ್ಯನ ಜೀವನ ಸಾರ್ಥಕವಾಗುವುದಿಲ್ಲ. ಧರ್ಮ ಶಾಂತಿ, ನೆಮ್ಮದಿಯನ್ನು ನೀಡುತ್ತದೆ. ಧರ್ಮವಿದ್ದಲ್ಲಿ ಸಂತೋಷ, ಸಮೃದ್ಧಿ ಇರುತ್ತದೆ. ಅದು ದುಃಖವನ್ನು ನೀಡುವುದಿಲ್ಲ ಎಂದು ತಿಳಿಸಿದರು.

ಸಹೋದರರನ್ನು ಅಸ್ಪೃಶ್ಯರಾಗಿ ಶತಮಾನಗಳ ಕಾಲ ದೂರವಿಡಲಾಗಿದೆ. ಮೇಲು ಕೀಳು ಎಂಬ ಮನೋಭಾವ ಕಳೆದು ಸರ್ವರೂ ಒಂದೇ ಎಂಬ ಏಕ ಭಾವ ಭಾರತೀಯರಲ್ಲಿ ಮೂಡಬೇಕಿದೆ ಎಂದು ಪ್ರತಿಪಾದಿಸಿದರು. ಅಂಬೇಡ್ಕರ್ ಅವರ ಸಂವಿಧಾನ ಸಭೆಯ ಭಾಷಣಗಳನ್ನು ಮತ್ತೊಮ್ಮೆ ಓದಿಕೊಳ್ಳಬೇಕಿದೆ. ಸಾಮಾಜಿಕ ಸ್ವಾತಂತ್ರ್ಯ ನೆಲೆಗೊಳ್ಳದೆ ರಾಜಕೀಯ, ಆರ್ಥಿಕ ಸ್ವಾತಂತ್ರ್ಯ ಸಿಗುವುದಿಲ್ಲವೆಂದಿದ್ದರು. ಸಂವಿಧಾನದಲ್ಲಿನ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಫ್ರೆಂಚ್ ಕ್ರಾಂತಿಯಿಂದ ತೆಗೆದುಕೊಂಡದ್ದಲ್ಲ. ಈ ಪರಿಕಲ್ಪನೆಯು ಭಾರತದ್ದೇ ಆಗಿದೆ. ಇದು ತಥಾಗತ ಬುದ್ಧ ನೀಡಿದ್ದು ಎಂದರು.

ವಿಭಿನ್ನತೆಯು ವ್ಯಕ್ತಿಗತವಾಗಿ ಎಲ್ಲರಲ್ಲೂ ಇದೆ. ಅದೇ ನಮ್ಮ ನಡುವಿನ ದೂರಕ್ಕೆ ನಾ ಹಿಂಗಬಾರದು. ಸಮಾನತೆ ನೆಲೆಸಲು ನಮ್ಮ ಮನಸ್ಸಿನೊಳಗಿನ ಭೇದವೆಂಬ ಕಲ್ಮಶವನ್ನು ತೆಗೆದು ಹಾಕಬೇಕು. ಸಬ್ಬತ್ತತೆ ಬರಬೇಕೆಂದರೆ ಇನ್ನೊಬ್ಬರಿಗೆ ತೊಂದರೆ ಕೊಡಬಾರದು. ಎಲ್ಲರೂ ನಮ್ಮವರೇ ಎಂಬ ಭಾವ ಬಂದಾಗ ಸಮಾಜದ ವಿಕಾಸ ತಂತಾನೇ ಆಗುತ್ತದೆ ಎಂದು ಭಾಗವತ್ ಹೇಳಿದರು.

ಭಾಷೆ, ಜಾತಿ, ಪಂಗಡಗಳನ್ನು ಮೀರಿ ಬಂಧುತ್ವ ನೆಲೆಗೊಳ್ಳಬೇಕು. ಅಸ್ತಿತ್ವಕ್ಕಾಗಿ ಮತ್ತೊಬ್ಬರ ವಿರುದ್ಧ ಹೋರಾಟ ನಡೆಸುವುದು ಪಾಶ್ಚಾತ್ಯ ಪರಿಕಲ್ಪನೆಯಾಗಿದೆ. ಆದರೆ, ಭಾರತೀಯರು ಭ್ರಾತೃತ್ವ, ಪರಸ್ಪರ ಸಹಾಯದೊಂದಿಗೆ ನಾಗರಿಕತೆ ಕಟ್ಟಿದ್ದಾರೆ. ನಮ್ಮ ಸಮಾಜವು, ಪರೋಪಕಾರವೇ ಸೇವೆ, ಕರ್ತವ್ಯವೇ ಜೀವನದ ಪರಮ ಗುರಿಯೆಂದು ತಿಳಿದಿದೆ ಎಂದು ವಿವರಿಸಿದರು. ಸಮಾಜವು ದೇಶಕ್ಕೆ ನಿಷ್ಠೆಯಾಗಿದ್ದರೆ, ಅಭಿವೃದ್ಧಿ ತಂತಾನೆ ಆಗುತ್ತದೆ. ವಿಶ್ವಾಸಾತ್ಮಕವಾಗಿ ನೋಡಬೇಕು ಎಂದು ಹೇಳಿದರು.

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಭಾರೀ ಸಿದ್ಧತೆ

ಪುಟ 1ರಿಂದ ಮುಖ್ಯವಾಗಿ ಮೂರು ವೇದಿಕೆಗಳನ್ನು ನಿರ್ಮಿಸಲಾಗುತ್ತಿದೆ. ಒಂದರಲ್ಲಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ವಿವಿಧ ಮುಖಂಡರು ಆಸೀನರಾಗುವರು. ಈ ವೇದಿಕೆ ಒಂದು ಬದಿಯಲ್ಲಿ ಸುಮಾರು 1000 ವಿವಿಧ ಮಠಾಧೀಶರಿಗೆ ವೇದಿಕೆ ನಿರ್ಮಾಣ ಮಾಡಲಾಗಿದೆ. ಮತ್ತೊಂದು ಬದಿಯಲ್ಲಿ ಭಾಗ್ಯಲಕ್ಷ್ಮಿ ಸೇರಿದಂತೆ ವಿವಿಧ ಫಲಾನುಭವಿಗಳಿಗೆ ವೇದಿಕೆ ನಿರ್ಮಿಸಲಾಗುತ್ತಿದೆ.

ರಾಜ್ಯದ ಮೂಲೆ ಮೂಲೆಗಳಿಂದ ಸುಮಾರು 10 ಲಕ್ಷ ಸಂಖ್ಯೆಯ ಅಭಿಮಾನಿಗಳು ಆಗಮಿಸುವ ನಿರೀಕ್ಷೆ ಇದೆ. ಹಾಗಾಗಿ 2 ಲಕ್ಷ ಜನರಿಗೆ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಇಡೀ ಮೈದಾನಕ್ಕೆ ಧ್ವನಿ ಬೆಳಕಿನ ವ್ಯವಸ್ಥೆ ಮಾಡಲಾಗುತ್ತಿದೆ. ಇದಕ್ಕಾಗಿ ನೂರಾರು ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದೆ. ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶ್‌ಗೌಡ ವೇದಿಕೆ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ. ಬೆಂಗಳೂರಿನ ರಾಜಾ ಎಂಟರ್‌ಪ್ರೈಸಸ್ ಎಂಬ ಕಂಪನಿಗೆ ವೇದಿಕೆ ನಿರ್ಮಾಣ ಕಾಮಗಾರಿ ವಹಿಸಲಾಗಿದೆ.

ಬೆಂಗಳೂರಿನ ಅರಮನೆ ಮೈದಾನ ಸೇರಿದಂತೆ ಬೆಂಗಳೂರಿನ ವಿವಿಧೆಡೆಗಳಲ್ಲಿ ನಡೆಯುವ ಬಹುತೇಕ ಕಾರ್ಯಕ್ರಮಗಳಿಗೆ ಕೆಲಸ ಮಾಡಿದ ಅನುಭವ ಈ ಕಂಪನಿಯದ್ದು. ಹಾಗಾಗಿ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಸಿದ್ಧತೆಗಾಗಿ ನೂರಾರು ಸಂಖ್ಯೆಯ ಕಾರ್ಮಿಕರು ಹಗಲಿರುಳು ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಸುಮಾರು 8-10 ಕ್ರೇನ್‌ಗಳು, ಜೆಸಿಬಿ ಯಂತ್ರಗಳು, ಲಾರಿಗಳು ಸೇರಿದಂತೆ ನೂರಾರು ಸಂಖ್ಯೆಯ ವಾಹನಗಳು ವೇದಿಕೆ ನಿರ್ಮಾಣಕ್ಕೆ ಬೇಕಾದ ಪರಿಕರಗಳನ್ನು ಒದಗಿಸುವ ಕೆಲಸ ಮಾಡುತ್ತಿವೆ. ಒಂದಷ್ಟು ಟ್ರ್ಯಾಕ್ಟರ್, ಲಾರಿ ಸೇರಿದಂತೆ ನೀರಿನ ಟ್ಯಾಂಕರ್‌ಗಳು ಮೈದಾನವನ್ನು ಸಮತಟ್ಟು ಮಾಡುತ್ತಿವೆ.

ಔಷಧೋಪಕರಣ, ವೈದ್ಯರತಂಡದ ವ್ಯವಸ್ಥೆ: ಅಭಿಮಾನೋತ್ಸವಕ್ಕೆ ಬರುವ ಯಾವೊಬ್ಬ ಅಭಿಮಾನಿಗೂ ಯಾವುದೇ ತೊಂದರೆಯಾಗದಂತೆ ಎಚ್ಚರ ವಹಿಸಲಾಗುತ್ತಿದೆ. ಆರೋಗ್ಯದ ದೃಷ್ಟಿಯಿಂದ ಅಗತ್ಯ ವೈದ್ಯರ ತಂಡ ಕಾರ್ಯನಿರ್ವಹಿಸಲಿದೆ. ಅಲ್ಲದೇ ಅಗತ್ಯ ವಾಹನಗಳು ಹಾಗೂ ಔಷಧೋಪಕರಣಗಳ ವ್ಯವಸ್ಥೆ ಮಾಡಲಾಗಿದೆ.

1 ಕಿಮೀ ವ್ಯಾಪ್ತಿಯಲ್ಲಿ ವಾಹನ ನಿಲುಗಡೆ: ವೇದಿಕೆಯ ಸುತ್ತಮುತ್ತಲಿನ ಒಂದು ಕಿಮೀ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಸುಮಾರು 10ರಿಂದ 12 ಸಾವಿರ ಬಸ್‌ಗಳು, 80ರಿಂದ 90 ಸಾವಿರ ಕಾರು, ವ್ಯಾನ್ ಮತ್ತಿತರ ವಾಹನಗಳು, ಸುಮಾರು 50ರಿಂದ 60 ಸಾವಿರ ದ್ವಿಚಕ್ರ ವಾಹನಗಳು ಬರುವ ನಿರೀಕ್ಷೆಯಿದೆ. 200 ಕಡೆಗಳಲ್ಲಿ ಬ್ಯಾರಿಕೇಡ್ ವ್ಯವಸ್ಥೆ ಮಾಡಿ ಪಾರ್ಕಿಂಗ್ ಸಮಸ್ಯೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡಲಾಗುತ್ತಿದೆ.

ಸುವೇಂದು ಅಧಿಕಾರಿ ಆಪ್ತನ ಗುಂಡಿಕ್ಕಿ ಹತ್ಯೆ

ಪುಟ 1ರಿಂದ ಉತ್ತರ 24 ಪರಗಣ ಜಿಲ್ಲೆಯ ಮಧ್ಯಮ್ ಗ್ರಾಮ ನಗರದಲ್ಲಿ ಚಂದ್ರನಾಥ್ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದು, ಚಂದ್ರನಾಥ್ ಎದೆಗೆ ನಾಲ್ಕು ಸುತ್ತು ಗುಂಡು ಹಾರಿಸಿ ಹತ್ಯೆಗೈದಿದ್ದಾರೆಂದು ಬಿಜೆಪಿ ಹೇಳಿದೆ. ಮಧ್ಯರಾತ್ರಿ ಆಸ್ಪತ್ರೆಗೆ ತಲುಪಿದ ವಿರೋಧ ಪಕ್ಷದ ನಾಯಕ ಸುವೇಂದು, ಇದು ಹೃದಯ ವಿದ್ರಾವಕ ಮತ್ತು ಪೂರ್ವನಿಯೋಜಿತ ಹತ್ಯೆ ಎಂದು ಆರೋಪಿಸಿದ್ದಾರೆ. ಬಂಗಾಳ ಚುನಾವಣೆಯಲ್ಲಿ ಬಿಜೆಪಿ ಐತಿಹಾಸಿಕ ಗೆಲುವಿನ ನಂತರ ಈ ಹತ್ಯೆ ನಡೆದಿರುವುದು ರಾಜಕೀಯ ವಲಯದಲ್ಲಿ ಭಾರೀ ಆಘಾತ ಮೂಡಿಸಿದೆ. ಟಿಎಂಸಿ ಪ್ರತೀಕಾರಾತ್ಮಕ ಹಿಂಸೆಯನ್ನು ಪ್ರೇರೇಪಿಸಿದೆ ಎಂದು ಬಿಜೆಪಿ ಆರೋಪಿಸಿದೆ. ತನ್ನ ಕಾರ್ಯಕರ್ತರ ಮೇಲೂ ವಿವಿಧ ಜಿಲ್ಲೆಗಳಲ್ಲಿ ದಾಳಿಗಳು ನಡೆದಿವೆ ಎಂದು ಟಿಎಂಸಿ ಆರೋಪಿಸಿದೆ.

ಅಡ್ಡಗಟ್ಟಿ ಗುಂಡಿನ ದಾಳಿ: ಬುಧವಾರ ರಾತ್ರಿ 10.30ರ ಆಸುಪಾಸಿನಲ್ಲಿ ಮಧ್ಯಮಗ್ರಾಮದ ಡೋಲ್ತಲಾ ಪ್ರದೇಶದ ಬಳಿ ಚಂದ್ರನಾಥ್ ಪ್ರಯಾಣಿಸುತ್ತಿದ್ದ ಎಸ್‌ಯುವಿ ವಾಹನವನ್ನು ಸಣ್ಣ ಕಾರ್‌ನಲ್ಲಿ ಹಿಂಬಾಲಿಸಿ ಬಂದ ದುಷ್ಕರ್ಮಿಗಳು ದೋಹಾರಿಯಾ ಜಂಕ್ಷನ್ ಬಳಿ ಅಡ್ಡಗಟ್ಟಿದ್ದು, ರಾಥ್ ಮತ್ತು ಚಾಲಕನ ಮೇಲೆ ಗುಂಡಿನ ದಾಳಿ ನಡೆಸಿ ತಮ್ಮ ಕಾರನ್ನು ಅಲ್ಲೇ ಬಿಟ್ಟು ಬೈಕ್‌ನಲ್ಲಿ ಪರಾರಿಯಾಗಿದ್ದಾರೆ.

ಎದೆಗೆ ಎರಡು ಗುಂಡು: ಚಂದ್ರನಾಥ್ ಎದೆಗೆ ಎರಡು ಗುಂಡು ತಗುಲಿದ್ದು, ಅವು ಹೃದಯವನ್ನು ಭೇದಿಸಿವೆ. ಮತ್ತೊಂದು ಗುಂಡು ಹೊಟ್ಟೆ ಭಾಗಕ್ಕೆ ತಗುಲಿದೆ. ಅವರನ್ನು ಬದುಕಿಸಲು ಯಾವುದೇ ಅವಕಾಶ ಇರಲಿಲ್ಲ ಎಂದು ಆಸ್ಪತ್ರೆ ವೈದ್ಯರೊಬ್ಬರು ಹೇಳಿದ್ದಾರೆ. ದಾಳಿಯಲ್ಲಿ ಗಾಯಗೊಂಡು ಗಂಭೀರ ಸ್ಥಿತಿಯಲ್ಲಿದ್ದ ರಾಥ್ ಅವರ ಚಾಲಕನನ್ನು ಕೋಲ್ಕತ್ತಾದ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಇನ್ನೂ ಇಬ್ಬರ ಮೇಲೆ ದಾಳಿ, ಚಾಕು ಇರಿತ!

ಪುಟ 1ರಿಂದ ಚಂದ್ರನಾಥ್ ಹತ್ಯೆ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್‌ರೊಂದಿಗೆ ಮಾತನಾಡಿದ್ದೇನೆ ಎಂದವರು ಹೇಳಿದ್ದಾರೆ.

ಹೌರಾದಲ್ಲೂ ಗಲಭೆ: 15 ಬಾಂಬ್ ಬಳಕೆ? ನಗರದ ಚೌರಾಬಸ್ತಿ ಪ್ರದೇಶದಲ್ಲಿ ಗುರುವಾರ ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ಮಧ್ಯೆ ಹಿಂಸಾತ್ಮಕ ಗಲಭೆ ಭುಗಿಲೆದ್ದಿದೆ. ಗಲಭೆಯಲ್ಲಿ ದುಷ್ಕರ್ಮಿ ಶಮಿ ಅಹ್ಮದ್ 12ರಿಂದ 15 ಬಾಂಬ್ ಎಸೆದಿದ್ದಾನೆ ಎಂದು ಹೌರಾ ಬಿಜೆಪಿ ಅಧ್ಯಕ್ಷ ಗೌರಾಂಗ ಭಟ್ಟಾಚಾರ್ಯ ಆರೋಪಿಸಿದ್ದಾರೆ. ಸ್ಥಳಕ್ಕೆ ಆಗಮಿಸಿದ ಹೌರಾ ನಗರ ಪೊಲೀಸರು ಎರಡೂ ಬಣಗಳನ್ನು ಚದುರಿಸಿದ್ದಾರೆ. ಎನ್‌ಐಎ ಪ್ರಕರಣದಲ್ಲಿ ಜಾಮೀನಿನಲ್ಲಿ ಹೊರಗಿರುವ ಶಮಿ ದಾಳಿ ನಡೆಸಿದ್ದಾನೆ ಎಂದು ಬಿಜೆಪಿ ನಾಯಕರು ಆರೋಪಿಸಿದೆ.

ಹತ್ಯೆ ಖಂಡಿಸಿದ ಬಿಜೆಪಿ ರಾಜ್ಯಾಧ್ಯಕ್ಷ: ಇದು ಗುರಿತಪ್ಪದ, ದ್ವೇಷಪೂರಿತ ಮತ್ತು ಪೂರ್ವನಿಯೋಜಿತ ರಾಜಕೀಯ ಪ್ರೇರಿತ ಹತ್ಯೆ ಎಂದು ಬಿಜೆಪಿ ಪಶ್ಚಿಮ ಬಂಗಾಳ ರಾಜ್ಯಾಧ್ಯಕ್ಷ ಶಮಿಕ್ ಭಟ್ಟಾಚಾರ್ಯ ಹತ್ಯೆಗೆ ಖಂಡನೆ ವ್ಯಕ್ತಪಡಿಸಿದ್ದಾರೆ. ಚಂದ್ರನಾಥ್ ಒಬ್ಬ ರಾಜಕೀಯ ವ್ಯಕ್ತಿಯಲ್ಲ. ರಾಥ್‌ಗೂ ರಾಜಕೀಯಕ್ಕೂ ಸಂಬಂಧವಿಲ್ಲ. ನೂತನ ಬಿಜೆಪಿ ಸರ್ಕಾರದ ಪ್ರಮಾಣ ವಚನಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡುವ ಹಿನ್ನೆಲೆ ಟಿಎಂಸಿ ಈ ಸಂದೇಶ ನೀಡಿರುವ ಸಾಧ್ಯತೆಯಿದೆ ಎಂದು ಭಟ್ಟಾಚಾರ್ಯ ಆತಂಕ ವ್ಯಕ್ತಪಡಿಸಿದ್ದಾರೆ.

ಬಾಂಬ್ ದಾಳಿ: 5 ಬಿಜೆಪಿ ಕಾರ್ಯಕರ್ತರಿಗೆ ಗಾಯ

ಚಂದ್ರನಾಥ್ ಹತ್ಯೆ ಬಳಿಕ ಬಿಜೆಪಿ ಶಾಸಕಿ ರತ್ನಾ ದೇವನಾಥ್ ಮನೆ ಬಳಿ ದುಷ್ಕರ್ಮಿಗಳು ನಡೆಸಿದ ಬಾಂಬ್ ದಾಳಿಗೆ ಐವರು ಬಿಜೆಪಿ ಕಾರ್ಯಕರ್ತರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ.

ಸೌದಿ ಬೆಂಬಲಿಸದ ಕಾರಣ ಪ್ರಾಜೆಕ್ಟ್ ಫ್ರೀಡಮ್ ಸ್ಥಗಿತ

ಪುಟ 1ರಿಂದ ಹಾರ್ಮುಜ್ ಜಲಸಂಧಿಯನ್ನು ತೆರೆಯಲು ತಾನು ಪ್ರಾಜೆಕ್ಟ್ ಫ್ರೀಡಮ್ ನೌಕಾ ಕಾರ್ಯಾಚರಣೆ ನಡೆಸುವುದಾಗಿ ಟ್ರಂಪ್ ಭಾನುವಾರ ಘೋಷಿಸುವ ಮೂಲಕ ಸೌದಿ ಅರೇಬಿಯಾ ಮತ್ತು ಇತರ ಗಲ್ಫ್ ರಾಷ್ಟ್ರಗಳಿಗೆ ಅಚ್ಚರಿ ಮೂಡಿಸಿದ್ದರು.

ಪ್ರಾಜೆಕ್ಟ್ ಫ್ರೀಡಮ್ ಘೋಷಿಸಿದ ಬಳಿಕ ಅರೇಬಿಯಾ ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್‌ಗೆ ಟ್ರಂಪ್ ದೂರವಾಣಿ ಕರೆ ಮಾಡಿ ಮಾತನಾಡಿದ್ದಾರೆ. ಆದರೆ ಅಮೆರಿಕ ಯುದ್ಧ ವಿಮಾನಗಳ ಹಾರಾಟಕ್ಕೆ ಸೌದಿ ರಾಜಕುಮಾರ ಒಪ್ಪಿಗೆ ನೀಡಿಲ್ಲ. ಬೇರೆ ದಾರಿ ಕಾಣದೆ ಟ್ರಂಪ್ ತಮ್ಮ ಹೊಸ ಸೇನಾ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದಾರೆ. ಟ್ರಂಪ್ ನೌಕಾ ಕಾರ್ಯಾಚರಣೆ ಘೋಷಿಸುವ ಮುನ್ನ ತಮ್ಮನ್ನು ಸಂಪರ್ಕಿಸಿಲ್ಲ, ಹಾಗೆಂದು ತಮಗೇನೂ ಅಸಮಾಧಾನ ಅಥವಾ ಕೋಪವಿಲ್ಲ ಎಂದು ಒಮನ್ ವಕ್ತಾರರು ತಿಳಿಸಿದ್ದಾರೆ.

ಇರಾನ್‌ಗೆ ಟ್ರಂಪ್ ಬಾಂಬ್ ಬೆದರಿಕೆ: ಅಮೆರಿಕ-ಇರಾನ್ ನಿಯೋಗಗಳು 14 ಅಂಶಗಳನ್ನು ಒಳಗೊಂಡ ಕದನ ವಿರಾಮ ಒಪ್ಪಂದ ಪರಿಶೀಲಿಸುತ್ತಿರುವ ಸಂದರ್ಭದಲ್ಲೇ ಇರಾನ್‌ಗೆ ಬಾಂಬ್ ದಾಳಿ ಬೆದರಿಕೆ ಹಾಕಿ ಅಧ್ಯಕ್ಷ ಟ್ರಂಪ್ ಇರಾನ್‌ಗೆ ಒತ್ತಡ ಹೇರಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ತೆರೆಯುವುದರೊಂದಿಗೆ ಯುದ್ಧ ಕೊನೆಗೊಳಿಸಲು ಒಪ್ಪಂದ ಅಂತಿಮಗೊಳ್ಳದಿದ್ದರೆ ಹೊಸ ಬಾಂಬ್ ದಾಳಿ ನಡೆಸುವುದಾಗಿ ಟ್ರಂಪ್ ಬೆದರಿಕೆ ಹಾಕಿದ್ದಾರೆ.

ಹಾರ್ಮುಜ್‌ನಲ್ಲಿ ಹಡಗುಗಳ ಸಂಚಾರಕ್ಕೆ ಅವಕಾಶ ನೀಡುವುದು ಮತ್ತು ಯುದ್ಧ ಅಂತ್ಯಗೊಳಿಸುವುದು ಎರಡೂ ಇರಾನ್ ನಿರ್ಧಾರದ ಮೇಲೆ ಅವಲಂಬಿಸಿದೆ. ಈ ಸಂದರ್ಭದಲ್ಲಿ ಇರಾನ್ ಒಪ್ಪಂದ ಅಂತಿಮಗೊಳಿಸದಿದ್ದರೆ, ಬಾಂಬ್ ದಾಳಿಯನ್ನು ಆರಂಭಿಸುತ್ತೇವೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಶಾಂತಿ ಮಾತುಕತೆಯಲ್ಲಿ ಪ್ರಗತಿ: ಟ್ರಂಪ್



ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಅಮೆರಿಕ-ಇರಾನ್ ನಡುವಿನ ಶಾಂತಿ ಮಾತುಕತೆ ಉತ್ತಮ ಪ್ರಗತಿ ಕಾಣುತ್ತಿರುವ ಹಿನ್ನೆಲೆಯಿಂದ ತಾನು ಪ್ರಾಜೆಕ್ಟ್ ಫ್ರೀಡಮ್ ಸೇನಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದ್ದಾಗಿ ಟ್ರಂಪ್ ಹೇಳಿಕೊಂಡಿದ್ದಾರೆ. ಪಾಕ್ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿರುವ ಅಮೆರಿಕ-ಇರಾನ್ ಕದನ ವಿರಾಮ ಒಪ್ಪಂದ ಮಾತುಕತೆಯಲ್ಲಿ ಸೌದಿ ಅರೇಬಿಯಾ ಸಹ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಶೀಘ್ರದಲ್ಲಿ ಒಪ್ಪಂದ ಅಂತಿಮ: ಪಾಕ್

ಅಮೆರಿಕ-ಇರಾನ್ ನಡುವೆ ಶೀಘ್ರದಲ್ಲೇ ಒಪ್ಪಂದ ಅಂತಿಮಗೊಳ್ಳಲಿದೆ ಎಂದು ಪಾಕಿಸ್ತಾನ ವಿಶ್ವಾಸ ವ್ಯಕ್ತಪಡಿಸಿದೆ. ಉಭಯ ರಾಷ್ಟ್ರಗಳ ನಿಯೋಗಗಳು ಶಾಂತಿ ಮತ್ತು ಮಾತುಕತೆಯ ಪರಿಹಾರ ಕಂಡುಕೊಳ್ಳಲಿದ್ದಾರೆಂಬ ಭರವಸೆ ನಮಗಿದೆ ಎಂದು ಪಾಕ್ ವಿದೇಶಾಂಗ ವಕ್ತಾರ ತಾಹಿರ್ ಅಂದ್ರಾಬಿ ತಿಳಿಸಿದ್ದಾರೆ.

ಸಂಪಾದಕೀಯ

ಮಮತಾ ಮೊಂಡಾಟಕ್ಕೆ ತಕ್ಕ ಶಾಸ್ತಿ



ಫಲಿತಾಂಶ ಬಂದು ಮೂರು ದಿನಗಳಾದರೂ, ಇನ್ನೂ ಮುಖ್ಯಮಂತ್ರಿಗಾದಿಗೆ ರಾಜೀನಾಮೆ ನೀಡದೇ ಮೊಂಡಾಟ ಆಡುತ್ತಿದ್ದ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿಗೆ ರಾಜ್ಯಪಾಲ ಬಿ.ಎನ್.ರವಿ ಅವರು ತಕ್ಕ ಪಾಠವನ್ನೇ ಕಲಿಸಿದ್ದಾರೆ. ಗುರುವಾರ ಸಂಜೆ ರಾಜಭವನದಿಂದ ಅಧಿಕೃತ ಪ್ರಕಟಣೆ ಹೊರಬಿದ್ದು, ಮಮತಾ ಬ್ಯಾನರ್ಜಿ ಸರ್ಕಾರವನ್ನು ವಿಸರ್ಜಿಸಲಾಗಿದೆ. ಈ ಮೂಲಕ ರಾಜ್ಯಪಾಲರೇ ಅಧಿಕೃತವಾಗಿ ಮಮತಾ ಬ್ಯಾನರ್ಜಿಯನ್ನು ಸಿಎಂ ಸ್ಥಾನದಿಂದ ಕಿತ್ತೊಗೆದಿದ್ದಾರೆ.

ಮೇ 4, ಸೋಮವಾರ ಪಶ್ಚಿಮ ಬಂಗಾಳ ಸೇರಿದಂತೆ ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ಪ್ರಕಟವಾಗಿದ್ದು, ಮಮತಾ ಬ್ಯಾನರ್ಜಿ ಅವರ ಟಿಎಂಸಿ ಹೀನಾಯವಾಗಿ ಸೋತಿತ್ತು. ಆದರೆ, ಅಂದಿನಿಂದಲೂ ಮೊಂಡಾಟ ಆಡಿಕೊಂಡು, ತಾವು ಸೋತಿಲ್ಲ, ಚುನಾವಣಾ ಆಯೋಗ ಮತ್ತು ಕೇಂದ್ರ ಸರ್ಕಾರ ಮತ ಕಳ್ಳತನ ಮಾಡಿವೆ. ಹೀಗಾಗಿ, ರಾಜೀನಾಮೆ ಕೊಡುವುದಿಲ್ಲ ಎಂದು ಹೇಳಿದ್ದರು. ಆದರೆ, ಕಾನೂನು ತಜ್ಞರು, ಸಂವಿಧಾನ ತಜ್ಞರು ಮಮತಾ ಅವರ ಈ ಮೊಂಡಾಟಕ್ಕೆ ಎದಿರೇಟು ನೀಡಿ, ಚುನಾವಣೆಯಲ್ಲಿ ಸೋತ ಮೇಲೆ ಸಿಎಂ ಸ್ಥಾನದಲ್ಲಿ ಮುಂದುವರಿಯುವುದು ತರವಲ್ಲ, ರಾಜೀನಾಮೆ ಕೊಡಬೇಕು. ಇಲ್ಲದಿದ್ದರೆ ರಾಜ್ಯಪಾಲರೇ ಕ್ರಮ ತೆಗೆದುಕೊಳ್ಳಬಹುದು ಎಂದಿದ್ದರು.

ಆದರೂ, ಈ ಮಾತುಗಳನ್ನೂ ಧಿಕ್ಕರಿಸಿದ್ದ ಮಮತಾ ಬ್ಯಾನರ್ಜಿ ತಾವು ಕೋರ್ಟ್‌ಗೆ ಹೋಗುತ್ತೇವೆ. ಅಲ್ಲಿ ಹೋರಾಟ ಮಾಡಿ ಈ ಫಲಿತಾಂಶವೇ ಅನಧಿಕೃತ ಎಂಬುದನ್ನು ಸಾಬೀತು ಮಾಡುತ್ತೇವೆ. ಅಲ್ಲಿವರೆಗೆ ರಾಜೀನಾಮೆ ಕೊಡಲ್ಲ ಎಂದೇ ಹೇಳುತ್ತಿದ್ದರು. ಈ ಎಲ್ಲ ಬೆಳವಣಿಗೆ ಗಮನಿಸುತ್ತಿದ್ದ ರಾಜಭವನ, ಗುರುವಾರ ಸಂಜೆ, ಪಶ್ಚಿಮ ಬಂಗಾಳ ವಿಧಾನಸಭೆಯನ್ನೇ ವಿಸರ್ಜನೆ ಮಾಡಿದೆ. ಇದಕ್ಕಾಗಿ ಭಾರತ ಸಂವಿಧಾನದ ಆರ್ಟಿಕಲ್ 174, ಕ್ಲಾಸ್ 2 ಮತ್ತು ಸಬ್ ಕ್ಲಾಸ್ ಬಿನಲ್ಲಿನ ಅಧಿಕಾರವನ್ನು ಬಳಸಿ ವಿಸರ್ಜಿಸಲಾಗಿದೆ ಎಂದಿದೆ. ಈಗ ಸಂವಿಧಾನದ ಪ್ರಕಾರವೇ ಮಮತಾ ಬ್ಯಾನರ್ಜಿ ಅವರನ್ನು ಹುದ್ದೆಯಿಂದ ಕಿತ್ತೊಗೆಯಲಾಗಿದೆ. ಒಂದು ವೇಳೆ ಅವರೇ ಸೋತ ಮೇಲೆ ರಾಜೀನಾಮೆ ನೀಡಿದ್ದಿದ್ದರೆ, ಈ ಸರ್ಕಾರವನ್ನು ಮುಂದಿನ ಸರ್ಕಾರ ರಚನೆಯಾಗುವ ವರೆಗೆ ಹಂಗಾಮಿಯಾಗಿ ಕಾರ್ಯನಿರ್ವಹಿಸಿ ಎಂದು ರಾಜ್ಯಪಾಲರೇ ಹೇಳುತ್ತಿದ್ದರು. ಆದರೆ, ಈ ಪ್ರಕರಣದಲ್ಲಿ ವಿಸರ್ಜನೆ ಮಾಡಿರುವುದರಿಂದ ಕೇರ್‌ಟೇಕರ್ ಆಗಿಯೂ ಮಮತಾ ಕಾರ್ಯನಿರ್ವಹಿಸಬಹುದೇ ಎಂಬ ಪ್ರಶ್ನೆಗಳು ಉದ್ಭವವಾಗಿವೆ.

ವಿಚಿತ್ರವೆಂದರೆ, ಭಾರತದ ಇತಿಹಾಸದಲ್ಲೇ ಇಂಥ ಘಟನೆಗಳು ನಡೆದಿರುವುದು ಅತೀ ವಿರಳ. ಒಂದು ವೇಳೆ ಇದುವರೆಗೆ ಆಗಿಯೇ ಇಲ್ಲ ಎನ್ನಬಹುದು. ಆದರೆ, ಮಮತಾ ಬ್ಯಾನರ್ಜಿ ನಡೆ, ಸಂವಿಧಾನ ತಜ್ಞರ ಕಡೆಯಿಂದಲೇ ಖಂಡನೆಗೊಳಪಟ್ಟಿತ್ತು. ಇನ್ನು ಕಾಂಗ್ರೆಸ್, ಎಸ್‌ಪಿ ಸೇರಿದಂತೆ ಕೆಲವು ವಿಪಕ್ಷಗಳು ಸಾಂವಿಧಾನಿಕ ವಿಚಾರವನ್ನೇ ತಮಗೆ ಬೇಕಾದಂತೆ ಬಳಸಿಕೊಳ್ಳಲು ಪ್ರಯತ್ನಿಸಿದ್ದೂ ವಿಚಿತ್ರ. ತಮಿಳುನಾಡಿನಲ್ಲಿ ವಿಜಯ್‌ಗೆ ಸರಳ ಬಹುಮತದ ಸಂಖ್ಯೆಯನ್ನಾದರೂ ತೆಗೆದುಕೊಂಡು ಬನ್ನಿ ಎಂಬ ರಾಜ್ಯಪಾಲರ ಸಲಹೆಯನ್ನೇ ಸಾಂವಿಧಾನಿಕ ವಿರೋಧಿ ಎನ್ನುವ ಇವರು, ಪಶ್ಚಿಮ ಬಂಗಾಳದ ವಿಚಾರದಲ್ಲಿ ಸೋತರೂ ಸಿಎಂ ಸ್ಥಾನದಲ್ಲಿ ಮುಂದುವರಿಯುತ್ತಿದ್ದ ಮಮತಾ ನಡೆಯನ್ನು ಸಮರ್ಥಿಸಿದ್ದಾರೆ. ಆದರೆ, ಸಂವಿಧಾನ ಇವರಿಗೆ ಬೇಕಾದಂತೆ ಬದಲಾಗುತ್ತದೆಯೇ ಎಂಬ ಪ್ರಶ್ನೆ ಜನರಿಂದ ಎದ್ದಿದೆ.

ಹೋನ್ಸಾ-ಇಂಧನ್-ಬದ್ಲಾ ಮತ್ತು ಬಂಗಾಳ!

ಉಘೇ ವೀರಭೂಮಿಗೆ
• ಸಂತೋಷ್ ತಮ್ಮಯ್ಯ
santoshthammaiah@gmail.com



ಬಹುತೇಕ ರಾಜಕೀಯ ವಿಶ್ಲೇಷಣೆಗಳು ಅಸಹಜವಾಗಿರುತ್ತವೆ, ವಿಚಿತ್ರವಾಗಿ ಮಂಡನೆಯಾಗಿರುತ್ತವೆ. ಏಕೆಂದರೆ ವಾಸ್ತವಕ್ಕೆ ದೂರವಾದ, ತರ್ಕರಹಿತವಾದ, ಪೂರ್ವಗ್ರಹಪೀಡಿತ ವಿಶ್ಲೇಷಣೆಗಳಿಗೆ ಹೆಚ್ಚಿನ ಮಾರುಕಟ್ಟೆ ಮೌಲ್ಯವಿರುತ್ತವೆ! ಪಂಚರಾಜ್ಯ ಚುನಾವಣೆಯ ಎಕ್ಸಿಟ್‌ಪೋಲ್‌ಗಳು ಹೇಗಿದ್ದವೋ ಹಾಗೆ. ಚುನಾವಣಾ ಫಲಿತಾಂಶಗಳನ್ನು ಒಂದು ಅಂದಾಜಿನ ಮೇಲಾದರೂ ಊಹಿಸಬಹುದು. ಇನ್ನುಳಿದ ಸಂಗತಿಗಳನ್ನು ನಿರ್ಧರಿಸಲು ಆಯಾ ಪಕ್ಷಗಳಿಗೆ ಅವುಗಳದ್ದೇ ಆದ ರೀತಿರಿವಾಜುಗಳು, ಮಾರ್ಗಗಳಿರುತ್ತವೆ. ದೂರದಲ್ಲಿ ನಿಂತು ಅವುಗಳನ್ನು ಗೋಚರಿಸಿದ್ದಷ್ಟು, ಅಂದಾಜಿಸಿದಷ್ಟು ಮಾತ್ರ ಹೇಳಬಹುದು. ಅದಕ್ಕಿಂತ ಹೊರತಾಗಿ ರಾಜಕೀಯದಲ್ಲಿ ಭವಿಷ್ಯವನ್ನು ನಿರ್ಧರಿಸುವ ಜ್ಯೋತಿಷ್ಯಶಾಸ್ತ್ರ ಸಾಧ್ಯವಿಲ್ಲ. ಆದರೆ ವಿಶ್ಲೇಷಣೆಗಳ ಹೆಸರಲ್ಲಿ ಅದು ಕೂಡ ನಡೆಯುತ್ತಿದೆ! ಪಶ್ಚಿಮ ಬಂಗಾಳದ ಅಭೂತಪೂರ್ವ ಗೆಲುವನ್ನು ಕೆಲವರು ವಿಶ್ಲೇಷಿಸುವ ಬಗೆ ಹಾಗಿದೆ. ಬಂಗಾಳದಲ್ಲಿನ್ನು ಬಿಜೆಪಿಗೆ ತೃಣಮೂಲ ಕಾರ್ಯಕರ್ತರು ಗುರಿಯಾಗಲಿದ್ದಾರೆ, ಹಿಂಸಾಚಾರ ಹೆಚ್ಚಲಿದೆ, ಬಂಗಾಳಿಗಳೆಂದರೆ ಗಲಾಟೆ-ಗಲಭೆಗಳಿಲ್ಲದೆ ಬದುಕಲಾರದವರು ಮುಂತಾದ ಮಾತುಗಳು ಶುರುವಾಗಿವೆ. ಇಂಥ ಅಭಿಪ್ರಾಯ ಅನೇಕರಲ್ಲಿ ಎಷ್ಟು ಅಟ್ರೋತ್ತಿದೆಯೆಂದರೆ 'ಇನ್ನು ಹೊಡೆಯುವ ಪಾಳಿ ಬಿಜೆಪಿಯದ್ದು' ಎನ್ನುವಷ್ಟು! ಆದರೆ ಬಿಜೆಪಿ ಗೆದ್ದಿದ್ದು ಅದಕ್ಕೆಯೇ? ಅಸಲಿಗೆ ಬಂಗಾಳಿಗರು ಈ ಪರಿಯಲ್ಲಿ ಬಿಜೆಪಿಗೆ ವೋಟು ಹಾಕಿದ್ದೇ ಭಯಾನಕ ವಾತಾವರಣದಿಂದ ಹೊರಬರಬೇಕೆಂದು. ಅಂಥಲ್ಲಿ ಮತ್ತೆ ಹಿಂಸಾಚಾರದ ನಿರೀಕ್ಷೆ...? ಅಷ್ಟಕ್ಕೂ ಯಾವ ಆಧಾರದಲ್ಲಿ ಇಂಥ ವಿಶ್ಲೇಷಣೆಗಳು ಹೊರಬರುತ್ತಿವೆ?

ಸರ್ಕಾರವಿನ್ನೂ ರಚನೆಯಾಗಿಲ್ಲ, ಅಷ್ಟರಲ್ಲೇ ತೃಣಮೂಲ ಕಾಂಗ್ರೆಸಿನ ಅಸಹನೆ ಆರಂಭವಾಗಿದೆ. ಕೆಲವೆಡೆ ಬಿಜೆಪಿ ಕಾರ್ಯಕರ್ತರು ತಿರುಗಿಬಿದ್ದಿದ್ದೂ ನಿಜವೇ. ಅರೆಶತಮಾನದ ಗೂಂಡಾಗಿರಿಯ ಆಡಳಿತವಿದ್ದ ರಾಜ್ಯದಲ್ಲಿ ಇವು ಸಾಮಾನ್ಯ. ಸುವೇಂಧು ಅಧಿಕಾರಿಯ ಆಪ್ತ ಕಾರ್ಯದರ್ಶಿಯ ಹತ್ಯೆ, ರಾಜ್‌ಗಂಜ್, ಸಿಲಿಗುರಿ, ಪರಗಣ ಜಿಲ್ಲೆಗಳಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಹತ್ತಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಅದು ಸೋತರೂ ನಾವು ಹೀಗೇಯೇ ಇರುತ್ತೇವೆ ಎಂಬ ತೃಣಮೂಲದ ಚಾಯಮಾನವೇ ಹೊರತು, ಇದಕ್ಕೆಲ್ಲಾ ಅವರದ್ದೇ ಭಾಷೆಯಲ್ಲಿ ಉತ್ತರ ನೀಡುತ್ತೇವೆ ಎನ್ನಲು ಗೆದ್ದವರೇನೂ ಕಮ್ಯುನಿಸ್ಟರಲ್ಲ! ಚುನಾವಣೆಯ ನಂತರ ನಡೆದ ಇಂಥ ಪ್ರಕರಣಗಳು ಬಿಜೆಪಿ ಕಾರ್ಯಕರ್ತನ ತ್ಯಾಗ-ಬಲಿದಾನಕ್ಕೆ ಮತ್ತೊಂದು ಸೇರ್ಪಡೆ ಎಂದು ಪಕ್ಷ ಹೇಳಿಕೊಂಡಿದೆ. ಮುಂದೆ ನಾಲ್ಕು ಎನ್‌ಕೌಂಟರ್‌ಗಳ ನಂತರ ಇವು ಸಹಜವಾಗಿ ಕಡಿಮೆಯಾಗುತ್ತವೆ. ಆದರೆ ಬಿಜೆಪಿಯ ವಿಜಯದ ನಂತರ ಪ.ಬಂಗಾಳ ಹಿಂಸಾಚಾರಕ್ಕೆ ಸಜ್ಜಾಗಿದೆ ಎನ್ನುವ ವಾದ ಬಿಜೆಪಿಯ ವಿರುದ್ಧ ಹಿಂದಿನಿಂದಲೂ ಝಳಪಿಸುತ್ತಿರುವ ತುಕ್ಕುಹಿಡಿದ ಒಂದು ಕತ್ತಿ ಎನ್ನುವುದನ್ನು ಮರೆಯಬಾರದು. ವಿಚಿತ್ರವೆಂದರೆ ಅಂದು 2021ರ ಚುನಾವಣೆಯಲ್ಲಿ ನಡೆದ ಘಟನೆಗಳನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ, ಯಾವ ರಾಷ್ಟ್ರೀಯ ಮಾಧ್ಯಮಗಳೂ ಅದರ ಬಗ್ಗೆ ವಿಶೇಷ ಕಾರ್ಯಕ್ರಮ ಮಾಡಲಿಲ್ಲ, ಅಷ್ಟೇ ಏಕೆ? ಮೊನ್ನೆಯವರೆಗೆ ಪಶ್ಚಿಮ ಬಂಗಾಳದಲ್ಲಿ ಕಾನೂನು ವ್ಯವಸ್ಥೆ ಹೇಗಿತ್ತು ಎನ್ನುವುದನ್ನು ಚರ್ಚಿಸಿರಲಿಲ್ಲ. 2021ರ ಚುನಾವಣೆಯ ನಂತರ ಬಂಗಾಳದ ಅದೆಷ್ಟೋ ಹಳ್ಳಿಗಳ ಜನರು ಪ್ರಾಣರಕ್ಷಣೆಗಾಗಿ ಅಸ್ಸಾಮಿಗೆ ಪಲಾಯನ ಮಾಡಿದ ಸಂಗತಿ ಪ್ರಜಾಪ್ರಭುತ್ವವನ್ನೇ ಅಣಕಿಸುವಂತಿದ್ದರೂ ಯಾವ ಚಿಂತಕನೂ ಅದರ ಬಗ್ಗೆ ಚಕಾರವೆತ್ತಲಿಲ್ಲ. ನಡೆದ ಅವೆಷ್ಟೋ ಅತ್ಯಾಚಾರ ಪ್ರಕರಣಗಳಿಗೆ ಇಂದಿಗೂ ನ್ಯಾಯ ಸಿಕ್ಕಿಲ್ಲ, ಎಷ್ಟೋ ಊರುಗಳಲ್ಲಿ ಬಿಜೆಪಿ ಕಾರ್ಯಕರ್ತ ಎಂಬ ಒಂದೇ ಕಾರಣಕ್ಕೆ ಬೆಳೆದುನಿಂತ ಬೆಳೆಗಳಿಗೆ ಪೆಟ್ರೋಲ್ ಹಾಕಿ ಸುಡಲಾಯಿತು. 2ಸಾವಿರ ಮನೆಗಳಿಗೆ ಬೆಂಕಿಯಿಡಲಾಯಿತು. ಈ ಸುದ್ದಿ ಜಿಲ್ಲಾ ಕೇಂದ್ರಕ್ಕೂ ಮುಟ್ಟಲಿಲ್ಲ. ಆ ಚುನಾವಣೆಯ ನಂತರ ಸಿಬಿಐ ದಾಖಲಿಸಿಕೊಂಡ ಕ್ರಿಮಿನಲ್ ಪ್ರಕರಣಗಳ ಸಂಖ್ಯೆಯೇ 650. ಬಂಧಿತ ತೃಣಮೂಲ ಕಾಂಗ್ರೆಸಿಗರ ಸಂಖ್ಯೆ 6000ಕ್ಕೂ ಹೆಚ್ಚು! ಕೇವಲ ಬಿಜೆಪಿಯ ಧ್ವಜ ಹಿಡಿದ ಒಂದೇ ಕಾರಣಕ್ಕೆ ಅಂದು ಕೊಲೆಗಳಾದವು ಎಂದರೆ ಅಲ್ಲಿ ಪ್ರಜಾಪ್ರಭುತ್ವ ಎನ್ನುವುದು ಇತ್ತು ಎನ್ನಲಾಗುವುದಿಲ್ಲ. ಸೋತು ಸುಣ್ಣವಾದ ಮೇಲೂ ತಾನು ರಾಜೀನಾಮೆ ನಿಡಲಾರೆ ಎಂದು ಅಬ್ಬರಿಸುವ ಮುಖ್ಯಮಂತ್ರಿಯ ರಾಜ್ಯದಲ್ಲಿ ಇಂಥವು ನಡೆಯುತ್ತಿತ್ತೆಂದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಇವೆಲ್ಲವೂ ಯಾವ ಪರಿಯಲ್ಲಿ ಸುದ್ದಿಯಾಗಬೇಕಿತ್ತು? ಮಾಧ್ಯಮಗಳು ಮಾತ್ರ ಅಲ್ಲ, National Crime Records Bureau (NCRB)ವರದಿಗಳೂ ಕೂಡ ತಮಾಷೆ ಮಾಡುತ್ತವೆ. ಅದರ ಪ್ರಕಾರ 2018ರಲ್ಲಿ ದೇಶದಲ್ಲಿ ನಡೆದ ರಾಜಕೀಯ ಹತ್ಯೆಗಳು ಕೇವಲ 18. ಅದರಲ್ಲಿ 12 ಪಶ್ಚಿಮ ಬಂಗಾಳದಲ್ಲಿ ನಡೆದವು. 2019ರಲ್ಲಿ ದೇಶದಲ್ಲಿ 72 ರಾಜಕೀಯ ಹತ್ಯೆಗಳಾಗಿದ್ದರೆ ಅದರಲ್ಲಿ 13 ಪಶ್ಚಿಮ ಬಂಗಾಳದಲ್ಲಿ ನಡೆದವು. 2020ರಲ್ಲಿ ಪಶ್ಚಿಮ ಬಂಗಾಳದಲ್ಲಿ 663 ರಾಜಕೀಯ ಗಲಭೆಗಳು ನಡೆದಿವೆ ಮತ್ತು ಅದರಲ್ಲಿ 57 ಸಾವುಗಳಾಗಿವೆ. 2019ರ ಚುನಾವಣೆಯಲ್ಲಿ ರಾಜ್ಯದಲ್ಲಿ 693 ಗಲಭೆಗಳು ಮತ್ತು 11 ಸಾವುಗಳಾಗಿವೆ ಎಂದು ವರದಿ ಹೇಳುತ್ತದೆ. ಅಂದರೆ ಅಂಕೆಸಂಖ್ಯೆಗಳೂ ಕೂಡ ಮಮತಾ ಬ್ಯಾನರ್ಜಿ ಎಂಬ ಭಯಾನಕ ಹೆಣ್ಣಿಗೆ ಹೆದರಿ ಸತ್ಯವನ್ನು ಮುಚ್ಚಿಟ್ಟುಕೊಂಡಿದೆ. ಸರ್ಕಾರಿ ಪ್ರಾಯೋಜಿತ ಗಲಭೆ ಮತ್ತು ಕೊಲೆಗಳು ರೆಕಾರ್ಡ್ ರೂಮಿನೊಳಗೆ ಹೋಗುವುದಾದರೂ ಹೇಗೆ?

ಬಿಜೆಪಿಯ ಗೆಲುವನ್ನು ಹೆದ್ದರೆ, ಸುನಾಮಿ ಎಂದು ಬಣ್ಣಿಸುವ ಭರದಲ್ಲಿ ಬಿಜೆಪಿಯು ಸೇಡಿನ ದಾರಿಯಲ್ಲಿ ಸಾಗುತ್ತದೆ, ಪ್ರತಿಕಾರ ಆರಂಭವಾಗುತ್ತದೆ ಎಂದು ಧುರಂಧರ ಸಿನೆಮಾದಂತೆ ಮಾಡುವ ವಿಶ್ಲೇಷಣೆಯನ್ನು ಪ್ರಪಗಾಂಡಾ ಎನ್ನದೆ ಬೇರೇನೂ ಹೇಳಲಾಗುವುದಿಲ್ಲ. ದಶಕಗಳ ಕಾಲ ಹೊಡೆತ ತಿಂದವರೆಲ್ಲರೂ ಧುರಂಧರರೇ ಆಗಬೇಕಿಲ್ಲ. ಎಲ್ಲಾ ರಾಜಕೀಯ ಹಿಂಸಾಚಾರಗಳನ್ನು ಒಂದೇ ಕೋನದಿಂದ ವಿಮರ್ಶಿಸುವುದು ಕೂಡ ಸರಿಯಾದ ಕ್ರಮವಲ್ಲ. ಪಕ್ಷಗಳ ಸಿದ್ಧಾಂತಗಳ ಬೇರುಗಳನ್ನೂ ಪರಿಗಣಿಸಬೇಕಾಗುತ್ತದೆ. ಉದಾಹರಣೆಗೆ ಬಿಜೆಪಿ ಹಿಂಸೆಯಲ್ಲಿ ನಂಬಿಕೆಯಿಟ್ಟ ಪಕ್ಷವಲ್ಲ. ಯಾವ ಚುನಾವಣೆಯನ್ನೂ ಅದು ಹಿಂಸೆಯಿಂದ ನಡೆಸಿದ ಉದಾಹರಣೆಗಳಿಲ್ಲ. ಬಿಜೆಪಿಯ ಸಿದ್ಧಾಂತದಲ್ಲಿ ಅದಕ್ಕೆ ಅವಕಾಶವಿಲ್ಲ. ಕಾಂಗ್ರೆಸ್ ಸಿದ್ಧಾಂತ ಕೂಡ ಗಾಂಧಿ ತತ್ತ್ವದ ಮಾತಾಡುತ್ತದೆಯಾದರೂ ನೈತಿಕ ರಾಜಕಾರಣ ಮಾಡುತ್ತಿಲ್ಲ. ಆದರೆ ರಾಜಕೀಯ ಹತ್ಯೆಗಳ ವಿಷಯದಲ್ಲಿ ಅದಿನ್ನೂ ಕಮ್ಯುನಿಸ್ಟರ ಹಾದಿಯನ್ನು ಹಿಡಿದಿಲ್ಲ. ಆದರೆ ಕಮ್ಯುನಿಸ್ಟ್ ಸಿದ್ಧಾಂತದ ಪ್ರಣಾಳಿಕೆಯಲ್ಲೇ ಹೊಡಿಬಡಿತನವಿದೆ. ಹಿಂಸೆಯನ್ನು ಅದು ಕ್ರಾಂತಿಯ ಹೆಸರಿನಲ್ಲಿ ಪ್ರಚೋದಿಸುತ್ತದೆ. ಗಲಭೆಗಳು ಯಾವತ್ತೂ ಕಮ್ಯುನಿಸ್ಟರಿಗೆ ಮಡಿ ಎನಿಸಿಲ್ಲ. ಕೊಲೆಗಾರರನ್ನು ಪದಾಧಿಕಾರಿಗಳನ್ನಾಗಿ ಮಾಡುವುದು ಕಮ್ಯುನಿಸ್ಟರಿಗೇನೂ ಮುಜುಗರ ತರುವ ಸಂಗತಿಯಲ್ಲ. ಇವೆಲ್ಲವನ್ನೂ ತೃಣಮೂಲ ಕಾಂಗ್ರೆಸ್ ಕಮ್ಯುನಿಸ್ಟರಿಂದ ಅನಾಮತ್ತಾಗಿ ಬಳುವಳಿ ಪಡೆದುಕೊಂಡಿದೆ ಮತ್ತು ಕಮ್ಯುನಿಸ್ಟರಿಗಿಂತ ತೀವ್ರವಾಗಿ ಪ್ರಯೋಗಕ್ಕೂ ತಂದಿದೆ. ಮುಂದಿನ ದಿನಗಳಲ್ಲಿ ಬಂಗಾಳ ಕೂಡ ಹಳೆಯ ಕೇರಳವಾಗಬಹುದು ಎನ್ನುವವರು ಇದನ್ನು ಗಮನಿಸಬೇಕು.

ಬಿಜೆಪಿ ಅಧಿಕಾರಕ್ಕೆ ಬಂದ ರಾಜ್ಯಗಳಲ್ಲಿ ಕ್ರೈಂ ದರಗಳು ಗಣನೀಯವಾಗಿ ಕಡಿಮೆಯಾಗುತ್ತವೆ. ಒಂದು ಕಾಲದಲ್ಲಿ ಗೂಂಡಾ ರಾಜ್ಯವಾಗಿದ್ದ ಬಿಹಾರ ಈಗ ಹಾಗಿಲ್ಲ. ಹಾಗೆಯೇ ಬಂಗಾಳದ ಭವಿಷ್ಯವನ್ನು ಹೇಳುವವರು ಉತ್ತರ ಪ್ರದೇಶವನ್ನು ಉಲ್ಲೇಖಿಸುತ್ತಾರೆ. ಇನ್ನು ಪ.ಬಂಗಾಳದಲ್ಲೂ ಬುಲ್ಡೋಜರ್‌ಗಳು ಸದ್ದು ಮಾಡಬಹುದು ಎನ್ನುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಗೂಂಡಾಗರ್ದಿ, ಗ್ಯಾಂಗ್ ವಾರ್ ಮತ್ತು ಮತೀಯ ಶಕ್ತಿಗಳ ಅಟ್ಟಹಾಸವನ್ನು ನಿಲ್ಲಿಸಿದ್ದು ಕಾನೂನು. ಅಲ್ಲಿ ಬುಲ್ಡೋಜರ್‌ಗಳು ಮಾಡಿದ್ದು ಕಾನೂನಿನ ಕೆಲಸವನ್ನು. ಒಂದು ವೇಳೆ ಬುಲ್ಡೋಜರುಗಳಿಗಿಂತ ಸುಲಭವಾಗಿ, ವೇಗವಾಗಿ ಆಳುಗಳು ಕಟ್ಟಡ ಒಡೆಯುವ ಕೆಲಸ ಮಾಡುವಂತಿದ್ದರೆ ಸರ್ಕಾರಿ ನೌಕರರೇ ಆ ಕೆಲಸ ಮಾಡುತ್ತಿದ್ದರು. ಮುಂದೆ ಬಂಗಾಳದಲ್ಲೂ ಕಾನೂನಿನ ಕೆಲಸವನ್ನು ಬುಲ್ಡೋಜರ್‌ಗಳು ಮಾಡಿದರೆ ತಪ್ಪೇನು? ಒಟ್ಟಾರೆ ಬಿಜೆಪಿ ಸರ್ಕಾರಗಳಿದ್ದಲ್ಲಿ ತಪ್ಪು ಹುಡುಕುವ ಕೆಲಸವನ್ನು ದೊಡ್ಡದೊಂದು ವರ್ಗ ಮಾಡುತ್ತಿದೆ. ವಿಜಯದ ನಂತರ ಸುವೇಂಧು ಅಧಿಕಾರಿ, 'ಇದು ಹಿಂದುಗಳ ವಿಜಯ' ಎಂದು ವ್ಯಾಖ್ಯಾನಿಸಿದ್ದರು. ಆದರೆ ಹಿಂದುತ್ವ ಎಲ್ಲಿ ತಾನೇ ಹಿಂಸೆಗೆ ಪ್ರಚೋದನೆ ಕೊಡುತ್ತದೆ? ಹಿಂದುತ್ವದ ವಿಜಯ ಎನ್ನುವುದರಲ್ಲೇ ಮುಂದಿನ ಬಂಗಾಳದ ಚಿತ್ರಣವೂ ಕಟ್ಟುತ್ತದೆ. ಸೌಹಾರ್ದತೆ, ಸಹಬಾಳ್ವೆ, ಒಗ್ಗೂಡಿ ಬದುಕಲು ನಿಯಮಗಳು, ಓಲೈಕೆಗೆ ಕಡಿವಾಣ, ಮುಕ್ತ ವಾತಾವರಣ ಬಂಗಾಳದಲ್ಲಿ ನಿರ್ಮಾಣವಾಗಬಹುದು. ಇವೆಲ್ಲವನ್ನೂ ಬಯಸುವವರಿಗೆ ಅಲ್ಲಿ ಒಳ್ಳೆಯ ದಿನಗಳಿದ್ದೇ ಇರುತ್ತವೆ. ಹೇಗೆ ಉತ್ತರಪ್ರದೇಶದಲ್ಲಿ ಗೂಂಡಾಗಿರಿ ವಿರೋಧಿಸುವ ಮತ್ತು ಸೌಹಾರ್ದವನ್ನು ಬಯಸುವ ಮುಸಲ್ಮಾನರಿಗೆ ಅಪಾಯವಿಲ್ಲವೋ ಹಾಗೆ ಬಂಗಾಳವೂ ಬದಲಾಗಬಹುದು. ಆದರೆ ಹಿಂದುಗಳ ವಿಜಯ ಎಂದಾಗ ಯಾಕೆ ಬೆಚ್ಚಿ ಬೀಳಬೇಕು? ಮುಂದೆ ಬಾಂಗ್ಲಾ ವಲಸಿಗರಿಗೆ ಬಂಗಾಳಕ್ಕೆ ನುಗ್ಗಲು ಕಷ್ಟವಾಗಬಹುದು. ಅದು ಭಾರತೀಯರಿಗೇನೂ ಬೇಸರ ತರುವ ಸಂಗತಿಯೇನಲ್ಲ. ತೃಣಮೂಲದ ರೌಡಿಗಳನ್ನು ಜನ ರಸ್ತೆಯಲ್ಲಿ ಅಟ್ಟಾಡಿಸಿ ಹೊಡೆದು ಪೊಲೀಸರಿಗೊಪ್ಪಿಸಬಹುದು. ಅದು ಹಿಂಸೆ ಹೇಗಾಗುತ್ತದೆ? ದಕ್ಷ ಕಾನೂನು ವ್ಯವಸ್ಥೆ ರೂಪುಗೊಂಡು ಪೊಲೀಸರೇ ಮೂಳೆ ಮುರಿಯಬಹುದು. ಮೂಳೆ ಮುರಿಸಿಕೊಂಡವ ತೃಣಮೂಲ ಕಾರ್ಯಕರ್ತನೇ ಆಗಿರಬಹುದು. ಅದು ಕಾನೂನಿನ ತಪ್ಪೇ? ಹಿಂಸೆಯೇ? ಚುನಾವಣಾ ಪ್ರಚಾರದಲ್ಲಿ ತೃಣಮೂಲ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಬಹಿರಂಗ ಸಮಾವೇಶದಲ್ಲೇ ಬಿಜೆಪಿ ಕಾರ್ಯಕರ್ತರಿಗೆ "ಮೇ ನಾಲ್ಕರ ನಂತರ ನಿಮ್ಮನ್ನು ಕಾಪಾಡಲು ದೆಹಲಿಯಿಂದ ಯಾವ ನಿಮ್ಮ ಅಪ್ಪ ಬರ್ತಾನೆ ನೋಡೋಣ" ಎಂದು ನೇರವಾಗಿ ಬೆದರಿಕೆ ಹಾಕಿದ್ದ. ಆದರೆ ಮೇ ನಾಲ್ಕರ ನಂತರ ಯಾವ ಬಿಜೆಪಿ ನಾಯಕನೂ ಅದಕ್ಕೆ ಪ್ರತಿಕ್ರಿಯಿಸಲಿಲ್ಲ. ಮನಸು ಮಾಡಿದ್ದರೆ ಅಂದು ಎಂಥೆಂಥಾ ಶೈಲಿಯ ಉತ್ತರಗಳನ್ನು ಬಿಜೆಪಿ ನೀಡಬಹುದಿತ್ತು? ಇದೇ ಬಿಜೆಪಿ ಮತ್ತು ತೃಣಮೂಲ ರಾಜಕಾರಣಕ್ಕಿರುವ ವ್ಯತ್ಯಾಸ. ಅಂದ ಹಾಗೆ ಅಭಿಷೇಕ್ ಬ್ಯಾನರ್ಜಿಗೆ ಅರ್ಥವಾಗುವಂತೆ ವೋಟು ಹಾಕಿದವರು ಉತ್ತರ ಕೊಟ್ಟರೆ ತಪ್ಪೇನಿದೆ? ಅವರು ವೋಟು ಹಾಕಿದ್ದೇ ಅದಕ್ಕೆ. ಹಿಂಸೆಯ ಬಂಗಾಳ ಇನ್ನು ಸಾಕು ಎಂದು ವೋಟು ಹಾಕಿದವರಿಗೆ ಉತ್ತರ ಕೊಡುವ ರೀತಿಯೂ ತಿಳಿದಿರುತ್ತದೆ, ಕೊಡಲಿ.

ಕಾರಂತರ ಮಕ್ಕಳ ನೆನಪಿನ ಕೋಶ 'ಕಾರಂತರ ಸುಳಿಯಲ್ಲಿ'

▸ ಕೋಟ ಶ್ರೀನಿವಾಸ ಪೂಜಾರಿ
ಸಂಸದರು, ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ




ಕಡಲತಡಿಯ ಭಾರ್ಗವ, ನನ್ನೂರ ಶಿವರಾಮ ಕಾರಂತರ ಬಗ್ಗೆ ಅವರ ಮೂವರು ಮಕ್ಕಳು ಬರೆದ 'ಕಾರಂತರ ಸುಳಿಯಲ್ಲಿ' ಪುಸ್ತಕ ಕೈ ಸೇರುತ್ತಲೇ ಹೆಚ್ಚು ಕಡಿಮೆ ಒಂದೇ ಉಸಿರಿಗೆಂಬಂತೆ ಓದಿ ಮುಗಿಸಿದ್ದೆ. ಕಾರಂತರೆಂಬ ನಡೆದಾಡುವ ವಿಶ್ವಕೋಶ ಗತಿಸಿ 30 ವರ್ಷಗಳ ನಂತರ ಕಾರಂತರ ಮಕ್ಕಳು ತಮ್ಮ ಒಡಲ ನುಡಿಗೆ ಅಕ್ಷರದ ರೂಪ ನೀಡುತ್ತಿರುವುದೇ ಅಚ್ಚರಿ. ಅಗತ್ಯ-ಅನಗತ್ಯಗಳ ಚರ್ಚೆ ಏನೇ ಇದ್ದರೂ ಕಾರಂತರ ಮಕ್ಕಳಾದ ಉಲ್ಲಾಸ ಕಾರಂತರಾಗಲಿ, ಕ್ಷಮಾ, ಮಾಳವಿಕರಾಗಲಿ ಸಮಾಜದಲ್ಲಿ ಅವರವರದೇ ಸ್ಥಾನಮಾನ ಪಡೆದವರು ಮತ್ತು ತಾತನ ಹೆಸರನ್ನು ಎಂದೂ ಸ್ವಾರ್ಥಕ್ಕಾಗಲಿ, ಸಾಮಾಜಿಕ ಗೌರವಕ್ಕಾಗಲಿ ಬಳಸಿಕೊಂಡವರಲ್ಲ. ತಂದೆಯ ಹೆಸರನ್ನು ಶಾಶ್ವತವಾಗಿ ಇರಿಸಬೇಕೆಂಬ ಕಾರಣಕ್ಕೆ ಯಾವ ಸರಕಾರದ ಎದುರೂ ಕೈಚಾಚಿ ಸಹಾಯ ಕೋರಿದವರಲ್ಲ. ಇದೀಗ ಸರಿಸುಮಾರು ಮೂರು ದಶಕದ ನಂತರ ತಂದೆ ಕಾರಂತ, ತಾಯಿ ಲೀಲಮ್ಮನವರು ಬದುಕಿದ್ದ ಕ್ಷಣಗಳನ್ನು ದಾಖಲಿಸಿದ್ದೇ ಅಕ್ಷರ ಲೋಕಕ್ಕೊಂದು ವಿಸ್ಮಯ. ಕಾರಂತರೆಂಬ ಅಲೆಮಾರಿಯನ್ನು ಮದುವೆಯಾಗಿ ಆ ಏಕಾಂಗಿಯ ಬದುಕಿಗೆ ಸಂತೋಷ ಮತ್ತು ಸೌಂದರ್ಯ ತುಂಬಿದವರು ಲೀಲಮ್ಮ ಎಂದು ಗಿರಿಜಾ ಕುಲಾಲ್ ಎಂಬ ಟೀಚರ್‌ರವರ ನೆನಪು ಬೆಚ್ಚನೆಯ ಅನುಭವ ಕೊಟ್ಟರೆ, "ನಾನು ಕಾರಂತರನ್ನು ಮದುವೆಯಾದ ಮೇಲೂ ಒಂದು ವರ್ಷ ಮಂಗಳೂರಿನ ಬೆಸೆಂಟ್ ಸ್ಕೂಲ್‌ನ ಹಾಸ್ಟೆಲಲ್ಲಿ ಉಳಿದುಕೊಂಡಿದ್ದೆ. ವಾರಾಂತ್ಯದಲ್ಲಿ ಕಾರಂತರು ಬಂದು ನನ್ನನ್ನು ಭೇಟಿ ಮಾಡುತ್ತಿದ್ದರು. ಆ ಕೆಲ ಕ್ಷಣದ ಭೇಟಿಗಾಗಿ ನಾನು ವಾರವಿಡಿ ಕಾಯುತ್ತಿದ್ದೆ. ಹೊರಡುವ ಮುನ್ನ ನಿನಗೆ ಹಣ ಬೇಕಾ.. ಎಂದು ಕೇಳುವುದು ಕಾರಂತರ ರೂಢಿ. ಬೇಕು, ಬೇಡ ಅನ್ನುವ ಮುನ್ನ ಉದ್ದ ಜುಬ್ಬದ ಆಳವಾದ ಕಿಸೆಯೊಳಗೆ ಬಲಗೈ ತೂರಿ ತಡಕಾಡಿ ಒಂದಷ್ಟು ನಾಣ್ಯಗಳನ್ನು ನನ್ನ ಬೊಗಸೆಗೆ ಸುರಿಯುತ್ತಿದ್ದರು. ನನ್ನ ಬೊಗಸೆಗೆ ಹಾಕಿದ ನಾಣ್ಯ ಕೆಳಗೆ ಬೀಳದಂತೆ ಹುಷಾರಾಗಿ ಹಿಡಿದುಕೊಳ್ಳುತ್ತಿದ್ದೆ. ನನ್ನ ಗಂಡ ಕೊಟ್ಟ ಹಣ ಹೇಗೆ ಲೆಕ್ಕ ಹಾಕಿದರೂ ಒಟ್ಟು ಎಂಟಾಣೆ ಮೀರಿದ ನೆನಪಿಲ್ಲ, ಆದರೆ ಇಷ್ಟು ಹಣ ಹೊರ ತೆಗೆಯಲು ಅವರು ಜುಬ್ಬಾದ ಆಳವಾದ ಕಿಸೆಯೊಳಗೆ ನಡೆಸುತ್ತಿದ್ದ ಗಣಿಗಾರಿಕೆ ನನಗೆ ತಮಾಷೆ ಎನಿಸುತ್ತಿತ್ತು. ಆದರೊಂದಿಗೆ ಅವರ ಆರ್ಥಿಕ ಪರಿಸ್ಥಿತಿ ನನಗೆ ನೋವುಂಟು ಮಾಡಿತ್ತು" ಎಂಬ ಲೀಲಮ್ಮನ ಮಾತುಗಳ ಕುರಿತು ಮಕ್ಕಳು ಬರೆದ ವಿವರಣೆ ಮನ ತುಂಬುತ್ತದೆ. ಕಾರಂತರ ಮಗಳು ಮಾಳವಿಕಾ ಹೇಳುತ್ತಾರೆ, "ಜ್ಞಾನಪೀಠ ಪ್ರಶಸ್ತಿ ಬಂದ ನಂತರದ ಸಂಭ್ರಮದ ದಿನಗಳಲ್ಲಿ ನಿನಗೇನು ಬೇಕು ಮಾಲು.. ಎಂದು ತಾತಾ ಕೇಳಿದ್ದರು. ನಿಮ್ಮ ಹಳೆಯ ತಂಬೂರಿ ಕೊಡಿ ಎಂದಿದ್ದೆ. ಕೆಲ ವರ್ಷಗಳ ನಂತರ ನನ್ನ ತಾತ ಜ್ಞಾನಪೀಠ ಪ್ರಶಸ್ತಿಯ ಮುಖ್ಯ ಭಾಗವನ್ನು ನನಗೆ ಉಡುಗೊರೆಯಾಗಿ ಕೊಟ್ಟಿದ್ದರು. ಅದೇ ವಾಗ್ದೇವಿಯ ಸುಂದರ ಕಂಚಿನ ಪ್ರತಿಮೆ. ಪ್ರಶಸ್ತಿಯ ಸ್ಮರಣ ಪತ್ರವನ್ನು ಉಲ್ಲಾಸನಿಗೆ ನೀಡಿದ್ದರು. ನಂತರದ ದಿನಗಳಲ್ಲಿ ಕರ್ನಾಟಕ ಸರಕಾರ ಬಾಲ ಭವನವನ್ನು ಕಾರಂತರ ನೆನಪಿನ ಮ್ಯೂಸಿಯಂ ಮಾಡಲು ಹೊರಟಾಗ ದಕ್ಷಿಣ ಕನ್ನಡದ ಜಿಲ್ಲಾಧಿಕಾರಿ ಕಾರಂತರ ನೆನಪಿನಲ್ಲಿ ಅಮೂಲ್ಯ ವಸ್ತುಗಳಿ ದ್ದರೆ ಕೊಡಿ ಎಂದಿದ್ದರು. ನಾವಿಬ್ಬರು ಮರು ಯೋಚಿಸದೆ ತಾತನ ನಂತರದ ನಮ್ಮ ಕುಟುಂಬದ ಅಮೂಲ್ಯ ಆಸ್ತಿ ಆದ ವಾಗ್ದೇವಿಯ ಪ್ರತಿಮೆ ಮತ್ತು ಜ್ಞಾನಪೀಠದ ಮೂಲ ಸ್ಮರಣ ಪತ್ರವನ್ನು ಸರಕಾರಕ್ಕೆ ಹಸ್ತಾಂತರಿಸಿದೆವು" ಆ ಮೂಲಕ ತನ್ನ ಬದುಕಿನ ಬೆಚ್ಚನೆಯ ಘಟನೆಯನ್ನು ಕಟ್ಟಿಕೊಡುತ್ತಾರೆ. ಮಕ್ಕಳ ಶಿಕ್ಷಣದ ಬಗ್ಗೆ ಕಾರಂತರ ಸ್ಪಷ್ಟ ನಿಲುವನ್ನು ಬಿತ್ತರಿಸುತ್ತಾ ಹೋಗುವಾಗ ಅಂದು ಕಾರಂತರು ಖಾರವಾಗಿ ಹೇಳಿದ "ಮಕ್ಕಳಲ್ಲಿ ಹುಟ್ಟಿನಿಂದ ಇರುವ ಕುತೂಹಲಗಳನ್ನು ಕೊಲ್ಲುವ ಕಸಾಯಿಖಾನೆಗಳೆಂದರೆ ಶಾಲೆಗಳು" ಎಂಬ ಕಾರಂತರ ಮಾತುಗಳನ್ನು ಪುಸ್ತಕದಲ್ಲಿ ಮಾಳವಿಕಾ ನವಿರಾಗಿ ನೆನಪಿಸಿದ್ದಾರೆ.

ಕಾರಂತರ ಬಗ್ಗೆ ಬಂದಿರುವ ಇನ್ನಿತರ ಪುಸ್ತಕಗಳಿಗಿಂತ 'ಕಾರಂತರ ಸುಳಿಯಲ್ಲಿ' ಭಿನ್ನವಾಗಿದೆ. ಒಮ್ಮೆ ಕಾರಂತರು ಬರೆದ 6ನೇ ತರಗತಿಯ ಪಾಠವೊಂದರ ಬಗ್ಗೆ ಒಂದು ತಂಡ ಪ್ರತಿಭಟನೆ ನಡೆಸಿತ್ತು. ನಾನಾಗ ಉಡುಪಿ ತಾಲೂಕು ಪಂಚಾಯತ್ ಸದಸ್ಯನಾಗಿದ್ದೆ. ಸಾಮಾನ್ಯ ಸಭೆಯಲ್ಲಿ ಕಾರಂತರು ಬರೆದ ಪಠ್ಯಪುಸ್ತಕ ರದ್ದು ಮಾಡುವ ನಿರ್ಣಯ ಮಂಡನೆಯಾಗಿತ್ತು. ಅದಕ್ಕೆ ಕಾರಣ ಕಾರಂತರು ಜಾತಿ ನಿಂದಿಸಿ ಬರೆದಿದ್ದರು ಎಂಬುದಾಗಿತ್ತು. ಸಭೆಯಲ್ಲಿ ಅದು ಸರ್ವಾನುಮತದ ನಿರ್ಣಯವೂ ಆಗುವುದರಲ್ಲಿತ್ತು. ಅಂದಿನ ತಾಲ್ಲೂಕು ಪಂಚಾಯತ್‌ನ ಸಭಾಧ್ಯಕ್ಷರಲ್ಲಿ ನನಗೊಂದು ನಿಮಿಷ ಮಾತನಾಡಲು ಅವಕಾಶ ಕೊಡಿ ಎಂದು ವಿನಂತಿಸಿ, ಕಾರಂತರು ನಾವೆಲ್ಲ ಹುಟ್ಟುವ ಮುಂಚೆ ಅನ್ಯ ಜಾತಿಯ ಹುಡುಗಿಯನ್ನು ಮದುವೆಯಾದವರು. ಬದುಕಿನ ಕೊನೆಯ ಹಂತದಲ್ಲಿ ಜಾತಿವಾದಿಯಾಗಲು ಸಾಧ್ಯವೇ..? ಸುತ್ತಲ ಸಮಾಜ ಈ ನಿರ್ಣಯವನ್ನು ವಿರೋಧಿಸುತ್ತದೆ. ಜ್ಞಾನಪೀಠ ಪ್ರಶಸ್ತಿ ಪಡೆದು ಈ ನಾಡಿಗೆ ಕೀರ್ತಿ ತಂದವರ ವಿರುದ್ಧ ಮಾಡುವ ನಿರ್ಣಯಕ್ಕೆ ನನ್ನ ವಿರೋಧವಿದೆ ಎಂದಿದ್ದೆ. ಬಳಿಕ ನಿರ್ಣಯ ಚರ್ಚೆಯಾಗದೇ ಮರಳಿ ಬಿಟ್ಟಿತು. ಇದೆಲ್ಲ ಯಾಕೆ ನೆನಪಾಯ್ತು ಎಂದರೆ ಕಾರಂತರ ಮಗ ಉಲ್ಲಾಸ ಬರೆಯುತ್ತಾರೆ. 1936ರಲ್ಲಿ ಲೀಲಾ ಆಳ್ವ ಎಂಬ ಬಂಟರ ಹುಡುಗಿಯನ್ನು ಕಾರಂತರೆಂಬ ಸಂಪ್ರದಾಯವಾದಿ ಯುವ ಬ್ರಾಹ್ಮಣ ಮದುವೆ ಆದಾಗ ಆಗಿರುವ ಸಾಮಾಜಿಕ ಬಿರುಗಾಳಿ ಊಹಿಸಲಸಾಧ್ಯ. ಇದು ಬಂಟ ಕುಲಕ್ಕೆ ಅಸಹ್ಯ ಎಂದು ಬಂಟ ಜಾತಿ ಭಾವಿಸಿದರೆ, ಕೆಳ ಜಾತಿಯ ಹೆಣ್ಣನ್ನು ಮದುವೆಯಾಗಿದ್ದು ಬ್ರಾಹ್ಮಣ್ಯಕ್ಕೆ ಅಪಮಾನ ಎಂದು ಕಾರಂತರ ಕುಟುಂಬ ಮತ್ತು ಅವರ ಜಾತಿ ಭಾವಿಸಿತ್ತಂತೆ. ಅಮ್ಮನ ಸೋದರಮಾವ ನನ್ನ ಕುಟುಂಬಕ್ಕಿದು ಕಳಂಕ ಎಂದು ಆಕ್ರೋಶಭರಿತ ಸಂಕಟ ಪಟ್ಟರೆ, ಉಡುಪಿಯ ಬ್ರಾಹ್ಮಣ ಪತ್ರಕರ್ತರೊಬ್ಬರು ತನ್ನ ಪತ್ರಿಕೆಯಲ್ಲಿ ಅಂದಿನ ಆಧುನಿಕ ಅಂತರ್ಜಾತಿ ಮದುವೆ ಬಗ್ಗೆ ಮಾನಹಾನಿಕಾರಕ ಲೇಖನವನ್ನೇ ಬರೆದಿದ್ದಾರಂತೆ. ರೊಚ್ಚಿಗೆದ್ದ ಕಾರಂತರು ಪತ್ರಕರ್ತರ ಮೇಲೆ ಮಾನ ನಷ್ಟದಾವೆ ಹಾಕಿದ್ದರಾದರೂ ಆ ಪುಣ್ಯಾತ್ಮ ದಂಡ ಕಟ್ಟಿ ಕ್ಷಮೆ ಕೇಳುವ ಬದಲು ತನ್ನ ಜಾತಿವಾದದ ಸಿದ್ಧಾಂತಕ್ಕೆ ಅಂಟಿಕೊಂಡು ಹಟಕ್ಕೆ ಬಿದ್ದು ನ್ಯಾಯಾಲಯ ವಿಧಿಸಿದ ಶಿಕ್ಷೆಯಂತೆ ಜೈಲು ಸೇರಿದನಂತೆ.

ಪುಸ್ತಕದ ಉದ್ದಕ್ಕೂ ಕಾರಂತರ ಮಕ್ಕಳು ತಮ್ಮದೇ ಶೈಲಿಯ ಮೂಲಕ ಗತಿಸಿದ ಘಟನೆಗಳಿಗೆ ಜೀವಂತಿಕೆಯ ಸ್ಪರ್ಶ ಕೊಟ್ಟಿದ್ದಾರೆ.

ಅಪ್ಪನ ಬಗ್ಗೆ ಬರೆಯುವ ಉಲ್ಲಾಸ್ ಕಾರಂತರ ನೆನಪಿನ ಪುಟಗಳು ಬಿಚ್ಚಿಕೊಳ್ಳುತ್ತಾ, ದಲಿತರು ಮತ್ತು ದಮನಿತರ ಪರವಾಗಿ ನಿಲ್ಲುವ ತಾತ ಸಮಾಜವಾದಿಗಳು ಮತ್ತು ಆರ್‌ಎಸ್‌ಎಸ್ ನಂತಹ ಸಂಘಟನೆಗಳಲ್ಲಿ ಸಮಾನ ಸ್ನೇಹ ಹೊಂದಿದ್ದರು ಎನ್ನುವಾಗ ನೆನಪಾಯಿತು. ಒಂದು ಸಾರಿ ಸಾಲಿಗ್ರಾಮದ ಶಿವರಾಮ ಉಡುಪರ ತಂಡ ಕಾರಂತರ ಮನೆಗೆ ಬಂದು ಅಯೋಧ್ಯೆಯ ರಾಮಜನ್ಮ ಸ್ಥಳದಲ್ಲಿ ರಾಮಮಂದಿರ ನಿರ್ಮಾಣವಾಗಬೇಕು, ಅದಕ್ಕಾಗಿ ಸಹಿ ಸಂಗ್ರಹಕ್ಕೆ ಬಂದಿದ್ದೇವೆ. ತಾವು ಸಹಿ ಹಾಕಲು ವಿನಂತಿ ಎನ್ನುತ್ತಾರೆ. ಸಹಿ ಸಂಗ್ರಹಣ ಪತ್ರಕ್ಕೆ ಸಹಿ ಹಾಕಲು ಅಣಿಯಾಗುತ್ತಿದ್ದ ಕಾರಂತರಿಗೆ ಉಡುಪರು ಅದೇನೋ ಹೇಳಲು ಹೊರಟಿದ್ದರು. ತಕ್ಷಣ ಗದರಿಸುವ ಧ್ವನಿಯಲ್ಲಿ ಕಾರಂತರು, ಮಂದಿರವಲ್ಲೇ ಕಟ್ಟಬೇಕೆಂದು ಹೇಳಿ. ಮಸೀದಿ ಕಟ್ಟುವುದು ಸರಕಾರಕ್ಕೆ ಬಿಟ್ಟಿದ್ದು ಎನ್ನುತ್ತಲೇ ಸಹಿ ಹಾಕಿದ್ದರು. ಮರುದಿನ ಪ್ರಮುಖ ಮಾಧ್ಯಮದಲ್ಲಿ ರಾಮ ಮಂದಿರಕ್ಕೆ ಕಾರಂತರ ಸಹಿ ಎಂಬ ಸುದ್ದಿ ಪ್ರಕಟವಾಗಿತ್ತು. ಪರವಿರುದ್ಧ ಚರ್ಚೆಗಳು ಬಂದಾಗ ಸ್ಪಷ್ಟನೆ ಕೊಟ್ಟ ಕಾರಂತರು, ನನ್ನ ಸ್ನೇಹಿತರು ಬಂದು ಸಹಿ ಕೇಳಿದ್ದರು. ಅದರಿಂದ ವಿವಾದಗಳೇಳುತ್ತದೆ ಎಂದು ನನಗೆ ಅನಿಸಿರಲಿಲ್ಲ, ಇತಿಹಾಸದಲ್ಲಿ ಅಪಚಾರವಾಗಬಾರದೆಂಬ ನಿಲುವಿಗೆ ನನ್ನ ಸಹಮತವಿದೆ ಎಂದು ತನ್ನ ಸಹಿ ಸಮರ್ಥಿಸಿದ್ದರು.



ಕಾರಂತರ ಪರಿಸರದ ಹುಚ್ಚಿನ ಬಗ್ಗೆ ಮಗಳು ಕ್ಷಮಾ ಬರೆಯುತ್ತಾ ಹೇಳುತ್ತಾರೆ. ಪ್ರಕೃತಿಯ ಅಂತರ್ಯ ಅರಿಯುವ ಭರದಲ್ಲಿ ಅಪ್ಪ ಕೊಡಚಾದ್ರಿಯ ಬೆಟ್ಟ ಇಳಿಯುವಾಗ ಹುಲಿಯೊಂದು ಅವರೆದುರೇ ಬಂದು ನಿಂತು ಬಿಟ್ಟಿತಂತೆ. ಹಸಿದ ಹುಲಿಯಾಗಿದ್ದರೆ ಎದುರು ನಿಂತ ಮನುಷ್ಯನನ್ನು ಹಾಗೆ ಬಿಡುತ್ತಿತ್ತೇ..? ಕೆಲ ಸೆಕೆಂಡುಗಳ ನಂತರ ಕಾರಂತರನ್ನೇ ನೋಡುತ್ತಿದ್ದ ಹುಲಿ ಸರಿದು ಹೋಯಿತಂತೆ. ಆದರೆ, ಕಾರಂತರೆಂಬ ಪ್ರಕೃತಿಪ್ರಿಯ ಹುಲಿಯ ರೌದ್ರ ಸೌಂದರ್ಯವನ್ನು ನೋಡುತ್ತಾ ಹಾಗೆ ಮೈಮರೆತು ನಿಂತು ಬಿಟ್ಟಿದ್ದರಂತೆ.

ಕಾರಂತರ ಮೂವರು ಮಕ್ಕಳು ಆರಂಭದಲ್ಲಿ ಹಾಗೂ ಅಂತ್ಯದಲ್ಲಿ ಒಟ್ಟಾಗಿ ಪೋಣಿಸಿ ಬರೆದ ಕೆಲವೆಡೆ ವೈಯಕ್ತಿಕವಾಗಿ ಬರೆದ ನೆನಪಿನ ಬುತ್ತಿಯಿಂದ ಹೆಕ್ಕಿ ತೆಗೆದ ಬರಹಗಳು ಅಲ್ಲಲ್ಲಿ ಖುಷಿ ಕೊಟ್ಟರೆ, ಕೆಲವೆಡೆ ಎಂದೂ ಕೇಳದ ಕಾರಂತರೆಂಬ ದೈತ್ಯ ಪ್ರತಿಭೆಯ ವಿವಿಧ ಮುಖಗಳ ಪರಿಚಯ ಮಾಡಿಸುತ್ತದೆ.

ಉತ್ತರ ಕರ್ನಾಟಕದಲ್ಲಿ ಕೆನರಾ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಇಚ್ಛೆ ಕಾರಂತರಿಗೇಕೆ ಬಂತು ಎಂಬುದು ಹೊರ ಪ್ರಪಂಚಕ್ಕೆ ಇನ್ನೂ ಅರ್ಥವಾಗಿಲ್ಲ. ಆದರೆ ಕಾರಂತರೆಂಬ ಜ್ಞಾನದ ಗಣಿ ಲೋಕಸಭೆಗೆ ಹೋದರೆ ಪಾರ್ಲಿಮೆಂಟಿಗೆ ಭೂಷಣ ಎಂದು ಖ್ಯಾತ ಬರಹಗಾರ ಸಂತೋಷ ಕುಮಾರ್ ಗುಲ್ವಾಡಿ ಹೇಳಿದ್ದರು. ಚುನಾವಣೆಗೆ ನಾಮಪತ್ರ ಸಲ್ಲಿಸಿದ ಕಾರಂತರು, ಪೂರ್ವ ನಿರ್ಧರಿತ ಕಾರ್ಯಕ್ರಮವಿದೆ ಎಂದು ಅಮೆರಿಕಕ್ಕೆ ಹೋಗಿದ್ದರು. ಅವರು ಮರಳಿದಾಗ ಚುನಾವಣೆ ಮುಗಿದು ಕಾರಂತರು ಸೋತಿದ್ದರು. ಸೋತ ಕಾರಂತರ ಮನೆಗೆ ಕೆಲವರು ಹೋಗಿ ಸಮಾಧಾನದ ಮಾತುಗಳನ್ನು ಆಡಿದ್ದರು. ನನಗೆ ದೇಶ ವಿದೇಶಗಳಲ್ಲಿ ಸಾವಿರಾರು ಮಂದಿ ಓದುವ ಅಭಿಮಾನಿಗಳಿದ್ದಾರೆ. ಅವರೆಲ್ಲ ಒಂದೇ ಗ್ರಾಮದಲ್ಲಿದ್ದರೆ ಬರುವ ಪಂಚಾಯತ್ ಚುನಾವಣೆಯಲ್ಲಿ ನಾನು ಗೆಲ್ಲಬಹುದು ಎನ್ನುತ್ತಾ ಬಂದವರನ್ನೇ ಕಾರಂತರು ಸಮಾಧಾನಿಸಿ ಕಳುಹಿಸಿದ್ದರು. ಬಹುಮುಖ ಪ್ರತಿಭಾವಂತರು ಎಂದು ಹೆಮ್ಮೆಯಿಂದ ಹೇಳಲು ಹೋದಾಗ ಕಾರಂತರ ಮೂವರು ಮುದ್ದಿನ ಮಕ್ಕಳು, ಕಾರಂತರ ಅಂತಿಮ ದಿನಗಳಲ್ಲಿ ಜೊತೆಗಿದ್ದ 'ಮಾ' ಬಗ್ಗೆ ಅದೇಕೇ ಬರೆದರೋ ಅರ್ಥವಾಗುತ್ತಿಲ್ಲ. ಅದು ಅವರ ಅಂತರಾಳದ ನೋವು ಇರಬಹುದು.

ಒಟ್ಟಾರೆ, ಚಿರಂಜೀವಿ ಸಿಂಗ್ ಉಲ್ಲೇಖಿಸಿದಂತೆ ಕಾರಂತರು ಅಸಾಮಾನ್ಯ ಪ್ರತಿಭೆ ಎಂಬುದು ಒಂದು ಶೇಕಡಾ ಮತ್ತು ತೊಂಬತ್ತೊಂಬತ್ತು ಶೇಕಡಾ ಪರಿಶ್ರಮದಿಂದ. ಶತಮಾನದ ಸಾಹಿತಿ ಕಾರಂತರೆಂದರೆ ಸಾಮಾನ್ಯರಲ್ಲ, ಅಸಾಮಾನ್ಯರು. 'ಗ್ರೋಯಿಂಗ್ ಅಫ್ ಕಾರಂತ' ಎಂಬ ಆಂಗ್ಲ ಭಾಷೆಯ ಪುಸ್ತಕವನ್ನು ವಿಶ್ವೇಶ್ವರ ಭಟ್ "ಕಾರಂತರ ಸುಳಿಯಲ್ಲಿ" ಕುಸುರಿ ಕೆಲಸದಂತೆ ಕನ್ನಡಕ್ಕೆ ಅನುವಾದಿಸಿದ್ದಾರೆ.

ಕಾರಂತರಿಗೆ ಕಾರಂತರೆ ಸಾಟಿ.

ವಿಜಯ್ ದ್ರಾವಿಡ ಪಕ್ಷಗಳ ಹಾದಿ ತುಳಿಯದಿರಲಿ!

ದ್ರಾವಿಡ ಸಿದ್ಧಾಂತಿಗಳು ಪ್ರತಿಪಾದಿಸುತ್ತಿರುವ ಹಿಂದು ವಿರೋಧಿ, ಹಿಂದಿ ವಿರೋಧಿ, ಉತ್ತರ ಭಾರತ ವಿರೋಧಿ, ಸಂಸ್ಕೃತ ವಿರೋಧಿ ಧೋರಣೆಗಳಿಂದ ವಿಜಯ ದೂರವಿರಬೇಕಾಗಿದೆ.

▸ ಮುರಳೀಧರ್

ಭಾರತದ ರಾಜಕಾರಣವು ಸಿನಿಮಾದೊಂದಿಗೆ ಕುತೂಹಲಕಾರಿ ನಂಟು ಹೊಂದಿದೆ. ದಕ್ಷಿಣ ಭಾರತದಲ್ಲಿ ಸಿನಿಮಾ ತಾರೆಯರು ರಾಜಕೀಯ ಪ್ರವೇಶಿ, ತಮ್ಮದೇ ಪಕ್ಷ ಸ್ಥಾಪಿಸಿ ನಾಟಕೀಯ ಫಲಿತಾಂಶಗಳನ್ನು ಸೃಷ್ಟಿಸಿದ್ದಿದೆ. ಆದರೆ ಸಿನಿಮಾ ನಟರ ರಾಜಕೀಯ ಯಶಸ್ಸು ದೀರ್ಘಾವಧಿಗೆ ಉಳಿದುದು ಕಡಿಮೆ. ರಾಜಕೀಯ ಪ್ರವೇಶಿಸಿದ ಬಹಳಷ್ಟು ಮಂದಿ ಸಿನಿಮಾ ನಟರು ಬದಿಗೆ ಬಿದ್ದು ಹೋಗಿದ್ದಾರೆ. ಕೆಲವರು ಮಾತ್ರ ದೊಡ್ಡ ಯಶಸ್ಸು ಸಾಧಿಸಿದ್ದಾರೆ.

ಅತ್ಯಂತ ಯಶಸ್ಸು ಕಂಡವರಲ್ಲಿ ಎದ್ದು ಕಾಣುವ ಹೆಸರೆಂದರೆ ಎಂ.ಜಿ. ರಾಮಚಂದ್ರನ್ ಮತ್ತು ಎನ್‌ಟಿ ರಾಮರಾವ್. ಎಂ.ಜಿ. ರಾಮಚಂದ್ರನ್ ತಮಿಳ್ನಾಡು ರಾಜಕೀಯಕ್ಕೆ ಹೊಸದೊಂದು ಸ್ವರೂಪ ನೀಡಿದವರು. ಅದೇರೀತಿ ಆಂಧ್ರಪ್ರದೇಶದಲ್ಲಿ ಎನ್‌ಟಿ ರಾಮರಾವ್ ಕೂಡಾ ರಾಜಕೀಯ ಪ್ರವೇಶಿಸಿದ ತಕ್ಷಣವೇ ಅಭೂತಪೂರ್ವ ಯಶಸ್ಸು ಕಂಡವರು.

ಇದೇವೇಳೆ, ರಾಜಕೀಯದಲ್ಲಿ ವಿಫಲರಾದ ಸಿನಿಮಾ ನಟರ ಪಟ್ಟಿಯೂ ದೊಡ್ಡದಿದೆ. ಚಿರಂಜೀವಿ ತಮ್ಮ ವರ್ಚಸ್ಸನ್ನು ರಾಜಕೀಯದಲ್ಲಿ ಮತಗಳನ್ನಾಗಿ ಪರಿವರ್ತಿಸಲು ವಿಫಲರಾದರು. ಕಮಲಹಾಸನ್ ಕೂಡಾ ತಮ್ಮ ರಾಜಕೀಯದಲ್ಲಿ ಯಶಸ್ಸು ಕಾಣಲಿಲ್ಲ. ರಜನೀಕಾಂತ್ ಕೂಡಾ ರಾಜಕೀಯ ಯಶಸ್ಸು ಕಾಣುವುದು ಸಾಧ್ಯವಾಗಲಿಲ್ಲ. ಪವನ್ ಕಲ್ಯಾಣ್ ಅಲ್ಪಸ್ವಲ್ಪ ಯಶಸ್ಸು ಕಂಡಿದ್ದಾರೆ.



ಈ ಹಿನ್ನೆಲೆಯಲ್ಲಿ ನೋಡುವಾಗ ತಮಿಳು ಚಿತ್ರನಟ ವಿಜಯ್ ಅವರ ಯಶಸ್ಸು ಗಮನಾರ್ಹವಾದುದು. ಕೇವಲ ಚಿತ್ರನಟನೆಂಬ ಜನಪ್ರಿಯತೆಗೆ ಒಲಿದ ಗೆಲುವಲ್ಲ ಇದು. ಅವರ ಯಶಸ್ಸಿನ ಹಿಂದೆ ಇನ್ನೂ ಹಲವಾರು ಅಂಶಗಳಿವೆ. ಮುಖ್ಯವಾಗಿ ಡಿಎಂಕೆ ಮುಖಂಡ ಸ್ಟಾಲಿನ್ ಸರಕಾರದ ವಿರುದ್ಧ ಜನರಲ್ಲಿ 'ಆಡಳಿತ ವಿರೋಧಿ ಭಾವನೆ' ಹೆಪ್ಪುಗಟ್ಟಿತ್ತು. ಡಿಎಂಕೆಗೆ ಪರ್ಯಾಯ ಸರಕಾರವೊಂದನ್ನು ಜನರು ಬಯಸಿದ್ದರು. ಅವರು ವಿಜಯ್‌ರನ್ನು ಆಯ್ಕೆ ಮಾಡಿಕೊಂಡರು.

ಈ ಫಲಿತಾಂಶದ ಇನ್ನೊಂದು ಮಹತ್ವದ ಅಂಶವೆಂದರೆ, ತಮಿಳ್ನಾಡು ರಾಜಕೀಯವನ್ನು ನಿಯಂತ್ರಿಸುತ್ತಿದ್ದ ದ್ರಾವಿಡ ರಾಜಕೀಯದಿಂದಲೂ ಜನರು ದೂರ ಸರಿಯಲು ಬಯಸುತ್ತಿರುವುದು. ಕಳೆದ ಕೆಲವು ದಶಕಗಳಿಂದ ದ್ರಾವಿಡ ರಾಜಕೀಯವೇ ತಮಿಳ್ನಾಡಿನ ಆಗುಹೋಗುಗಳನ್ನು ನಿಯಂತ್ರಿಸುತ್ತಿತ್ತು. ಇದು ಜನರ ಭಾವನೆ ಕೆರಳಿಸುತ್ತಿತ್ತೇ ಹೊರತು ರಾಜ್ಯದ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟಿರಲಿಲ್ಲ. ದ್ರಾವಿಡ ಅಸ್ಮಿತೆಯ ಹೆಸರಿನಲ್ಲಿ ಸನಾತನ ಧರ್ಮ ವಿರೋಧಿ, ಹಿಂದಿ ವಿರೋಧಿ ಭಾವನೆ ಕೆರಳಿಸಲಾಗುತ್ತಿತ್ತು. ಉತ್ತರ ಭಾರತದ ಕುರಿತಂತೆಯೂ ದ್ವೇಷ ಭಾವನೆ ಬಿತ್ತಲಾಗುತ್ತಿತ್ತು. ಸಾಮಾಜಿಕ ನ್ಯಾಯದ ಕುರಿತಾಗಿ ಆರಂಭಗೊಂಡ ಆಂದೋಲನವೊಂದು ಬಳಿಕ ರಾಜಕೀಯ ಸಿದ್ಧಾಂತವಾಗಿ ಮಾರ್ಪಟ್ಟಿತ್ತು. ಸಮಯ ಕಳೆದಂತೆ ಈ ಸಿದ್ಧಾಂತವೊಂದು ಕರ್ಮಠ ಹವ್ಯಾಸವಾಗಿ ಬದಲಾಗಿತ್ತು.

ರಾಜಕೀಯದಲ್ಲಿ ಇಂತಹ ಹವ್ಯಾಸಗಳು ಜನರು ರೋಸಿ ಹೋಗುವಂತೆ ಮಾಡುತ್ತದೆ. ಈಗ ದ್ರಾವಿಡ ಸಿದ್ಧಾಂತವು ಪತನಗೊಳ್ಳುತ್ತಿರುವುದಷ್ಟೇ ಅಲ್ಲ, ಅದು ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಈಗಿನ ನಾಯಕರು ವರ್ಚಸ್ಸನ್ನು ಕಳಕೊಂಡಿದ್ದಾರೆ. ಸೈದ್ಧಾಂತಿಕ ಮೇಲ್ಮೈಯು ದುರ್ಬಲವಾಗಿದೆ. ಮುಖಂಡರ ಮಾತುಗಳು ಕ್ಲೀಷೆಯಾಗುತ್ತಿವೆ.

ಇಂತಹ ಸಂದರ್ಭದಲ್ಲಿ ಹೊಸ ಮುಖವಾಗಿ ವಿಜಯ್ ರಾಜಕೀಯ ಪ್ರವೇಶಿಸಿದ್ದಾರೆ. ಅವರು ಈ ಪರಿಸ್ಥಿತಿಯನ್ನು ಬದಲಿಸಬಲ್ಲರೆ? ಅಥವಾ ಅದರೊಳಗೆ ತಾವೂ ಒಂದಾಗುತ್ತಾರೆಯೆ? ಈ ನಿಟ್ಟಿನಲ್ಲಿ ಇತಿಹಾಸ ನೀಡುವ ಎಚ್ಚರಿಕೆಯನ್ನು ಅವರು ಗಮನಿಸಬೇಕಾಗಿದೆ.

ಮಮತಾ ಬ್ಯಾನರ್ಜಿಯ ಉದಾಹರಣೆ ನೋಡಿ. ಪಶ್ಚಿಮ ಬಂಗಾಳದಲ್ಲಿ ಬದಲಾವಣೆ ತರುವ ಆಶ್ವಾಸನೆಯೊಂದಿಗೆ ಅವರು ಎಡಪಕ್ಷಗಳಿಗೆ ಸವಾಲೊಡ್ಡಿದರು. ಆದರೆ ಅಧಿಕಾರಕ್ಕೆ ಬಂದ ಬಳಿಕ ಅವರು ಹಳೆಯ ವ್ಯವಸ್ಥೆಯನ್ನು ಬದಲಿಸಲಿಲ್ಲ, ಅದನ್ನೇ ಮತ್ತೆ ಜಾರಿಗೊಳಿಸಿದರು. ರಾಜಕೀಯ ಹಿಂಸಾಚಾರ ಹಿಂದಿನಂತೆಯೇ ಮುಂದುವರಿಯಿತು. ಕೈಗಾರಿಕಾ ವಿರೋಧಿ ಭಾವನೆ ಕೂಡಾ ಮುಂದುವರಿಯಿತು. ವ್ಯವಸ್ಥೆಯು ತನ್ನ ಮುಖ ಬದಲಿತಷ್ಟೇ ಹೊರತು ತನ್ನ ಗುಣಲಕ್ಷಣಗಳನ್ನು ಬದಲಿಸಲಿಲ್ಲ.

ವಿಜಯ್ ಅವರ ಪಕ್ಷಕ್ಕೆ ಬಹುಮತ ದೊರಕದಿದ್ದರೂ ಬೆರಳೆಣಿಕೆಯ ಸಂಖ್ಯೆಯ ಶಾಸಕರ ಕೊರತೆಯಷ್ಟೇ ಇರುವುದರಿಂದ ಹೊರಗಿನ ಬೆಂಬಲ ಪಡೆದು ಸರಕಾರ ರಚಿಸುವುದು ಕಷ್ಟವಾಗಲಾರದು.

ಆದರೆ ವಿಜಯ್ ತಮ್ಮ ರಾಜಕೀಯ ದಾರಿಯಲ್ಲಿ ಮುನ್ನಡೆಯುವಾಗ ಎಚ್ಚರ ವಹಿಸಬೇಕಾಗಿರುವುದು ಅಗತ್ಯವಾಗಿದೆ.

ಏಕೆಂದರೆ ತಮಿಳ್ನಾಡಿನಲ್ಲಿ ಅತ್ಯಂತ ಸುಲಭದ ರಾಜಕೀಯ ದಾರಿಯೆಂದರೆ ದ್ರಾವಿಡ ರಾಜಕೀಯವನ್ನೇ ಮುಂದುವರಿಸುವುದು. ಅದೇ ದ್ರಾವಿಡ ಅಸ್ಮಿತೆ ಕುರಿತಂತೆ ಮಾತನಾಡುವುದು, ಹಿಂದಿ ವಿರೋಧಿ ಭಾವನೆ ಕೆರಳಿಸುವುದು. ಅಂದರೆ ಹಳೆಯ ರಾಜಕಾರಣದ ಹೊಸ ವರಸೆಯನ್ನೇ ತೋರಿಸುವುದು. ಒಂದು ರೀತಿಯಲ್ಲಿ ಅದು ಸುರಕ್ಷಿತ. ಎಲ್ಲರೂ ಮಾಡುವಂತಹುದು. ಅಲ್ಪ ಕಾಲಾವಧಿಯಲ್ಲಿ ಅದು ಉತ್ತಮವಾಗಿ ಕಾರ್ಯಾಚರಿಸುತ್ತದೆ ಕೂಡಾ.

ಆದರೆ ಅದು ಸುಧಾರಣೆ ತರಲಾರದು. ರಾಜ್ಯದ ಪರಿಸ್ಥಿತಿ ಬದಲಿಸಲು ನೆರವಾಗಲಾರದು. ವಿಜಯ್ ಕೂಡಾ ಅದೇ ಪಥವನ್ನು ಹಿಡಿದರೆ ಅವರ ಪ್ರಗತಿ ಮಹತ್ವದ್ದೆನಿಸಬಹುದು. ಆದರೆ ಐತಿಹಾಸಿಕವಾಗಲಾರದು.

ವಿಜಯ್ ಐತಿಹಾಸಿಕ ಸಾಧನೆ ಮಾಡಬೇಕಾದರೆ ಕಠಿಣ ಹಾದಿ ತುಳಿಯಬೇಕು. ಈವರೆಗೆ ಅನುಸರಿಸುತ್ತಿದ್ದ ರಾಜಕಾರಣಕ್ಕಿಂತ ಭಿನ್ನ ಪಥ ತುಳಿಯಬೇಕು. ಇದ್ದುದನ್ನೇ ಮುಂದುವರಿಸುವುದಲ್ಲ.

ಅದರರ್ಥವೆಂದರೆ ಅವರು ದ್ರಾವಿಡ ರಾಜಕೀಯವನ್ನು ಮೀರಿ ಸಾಗಬೇಕು. ಪ್ರತ್ಯೇಕತಾವಾದಿ ಮನೋಭಾವವನ್ನು ನಿವಾರಿಸಬೇಕು. ಭಾಷಾ ದ್ವೇಷ, ಪ್ರಾದೇಶಿಕ ದ್ವೇಷವನ್ನು ತ್ಯಜಿಸಬೇಕು. ಭಾರತದ ಅಸ್ಮಿತೆಗಿಂತ ತಮಿಳು ಅಸ್ಮಿತೆ ಮಿಗಿಲಾದುದು ಎಂಬಂತಹ ವರಸೆಗಳನ್ನು ನಿವಾರಿಸಬೇಕು. ಇಂತಹ ಮಾತುಗಳೆಲ್ಲ ಈಗ ಬದಲಾಗುತ್ತಿರುವ ಭಾರತದಲ್ಲಿ ಪ್ರಯೋಜನಕ್ಕೆ ಬರುವುದಿಲ್ಲ.

ತಮಿಳ್ನಾಡಿನ ಹೊಸ ಮತದಾರರು ತಮ್ಮ ಅಸ್ಮಿತೆಯನ್ನು ಕಳಚಿಕೊಳ್ಳುತ್ತಿಲ್ಲ. ಬದಲಾಗಿ ಎಲ್ಲರೊಂದಿಗೆ ಜತೆಯಾಗಿ ಬಾಳುವ ಮತ್ತು ಭಾರತದೊಂದಿಗೆ ಗುರುತಿಸಿಕೊಳ್ಳುವ ಮನೋಭಾವನೆಯನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಅವರಿಗೆ ಕೆಲಸ ಬೇಕು. ಕೈಗಾರಿಕೆ ಬೇಕು. ಪ್ರಗತಿ ಬೇಕು. ಜಾಗತಿಕ ಸಮನ್ವಯ ಬೇಕು.

ಇಲ್ಲೇ ವಿಜಯ್‌ಗೆ ಒಳ್ಳೆಯ ಅವಕಾಶವಿರುವುದು. ಅವರು ತಮಿಳು ರಾಜಕೀಯವನ್ನು ಪುನರ್ ವ್ಯಾಖ್ಯಾನಿಸಬಹುದು. ಕೇಂದ್ರ ಸರಕಾರದ ವಿರೋಧ ಕಟ್ಟಿಕೊಳ್ಳುವುದಕ್ಕಿಂತ ಅದರೊಂದಿಗೆ ಜತೆಗೂಡಿ ಕಾರ್ಯ ನಿರ್ವಹಿಸುವ ಮೂಲಕ ತಮ್ಮ ರಾಜ್ಯದ ಅಭಿವೃದ್ಧಿಗೆ ಕಾರಣರಾಗಬಹುದು.

ಭಾರತದ ರಾಜಕಾರಣದಲ್ಲಿ ವಿರೋಧಪಕ್ಷವೆಂದರೆ ಅಡ್ಡಗಾಲು ಹಾಕುವುದೆಂದರ್ಥವಲ್ಲ. ಹೊಂದಾಣಿಕೆಯ ನೀತಿ ಅನುಸರಿಸಿದರೆ ಎಲ್ಲವನ್ನೂ ಸಾಧಿಸಬಹುದು. ನವೀನ್ ಪಟ್ನಾಯಕ್ ತಮ್ಮ ರಾಜಕೀಯ ಸ್ವಾತಂತ್ರ್ಯ ಬಿಟ್ಟುಕೊಡದೆ, ಕೇಂದ್ರದೊಂದಿಗೆ ವಿರೋಧ ಕಟ್ಟಿಕೊಳ್ಳದೆ ರಾಜ್ಯದ ಅಭಿವೃದ್ಧಿಗೆ ಕೇಂದ್ರದಿಂದ ಕೊಡುಗೆ ಪಡೆಯುತ್ತಿದ್ದರು.

ವಿಜಯ್ ರಾಷ್ಟ್ರ ಮಟ್ಟದಲ್ಲಿ ಯಾವುದೇ ಪಕ್ಷದ ಜತೆಗೂಡಬೇಕಾಗಿಲ್ಲ. ಯಾವುದೇ ಮೈತ್ರಿಕೂಟದಲ್ಲಿ ಸೇರಬೇಕೆಂದಿಲ್ಲ. ಅದೇರೀತೀ ನಿರಂತರ ವೈರವನ್ನೂ ಕಟ್ಟಿಕೊಳ್ಳಬೇಕಾಗಿಲ್ಲ. ತಮಿಳ್ನಾಡಿನ ಪ್ರಗತಿಯು ದೇಶದ ಪ್ರಗತಿಯೊಂದಿಗೂ ತಳುಕು ಹೊಂದಿದೆ. ಮೂಲಭೂತ ಸೌಕರ್ಯ, ಹೂಡಿಕೆ, ಉತ್ಪಾದನೆ, ಜಾಗತಿಕ ಪೂರೈಕೆ ಮುಂತಾದ ವಿಚಾರಗಳಲ್ಲಿ ಕೇಂದ್ರದೊಂದಿಗೆ ಸಮನ್ವಯದಿಂದ ಸಾಗುವುದರಲ್ಲಿ ಹಿತವಿದೆ.

ತಮ್ಮ ರಾಜಕೀಯ ಸ್ವಾಯತ್ತೆಯನ್ನು ಕಳಕೊಳ್ಳದೆ ಕೇಂದ್ರ ಸರಕಾರದ ಜತೆಗೂಡಿ ಕಾರ್ಯ ನಿರ್ವಹಿಸುವುದೆಂದರೆ ಅದು ರಾಜಕೀಯದಲ್ಲಿ ರಾಜಿ ಮಾಡಿಕೊಂಡಂತಲ್ಲ, ಅದು ಆಡಳಿತದ ಚಾತುರ್ಯ.

ಇದೇವೇಳೆ ಅವರು ಈಗಿನ ದ್ರಾವಿಡ ಸಿದ್ಧಾಂತಿಗಳು ಪ್ರತಿಪಾದಿಸುತ್ತಿರುವ ಹಿಂದು ವಿರೋಧಿ, ಹಿಂದಿ ವಿರೋಧಿ, ಉತ್ತರ ಭಾರತ ವಿರೋಧಿ, ಸಂಸ್ಕೃತ ವಿರೋಧಿ ಧೋರಣೆಗಳಿಂದ ದೂರವಿರಬೇಕಾಗಿದೆ.

ವಿಜಯ್ ಕೂಡಾ ದ್ರಾವಿಡ ರಾಜಕೀಯದ ಚೌಕಟ್ಟಿನೊಳಗೇ ಕಾರ್ಯಾಚರಿಸಿದರೆ ಅವರು ಜನಪ್ರಿಯತೆ ಪಡೆಯಬಹುದೇನೋ, ಆದರೆ ಅದು ಸೀಮಿತ. ಆದರೆ ಅವರು ಅದನ್ನು ಮೀರಿ ಸಾಗಿದರೆ, ದ್ರಾವಿಡ ಎಂಬುದಕ್ಕಿಂತಲೂ ತಮಿಳು ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯವೆಸಗಿದರೆ, ಎಲ್ಲರ ಜತೆಗೂಡಿ ಸಾಗುವ ಮನೋಭಾವ ಪ್ರದರ್ಶಿಸಿದರೆ, ಕೇಂದ್ರ ಸರಕಾರದ ಜತೆ ಸಹಕಾರದ ವರ್ತನೆ ತೋರಿದರೆ ಅದು ತಮಿಳು ರಾಜಕೀಯದ ಭಾಷೆಯನ್ನೇ ಬದಲಿಸಬಲ್ಲುದು. ವಿಜಯ್ ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ? ಕಾದು ನೋಡಬೇಕು.

ಕೇವಲ 22 ರಿಂದ 25 ನಿಮಿಷಗಳ ಕಾಲ ನಡೆದ ಕಾರ್ಯಾಚರಣೆ ದೇಶದ ರಕ್ಷಣಾ ಭೂಪಟವನ್ನೇ ಬದಲಿಸಬಲ್ಲುದು ಎಂದು ಯಾರೂ ಊಹಿಸಿರಲಿಲ್ಲ. 'ಆಪರೇಷನ್ ಸಿಂದೂರ್ ನಡೆದು ಒಂದು ವರ್ಷ ಸಂದಿದೆ. ಆದರೆ, ಅಂದು ಪಾಕಿಸ್ತಾನದ ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ನಡೆದ ಆ ನಿಖರ ದಾಳಿ, ಇಂದು ಭಾರತೀಯ ಸಶಸ್ತ್ರ ಪಡೆಗಳಲ್ಲಿ 1999ರ ಕಾರ್ಗಿಲ್ ಕಾರ್ಯಾಚರಣೆ ನಂತರದ ಅತಿದೊಡ್ಡ ರಚನಾತ್ಮಕ ಮತ್ತು ಸೈದ್ಧಾಂತಿಕ ಬದಲಾವಣೆಗೆ ನಾಂದಿ ಹಾಡಿದೆ. ಇದು ಕೇವಲ ಒಂದು ದಾಳಿಯಾಗಿ ಉಳಿಯದೆ, ಭವಿಷ್ಯದ ಯುದ್ಧಗಳನ್ನು ಭಾರತ ಹೇಗೆ ಎದುರಿಸಲಿದೆ ಎಂಬುದಕ್ಕೆ ದಿಕ್ಸೂಚಿಯಾಗಿದೆ.

ಕಾರ್ಗಿಲ್‌ನಿಂದ ಸಿಂದೂರವರೆಗೆ ಸೋಲೇ ಇಲ್ಲ, ಗೆಲುವೇ ಎಲ್ಲಾ



ಬದಲಾದ ಯುದ್ಧ ಸಿದ್ಧಾಂತ

ಈಗ ಭಾರತದ ಯುದ್ಧ ಸಿದ್ಧಾಂತ, 'ದೀರ್ಘಕಾಲದ ಸಂಘರ್ಷ'ದಿಂದ 'ನಿಖರ ಮತ್ತು ತೀವ್ರ ದಾಳಿ'ಯತ್ತ ವಾಲಿದೆ. ಗಡಿ ಭಾಗಗಳಲ್ಲಿ ಭೂಗತ ಕಮಾಂಡ್ ಸೆಂಟರ್‌ಗಳು ಮತ್ತು ಸುಧಾರಿತ ವಾಯು ರಕ್ಷಣಾ ವ್ಯವಸ್ಥೆಗಳನ್ನು ಬಲಪಡಿಸಲಾಗುತ್ತಿದೆ. ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಗಳ ನಡುವೆ ಅಭೂತಪೂರ್ವ ಸಮನ್ವಯ ಸಾಧಿಸಲು ಹೊಸ ನಿಯಮಗಳನ್ನು ಜಾರಿಗೆ ತರಲಾಗಿದೆ. ಟೀಕೆಗಳು ಮತ್ತು ಸವಾಲುಗಳ ನಡುವೆಯೂ, ಆಪರೇಷನ್ ಸಿಂದೂರ್ ಭಾರತವನ್ನು ಆಧುನಿಕ, ತಂತ್ರಜ್ಞಾನ ಆಧಾರಿತ ಮತ್ತು ಸ್ವಾವಲಂಬಿ ರಕ್ಷಣಾ ಶಕ್ತಿಯನ್ನಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದೆ.

ಮಿಲಿಟರಿ ವಿಶ್ಲೇಷಕರ ಪ್ರಕಾರ, ದಾಳಿ ನಡೆದ ಕೆಲವೇ ವಾರಗಳಲ್ಲಿ, ಏಕೀಕೃತ ಮಿಲಿಟರಿ ಕಮಾಂಡ್ ರಚನೆಯನ್ನು ಬಲಪಡಿಸಲು ಸರ್ಕಾರ ಹೊಸ ನಿಯಮಗಳನ್ನು ಜಾರಿಗೆ ತಂದಿದೆ. ಇದು ಮೂರೂ ಸೇನಾ ಪಡೆಗಳನ್ನು ಒಂದೇ ಸೂರಿನಡಿ ತರುವ 'ಥಿಯೇಟರ್ ಕಮಾಂಡ್' ವ್ಯವಸ್ಥೆಯತ್ತ ಭಾರತ ಹೆಜ್ಜೆ ಇಡುತ್ತಿರುವುದನ್ನು ಸೂಚಿಸುತ್ತದೆ. ಇದೇ ವೇಳೆ ಕೆಲವು ತಜ್ಞರು ಎಚ್ಚರಿಕೆಯನ್ನೂ ನೀಡಿದ್ದಾರೆ. ವೇಗವಾಗಿ ನಡೆಯುತ್ತಿರುವ ಈ ಆಧುನೀಕರಣ ಯಶಸ್ವಿಯಾಗಬೇಕಾದರೆ ನಿರಂತರ ಹೂಡಿಕೆ, ಆಡಳಿತಾತ್ಮಕ ಸುಧಾರಣೆ ಮತ್ತು ಬಲಿಷ್ಠವಾದ ದೇಶೀಯ ಉತ್ಪಾದನಾ ವ್ಯವಸ್ಥೆ ಅಗತ್ಯ. ಆಗ ಮಾತ್ರ ತುರ್ತು ಪರಿಸ್ಥಿತಿಗಳಲ್ಲಿ ವಿದೇಶಿ ಆಮದುಗಳ ಮೇಲೆ ಅವಲಂಬಿತವಾಗುವುದನ್ನು ತಪ್ಪಿಸಲು ಸಾಧ್ಯ ಎಂದು ಅವರು ಅಭಿಪ್ರಾಯಪಡುತ್ತಾರೆ. 1999ರ ಕಾರ್ಗಿಲ್ ಕಾರ್ಯಾಚರಣೆ ನಂತರ ಭಾರತದ ಗಡಿ ಯುದ್ಧತಂತ್ರ ಮತ್ತು ಗುಪ್ತಚರ ಸಮನ್ವಯದ ದೃಷ್ಟಿಕೋನವನ್ನೇ ಹೇಗೆ ಬದಲಿಸಿತೋ, ಹಾಗೆಯೇ 'ಆಪರೇಷನ್ ಸಿಂದೂರ್ ಕೂಡ ಭಾರತವು ತಂತ್ರಜ್ಞಾನ, ಶತ್ರುವನ್ನು ತಡೆಯುವ ಶಕ್ತಿ, ತ್ವರಿತ ಪ್ರತಿಕ್ರಿಯೆ ಮತ್ತು ಭವಿಷ್ಯದ ಸಂಘರ್ಷಗಳನ್ನು ಎದುರಿಸುವ ರೀತಿಯನ್ನು ಮರು ವ್ಯಾಖ್ಯಾನಿಸಿದೆ.

ಆಪರೇಷನ್ ಸಿಂದೂರ್ ಬಳಿಕದ ಭಾರತದ ಹೊಸ ರಕ್ಷಣಾ ನೀತಿ

ಆಪರೇಷನ್ ಸಿಂದೂರ್ ನಂತರ ಪಾಕಿಸ್ತಾನದ ಸೇನಾ ಪಡೆಗಳು ಮತ್ತಷ್ಟು ಬಲಗೊಂಡಿದ್ದು, ತಂತ್ರಜ್ಞಾನ ಆಧಾರಿತ ಹೊಸ ಮಾದರಿಯ ಭಯೋತ್ಪಾದನೆಯನ್ನು ಎದುರಿಸಲು ಭಾರತ ತನ್ನ ರಕ್ಷಣಾ ಮತ್ತು ಭಯೋತ್ಪಾದನಾ ನಿರೋಧಕ ನೀತಿಗಳನ್ನು ಪರಿಷ್ಕರಿಸುತ್ತಿದೆ. ಪಾಕಿಸ್ತಾನದ ಸೇನೆ 27ನೇ ತಿದ್ದುಪಡಿಯ ಮೂಲಕ ದೇಶದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿದೆ ಎಂದು ಭೂಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ತಿಳಿಸಿದ್ದಾರೆ. ಅಮೆರಿಕ ಮತ್ತು ಪಶ್ಚಿಮ ಏಷ್ಯಾದ ರಾಷ್ಟ್ರಗಳೊಂದಿಗೆ ಪಾಕಿಸ್ತಾನ ಉತ್ತಮ ರಾಜತಾಂತ್ರಿಕ ಸಂಬಂಧಗಳನ್ನು ಬೆಳೆಸಿಕೊಂಡಿರುವುದು ಅದಕ್ಕೆ ಹೆಚ್ಚಿನ ಶಸ್ತ್ರಾಸ್ತ್ರ ಮತ್ತು ಹಣಕಾಸಿನ ನೆರವು ಸಿಗಲು ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಕೇವಲ ಸೈನಿಕ ದಾಳಿಗಳಷ್ಟೇ ಸಾಕಾಗುವುದಿಲ್ಲ ಎಂಬ ಅರಿವು ಭಾರತಕ್ಕಿದೆ.

ತಾಂತ್ರಿಕ ಮತ್ತು ರಚನಾತ್ಮಕ ಬದಲಾವಣೆ: ಕಾರ್ಯಾಚರಣೆಯ ವೇಳೆ ಆಕಾಶ್ ಕ್ಷಿಪಣಿ ವ್ಯವಸ್ಥೆ ಡ್ರೋನ್ ಮತ್ತು ಕ್ಷಿಪಣಿಗಳನ್ನು ಯಶಸ್ವಿಯಾಗಿ ಹೊಡೆದುರುಳಿಸಿದ ನಂತರ, ಭಾರತ ಸ್ವದೇಶಿ ರಕ್ಷಣಾ ವ್ಯವಸ್ಥೆಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಕ್ಷಿಪಣಿಗಳು ಉಡಾವಣೆಯಾದ ಆರಂಭಿಕ ಹಂತದಲ್ಲೇ ಅವುಗಳನ್ನು ಪತ್ತೆಹಚ್ಚಲು ಬಾಹ್ಯಾಕಾಶ ಆಧಾರಿತ ಇನ್‌ಫ್ರಾರೆಡ್ ಸೆನ್ಸಾರ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಅಲ್ಲದೆ, ಡ್ರೋನ್ ಮತ್ತು ವಿಶೇಷ ಪಡೆಗಳನ್ನು ಒಳಗೊಂಡ 'ರುದ್ರ' ಬ್ರಿಗೇಡ್ ಹಾಗೂ 'ಭೈರವ' ಬೆಟಾಲಿಯನ್‌ಗಳಂತಹ ಹೊಸ ಯುದ್ಧ ಘಟಕಗಳನ್ನು ರಚಿಸಲಾಗಿದೆ.

ಖರೀದಿ ಪ್ರಕ್ರಿಯೆ ಮತ್ತು ಆಂತರಿಕ ಸವಾಲುಗಳು: ರಕ್ಷಣಾ ವಲಯದಲ್ಲಿ ಆಧುನೀಕರಣ ನಡೆಯುತ್ತಿದ್ದರೂ, ಖರೀದಿ ಪ್ರಕ್ರಿಯೆಯಲ್ಲಿ ಇನ್ನೂ ಕೆಲವು ಸಮಸ್ಯೆಗಳಿವೆ. ಎನ್‌ಕ್ರಿಪ್ಟ್ ಮಾಡಿದ ಆ್ಯಪ್‌ಗಳ ಮೂಲಕ ನಡೆಯುತ್ತಿರುವ ಡಿಜಿಟಲ್ ಮೂಲಭೂತವಾದ ಮತ್ತು ವಿದೇಶಗಳಿಂದ ನಿಯಂತ್ರಿಸಲ್ಪಡುವ ಸ್ಥಳೀಯ ಭಯೋತ್ಪಾದಕ ಜಾಲಗಳು ಭಾರತಕ್ಕೆ ಹೊಸ ಸವಾಲೊಡ್ಡಿವೆ. ಕಳೆದ ನವೆಂಬರ್‌ನಲ್ಲಿ ನಡೆದ ಕೆಂಪು ಕೋಟೆ ಸ್ಫೋಟ, ವಿದೇಶದಿಂದ ಮಾರ್ಗದರ್ಶನ ಪಡೆದು ಸ್ಥಳೀಯವಾಗಿ ತರಬೇತಿ ಪಡೆಯುವ ಹೊಸ ಮಾದರಿಯ ಭಯೋತ್ಪಾದನೆಗೆ ಉದಾಹರಣೆಯಾಗಿತ್ತು.

ಪ್ರಮುಖಾಂಶಗಳು

- **ಅವಧಿ:** 25 ನಿಮಿಷಗಳ ದಾಳಿ, 88 ಗಂಟೆಗಳ ಮಿಲಿಟರಿ ಜಾಗರೂಕತೆ.
- **ವೆಚ್ಚ:** ರಕ್ಷಣಾ ಖರೀದಿ ಅನುಮೋದನೆ 6.81 ಲಕ್ಷ ಕೋಟಿಗೆ ಏರಿಕೆ.
- **ಹೊಸ ಪಡೆಗಳು:** ಡ್ರೋನ್ ತಂತ್ರಜ್ಞಾನ ಒಳಗೊಂಡ 'ರುದ್ರ' ಮತ್ತು 'ಭೈರವ' ಘಟಕಗಳ ರಚನೆ.
- **ವೇಗ:** ತುರ್ತು ಖರೀದಿ ಮೂಲಕ ಶೇ. 30-50 ರಷ್ಟು ಸಮಯ ಉಳಿತಾಯ.
- **ಸ್ವದೇಶಿ:** 38,000ಕ್ಕೂ ಹೆಚ್ಚು ಡ್ರೋನ್‌ಗಳ ನೋಂದಣಿ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಆದ್ಯತೆ.



ಭಯೋತ್ಪಾದಕ ನೆಲೆ ಸುರಕ್ಷಿತವಾಗಿಲ್ಲ

ಗಡಿಯಾಚೆಗಿನ ಯಾವುದೇ ಭಯೋತ್ಪಾದಕ ನೆಲೆ ಸುರಕ್ಷಿತವಾಗಿಲ್ಲ. ಪಹಲ್ಗಾಮ್ ದಾಳಿ ನಂತರದ ನವ ಸಹಜ ಸನ್ನಿವೇಶದಲ್ಲಿ ಭಯೋತ್ಪಾದಕರ ಮೂಲ ಸೌಕರ್ಯಗಳೆಲ್ಲವನ್ನು ಭಾರತವು ನಿರಂತರ ನೆಲೆಯಲ್ಲಿ ಧ್ವಂಸಗೊಳಿಸಲಿದೆ ಎಂದು ಆಪರೇಶನ್ ಸಿಂದೂರ್ ವರ್ಷಂತಿ ಕ್ಷಣಗಳಲ್ಲಿ ಭಾರತದ ಮಿಲಿಟರಿ ಪಡೆ ಪಾಕ್‌ಗೆ ನೇರ ಎಚ್ಚರಿಕೆ ನೀಡಿದೆ.

ಭಾರತದ ಮಿಲಿಟರಿ ಕಾರ್ಯಾಚರಣೆ ಅತ್ಯಂತ ಮಹತ್ವದ್ದೆಂದು ಕಳೆದೈದು ದಶಕಗಳಲ್ಲಿ ಪರಿಗಣಿತವಾಗಿದೆ. ಭಾರತೀಯ ಸೇನೆಯ ಮೂರೂ ಪಡೆಗಳು ವ್ಯೂಹಾತ್ಮಕ ಯಶಸ್ಸುಗಳನ್ನು ದಾಖಲಿಸಿವೆ ಎಂದು ಸಿಂದೂರ್ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ಸೇನಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಹೆಮ್ಮೆ ವ್ಯಕ್ತಪಡಿಸಿದರು. ಸೇನೆಯ ತ್ರಿವಳಿ ಪಡೆಗಳ ಸಾಮರ್ಥ್ಯ ಕುರಿತು ವಿಸ್ತೃತ ಮಾಹಿತಿ ನೀಡಿದರು. ಗಡಿಯಾಚೆಯ ಭಯೋತ್ಪಾದನೆ ವಿರುದ್ಧ ಮಿಲಿಟರಿ ಕಾರ್ಯಾಚರಣೆಯ ಕಿಟಕಿ ಮುಚ್ಚಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

ಬೆಂಬತ್ತಿಯೇ ಸಿದ್ಧ: ವಾಸ್ತವ ಗಡಿ ನಿಯಂತ್ರಣ ರೇಖೆಯಾಚಿನ ಯಾವುದೇ ಉಗ್ರ ನೆಲೆ ಸುರಕ್ಷಿತವಾಗಿಲ್ಲ, ಕಳೆದ ವರ್ಷ ಪ್ರಧಾನಿ ನರೇಂದ್ರ ಮೋದಿ ಅವರು ಖಡಾಖಂಡಿತವಾಗಿ ಹೇಳಿರುವಂತೆ, ಹೊಸ ಸಹಜ ಸನ್ನಿವೇಶದಲ್ಲಿ ಭಯೋತ್ಪಾದನೆಯ ಯಾವುದೇ ಚಟುವಟಿಕೆಗಳನ್ನು ನಾವು ಬೆಂಬತ್ತಿಯೇ ಸಿದ್ಧ ಎಂದು ಲೆ.ಜ.ರಾಜೀವ್ ಘಾಯ್ ಗುಡುಗಿದ್ದಾರೆ. ಸಿಂದೂರ್ ಕಾರ್ಯಾಚರಣೆ ಸಂದರ್ಭ ಭಾರತೀಯ ಸೇನೆಯ ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕ ಹೊಣೆ ಹೊಂದಿದ್ದ ಮತ್ತು ಪ್ರಸ್ತುತ ಸೇನಾ ಉಪ ಮುಖ್ಯಾಧಿಕಾರಿ (ರಣತಂತ್ರಗಳು)ಯಾಗಿರುವ ಘಾಯ್, ಭಾರತೀಯ ವಾಯುಪಡೆ ಮತ್ತು ನೌಕಾಪಡೆಗಳ ಜತೆ ಆಪರೇಶನ್ ಸಿಂದೂರ್ ಯಶಸ್ವೀ ಅನುಷ್ಠಾನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದರು. ಆಪರೇಶನ್ ಸಿಂದೂರ್ ಮುಕ್ತಾಯವಲ್ಲ, ಬದಲಾಗಿ ಆರಂಭವಷ್ಟೆ ಎಂದು ಲೆ.ಜ.ಘಾಯ್ ಘೋಷಿಸಿದರು.

ಪಾಕ್ ಗೋಗರೆದ ಕಾರಣ ಸಂಘರ್ಷ ನಿಲ್ಲಿಸಿದ್ದೆವು: ಜಗತ್ತಿನಾದ್ಯಂತ ದೀರ್ಘಕಾಲೀನ ಸಂಘರ್ಷಗಳು ನಡೆಯುತ್ತಲೇ ಇವೆ. ಆದರೆ ನಾವು ಕಠಿಣ ಪರಿಶ್ರಮಿಸಿ ನಮ್ಮ ಧ್ಯೇಯೋದ್ದೇಶಗಳನ್ನು ಸಾಧಿಸಿದೆವು ಮತ್ತು ಪಾಕಿಸ್ಥಾನ ಮಾತುಕತೆ ಜತೆ ಸಂಘರ್ಷ ಕೊನೆಗಾಣಿಸುವಂತೆ ಗೋಗರೆದ ಕಾರಣ ಹಗೆತನವನ್ನು ಬಿಟ್ಟುಬಿಡಲು ನಿರ್ಧರಿಸಿದೆವು ಎಂದು ವಾಸ್ತವವನ್ನು ನೆನಪಿಸಿದ ಲೆ.ಜ.ಘಾಯ್, ಭಾರತದ ದೇಶೀ ಶಸ್ತ್ರಾಸ್ತ್ರ ವ್ಯವಸ್ಥೆಗಳ ಸಾಮರ್ಥ್ಯದ ಜತೆಜತೆಗೆ ಬ್ರಹ್ಮೋಸ್, ಆಕಾಶ್‌ನಂತಹ ಶಕ್ತಿಶಾಲಿ ಕ್ಷಿಪಣಿಗಳ ಸಾಮರ್ಥ್ಯ, ದೇಶದಲ್ಲಿನ ಸುಸಜ್ಜಿತ ನಿಗಾವ್ಯವಸ್ಥೆ, ಟಾರ್ಗೆಟಿಂಗ್ ವ್ಯವಸ್ಥೆ, ಭಾರತದ ಬಲಿಷ್ಠ ಶಸ್ತ್ರಾಸ್ತ್ರ ಕೋಠಿಯನ್ನು ಸಿಂದೂರ್ ಜಗತ್ತಿಗೇ ಪರಿಚಯಿಸಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಆತ್ಮನಿರ್ಭರತೆಯ ಅನಿವಾರ್ಯತೆ

ಯುದ್ಧದ ಸಮಯದಲ್ಲಿ ಪರಕೀಯರ ಮೇಲೆ ಅವಲಂಬಿತವಾಗುವುದು ಅಪಾಯಕಾರಿ ಎಂಬ ಪಾಠವನ್ನು ಈ ಕಾರ್ಯಾಚರಣೆ ಕಲಿಸಿದೆ. ಆದ್ದರಿಂದಲೇ ಸರ್ಕಾರ, ದೇಶೀಯ ಸ್ಟಾರ್ಟ್‌ಅಪ್‌ಗಳಿಗೆ ಮನ್ನಣೆ ನೀಡುತ್ತಿದೆ. ಇಂದು ಭಾರತದಲ್ಲಿ 38,000ಕ್ಕೂ ಹೆಚ್ಚು ಡ್ರೋನ್‌ಗಳು ನೋಂದಣಿಯಾಗಿವೆ. ಯುದ್ಧದ ತೀವ್ರತೆ ಹೆಚ್ಚಾದಾಗ ತಕ್ಷಣವೇ ಯುದ್ಧ ಸಾಮಗ್ರಿಗಳನ್ನು ಪೂರೈಸುವ ಸಾಮರ್ಥ್ಯವನ್ನು ಭಾರತೀಯ ಕಂಪನಿಗಳು ಬೆಳೆಸಿಕೊಳ್ಳುತ್ತಿವೆ. ಇದು ಕೇವಲ ರಕ್ಷಣಾ ಸಿದ್ಧತೆಯಲ್ಲ, ಬದಲಾಗಿ ದೇಶದ ತಾಂತ್ರಿಕ ಸಾರ್ವಭೌಮತ್ವದ ಸಂಕೇತ ಎನಿಸಿದೆ.

ತಂತ್ರಜ್ಞಾನ ಪ್ರಧಾನ ಯುದ್ಧತಂತ್ರ

ಆಪರೇಷನ್ ಸಿಂದೂರ್ ನಂತರದ ಮಿಲಿಟರಿ ಮೌಲ್ಯಮಾಪನದಲ್ಲಿ ಒಂದು ವಿಷಯ ಸ್ಪಷ್ಟವಾಗಿದೆ: ಇನ್ನು ಮುಂದೆ ಯುದ್ಧಗಳು ಕೇವಲ ಭೂಸೇನೆ ಅಥವಾ ವಾಯುಸೇನೆಯ ಪ್ರತ್ಯೇಕ ಪ್ರದರ್ಶನಗಳಲ್ಲ, ಬದಲಾಗಿ ಡ್ರೋನ್‌ಗಳು, ನಿಖರ ಅಸ್ತ್ರಗಳು ಮತ್ತು ಎಲೆಕ್ಟ್ರಾನಿಕ್ ಯುದ್ಧತಂತ್ರಗಳ ಸಂಘಟಿತ ದಾಳಿ. ಶತ್ರುವನ್ನು ಗುರುತಿಸಿದ ತಕ್ಷಣ ಸಂಹರಿಸುವ 'ಸೆನ್ಸರ್-ಟು-ಶೂಟರ್ ಸಮಯವನ್ನು ಕಡಿಮೆ ಮಾಡುವುದು ಈಗಿನ ಆದ್ಯತೆ. ಇದಕ್ಕಾಗಿ 'ರುದ್ರ ಬ್ರಿಗೇಡ್' ಮತ್ತು 'ಭೈರವ ಬೆಟಾಲಿಯನ್'ಗಳಂತಹ ಚುರುಕಾದ ಯುದ್ಧ ಘಟಕಗಳನ್ನು ರೂಪಿಸಲಾಗುತ್ತಿದೆ. ಇವು ಒಂದೇ ಸೂರಿನಡಿ ಪದಾತಿ ದಳ, ಫಿರಂಗಿ ಮತ್ತು ಡ್ರೋನ್ ತಂತ್ರಜ್ಞಾನವನ್ನು ಹೊಂದಿರುತ್ತವೆ.

ಖರೀದಿ ಪ್ರಕ್ರಿಯೆಯಲ್ಲಿ ಕ್ರಾಂತಿ

ಈ ಕಾರ್ಯಾಚರಣೆಯ ನಂತರ ರಕ್ಷಣಾ ಇಲಾಖೆಯ ಖರೀದಿ ವೇಗ ಅಚ್ಚರಿ ಮೂಡಿಸುವಂತಿದೆ. ಕಳೆದ ವರ್ಷ ಕೇವಲ 1.76 ಲಕ್ಷ ಕೋಟಿ ರೂ. ಇದ್ದ ಖರೀದಿ ಅನುಮೋದನೆ, ಈ ವರ್ಷ 6.81 ಲಕ್ಷ ಕೋಟಿ ರೂ. ಗೆ ಏರಿದೆ. ಕೇವಲ ಹಣದ ಹರಿವು ಮಾತ್ರವಲ್ಲದೆ, ತುರ್ತು ಖರೀದಿ ಅಧಿಕಾರದ ಮೂಲಕ ಕೆಂಪು ಪಟ್ಟಿಯ ವಿಳಂಬವನ್ನು ಶೇ. 50ರಷ್ಟು ಕಡಿಮೆ ಮಾಡಲಾಗಿದೆ.

ಪ್ರೊಫೈಲ್ ಚಿತ್ರ ಬದಲಾಯಿಸಿದ ನಾಯಕರು

ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ತಮ್ಮ ಸಾಮಾಜಿಕ ಡಿಪಿ ಚಿತ್ರಗಳನ್ನು ಆಪರೇಷನ್ ಸಿಂದೂರ್ ಒಂದು ವರ್ಷದ ಸ್ಮರಣಾರ್ಥವಾಗಿ ಬದಲಾಯಿಸಿದ್ದಾರೆ. ಸಶಸ್ತ್ರ ಪಡೆಗಳು ಮತ್ತು ಅವರ ಯಶಸ್ಸಿಗೆ ಗೌರವದ ಸಂಕೇತವಾಗಿ ಎಲ್ಲರೂ ತಮ್ಮ ಸಾಮಾಜಿಕ ಮಾಧ್ಯಮದ ಡಿಪಿಯನ್ನು ಬದಲಾಯಿಸುವಂತೆ ಮನವಿ ಮಾಡಿದ್ದಾರೆ. ಮೋದಿ ಜತೆಗೆ ರಾಜನಾಥ್ ಸಿಂಗ್, ಅಮಿತ್ ಶಾ ಮತ್ತು ಎಸ್ ಜೈಶಂಕರ್ ಸೇರಿದಂತೆ ಎಲ್ಲಾ ಕೇಂದ್ರ ಸಚಿವರು, ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಮತ್ತು ಇತರ ಪಕ್ಷದ ನಾಯಕರು ಬದಲಾಯಿಸಿದ್ದಾರೆ.

ಪಾಕ್‌ಗೆ ತಕ್ಕ ಪ್ರತಿಕ್ರಿಯೆ ನೀಡಿದ್ದೇವೆ:ಎಂಇಎ

ಪಾಕಿಸ್ತಾನ ಬೆಂಬಲಿತ ಗಡಿಯಾಚೆಗಿನ ಭಯೋತ್ಪಾದಕ ಚಟುವಟಿಕೆಗಳ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕನ್ನು ಭಾರತ ಗುರುವಾರ ಪುನರುಚ್ಚರಿಸಿದೆ. ಇದೇ ವೇಳೆ ಭಯೋತ್ಪಾದನೆಯ ವಿರುದ್ಧದ ಜಾಗತಿಕ ಹೋರಾಟವನ್ನು ಬಲಪಡಿಸುವುದಾಗಿ ಪ್ರತಿಜ್ಞೆ ಮಾಡಿದೆ. ನಾವು ಆಪರೇಷನ್ ಸಿಂದೂರ ಕಾರ್ಯಾಚರಣೆಯ ಮೊದಲ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಗಡಿಯಾಚೆಗಿನ ಭಯೋತ್ಪಾದನೆಯನ್ನು ಪ್ರಾಯೋಜಿಸಿದ್ದಕ್ಕಾಗಿ ನಾವು ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡಿದ್ದೇವೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ಗಡಿಯಾಚೆಗಿನ ಭಯೋತ್ಪಾದನೆಯು ಪಾಕಿಸ್ತಾನಕ್ಕೆ ಬಹಳ ಹಿಂದಿನಿಂದಲೂ ರಾಜ್ಯ ನೀತಿಯ ಸಾಧನವಾಗಿದೆ ಎಂದು ಜಗತ್ತಿಗೆ ತಿಳಿದಿದೆ. ಭಾರತದಲ್ಲಿ ಭಯೋತ್ಪಾದನೆಯ ವಿರುದ್ಧ ನಮ್ಮನ್ನು ನಾವು ರಕ್ಷಿಸಿಕೊಳ್ಳುವ ಎಲ್ಲಾ ಹಕ್ಕಿದೆ ಎಂದು ತಮ್ಮ ಸಾಪ್ತಾಹಿಕ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು. ಭಯೋತ್ಪಾದನೆ ವಿರುದ್ಧದ ಜಾಗತಿಕ ಹೋರಾಟವನ್ನು ಬಲಪಡಿಸಲು ಭಾರತವು ಕೆಲಸ ಮಾಡುವುದನ್ನು ಮುಂದುವರಿಸುತ್ತದೆ ಎಂದು ಜೈಸ್ವಾಲ್ ಹೇಳಿದರು.

ಕಿರುಸುದ್ದಿ

ವಂಚನೆ: ಪಂಜಾಬ್‌ನ ಹಲವೆಡೆ ಇಡಿ ದಾಳಿ

ಚಂಡೀಗಢ: ಭೂ ವಂಚನೆ ಪ್ರಕರಣದ ಅಕ್ರಮ ಹಣ ವರ್ಗಾವಣೆ ತನಿಖೆ ಭಾಗವಾಗಿ ಜಾರಿ ನಿರ್ದೇಶನಾಲ ಗುರುವಾರ ಪಂಜಾಬ್ ಮತ್ತು ಚಂಡೀಗಢದ ಅನೇಕ ಸ್ಥಳಗಳಲ್ಲಿ ಶೋಧ ನಡೆಸಿದೆ. ದಾಳಿ ನಡೆಸಿದ ಪ್ರದೇಶದಲ್ಲಿ ಸಿಎಮ್‌ಒನಲ್ಲಿ ಒಎಸ್‌ಡಿ ಆಪಾದಿತ ನಿಕಟ ಸಹವರ್ತಿ ನಿವಾಸಗಳು ಸೇರಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಂಟೆಕ್ ಸಿಟಿ ಯೋಜನೆ, ಅಜಯ್ ಸೆಹಗಲ್, ಎಬಿಎಸ್ ಟೌನ್‌ಶಿಪ್, ಆಲ್ಟಸ್ ಬಿಲ್ಡರ್ಸ್, ಧೀರ್ ಕನ್ಸ್ಟ್ರಕ್ಷನ್ ಮತ್ತು ಸಹವರ್ತಿಗಳಿಗೆ ಸಂಬಂಧಿಸಿದ ಮೊಹಾಲಿ ಮತ್ತು ಚಂಡೀಗಢದ ಸುಮಾರು 12ಕ್ಕೂ ಹೆಚ್ಚು ಸ್ಥಳಗಳಲ್ಲಿ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅನ್ವಯದಲ್ಲಿ ಶೋಧ ನಡೆಸಲಾಗುತ್ತಿದೆ ಎಂದು ಹೇಳಿದರು. ಮೊಹಾಲಿಯಲ್ಲಿ ದಾಳಿಗೊಳಗಾದ ಕಟ್ಟಡವೊಂದರಲ್ಲಿ ಕಾರ್ಯಾಚರಣೆಯು ನಾಟಕೀಯ ಬೆಳವಣಿಗೆಗೆ ಸಾಕ್ಷಿಯಾಗಿದೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ದಾಳಿ ವೇಳೆ ಒಂಬತ್ತನೇ ಮಹಡಿಯಿಂದ 500 ರೂ. ನೋಟುಗಳಿಂದ ತುಂಬಿದ ಚೀಲಗಳನ್ನು ಎಸೆಯಲಾಗಿದೆ.

ಧಾರ್ಮಿಕ ವಿಚಾರ ಪ್ರಶ್ನಿಸಿದರೆ ಧರ್ಮ ಒಡೆಯುತ್ತದೆ

ಹೊಸದಿಲ್ಲಿ: ನ್ಯಾಯಾಲಯದ ಮುಂದೆ ಪ್ರತಿಯೊಂದು ಧಾರ್ಮಿಕ ಆಚರಣೆಯನ್ನು ಅಥವಾ ಧರ್ಮದ ವಿಷಯಗಳನ್ನು ಪ್ರಶ್ನಿಸಲು ಪ್ರಾರಂಭಿಸಿದರೆ, ನೂರಾರು ಅರ್ಜಿಗಳು ಬರುತ್ತವೆ ಮತ್ತು ಇದರಿಂದಾಗಿ ಪ್ರತಿಯೊಂದು ಧರ್ಮವೂ ಒಡೆಯುತ್ತದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ. ಶಬರಿಮಲೆ ದೇವಾಲಯಕ್ಕೆ ಮಹಿಳೆಯರ ಪ್ರವೇಶದ ವಿಷಯದಲ್ಲಿ ವಿರೋಧಾತ್ಮಕ ನಿಲುವನ್ನು ತೆಗೆದುಕೊಂಡಿರುವ ಕೇರಳ ಸರ್ಕಾರದ ಬಗ್ಗೆ ಸುಪ್ರೀಂ ಈ ಅಭಿಪ್ರಾಯ ತಿಳಿಸಿದೆ. ಯಾರ ಹಕ್ಕೂ ಶ್ರೇಷ್ಠವಲ್ಲ ಮತ್ತು ಮೂಲಭೂತ ಧಾರ್ಮಿಕ ಆಚರಣೆಯ ಮೇಲೆ ಸಮಸ್ಯೆ ಉದ್ಭವಿಸಿದರೆ, ನ್ಯಾಯಾಲಯವು ಧರ್ಮದ ಸದಸ್ಯರ ಸಾಕ್ಷ್ಯದ ಆಧಾರದ ಮೇಲೆ ಅದನ್ನು ನಿರ್ಣಯಿಸುತ್ತದೆ ಆದರೆ ತನ್ನದೇ ಆದ ಮತಧರ್ಮಶಾಸ್ತ್ರದ ಅಭಿಪ್ರಾಯವನ್ನು ಬದಲಿಸುವುದಿಲ್ಲ ಎಂದು ಹೇಳಿದೆ.

1,400 ಕೋಟಿ ಮೌಲ್ಯದ ಅಕ್ರಮ ಹಣ ವಶ:ಇಸಿ

ಹೊಸದಿಲ್ಲಿ: ಈ ಬಾರಿಯ ವಿಧಾನಸಭಾ ಚುನಾವಣೆಯ ವೇಳೆ ಚುನಾವಣಾ ಆಯೋಗ ಒಟ್ಟು 1,400 ಕೋಟಿ ರೂ. ಹೆಚ್ಚು ಮೌಲ್ಯದ ಅಕ್ರಮ ನಿಧಿಯನ್ನು ವಶಪಡಿಸಿಕೊಂಡಿದೆ. ಈ ಪೈಕಿ ಪಶ್ಚಿಮ ಬಂಗಾಳದಲ್ಲಿ ಅತಿ ಹೆಚ್ಚು ಹಣವನ್ನು ವಶಕ್ಕೆ ಪಡೆಯಲಾಗಿದೆ ಎಂದು ಭಾರತೀಯ ಚುನಾವಣಾ ಆಯೋಗ (ಇಸಿಐ) ಹೇಳಿದೆ. 5 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಧಾನಸಭಾ ಚುನಾವಣೆ ವೇಳೆ 1,400 ಕೋಟಿಗೂ ಹೆಚ್ಚು ಮೌಲ್ಯದ ಅಕ್ರಮ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ದೇಶ ವಿರೋಧಿ ಚಟುವಟಿಕೆ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಿ

ಹೊಸದಿಲ್ಲಿ: ಕೆನಡಾದಲ್ಲಿದ್ದುಕೊಂಡು ಭಾರತ ವಿರೋಧಿ ಚಟುವಟಿಕೆಗಳಲ್ಲಿ ನಿರತ ಉಗ್ರಗಾಮಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಭಾರತವು ಕೆನಡಾ ಸರಕಾರಕ್ಕೆ ಕರೆ ನೀಡಿದೆ. ಖಲಿಸ್ತಾನಿ ಶಕ್ತಿಗಳು ಕೆನಡಾದ ರಾಷ್ಟ್ರೀಯ ಭದ್ರತೆಗೆ ನಿರಂತರ ಗಂಡಾಂತರವಾಗಿದ್ದಾರೆಂಬ ಅಲ್ಲಿನ ಗುಪ್ತಚರ ವರದಿ ಬೆನ್ನಲ್ಲೇ ಭಾರತದ ವಿದೇಶಾಂಗ ಸಚಿವಾಲಯ ಈ ತೆರ ಕರೆ ನೀಡಿದೆ. ಕೆನಡಾದಿಂದ ಭಾರತ ವಿರೋಧಿ ಚಟುವಟಿಕೆಗಳಲ್ಲಿ ನಿರತ ಉಗ್ರಗಾಮಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಭಾರತವು ಕೆನಡಾ ಸರಕಾರವನ್ನು ನಿರಂತರ ಆಗ್ರಹಿಸಿದೆ. ಉಗ್ರರಿಂದ ಹಿಂಸಾಚಾರಗಳ ವೈಭವೀಕರಣ, ಭಾರತೀಯ ನಾಯಕರು ಮತ್ತು ರಾಜತಾಂತ್ರಿಕರಿಗೆ ಬೆದರಿಕೆ, ದೇವಾಲಯಗಳನ್ನು ಧ್ವಂಸಗೊಳಿಸುವುದು ಇತ್ಯಾದಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಭಾರತ ನಿರಂತರ ಒತ್ತಾಯಿಸಿದೆ ಎಂದು ವಿದೇಶ ವ್ಯವಹಾರಗಳ ಖಾತೆ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ಕೆನಡಾ ಬೇಹುಗಾರಿಕಾ ಪಡೆಯ ವರದಿ ಕುರಿತ ಪ್ರಶ್ನೆಗೆ ಜೈಸ್ವಾಲ್ ಪ್ರಸ್ತುತ ಮಾಹಿತಿ ನೀಡಿದರು. ಉಗ್ರರು ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ಭಾರತ ವಿರೋಧಿ ಚಟುವಟಿಕೆಗಳಿಗೆ ಕೆನಡಾವನ್ನು ಸುರಕ್ಷಿತ ಸ್ವರ್ಗವಾಗಿ ಬಳಸಿಕೊಳ್ಳುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದೆ. ಖಲಿಸ್ತಾನ್ ಪ್ರತ್ಯೇಕತಾವಾದಿ ಆಂದೋಲನದ ಬೆಂಬಲಿಗರು ಕೆನಡಾದಲ್ಲಿರುವುದು ಮತ್ತು ಕೆನಡಾ ಮೂಲದ ಖಲಿಸ್ತಾನಿ ಉಗ್ರರ ಗುಂಪುಗಳು ಭಾರತಕ್ಕೆ ಮಾತ್ರವಲ್ಲ ಕೆನಡಾದ ರಾಷ್ಟ್ರೀಯ ಭದ್ರತೆಗೂ ನಿರಂತರ ಗಂಡಾಂತರವಾಗಿ ಪರಿಣಮಿಸಿರುವುದು.

ಲಿಪುಲೇಖ್ ವಿವಾದ ಬಗ್ಗೆ ಮಾತುಕತೆಗೆ ಸಿದ್ಧ: ಭಾರತ

ಹೊಸದಿಲ್ಲಿ: ಲಿಪುಲೇಖ್ ಪಾಸ್ ಕುರಿತು ನೇಪಾಳ ಇತ್ತೀಚೆಗೆ ಮರುಪ್ರತಿಪಾದಿಸಿರುವ ಪ್ರಾದೇಶಿಕ ಹಕ್ಕುಗಳ ಹಿನ್ನೆಲೆಯಲ್ಲಿ, ಗಡಿ ವಿವಾದದ ಕುರಿತು ನೇಪಾಳದೊಂದಿಗೆ ಮಾತುಕತೆ ನಡೆಸಲು ಸಿದ್ಧವಿರುವುದಾಗಿ ಭಾರತ ತಿಳಿಸಿದೆ. ನೇಪಾಳ ಈ ವಿಷಯವನ್ನು ಮತ್ತೆ ಪ್ರಸ್ತಾಪಿಸಿದರೆ ಚರ್ಚೆಗೆ ಭಾರತ ಸಿದ್ಧವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್



ತಿಳಿಸಿದ್ದಾರೆ. ಉತ್ತರಾಖಂಡದ ಪಿತೋರಗಢ ಜಿಲ್ಲೆಯ ಲಿಪುಲೇಖ್ ಮೂಲಕ ಸಾಗುವ ಕೈಲಾಸ ಮಾನಸಸರೋವರ ಯಾತ್ರೆಯ ಮಾರ್ಗದ ಕುರಿತು ಕಠ್ಮಂಡು ಆಕ್ಷೇಪ ವ್ಯಕ್ತಪಡಿಸಿದ ನಂತರ ಈ ಪ್ರತಿಕ್ರಿಯೆ ಬಂದಿದೆ. ನೇಪಾಳದ ಈ ಹಕ್ಕು ಸಮರ್ಥನೀಯವಲ್ಲ ಎಂದು ತಿರಸ್ಕರಿಸಿರುವ ಭಾರತ, ಈ ಯಾತ್ರಾ ಮಾರ್ಗ 1954 ರಿಂದಲೂ ಬಳಕೆಯಲ್ಲಿದೆ ಎಂದು ಸ್ಪಷ್ಟಪಡಿಸಿದೆ.

ವಿವಾದದ ಹಿನ್ನೆಲೆ: 1816 ರ ಸುಗೌಲಿ ಒಪ್ಪಂದದ ಪ್ರಕಾರ ಲಿಪುಲೇಖ್, ಕಾಲಾಪಾನಿ ಮತ್ತು ಲಿಂಪಿಯಾಧುರಾ ಪ್ರದೇಶಗಳು ತನ್ನ ಭೂಭಾಗಕ್ಕೆ ಸೇರಿವೆ ಎಂದು ನೇಪಾಳ ಪ್ರತಿಪಾದಿಸುತ್ತಿದೆ. 2020 ರಲ್ಲಿ ನೇಪಾಳ ಈ ಪ್ರದೇಶಗಳನ್ನು ಒಳಗೊಂಡ ಪರಿಷ್ಕೃತ ರಾಜಕೀಯ ಭೂಪಟ ಪ್ರಕಟಿಸಿದಾಗ ಉಭಯ ದೇಶಗಳ ನಡುವೆ ಉದ್ವಿಗ್ನತೆ ಹೆಚ್ಚಾಗಿತ್ತು. ನೇಪಾಳ ಸರ್ಕಾರದ ವಕ್ತಾರ ಸಾಸ್ಮಿತ್ ಪೋಖರೆಲ್ ತಮ್ಮ ನಿಲುವಿಗೆ ಬದ್ಧರಾಗಿರುವುದಾಗಿ ತಿಳಿಸಿದ್ದರೂ, ರಾಜತಾಂತ್ರಿಕತೆಯ ಮೂಲಕ ಪರಿಹಾರ ಕಂಡುಕೊಳ್ಳಲು ಭಾರತ ಒತ್ತು ನೀಡಿದೆ. ಐದು ವರ್ಷಗಳ ಬಿಡುವಿನ ನಂತರ ಈ ಯಾತ್ರೆ ಇತ್ತೀಚೆಗಷ್ಟೇ ಪುನರಾರಂಭಗೊಂಡಿದೆ.

ಮಹಿಳಾ ಶಾಸಕಿ ಅಪ್ಪಿಕೊಳ್ಳಲು ಯತ್ನಿಸಿದ ಕಾಂಗ್ರೆಸ್ ನಾಯಕ

ತಿರುವನಂತಪುರಂ: ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಕಚೇರಿಯಲ್ಲಿ ನಡೆದ ಘಟನೆಯೊಂದು ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದೆ. ಹಿರಿಯ ಕಾಂಗ್ರೆಸ್ ನಾಯಕ ಚೆರಿಯನ್ ಫಿಲಿಪ್ ಅವರು ನೂತನವಾಗಿ ಆಯ್ಕೆಯಾದ ಕಾಂಗ್ರೆಸ್ ಶಾಸಕಿ ಬಿಂದು ಕೃಷ್ಣ ಅವರನ್ನು ಅಪ್ಪಿಕೊಳ್ಳಲು ಯತ್ನಿಸಿದ ವಿಡಿಯೋ ವೈರಲ್ ಆಗಿದ್ದು, ವ್ಯಾಪಕ ಟೀಕೆ ವ್ಯಕ್ತವಾಗಿದೆ. ಕೆಪಿಸಿಸಿ ಕಚೇರಿಯಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಗೆ ಆಗಮಿಸಿದ್ದ ಬಿಂದು ಕೃಷ್ಣಾ ಅವರು ಮಾಧ್ಯಮ ಪ್ರತಿನಿಧಿಗಳು ಹಾಗೂ ಪಕ್ಷದ ಕಾರ್ಯಕರ್ತರನ್ನು ಅಭಿನಂದಿಸುತ್ತಿದ್ದರು. ಈ ವೇಳೆ ಚೆರಿಯನ್ ಫಿಲಿಪ್ ಅವರು ಅವರನ್ನು ಎದುರುಗೊಂಡರು. ಬಿಂದು ಕೃಷ್ಣಾ ಅವರು ಕೈಕುಲುಕಲು ಮುಂದಾದರೂ, ಫಿಲಿಪ್ ಅವರು ಅಪ್ಪಿಕೊಳ್ಳಲು ಯತ್ನಿಸಿದ ದೃಶ್ಯ ವಿಡಿಯೋದಲ್ಲಿ ಕಂಡುಬಂದಿದೆ. ವಿಡಿಯೋದಲ್ಲಿ ಬಿಂದು ಕೃಷ್ಣಾ ಅವರು ಅಸೌಕರ್ಯ ವ್ಯಕ್ತಪಡಿಸಿ ಹಿಂದೆ ಸರಿಯಲು ಯತ್ನಿಸುತ್ತಿರುವುದು ಕಾಣಿಸಿದ್ದು, ಅವರು ಫಿಲಿಪ್ ಅವರನ್ನು ದೂರ ಸರಿಸಿ ಮುಂದೆ ನಡೆದಿರುವ ದೃಶ್ಯವೂ ವೈರಲ್ ಆಗಿದೆ. ಈ ಘಟನೆ ನಡೆದ ಸಂದರ್ಭದಲ್ಲಿ ಅಲ್ಲಿದ್ದ ಕೆಲ ನಾಯಕರು ಹಾಗೂ ಕಾರ್ಯಕರ್ತರು ನಗುತ್ತಿರುವ ದೃಶ್ಯವೂ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಸಾಮಾಜಿಕ ಜಾಲತಾಣ ಬಳಕೆದಾರರು ಈ ಘಟನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಮಹಿಳೆಯರ ವೈಯಕ್ತಿಕ ಮೇರೆಯನ್ನು ಗೌರವಿಸಬೇಕು, ಸಾರ್ವಜನಿಕ ಬದುಕು ಅಥವಾ ರಾಜಕೀಯ ಹಿರಿಯತೆ ಯಾರಿಗೂ ಅನಗತ್ಯ ದೈಹಿಕ ಸ್ಪರ್ಶಕ್ಕೆ ಹಕ್ಕು ನೀಡುವುದಿಲ್ಲ ಎಂದು ಅನೇಕರು ಟೀಕಿಸಿದ್ದಾರೆ. ಕೆಲವರು ಕಾಂಗ್ರೆಸ್ ಪಕ್ಷ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.


ಮೇ 12ಕ್ಕೆ ಅಸ್ಸಾಂ ಸಿಎಂ ಪ್ರಮಾಣ: ಮೋದಿ ಭಾಗಿ ಸಾಧ್ಯತೆ

ಗುವಾಹಟಿ: ಅಸ್ಸಾಂನಲ್ಲಿ ಹೊಸದಾಗಿ ಆಯ್ಕೆಯಾದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಪ್ರಮಾಣ ವಚನ ಸಮಾರಂಭವು ಮೇ 12ರಂದು ನಡೆಯಲಿದೆ ಎಂದು ಮುಖ್ಯ ಕಾರ್ಯದರ್ಶಿ ರವಿ ಕೋಟಾ ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಹಲವಾರು ಕೇಂದ್ರ ಸಚಿವರು, ಮುಖ್ಯಮಂತ್ರಿಗಳು ಮತ್ತು ಬಿಜೆಪಿ ಆಡಳಿತದ ರಾಜ್ಯಗಳ ಉಪ ಮುಖ್ಯಮಂತ್ರಿಗಳು ಮತ್ತು ಕೈಗಾರಿಕೆಗಳ ಪ್ರತಿನಿಧಿಗಳು ಈ ಸಮಾರಂಭದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಪ್ರಮಾಣ ವಚನ ಸಮಾರಂಭವು ಖಾನಪಾರಾದ ಪಶುವೈದ್ಯಕೀಯ ಕ್ಷೇತ್ರದಲ್ಲಿ ನಡೆಯಲಿದೆ ಎಂದು ರವಿ ಕೋಟಾ ಮಾಹಿತಿ ನೀಡಿದ್ದಾರೆ. ಹೊಸದಾಗಿ ಆಯ್ಕೆಯಾದ ಸಚಿವ ಸಂಪುಟದ ಪ್ರಮಾಣ ವಚನ ಸಮಾರಂಭದಲ್ಲಿ ಭಾಗವಹಿಸಲು ಪ್ರಧಾನಮಂತ್ರಿಯ ಮುಂಬರುವ ಭೇಟಿಯ ಸನ್ನದ್ಧತೆಯನ್ನು ನಿರ್ಣಯಿಸಲು ಅಸ್ಸಾಂನ ಡಿಜಿಪಿಯೊಂದಿಗೆ ಸಮಗ್ರ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು ಎಂದು ಕೋಟಾ ಬುಧವಾರ ರಾತ್ರಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

12 ಜನರಲ್ಲಿ ಸೋಂಕು ದೃಢ | ಆತಂಕ ಬೇಡ: ಆರೋಗ್ಯ ಇಲಾಖೆ

ಪ್ರವಾಸಿ ಹಡಗಿನಲ್ಲಿ ಹಂಟಾವೈರಸ್!

ಜಿನೀವಾ: ಮೆಡಿಟರೇನಿಯನ್ ಸಮುದ್ರದಲ್ಲಿ ಸಂಚರಿಸುತ್ತಿದ್ದ ಐಷಾರಾಮಿ ಪ್ರವಾಸಿ ಹಡಗಿನ ಪ್ರಯಾಣಿಕರಲ್ಲಿ ಹಂಟಾವೈರಸ್ ಸೋಂಕು ಕಾಣಿಸಿಕೊಂಡಿರುವುದನ್ನು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ದೃಢಪಡಿಸಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಹಡಗನ್ನು ಪ್ರಾದೇಶಿಕ ಬಂದರಿನಲ್ಲಿ ಪ್ರತ್ಯೇಕವಾಗಿ ಇರಿಸಲಾಗಿದೆ.



ಹಡಗಿನಲ್ಲಿದ್ದ ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸಿದಾಗ 12 ಜನರಲ್ಲಿ ಸೋಂಕು ಇರುವುದು ಪತ್ತೆಯಾಗಿದೆ. ಹಡಗಿನ ಆಹಾರ ಸಂಗ್ರಹಣಾ ಘಟಕಗಳಲ್ಲಿನ ಕಲುಷಿತ ವಾತಾವರಣವೇ ಈ ಸೋಂಕಿನ ಮೂಲವೆಂದು ವಿಶ್ವ ಆರೋಗ್ಯ ಸಂಸ್ಥೆ ಪತ್ತೆಹಚ್ಚಿದೆ. ಸಾಮಾನ್ಯವಾಗಿ ಈ ವೈರಸ್ ಇಲಿಗಳ ಮಲ, ಮೂತ್ರ ಅಥವಾ ಲಾಲಾರಸದ ನೇರ ಸಂಪರ್ಕದಿಂದ ಮನುಷ್ಯರಿಗೆ ಹರಡುತ್ತದೆ. ಸೋಂಕಿತರಲ್ಲಿ ತೀವ್ರ ಜ್ವರ, ಸ್ನಾಯು ನೋವು ಮತ್ತು ಸುಸ್ತು ಕಾಣಿಸಿಕೊಂಡಿದ್ದು, ಪ್ರಸ್ತುತ ಎಲ್ಲರನ್ನೂ ಪ್ರತ್ಯೇಕ ವಾರ್ಡ್‌ಗಳಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಆರೋಗ್ಯ ಇಲಾಖೆ ಸ್ಪಷ್ಟನೆ: ವೈದ್ಯಕೀಯ ತಜ್ಞರು ಮತ್ತು ಅಂತರಾಷ್ಟ್ರೀಯ ಆರೋಗ್ಯ ಸಂಸ್ಥೆಗಳು ಈ ಬಗ್ಗೆ ಸ್ಪಷ್ಟನೆ ನೀಡಿದ್ದು, ಹಂಟಾವೈರಸ್ ಕೊರೋನಾದಂತೆ ಜಾಗತಿಕ ಸಾಂಕ್ರಾಮಿಕವಾಗಿ ಹರಡುವ ಸಾಧ್ಯತೆ ಕಡಿಮೆ ಎಂದು ತಿಳಿಸಿವೆ. ಇದು ಗಾಳಿಯ ಮೂಲಕ ಅಥವಾ ಒಬ್ಬ ಮನುಷ್ಯನಿಂದ ಇನ್ನೊಬ್ಬನಿಗೆ ಸುಲಭವಾಗಿ ಹರಡುವುದಿಲ್ಲ. ಕಿರಿದಾದ ಜಾಗಗಳಲ್ಲಿ ಕಲುಷಿತ ಧೂಳನ್ನು ಉಸಿರಾಡುವುದರಿಂದ ಮಾತ್ರ ಇದು ಹರಡುವ ಕಾರಣ, ಸಾರ್ವಜನಿಕರಿಗೆ ಇರುವ ಅಪಾಯ ಕಡಿಮೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಮುಂದಿನ ಕ್ರಮಗಳು: ವೈದ್ಯಕೀಯ ತಂಡಗಳು ಹಡಗಿನ ಸಂಪೂರ್ಣ ನೈರ್ಮಲ್ಯೀಕರಣ ಪ್ರಕ್ರಿಯೆಯನ್ನು ಪೂರ್ಣಗೊಳಿಸುವವರೆಗೆ ಮತ್ತು ಆರೋಗ್ಯ ಸಚಿವಾಲಯ ಸುರಕ್ಷತಾ ಪ್ರಮಾಣಪತ್ರ ನೀಡುವವರೆಗೆ ಹಡಗು ಬಂದರಿನಲ್ಲೇ ಇರಲಿದೆ. ಅಂತಾರಾಷ್ಟ್ರೀಯ ಸಮುದ್ರಯಾನ ಸಂಸ್ಥೆಗಳು ಹಡಗುಗಳಲ್ಲಿ ಇಲಿಗಳ ನಿಯಂತ್ರಣ ಮತ್ತು ನೈರ್ಮಲ್ಯದ ನಿಯಮಗಳನ್ನು ಮರುಪರಿಶೀಲಿಸಲು ಆರಂಭಿಸಿವೆ. ಅಂತಾರಾಷ್ಟ್ರೀಯ ಪ್ರಯಾಣದ ಸಂದರ್ಭದಲ್ಲಿ ಇಂತಹ ಅಪರೂಪದ ವೈರಸ್‌ಗಳ ಮೇಲೆ ನಿಗಾ ಇಡುವ ಪ್ರಯತ್ನದ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಒಟ್ಟು ಸದಸ್ಯರ ಸಂಖ್ಯೆ 35ಕ್ಕೆ ಏರಿಕೆ | ಪ್ರಧಾನಿ ಮೋದಿ,ಶಾ ಭಾಗಿ

ಬಿಹಾರ ಸಂಪುಟಕ್ಕೆ ನೀತೀಶ್ ಪುತ್ರ ಸೇರ್ಪಡೆ

ಪಾಟ್ನಾ: ಬಿಹಾರದ ಸಾಮ್ರಾಟ್ ಚೌಧರಿ ನೇತೃತ್ವದ ಸರ್ಕಾರ ಗುರುವಾರ, 32 ಹೊಸ ಸಚಿವರನ್ನು ಸೇರಿಸಿಕೊಳ್ಳುವ ಮೂಲಕ ಸಚಿವ ಸಂಪುಟವನ್ನು ವಿಸ್ತರಿಸಿದೆ. ಇದರೊಂದಿಗೆ ಸಂಪುಟದ ಒಟ್ಟು ಸದಸ್ಯರ ಸಂಖ್ಯೆ 35ಕ್ಕೇರಿದೆ.

ನೂತನ ಸಚಿವರ ಪೈಕಿ ಬಿಜೆಪಿಯಿಂದ 15, ಜೆಡಿಯು(ಜೆಡಿ-ಯು)ನಿಂದ 13, ಎಲ್‌ಜೆಪಿ(ಆರ್‌ವಿ) ಯಿಂದ ಇಬ್ಬರು ಹಾಗೂ ಎಚ್‌ಎಎಂ(ಎಸ್) ಮತ್ತು ಆರ್‌ಎಲ್‌ಎಂನಿಂದ ತಲಾ ಒಬ್ಬರು ಆಯ್ಕೆಯಾಗಿದ್ದಾರೆ. ರಾಜ್ಯಪಾಲ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅಟಾ ಹಸ್ನೈನ್, ಸಚಿವರಿಗೆ ಪ್ರಮಾಣವಚನ ಬೋಧಿಸಿದರು. ಸಂಪುಟದ ಗರಿಷ್ಠ ಮಿತಿ 36 ಆಗಿದ್ದು, ಒಂದು ಸ್ಥಾನವಷ್ಟೇ ಖಾಲಿ ಇದೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಮತ್ತು ನಿತೀಶ್ ಕುಮಾರ್ ಈ ಸಮಾರಂಭಕ್ಕೆ ಸಾಕ್ಷಿಯಾದರು.

ಸಾಮಾಜಿಕ ಸಮೀಕರಣ: ಈ ವಿಸ್ತರಣೆಯಲ್ಲಿ ಜಾತಿ ಸಮೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಸಾಮಾನ್ಯ ವರ್ಗ, ಹಿಂದುಳಿದ ವರ್ಗ (ಒಬಿಸಿ), ಅತ್ಯಂತ ಹಿಂದುಳಿದ ವರ್ಗ (ಇಬಿಸಿ), ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಮುಸ್ಲಿಂ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಲಾಗಿದೆ. ಬಿಜೆಪಿಯ ಕೋಟಾದಲ್ಲಿ ಆರು ಮಂದಿ ಮೇಲ್ಜಾತಿಯವರಿದ್ದರೆ, ಜೆಡಿಯು ನಾಲ್ವರು ಒಬಿಸಿ ಮತ್ತು ನಾಲ್ವರು ಇಬಿಸಿ ಸಚಿವರಿಗೆ ಅವಕಾಶ



ನೀಡಿದೆ. ಸಂಪುಟದಲ್ಲಿ ಒಟ್ಟು ಐವರು ಮಹಿಳಾ ಸಚಿವರಿದ್ದಾರೆ.

ಹೊಸಬರಿಗೆ ಅವಕಾಶ: ಸಂಪುಟದಲ್ಲಿ ಅನುಭವ ಮತ್ತು ಹೊಸತನದ ಮಿಶ್ರಣವಿದ್ದು, ಏಳು ಮಂದಿ ಹೊಸಬರಿಗೆ ಅವಕಾಶ ನೀಡಲಾಗಿದೆ. ಇದರಲ್ಲಿ ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಸೇರಿದಂತೆ ಮೂವರು ಮಾಜಿ ಮುಖ್ಯಮಂತ್ರಿಗಳ ಪುತ್ರರು ಸಚಿವರಾಗಿ ಆಯ್ಕೆಯಾಗಿದ್ದಾರೆ. ಕಳೆದ ಸಂಪುಟದಲ್ಲಿದ್ದ 19 ಸಚಿವರನ್ನು ಉಳಿಸಿಕೊಳ್ಳಲಾಗಿದ್ದು, ಸಚಿವರಿಗೆ ಇಲಾಖೆಗಳ ಹಂಚಿಕೆ ಶುಕ್ರವಾರದೊಳಗೆ ನಡೆಯುವ ಸಾಧ್ಯತೆಯಿದೆ.


ಸಿಎಂ ಬದಲಾವಣೆ ವರಿಷ್ಠರ ತೀರ್ಮಾನ: ಸಚಿವ ಎಂಬಿಪಾ

• **ವಿಜಯಪುರ:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಷಯದ ಬಗ್ಗೆ ಕಾಂಗ್ರೆಸ್ ಪಕ್ಷದ ವರಿಷ್ಠ ಮಂಡಳಿ ತೀರ್ಮಾನ ಮಾಡುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.



ನಗರದಲ್ಲಿ ಈ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್‌ನಲ್ಲಿ ಹೈ ಕಮಾಂಡ್ ಸುಪ್ರೀಂ ಆಗಿದ್ದು, ವರಿಷ್ಠ ಮಂಡಳಿಯಾದ ಸೋನಿಯಾ ಗಾಂಧಿ, ರಾಹುಲ್‌ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿರ್ಧಾರ ಮಾಡುತ್ತಾರೆ ಎಂದರು. ವೇಣುಗೋಪಾಲ ಹೈಕಮಾಂಡ್‌ನ ಒಂದು ಭಾಗ. ಎಲ್ಲ ನಿರ್ಣಯಪಕ್ಷದ ವರಿಷ್ಠರು ಕೈಗೊಳ್ಳುತ್ತಾರೆ ಎಂದರು. ತ.ನಾಡು ಚುನಾವಣಾ ಫಲಿತಾಂಶ ವಿಚಾರಕ್ಕೆ, ಡಿಎಂಕೆ ಜೊತೆ ನಮ್ಮ ಮೈತ್ರಿ ಇದ್ದದ್ದು ಬಿಜೆಪಿಯನ್ನು ದೂರ ಇಡಲು. ಈಗ ತ.ನಾಡಿನಲ್ಲಿ ವಿಜಯ ಅವರು ಜಾತ್ಯತೀತ ತತ್ವದ ಮೇಲೆ ಬಂದಿದ್ದಾರೆ. ಜನ ಒಂದು ಮನ್ನಣೆ, ತೀರ್ಪು ಕೊಟ್ಟಿದ್ದಾರೆ ಎಂದರು.

ಜನರ ತೀರ್ಪಿಗೆ ಬದ್ಧ ಮತದಾರರ ತೀರ್ಪು ಹುಸಿಯಾಗಬಾರದು, ಜನರ ತೀರ್ಪಿಗೆ ನಾವು ತಲೆಬಾಗಬೇಕು. ವಿಶೇಷವಾಗಿ ಕೋಮುವಾದಿ ಶಕ್ತಿ ನಾವು ವಿರೋಧಿಸುವ ಕಾರಣ, ಇದೆಲ್ಲವನ್ನು ವಿಚಾರ ಮಾಡಿ. ಜನರ ತೀರ್ಪಿಗೆ , ಜಾತ್ಯತೀತ ನಿಲುವು ಹೊಂದಿದ ವಿಜಯ ಅವರ ಪಕ್ಷಕ್ಕೆ ನಾವು ಬೆಂಬಲ ಕೊಡುತ್ತಿದ್ದೇವೆ. ನಾವು ಯಾರಿಗೂ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಲ್ಲ. ಒಬ್ಬ ಯುವಕನಿಗೆ ಜನ ಇಷ್ಟೊಂದು ಬೆಂಬಲ ನೀಡಿದ್ದಾರೆ. ನಾವು ಇಂತಹ ಸಂದರ್ಭದಲ್ಲಿ ಅವರಿಗೆ ಬೆಂಬಲ ನೀಡದಿದ್ದರೆ ಜನ ನಮ್ಮನ್ನು ತಪ್ಪಿತಸ್ಥರನ್ನಾಗಿ ಮಾಡುತ್ತಾರೆ. ಜಾತ್ಯತೀತ ಶಕ್ತಿ ದೂರ ಇಡಲು, ಹಾಗೂ ಜನರ ತೀರ್ಪಿಗೆ ಬೆಂಬಲಿಸಲು ನಾವು ವಿಜಯ ಅವರಿಗೆ ಬೆಂಬಲ ಕೊಡುತ್ತೇವೆ ಎಂದರು.



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದಲ್ಲಿ ಗುರುವಾರ ಆಯೋಜಿಸಲಾಗಿದ್ದ ಜೆಎಸ್ ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಭಾಗವಹಿಸಿದ್ದರು. ಸುತ್ತೂರು ಶ್ರೀಗಳು ಇದ್ದರು.

ಪರಾಜಿತ ಕೈ ಅಭ್ಯರ್ಥಿ ಟಿ.ಡಿ. ರಾಜೇಗೌಡ ಆಗ್ರಹ

ಅಂಚೆ ಮತ ಮತ್ತೆ ಎಣಿಕೆಯಾಗಲಿ

• **ಬೆಂಗಳೂರು:** ಅಂಚೆ ಮತಗಳನ್ನು ತಿದ್ದಿರುವ ಅನುಮಾನ ಇರುವುದರಿಂದ ಅದರ ನ್ಯಾಯಯುತ ತನಿಖೆಯಾಗಬೇಕು, ಅಂಚೆ ಮತಗಳನ್ನು ಮರುಎಣಿಕೆ ಮಾಡಬೇಕು ಎಂದು ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆಮತ ಮರು ಎಣಿಕೆಯಲ್ಲಿ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಆಗ್ರಹಿಸಿದ್ದಾರೆ.



ಗುರುವಾರ ರಾಜ್ಯ ಮುಖ್ಯ ಚುನಾವಣಾಧಿಕಾರಿಯನ್ನು ಭೇಟಿಯಾಗಿ ಈ ಕುರಿತು ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಅವರು, 2023ರ ಚುನಾವಣೆ ಮತ ಎಣಿಕೆಯ ವೇಳೆ ಜೆಡಿಎಸ್ ಕಾಂಗ್ರೆಸ್, ಬಿಜೆಪಿ, ಪಕ್ಷೇತರರ ಅಭ್ಯರ್ಥಿಗಳ ಕೌಂಟಿಂಗ್ ಏಜೆಂಟ್ ಇದ್ದರು. ಪಾರದರ್ಶಕವಾಗಿ ಮತ ಎಣಿಕೆ ಆಗಿತ್ತು. ಮತ ಎಣಿಕೆ ಬಳಿಕ ರಾಜೇಗೌಡ ಗೆದ್ದರು ಎಂದು ಘೋಷಣೆ ಮಾಡಿದ್ದರು. ಅಂಚೆ ಮತಗಳಲ್ಲಿ ಸಿಂಧು ಯಾವುದು, ಅಸಿಂಧು ಯಾವುದು ಎಂದು ಎಲ್ಲರಿಗೂ ತೋರಿಸಿದ್ದರು. ಆಗ ಯಾವುದೇ ಏಜೆಂಟರು ಆಕ್ಷೇಪ ವ್ಯಕ್ತಪಡಿಸದೇ ಸಹಿ ಮಾಡಿದ್ದರು ಎಂದರು.

ಬಳಿಕ ನನ್ನ ವಿರುದ್ಧ ಎಲೆಕ್ಷನ್ ಪಿಟಿಶನ್ ಹಾಕಿ, ಅನೇಕ ಆರೋಪ ಮಾಡಿದರು. ಈ ಹಿನ್ನೆಲೆ ಮರು ಎಣಿಕೆಗೆ ಉಚ್ಚ ನ್ಯಾಯಾಲಯ ಆದೇಶ ಮಾಡಿತ್ತು. ನ್ಯಾಯಾಲಯ ಅಂಚೆಮತಗಳನ್ನು ಮರು ಎಣಿಕೆ ಮಾಡಲು ಹೇಳಿತು. ಮರು ಎಣಿಕೆ ವೇಳೆ ಬಂಡಲ್ ಅಸಿಂಧು ಆಗಿದೆ. ಮತಗಳನ್ನು ತಿದ್ದಲಾಗಿದೆ ಎನ್ನುವುದು ನಮ್ಮ ಅನುಮಾನ. ನ್ಯಾಯಯುತ ತನಿಖೆ ಆಗಲಿ ಎಂದು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದೇವೆ. ಕೇಂದ್ರ ಚುನಾವಣಾ ಆಯೋಗಕ್ಕೆ ಮನವಿ ಕಳುಹಿಸುತ್ತೇವೆ ಎಂದು ಹೇಳಿದ್ದಾರೆ. ಯಾವ ಪಕ್ಷದವರಿಗೂ ಈ ರೀತಿಯ ಅನ್ಯಾಯ ಆಗಬಾರದು. ಚುನಾವಣಾ ಆಯೋಗದ ಮೇಲೆ ನಂಬಿಕೆ ಇದೆ ಎಂದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ, ವಿಧಾನ ಪರಿಷತ್ ಸದಸ್ಯೆ ಆರತಿ ಕೃಷ್ಣ, ರಾಜೇಗೌಡ ಅವರ ಏಜೆಂಟ್ ಆಗಿದ್ದ ಸುಧೀರ್ ಕುಮಾರ್ ಮುರೊಳಿ ಇದ್ದರು.

ಕಿರುಸುದ್ದಿ

ಸಚಿವರಿಂದ ತುರ್ತು ಕಾರ್ಯಾಚರಣೆ ಕೇಂದ್ರ

• **ಬೆಂಗಳೂರು:** ಹೆಲ್ತ್ ಎಮರ್ಜೆನ್ಸಿ ಆಪರೇಷನ್ ಸೆಂಟರ್ (ಎಚ್‌ಇಒಸಿ) ತುರ್ತು ಸಮಯದಲ್ಲಿ ಸಮಯೋಚಿತ ನಿರ್ಧಾರ, ಸಂಪನ್ಮೂಲಗಳ ಸರಿಯಾದ ಬಳಕೆಗೆ ಮತ್ತು ಜನರಿಗೆ ಸರಿಯಾದ ಮಾಹಿತಿಯನ್ನು ತಲುಪಿಸಿ, ಆತಂಕಕ್ಕೆ ಒಳಗಾಗದಂತೆ ಎಚ್ಚರಿಸಲು ಕೇಂದ್ರೀಯ ನಿಯಂತ್ರಣ ಘಟಕವಾಗಿ ಇದು ಕೆಲಸ ನಿರ್ವಹಿಸಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿ ದರು.



ಗುರುವಾರ ನಗರದ ಆರೋಗ್ಯಸೌಧದಲ್ಲಿ ಆರೋಗ್ಯ ತುರ್ತು ಕಾರ್ಯಾಚರಣೆ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿ, ಕೋವಿಡ್ ಸಂದರ್ಭದಲ್ಲಿ ಉಂಟಾದ ಸಮನ್ವಯದ ಕೊರತೆ ನೀಗಿಸಲು ಈ ವ್ಯವಸ್ಥೆ ಅತ್ಯವಶ್ಯಕ ವಾಗಿದ್ದು ಸಾಂಕ್ರಾಮಿಕ ರೋಗಗಳು, ಬೆಂಕಿ ಅವಘಡಗಳು, ಪ್ರಕೃತಿ ವಿಕೋಪ ಮುಂತಾದವುಗಳನ್ನು ಸಮರ್ಪಕವಾಗಿ ನಿರ್ವಹಿಸಲು ಡಬ್ಲ್ಯುಎಚ್‌ಒ ಮಾರ್ಗದರ್ಶನದಂತೆ, ಪ್ರಧಾನಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲ ಸೌಕರ್ಯ ಮಿಷನ್ ಅಡಿಯಲ್ಲಿ ಪ್ರತಿ ರಾಜ್ಯದಲ್ಲೂ ಕಮಾಂಡ್ ಕಂಟ್ರೋಲ್ ರೂಂ ಮಾಡಲಾಗುತ್ತಿದೆ ಎಂದರು. ಕೇವಲ ಆರೋಗ್ಯ ಇಲಾಖೆ ಮಾತ್ರವಲ್ಲ, ತುರ್ತು ಸಂದರ್ಭಗಳಲ್ಲಿ ಕಂದಾಯ, ವಿಪತ್ತು ನಿರ್ವಹಣಾ ಪ್ರಾದಿಕಾರ, ಪೋಲಿಸ್, ಅಗ್ನಿಶಾಮಕ ಸೇವೆ ಮುಂತಾದವು ಗಳ ಸಮನ್ವಯದಿಂದ ಪರಿಸ್ಥಿತಿ ನಿರ್ವಹಿಸಲು ಇದು ಸಹಕಾರಿ ಆಗಲಿದೆ. ದಿನದ 24/7 ಕಾರ್ಯನಿರ್ವಹಿಸುವ ಈ ಕೇಂದ್ರ ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಸೇವೆಗಳು ಇವುಗಳೊಂದಿಗೆ ತಕ್ಷಣ ಸಂಪರ್ಕ ಸಾಧಿಸಿ ಮಾಹಿತಿ ವಿನಿಮಯ ಮತ್ತು ಸೂಕ್ತ ನಿರ್ದೇಶನ ನೀಡಲು ನೆರವಾಗಲಿದೆ. ಒಟ್ಟಾರೆ ಇದೊಂದು ಅತ್ಯಾಧುನಿಕ ಆರೋಗ್ಯ ತುರ್ತು ಪರಿಸ್ಥಿತಿ ನಿರ್ವಹಣಾ ಘಟಕವಾಗಿ ಕಾರ್ಯ ನಿರ್ವಹಿಸಲಿದೆ ಎಂದು ತಿಳಿಸಿದರು. ಈ ವೇಳೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ, ಆಯುಕ್ತ ಗುರುದತ್ ಹೆಗಡೆ, ಅವಿನಾಶ್ ಮೆನನ್ ಇದ್ದರು.

ಆದಿದ್ವಾರ ಅಪ್ಲಿಕೇಶನ್ ಬಿಡುಗಡೆ

• **ಬೆಂಗಳೂರು:** ಅಸಿಸ್ಟೆಕ್ ಫೌಂಡೇಶನ್ (ಎಟಿಎಫ್) ಸಹಯೋಗದಲ್ಲಿ ವಿಶೇಷಚೇತನರಿಗೆ ಉದ್ಯೋಗ ಅವಕಾಶ ಮತ್ತು ಕೌಶಲಾಭಿವೃದ್ಧಿಗೆ ಆದ್ಯತೆ ನೀಡಲು ಅವಕಾಶ ಒದಗಿಸುವ ಆದಿದ್ವಾರ ಅಪ್ಲಿಕೇಶನ್ ಅನ್ನು ಗುರುವಾರ ವಿಕಾಸಸೌಧದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ್ ಅವರು ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಸಚಿವರು, ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ವಿಶೇಷ ಚೇತನರಿಗೆ (ಪಿಡಬ್ಲ್ಯುಡಿಗಳು) ವಿಶೇಷ ಉದ್ಯೋಗ ಮೇಳವನ್ನು ಆಗಸ್ಟ್‌ನಲ್ಲಿ ನಡೆಸಲಾಗುವುದು ಎಂದು ಘೋಷಿಸಿದರು. ವಿಕಲಚೇತನರು ಯಾರಿಗೂ ಕಡಿಮೆ ಇಲ್ಲ, ಅವರಿಗೆ ವಿಶೇಷ ಪ್ರತಿಭೆ ಇರುತ್ತದೆ. ಕಾರ್ಪೊರೇಟ್ ಸಂಸ್ಥೆಗಳು ನೇಮಕಾತಿಯ ಸಮಯದಲ್ಲಿ ಅವರಿಗೆ ಸಮಾನ ಅವಕಾಶ ಮತ್ತು ಚಿಕಿತ್ಸೆಯನ್ನು ನೀಡಬೇಕು ಎಂದು ಹೇಳಿದರು. ಆದಿದ್ವಾರ ವೇದಿಕೆಯು ಉದ್ಯೋಗಾವಕಾಶಗಳು, ಇಂಟರ್ನ್‌ಶಿಪ್‌ಗಳು, ಕೌಶಲ ಮತ್ತು ಕೌಶಲಾಭಿವೃದ್ಧಿ ಕಾರ್ಯಕ್ರಮಗಳಿಗೆ ವೇದಿಕೆ ಕಲ್ಪಿಸುತ್ತದೆ. ಉದ್ಯೋಗದಾತರು ಸಮಗ್ರ ಉದ್ಯೋಗ ಪಾತ್ರಗಳನ್ನು ಪೋಸ್ಟ್ ಮಾಡಲು ಮತ್ತು ವೈವಿಧ್ಯಮಯ ಪ್ರತಿಭಾ ಪೂಲ್ ನಿರ್ಮಿಸಲು ನೆರವಾಗಲಿದೆ. ಎಐ ಚಾಲಿತ ಉದ್ಯೋಗ ಚಾಲಿತ ಹೊಂದಾಣಿಕೆ, ಇಂಜಿನ್ ಕೌಶಲಗಳು, ಆಸಕ್ತಿಗಳು ಮತ್ತು ಅವಶ್ಯಕತೆಗಳನ್ನು ಸೂಕ್ತವಾಗಿ ಕಲ್ಪಿಸಲಿದೆ ಎಂದರು. ಇದೇ ವೇಳೆ ಸಚಿವ ಡಾ. ಪಾಟೀಲ್ ಅವರು ಮುಂಬರುವ ಉದ್ಯೋಗ ಮೇಳದ ಅಧಿಕೃತ ಲೋಗೋವನ್ನು ಸಹ ಅನಾವರಣಗೊಳಿಸಿದರು.

ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಸಲಹೆ

ಬಂಧುತ್ವ ನೆಲೆಗೊಳ್ಳಬೇಕು

• **ಮೈಸೂರು:** ಭಾಷೆ, ಜಾತಿ, ಪಂಗಡಗಳನ್ನು ಮೀರಿ ಬಂಧುತ್ವ ನೆಲೆಗೊಳ್ಳಬೇಕು ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಹೇಳಿದರು.

ಗುರುವಾರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಸುತ್ತೂರು ಮಠದಲ್ಲಿ ನಡೆದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸದಲ್ಲಿ ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ ಕುರಿತು ವಿಷಯ ಮಂಡಿಸಿದ ಬಳಿಕ ನಡೆದ ಪ್ರಶ್ನೋತ್ತರದಲ್ಲಿ ಮಾತನಾಡಿ, ಅಸ್ತಿತ್ವಕ್ಕಾಗಿ ಮತ್ತೊಬ್ಬರ ವಿರುದ್ಧ ಹೋರಾಟ ನಡೆಸುವುದು ಪಾಶ್ಚಾತ್ಯ ಪರಿಕಲ್ಪನೆಯಾಗಿದೆ. ಆದರೆ, ಭಾರತೀಯರು ಭ್ರಾತೃತ್ವ ಮತ್ತು ಪರಸ್ಪರ ಸಹಾಯದೊಂದಿಗೆ ನಾಗರಿಕತೆ ಕಟ್ಟಿದ್ದಾರೆ. ನಮ್ಮ ಸಮಾಜವು, ಪರೋಪಕಾರವೇ ಸೇವೆ, ಕರ್ತವ್ಯವೇ ಜೀವನದ ಪರಮ ಗುರಿಯೆಂದು ತಿಳಿದಿದೆ ಎಂದು ವಿವರಿಸಿದರು.

ಪಾಶ್ಚಾತ್ಯ ದೇಶಗಳಲ್ಲಿ ಸೊಸೈಟಿ ಎಂಬ ಪರಿಕಲ್ಪನೆ ಸಾಮಾಜಿಕ ಒಪ್ಪಂದದ ಸಿದ್ಧಾಂತದ ಮೇಲೆ ನಿರ್ಮಾಣವಾಗಿದೆ. ಅಲ್ಲಿ ಜನರು ಪರಸ್ಪರ ಸಹಕಾರ ಮತ್ತು ಲಾಭದ ಉದ್ದೇಶದಿಂದ ಒಟ್ಟಿಗೆ ಬದುಕುತ್ತಾರೆ. ಆದರೆ, ಭಾರತೀಯ ಸಮಾಜದ ಪರಿಕಲ್ಪನೆ ಅದಕ್ಕಿಂತ ಭಿನ್ನವಾಗಿದೆ. ಭಾರತದಲ್ಲಿ ಸಮಾಜವೆಂದರೆ ಕೇವಲ ಜನರ ಗುಂಪು ಅಥವಾ ಒಪ್ಪಂದದ ಆಧಾರದ ಮೇಲೆ ನಿರ್ಮಾಣವಾದ ವ್ಯವಸ್ಥೆಯಲ್ಲ, ದೀರ್ಘಕಾಲ ಒಟ್ಟಿಗೆ ಬದುಕಿ, ಪರಸ್ಪರ ಆತ್ಮೀಯತೆ, ಒಂದೇತನದ ಭಾವನೆ ಹಾಗೂ ಸಾಮೂಹಿಕ ಗುರಿಯನ್ನು ಹೊಂದಿರುವ ಜನರ ಸಮೂಹವೇ ಸಮಾಜ. ಕುಟುಂಬದಿಂದ ಆರಂಭವಾಗುವ ಈ ಒಗ್ಗಟ್ಟು ಪರಿಸರ, ಸಂಸ್ಕೃತಿ ಮತ್ತು ಜೀವನ ಮೌಲ್ಯಗಳ ಮೂಲಕ ವಿಸ್ತಾರಗೊಳ್ಳುತ್ತದೆ ಎಂದರು.



ನೀವು ನನಗೆ ಉಪಕಾರ ಮಾಡಿದರೂ ಮಾಡದಿದ್ದರೂ ನೀವು ನನ್ನವರೇ. ಆದ್ದರಿಂದ ನಾನು ಮಾಡುವ ಪ್ರತಿಯೊಂದು ಕಾರ್ಯವೂ ಇತರರ ಹಿತಕ್ಕಾಗಿ ಇರಬೇಕು ಎಂಬುದು ಭಾರತೀಯ ಸಮಾಜದ ಮೂಲ ಭಾವನೆ. ಪರೋಪಕಾರ ಮತ್ತು ಸೇವೆಯ ಮೌಲ್ಯಗಳೊಂದಿಗೆ ಉನ್ನತ ಜೀವನ ಸಾಧಿಸುವುದೇ ಭಾರತೀಯ ಸಮಾಜದ ಗುರಿಯಾಗಿದೆ ಎಂದು ತಿಳಿಸಿದರು.

ದೇಶದಲ್ಲಿ ಜನಸಂಖ್ಯೆ ಮಿತಿ ಮೀರಿ ಬೆಳೆಯುತ್ತಿದೆ. ಜನಸಂದಣಿ, ವಾಹನಗಳ ಸಂದಣಿ ಹೆಚ್ಚಾಗುತ್ತಿದ್ದು, ಅನೇಕ ದುಷ್ಪರಿಣಾಮಗಳನ್ನು ಬೀರುತ್ತಿದೆ. ಹಾಗಾಗಿ ಜನಸಂಖ್ಯೆ ನಿಯಂತ್ರಣವೇ ನಮ್ಮ ಮೊದಲ ಆದ್ಯತೆಯಾಗಬೇಕು. ಕುಟುಂಬ ಕಲ್ಯಾಣ ಯೋಜನೆಯನ್ನು ಬಹಳ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಜನರು ಕೂಡ ಜಾಗೃತರಾಗಿ ಸಹಕರಿಸಬೇಕು. ಪಾಲಿಸಿಯನ್ನು ಎಲ್ಲರೂ ಪಾಲಿಸಬೇಕು, ಯಾರಿಗೂ ಕೂಡ ವಿನಾಯಿತಿಯನ್ನು ನೀಡಬಾರದು. ಯುವ ಸಮೂಹ ಜನಸಂಖ್ಯೆ ಸ್ಫೋಟದ ದುಷ್ಪರಿಣಾಮ ಬಗ್ಗೆ ಚಿಂತಿಸಬೇಕು. ಏರುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸದಿದ್ದರೆ ಭವಿಷ್ಯದಲ್ಲಿ ಅನೇಕ ಸಮಸ್ಯೆಗಳು, ಕೊರತೆಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರಾಷ್ಟ್ರವೆಂದರೆ ಕೇವಲ ರಾಜಕೀಯ ವ್ಯವಸ್ಥೆ ಅಥವಾ ಭೌಗೋಳಿಕ ಗಡಿಯಲ್ಲ, ಭೂಮಿ, ಜನರು, ಸಂಸ್ಕೃತಿ ಮತ್ತು ಸಾಮೂಹಿಕ ಚೇತನವೇ ರಾಷ್ಟ್ರದ ಮೂಲ ಅಂಶಗಳಾಗಿವೆ. ಭಾರತದಲ್ಲಿ ವಿವಿಧ ಆಡಳಿತ ವ್ಯವಸ್ಥೆಗಳು ಮತ್ತು ರಾಜ್ಯಗಳು ಇದ್ದರೂ ದೇಶದ ಏಕತೆಯ ಭಾವನೆ ಭೂಮಿಯೊಂದಿಗೆ ಹೊಂದಿರುವ ಆತ್ಮೀಯ ಸಂಬಂಧದಿಂದಲೇ ರೂಪುಗೊಂಡಿದೆ ಎಂದು ಹೇಳಿದರು. ಭಾರತೀಯ ಸಮಾಜದ ಮೂಲಭೂತ ತತ್ವ ಅಂತರಂಗದಲ್ಲಿ ಏಕತೆ ಸಾಧಿಸುವುದೇ ಆಗಿದೆ. ಮಾನವ, ಸಮಾಜ, ಸೃಷ್ಟಿ ಪರಸ್ಪರ ಸಂಬಂಧ ಹೊಂದಿವೆ. ಮನುಷ್ಯ ಕೇವಲ ದೇಹ ಅಥವಾ ಮನಸ್ಸಲ್ಲ, ಆತ್ಮ ಎಂಬ ಶಕ್ತಿಯು ಇವೆಲ್ಲವನ್ನೂ ಒಂದಾಗಿ ಕಟ್ಟುತ್ತದೆ ಎಂದರು.

ಏನಾಸಂ ಜಾರಿಯಾಗಲಿ

ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕಾಗಿದೆ. ದೇಶದಲ್ಲಿ ಏಕರೂಪ ನಾಗರೀಕ ಸಂಹಿತೆಯನ್ನು ಜಾರಿಗೊಳಿಸಬೇಕಾಗಿದೆ. ಇದನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೊಳಿಸಬೇಕು. ಈಗಾಗಲೇ ಹಲವು ರಾಜ್ಯಗಳಲ್ಲಿ ಜಾರಿಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಉಳಿದ ರಾಜ್ಯಗಳಲ್ಲೂ ಜಾರಿಗೆ ಬರುವ ವಿಶ್ವಾಸವಿದೆ ಎಂದರು. ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಯವರು ಮಾತನಾಡಿದರು.

ತ.ನಾಡು ರಾಜ್ಯಪಾಲರ ನಡೆಗೆ ಡಿಕೆಶಿ ಖಂಡನೆ

• **ಬೆಂಗಳೂರು:** ಟಿವಿಕೆ ಪಕ್ಷದಿಂದ ಅತಿ ಹೆಚ್ಚು ಶಾಸಕರಾಗಿ ಆಯ್ಕೆಯಾಗಿರುವುದರಿಂದ ವಿಜಯ್ ಅವರಿಗೆ ಸರ್ಕಾರ ರಚನೆ ಮಾಡಿ ಬಹುಮತ ಸಾಬೀತುಪಡಿಸುವುದನ್ನು ತಡೆಯಲು ತಮಿಳುನಾಡಿನ ರಾಜ್ಯಪಾಲರಿಗೆ ಯಾವುದೇ ರೀತಿಯ ಅಧಿಕಾರವಿಲ್ಲ, ರಾಜ್ಯಪಾಲರ ನಡೆ ಸರಿಯಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.



ಗುರುವಾರ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿವಿಕೆ ಪಕ್ಷಕ್ಕೆ ತ.ನಾಡು ರಾಜ್ಯಪಾಲರು ಬಹುಮತ ಸಾಬೀತಿಗೆ ಅವಕಾಶ ನೀಡದಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ರಾಜ್ಯಪಾಲರು ಸರ್ಕಾರ ರಚನೆಗೆ ಅವಕಾಶ ನೀಡಬೇಕು. ಕರ್ನಾಟಕದಲ್ಲಿ ಯಡಿಯೂರಪ್ಪ ಅವರಿಗೆ ರಾಜ್ಯಪಾಲರು ಅನುಮತಿ ನೀಡಿದ್ದರು.

ಹೆಚ್ಚು ಸ್ಥಾನ ಗಳಿಸಿದ ಪಕ್ಷಗಳಿಗೆ ಸರ್ಕಾರ ರಚಿಸಲು ಈ ಹಿಂದೆಯೂ ಅನುಮತಿ ನೀಡಲಾಗಿತ್ತು. ರಾಷ್ಟ್ರಪತಿಗಳಾಗಿದ್ದ ನಾರಾಯಣನ್, ಅಬ್ದುಲ್ ಕಲಾಂ ಅವರೂ ಈ ರೀತಿ ಮಾಡಿದ್ದರು. ವಾಜಪೇಯಿ ಅವರಿಗೂ ಸಹ ಇದೇ ರೀತಿ ಸರ್ಕಾರ ರಚಿಸಲು ಅನುಮತಿ ನೀಡಿ ಸದನದಲ್ಲಿ ಬಹುಮತ ಸಾಬೀತಿಗೆ ಅವಕಾಶ ನೀಡಲಾಗಿತ್ತು. ಆದರೆ ಈಗ ಟಿವಿಕೆಗೆ ಅವಕಾಶ ನೀಡದಿರುವುದು ತಪ್ಪು ಎಂದರು.

ಜನರ ಭಾವನೆಗಳಿಗೆ ಬೆಲೆ ಕೊಡಿ: ಮೊದಲು ಬಹುಮತ ಸಾಬೀತಿಗೆ ಅವಕಾಶ ನೀಡಬೇಕು. ಒಂದು ರಾಜ್ಯದ ಜನರ ಭಾವನೆಗಳಿಗೆ ಬೆಲೆ ಕೊಡಬೇಕು. ಇದು ಪ್ರಜಾಪ್ರಭುತ್ವ. ಒಂದು ಮತದಿಂದ ಬಹುಮತ ಬರಬಹುದು, ಕಳೆದುಕೊಳ್ಳಬಹುದು. ವಾಜಪೇಯಿ ಅವರಿಗೆ ಇದೇ ರೀತಿ ಆಗಲಿಲ್ಲವೇ? ಒಂದೊಮ್ಮೆ ಬಹುಮತ ಸಾಬೀತು ಆಗದೇ ಹೋದರೆ ಮುಂದಿನ ಆಯ್ಕೆ ನೋಡಬಹುದು ಎಂದಿ ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಹೊಸ ಪಾಲಿಕೆ ಕಚೇರಿ ಸ್ಥಳ ಪರಿಶೀಲನೆ

ಬೆಂಗಳೂರು ಉತ್ತರ ಪಾಲಿಕೆಯ ಹೊಸ ಕಚೇರಿ ನಿರ್ಮಾಣ ಮಾಡಬೇಕು ಎಂದು ಮೂರು- ನಾಲ್ಕು ಸ್ಥಳಗಳ ಪ್ರಸ್ತಾವನೆಯಿದೆ. ಸ್ಥಳ ಪರಿಶೀಲನೆ ಮಾಡಿ ನಿರ್ಧಾರ ಮಾಡಬೇಕಿದೆ. ಇದರ ಬಗ್ಗೆ ಮಂತ್ರಿಗಳು, ಶಾಸಕರು ತಮ್ಮದೇ ಆದ ಅಭಿಪ್ರಾಯ ನೀಡಿದ್ದಾರೆ. ಸ್ಥಳ ಪರಿಶೀಲನೆ ನಂತರ ತೀರ್ಮಾನ ಮಾಡಲಾಗುವುದು. ಜಿಕೆವಿಕೆಯಲ್ಲಿ ನಿರ್ಮಾಣ ಮಾಡಲಾಗುವುದೇ ಎಂದಾಗ, ಇಲ್ಲ, ಸದ್ಯಕ್ಕೆ ಆ ಆಲೋಚನೆ ಇಲ್ಲ. ಈ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಉತ್ತರಿಸಿದರು.

ಬಿಜೆಪಿಗೆ ಅಭೂತಪೂರ್ವ ಜಯ

• **ಬೆಂಗಳೂರು:** ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಗೆ ಅಭೂತಪೂರ್ವವಾದ ಜಯ ಸಿಕ್ಕಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ದೊಡ್ಡ ಮಟ್ಟದಲ್ಲಿ ಆಶೀರ್ವಾದ ಮಾಡಿದ್ದಾರೆ. ಆ ರಾಜ್ಯದಲ್ಲಿ ಟಿಎಂಸಿ ಆಡಳಿತ ದಲ್ಲಿ ಜನರು ನರಕಯಾತನೆ ಅನುಭವಿ ಸುತ್ತಿದ್ದರು. ಆ ನರಕದಿಂದ ಜನರನ್ನು ಮೋದಿ ಹೊರ ತಂದಿದ್ದಾರೆ. ಈ ಬಾರಿಯೂ ಬಿಜೆಪಿ ಗೆಲ್ಲದೇ ಇದ್ದಿದ್ದರೆ ಅಲ್ಲಿನ ಜನರ ಸ್ಥಿತಿ ಏನಾಗುತ್ತಿತ್ತು ಎಂದು ಊಹಿಸಿ ಎಂದು ಎಂದು ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.



ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ನಮ್ಮ ಪಕ್ಷಕ್ಕೆ ಜನ ಬೆಂಬಲ ನೀಡಿದ್ದಾರೆ. ತಮಿಳುನಾಡು ಮತ್ತು ಕೇರಳದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರ ಬೆಂಬಲದಿಂದ ಮತಬ್ಯಾಂಕ್ ಹೆಚ್ಚಿಸಿಕೊಂಡಿದ್ದೇವೆ. ಇನ್ನೂ ಅಲ್ಲಿ ಮುಂದಿನ ಚುನಾವಣೆಯಲ್ಲಿ ಎಲ್ಲಾ ಪಕ್ಷಗಳಂತೆ ಬಿಜೆಪಿ ಶಕ್ತಿ ಹೆಚ್ಚಲಿದೆ. ಸ್ವತಂತ್ರ ಸರ್ಕಾರ ಮಾಡುವ ಶಕ್ತಿ ಯನ್ನು ಜನರು ಕೊಡುತ್ತಾರೆ. ಕೇರಳದಲ್ಲಿ ಕಾಂಗ್ರೆಸ್, ಯುಡಿಎಫ್ 7 ಪಕ್ಷಗಳ ಜೊತೆಗೂಡಿದೆ. ತುಂಡು ತುಂಡು ಪಕ್ಷ ಸೇರಿ ಖಿಚಡಿ ಪಕ್ಷ ಆಗಿದೆ ಎಂದು ಗೇಲಿ ಮಾಡಿದರು.

ಪಂಚರಾಜ್ಯ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ವರ್ಗದ ಜನ ಹೆಚ್ಚಿನ ಪ್ರಮಾಣದಲ್ಲಿ ಬಿಜೆಪಿಗೆ ಬೆಂಬಲ ನೀಡಿದ್ದಾರೆ. ಆದರೆ, ಕಾಂಗ್ರೆಸ್‌ಗೆ ಮುಸ್ಲಿಮರು ಸಾಕಷ್ಟು ಬೆಂಬಲ ಕೊಟ್ಟಿದ್ದಾರೆ. ಕಾಂಗ್ರೆಸ್ ಮುಸ್ಲಿಮರನ್ನು ದಾರಿ ತಪ್ಪಿಸಿ ಬಿಜೆಪಿ ಗುಮ್ಮ ತೋರಿಸುತ್ತಾ ಬಂದಿದೆ. ಮುಸ್ಲಿಮರು ಇಲ್ಲದಿದ್ದರೆ ಕಾಂಗ್ರೆಸ್ ಇಲ್ಲ, ಪಶ್ಚಿಮ ಬಂಗಾಳದಲ್ಲೂ ಬಿಜೆಪಿ ಪರಿಶಿಷ್ಟ ಜಾತಿ, ವರ್ಗಗಳಿಗೆ ಅವಕಾಶ ನೀಡಿದೆ ಎಂದರು.

ಸಂವಿಧಾನಕ್ಕೆ ಮಮತಾ ಬ್ಯಾನರ್ಜಿ ಅಗೌರವ

ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ರಾಜೀನಾಮೆ ನೀಡುವುದಿಲ್ಲ ಎನ್ನುವ ಮೂಲಕ ಸಂವಿಧಾನಕ್ಕೆ ಅಗೌರವ ತೋರಿದ್ದಾರೆ. ಅವರಿಗೆ ಸಮಸ್ಯೆ ಇದ್ದರೆ ನ್ಯಾಯಾಲಯದ ಮೊರೆ ಹೋಗಬೇಕೇ ಹೊರತು ಕೊಲೆ ಮಾಡಿಸಬಾರದು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗುರುವಾರ ಸುದ್ದಿಗಾರ ರೊಂದಿಗೆ ಮಾತ ನಾಡಿ, ಮಮತಾ ಬ್ಯಾನರ್ಜಿ ಸಂವಿಧಾನಕ್ಕೆ ಅಗೌರವ ತೋರಿದ್ದಾರೆ. ತಮ್ಮನ್ನು ವಜಾ ಮಾಡಿ ಕಳುಹಿಸಲಿ, ಆದರಿಂದ ಹೊಸ ನಾಟಕ ನಡೆಯಲಿ ಎಂದೇ ಅವರು ಬಯಸುತ್ತಿದ್ದಾರೆ. ಅವರಿಗೆ ಕಾನೂನು, ಸಂವಿಧಾನ ಎಂಬುದು ಗೊತ್ತಿಲ್ಲ. ಮುಖ್ಯಮಂತ್ರಿ ಕುರ್ಚಿಗೆ ಅವರು ಫೆವಿಕಾಲ್ ಹಾಕಿಕೊಂಡು ಕೂತಿದ್ದಾರೆ. ಮಾನ ಮರ್ಯಾದೆ ಇರುವ ಯಾವುದೇ ಮುಖ್ಯಮಂತ್ರಿ ರಾಜೀನಾಮೆ ಕೊಟ್ಟು ನಿರ್ಗಮಿಸುತ್ತಾರೆ ಎಂದು ಹೇಳಿದರು.

ಸಾಹಿತ್ಯ ಹಬ್ಬ

• **ಶಿವಮೊಗ್ಗ:** ಅಭಿವ್ಯಕ್ತಿ ಟ್ರಸ್ಟ್‌ನಿಂದ ಮೇ 9 ಮತ್ತು 10ರಂದು ಕರ್ನಾಟಕ ಸಂಘದಲ್ಲಿ ಶಿವಮೊಗ್ಗ ಸಾಹಿತ್ಯ ಹಬ್ಬ – 2026 (ಶಿವಮೊಗ್ಗ ಲಿಟ್ ಫೆಸ್ಟ್) ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಡಾ.ಸುಧೀಂದ್ರ ಪಿ.ಆರ್. ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಇದೊಂದು ವಿಶಿಷ್ಟರೀತಿಯ ಸಾಹಿತ್ಯ ಕಾರ್ಯಕ್ರಮವಾಗಿದೆ. ಈ ಸಾಹಿತ್ಯಹಬ್ಬದಲ್ಲಿ ಚರ್ಚಾಗೋಷ್ಠಿಗಳು, ಸಾಹಿತ್ಯ ಸಂವಾದ, ಕವಿಗೋಷ್ಠಿ, ಲೇಖಕರೊಂದಿಗೆ ಸಂವಾದ, ಪುಸ್ತಕ ಮಾರಾಟ, ಕೇಳುಗರೊಂದಿಗೆ ಮಾತು. ಈ ರೀತಿಯ ಕಾರ್ಯಕ್ರಮಗಳು ಆಯೋಜನೆಯಾಗಿವೆ ಎಂದರು. ಮೇ 9ರಂದು ಸಂಜೆ ಉದ್ಘಾಟನಾ ಗೋಷ್ಠಿ–1ರಲ್ಲಿ ಭಾರತೀಯ ಸಾಹಿತ್ಯದಲ್ಲಿ ರಸಧ್ವನಿ ಔಚಿತ್ಯ ಕಾರ್ಯಕ್ರಮವಿರುತ್ತದೆ. ಸಂವಾದನಾಕಾರರಾಗಿ ಡಾ.ಎಸ್. ಆರ್. ಲೀಲಾ, ಪತ್ರಕರ್ತ ಸೂರ್ಯ ಪ್ರಕಾಶ್ ಪಂಡಿತ್ ಭಾಗವಹಿಸುತ್ತಾರೆ. ಸಂಜೆ 7 ಗಂಟೆಗೆ ನಾದೋಲ್ಲಾಸ ವಿಶೇಷ ವಯಲಿನ್ ಕಾರ್ಯಕ್ರಮವಿರುತ್ತದೆ. ಭಾನುವಾರ ಬೆಳಿಗ್ಗೆ 10 ಗಂಟೆಗೆ ಗೋಷ್ಠಿ–2ರಲ್ಲಿ ಕುವೆಂಪು ಸಾಹಿತ್ಯದಲ್ಲಿ ರಾಷ್ಟ್ರೀಯತೆ ಮತ್ತು ಪ್ರಾದೇಶಿಕತೆಯ ಸಮನ್ವಯತೆ ಕುರಿತು ಸಂವಾದ ಇದೆ ಎಂದರು.

ರಾಜಕೀಯಕ್ಕೆ ವಿದಾಯ ಹೇಳಿದ ವಿಶ್ವನಾಥ್

• **ಮೈಸೂರು:** ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಚುನಾವಣಾ ರಾಜಕೀಯಕ್ಕೆ ಗುಡ್ ಬೈ ಹೇಳಿದ್ದಾರೆ.

ಗುರುವಾರ ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, 50 ಕೋಟಿ ಖರ್ಚು ಮಾಡಿ ಚುನಾವಣೆ ಎದುರಿಸುವಷ್ಟು ಶಕ್ತಿ ನನ್ನಲ್ಲಿ ಇಲ್ಲ. ಹಾಗಾಗಿ ಮುಂದೆ ಯಾವ ಚುನಾವಣೆಗೂ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದರು. ನಾನು ಹಲವು ಬಾರಿ ಚುನಾವಣೆ ಎದುರಿಸಿದಾಗ ಜನರೇ ಹಣ ನೀಡಿ ಆಶೀರ್ವಾದ ಮಾಡಿದ್ದರು. ಈಗ ಹಣ ನೀಡಿ ಚುನಾವಣೆ ಎದುರಿಸುವ ಪರಿಸ್ಥಿತಿ ಇದೆ. ಹೀಗಾಗಿ ಚುನಾವಣಾ ರಾಜಕಾರಣಕ್ಕೆ ವಿದಾಯ ಹೇಳುತ್ತಿದ್ದೇನೆ. ಆದರೆ ರಾಜಕೀಯದಲ್ಲಿ ಇರುತ್ತೇನೆ ಎಂದು ಸ್ಪಷ್ಟಪಡಿಸಿದರು.



ರಾಮಚಂದ್ರರಾವ್ ಮೇಲಿನ ಅಮಾನತು ಆದೇಶ ರದ್ದು ಮಾಡಿದ್ದು ಸರಿಯಲ್ಲ; ಹಿರಿಯ ಪೊಲೀಸ್ ಅಧಿಕಾರಿ ರಾಮಚಂದ್ರರಾವ್ ಅವರ ಮೇಲಿನ ಅಮಾನತು ಆದೇಶ ರದ್ದುಗೊಳಿಸಿರುವ ರಾಜ್ಯ ಸರ್ಕಾರಕ್ಕೆ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ರಾಮಚಂದ್ರ ರಾವ್ ಈ ಹಿಂದೆ ಕೇರಳ ಬಸ್‌ನಲ್ಲಿ ಸಿಕ್ಕಿದ್ದ 2 ಕೋಟಿ ಹಣವನ್ನು ಕೊಂಡೊಯ್ದು ಇನ್ಸ್‌ಪೆಕ್ಟರ್ ವಿರುದ್ಧ ಪ್ರಕರಣ ದಾಖಲಿಸಿದ್ದರು. ಅವರ ಸಾಕು ಮಗಳು ರನ್ಯಾರಾವ್ ಚಿನ್ನಸಾಗಣೆ ಪ್ರಕರಣದಲ್ಲಿ ಸಿಕ್ಕಿಬಿದ್ದ ಪರಿಣಾಮ, ರಾಮಚಂದ್ರ ರಾವ್ ಅವರನ್ನು ಅಮಾನತು ಮಾಡಲಾಗಿತ್ತು. ಅಲ್ಲದೇ ಅವರ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಸಹ ಕೇಳಿಬಂದಿತ್ತು. ನ್ಯಾಯಕೇಳಲುಬಂದಿದ್ದಮಹಿಳೆಯ ಮೇಲೆ ರಾಮಚಂದ್ರ ರಾವ್ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ.

ಈ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ವೀಡಿಯೋ ನನ್ನದಲ್ಲ ಎಂದು ವಾದಿಸಿದ್ದರು. ಆನಂತರ ವಿಧಿವಿಜ್ಞಾನ ಪ್ರಯೋಗಾಲಯದ ನೀಡಿದ ವರದಿಯಲ್ಲಿ ಆ ವೀಡಿಯೋ ರಾಮಚಂದ್ರ ರಾವ್ ಅವರದ್ದೇ ಎಂಬುದು ಸಾಬಿತಾದ ಕಾರಣ ಅವರನ್ನು ಸರ್ಕಾರ ಅಮಾನತು ಮಾಡಿತ್ತು. ಇದೀಗ ಏಕಾಏಕಿ ಅವರ ಮೇಲಿನ ಅಮಾನತು ಆದೇಶ ಹಿಂಪಡೆದು ಮತ್ತೆ ಕರ್ತವ್ಯಕ್ಕೆ ನಿಯೋಜಿಸಿರುವುದು ಸರಿಯಲ್ಲ. ಈ ಸರ್ಕಾರದಲ್ಲಿ ನ್ಯಾಯಕ್ಕೆ ಬೆಲೆ ಇಲ್ಲದಂತಾಗಿದೆ. ಗೃಹ ಇಲಾಖೆಯನ್ನು ಪರಮೇಶ್ವರ್ ನಡೆಸುತ್ತಿದ್ದಾರೋ ಅಥವಾ ಸಿಎಂ ಸಿದ್ದರಾಮಯ್ಯ ಪುತ್ರ ಯತೀಂದ್ರ ನಡೆಸುತ್ತಿದ್ದಾರಾ ಎಂಬ ಅನುಮಾನವಿದೆ.

ರಾಮಚಂದ್ರ ರಾವ್ ಮೇಲಿನ ಅಮಾನತು ಆದೇಶ ಹಿಂಪಡೆಯಲು ದೊಡ್ಡ ಮಟ್ಟದ ಕಿಕ್ ಬ್ಯಾಕ್ ಪಡೆದಿರಬಹುದು. ರಾಜ್ಯದಲ್ಲಿ ಯಾವ ಸೀಮೆಯ ಅಧಿಕಾರ ನಡೆಯುತ್ತಿದೆ ಎಂದರು.

ಬನ್ನೇರುಘಟ್ಟದಲ್ಲಿ ಜಿರಾಫೆ ಸಾವು

• **ಆನೇಕಲ್:** ಇಲ್ಲಿನ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಮೂರು ವರ್ಷ ಹತ್ತು ತಿಂಗಳ ವಯಸ್ಸಿನ ಶಿವಾನಿ ಎಂಬ ಹೆಣ್ಣು ಜಿರಾಫೆ ಮೃತಪಟ್ಟಿದೆ.



ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದಿಂದ 2024ನೇ ಫೆ.27ರಂದು ಕರೆತರಲಾಗಿತ್ತು. ಮೂರು ದಿನದಿಂದ ಏಕಾಏಕಿ ಆಹಾರ ಸೇವನೆ ನಿಲ್ಲಿಸಿತ್ತು. ಮೃಗಾಲಯದ ಪಶುವೈದ್ಯರ ತಂಡ ತಕ್ಷಣವೇ ತೀವ್ರ ನಿಗಾದಲ್ಲಿ ಇರಿಸಿ ಸಾಧ್ಯವಾದ ಎಲ್ಲಾ ಪಶುವೈದ್ಯಕೀಯ ಆರೈಕೆನೀಡಿದರೂಸಹಾಚಿಕಿತ್ಸೆಫಲಕಾರಿಯಾಗದೆ ಶಿವಾನಿ ಕೊನೆಯುಸಿರೆಳೆದಿದೆ.

ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯಾಧಿಕಾರಿಗಳ ವರದಿ ಪ್ರಕಾರ ಸೀಕಲ್ ಟಾರ್ಷನ್ ಎಂಬ ದೊಡ್ಡ ಕರುಳು ಸುತ್ತಿಕೊಂಡು ರಕ್ತ ಸಂಚಾರ ನಿಂತುಹೋಗುವ ಗಂಭೀರ ಸಮಸ್ಯೆಯಿಂದಸಾವುಸಂಭವಿಸಿದೆ. ಇದುಜಿರಾಫೆಯಲ್ಲಿ ಅಪರೂಪದ ಮಾರಣಾಂತಿಕ ಕಾಯಿಲೆ ಎಂದು ಜೈವಿಕ ಉದ್ಯಾನದ ವೈದ್ಯಾಧಿಕಾರಿ ತಿಳಿಸಿದ್ದಾರೆ. ಸಾವಿನ ಬಗ್ಗೆ ಹೆಚ್ಚಿನ ಅಧ್ಯಯನಕ್ಕಾಗಿ ಜಿರಾಫೆಯ ಒಳಾಂಗಗಳ ಮಾದರಿಯನ್ನು ಇನ್ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಮತ್ತು ಪಶುವೈದ್ಯಕೀಯ ಜೈವಿಕ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ವಿಸ್ತತ ವರದಿ ಬಂದ ನಂತರವೇ ಅಂತಿಮ ಕಾರಣ ಖಚಿತವಾಗಲಿದೆ ಎಂದು ತಿಳಿಸಿದರು.

> ಶಿವಾನಿಯ ಸಾವು ನಮಗೆ ತೀವ್ರ ನೋವು ತಂದಿದೆ. ಪ್ರಾಣಿಗಳ ಆರೋಗ್ಯಕ್ಕೆ ನಾವು ಅತ್ಯುತ್ತಮ ಆದ್ಯತೆ ನೀಡುತ್ತೇವೆ. ಎಲ್ಲಾ ರೀತಿಯ ಮುನ್ನೆಚ್ಚರಿಕೆ ವಹಿಸಿದ್ದರೂ ಉಳಿಸಿಕೊಳ್ಳಲಾಗಲಿಲ್ಲ.
>
> ■ **ವಿಠಾಲ್ ಸೂರ್ಯ ಸೇನ್,** ಕಾರ್ಯನಿರ್ವಾಹಕ ನಿರ್ದೇಶಕ

ಸರ್ಕಾರಿ ಶಾಲೆಗಳ ಶಿಕ್ಷಣ ಗುಣಮಟ್ಟ ಹೆಚ್ಚಿಸಲು ದಿಟ್ಟ ಹೆಜ್ಜೆ | ಜಾಗತಿಕ ಮಟ್ಟದ ಸ್ಪರ್ಧೆ

ಪ್ರೌಢಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಆರಂಭ

▶ ನಂದಿನಿ ಎನ್.

• **ಬೆಂಗಳೂರು:** 2026–27ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿ ಬೇಡಿಕೆಯಿರುವೆಡೆ ಹಿರಿಯ ಪ್ರಾಥಮಿಕ /ಪ್ರೌಢ ಶಾಲೆಗಳಲ್ಲಿ 8ನೇ ತರಗತಿಗೆ ಆಂಗ್ಲ ಮಾಧ್ಯಮ ವಿಭಾಗವನ್ನು ಆರಂಭಿಸಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದೆ. ಈ ಕ್ರಮವು ಸರ್ಕಾರಿ ಶಾಲೆಗಳ ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸುವ ಜತೆಗೆ ವಿದ್ಯಾರ್ಥಿಗಳನ್ನು ಜಾಗತಿಕ ಮಟ್ಟದ ಸ್ಪರ್ಧೆಗೆ ತಯಾರು ಮಾಡುವ ಉದ್ದೇಶ ಹೊಂದಿದೆ.

ಇತ್ತೀಚಿನ ವರ್ಷಗಳಲ್ಲಿ ಆಂಗ್ಲ ಭಾಷೆಯ ಅಗತ್ಯತೆ ಹೆಚ್ಚುತ್ತಿರುವ ಹಿನ್ನೆಲೆ, ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸಮಾನ ಶಿಕ್ಷಣಾವಕಾಶ ಒದಗಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ರೂಪಿಸಲಾಗಿದೆ. ಈಗಾಗಲೇ ಅನೇಕ ಪೋಷಕರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮಕ್ಕಾಗಿ ಖಾಸಗಿ ಶಾಲೆಗಳತ್ತ ಕೊಂಡೊಯ್ಯುತ್ತಿರುವ ಪರಿಸ್ಥಿತಿಯನ್ನು ಗಮನಸಲ್ಲಿಟ್ಟುಕೊಂಡು, ಸರ್ಕಾರಿ ಶಾಲೆಗಳಲ್ಲೇ ಆ ಸೌಲಭ್ಯ ಕಲ್ಪಿಸಲು ಇಲಾಖೆ ಮುಂದಾಗಿದೆ. ಜತೆಗೆ ಈ ನಿರ್ಧಾರದಿಂದ ಸರ್ಕಾರಿ ಶಾಲೆಗಳ ದಾಖಲಾತಿ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇದೆ. ಅಲ್ಲದೇ, ಖಾಸಗಿ ಶಾಲೆಗಳ ಮೇಲಿನ ಅವಲಂಬನೆ ಕಡಿಮೆಯಾಗುವ ನಿರೀಕ್ಷೆಯೂ ವ್ಯಕ್ತವಾಗಿದೆ. ಆಂಗ್ಲ ಮಾಧ್ಯಮ ಬೋಧನೆಗೆ ಅಗತ್ಯವಿರುವ ಕೌಶಲಗಳನ್ನು ಅಭಿವೃದ್ಧಿಪಡಿಸಲು ಶಿಕ್ಷಕರಿಗೆ ವಿಶೇಷ ತರಬೇತಿ ನೀಡಲಾಗುತ್ತದೆ. ಜತೆಗೆ ಪಠ್ಯಪುಸ್ತಕಗಳು, ಡಿಜಿಟಲ್ ಸಂಪನ್ಮೂಲಗಳು ಹಾಗೂ ತರಗತಿ ಕೊಠಡಿಗಳ ಮೂಲಸೌಕರ್ಯವನ್ನು ಸುಧಾರಿಸುವ ಕಾರ್ಯವೂ ಕೈಗೊಳ್ಳಲಾಗಿದೆ.

ವಿದ್ಯಾರ್ಥಿಗಳ ಹಾಗೂ ಪೋಷಕರ ಬೇಡಿಕೆಯನ್ನು ಆಧರಿಸಿ, ಅಗತ್ಯವಿರುವ ಶಾಲೆಗಳಲ್ಲಿ ಈ ಯೋಜನೆಯನ್ನು ಹಂತ-ಹಂತವಾಗಿ ಜಾರಿಗೆ ತರಲಾಗುತ್ತದೆ. ಕನ್ನಡ ಮಾಧ್ಯಮವನ್ನು ಮುಂದುವರೆಸುವುದರ ಜತೆಗೆ ಆಂಗ್ಲ ಮಾಧ್ಯಮವನ್ನು ಆಯ್ಕೆಯಾಗಿ ನೀಡಲಾಗುತ್ತದೆ. ದ್ವಿಭಾಷಾ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳು ಕನ್ನಡ ಹಾಗೂ ಆಂಗ್ಲ ಎರಡೂ ಭಾಷೆಗಳಲ್ಲೂ ಸಮರ್ಪಕ ಹಿಡಿತ ಸಾಧಿಸಿರುವುದಾಗಿ ಶಿಕ್ಷಕರು ತಿಳಿಸಿದ್ದಾರೆ. ಇದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜತೆಗೆ ಮುಂದಿನ ಶಿಕ್ಷಣ ಹಂತಗಳಿಗೆ ಭದ್ರ ನೆಲೆ ಒದಗಿಸಿದೆ.

ಈಗ 7ನೇ ತರಗತಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು, 8ನೇ ತರಗತಿಗೆ ಪ್ರವೇಶಿಸುತ್ತಿರುವ ಹಿನ್ನೆಲೆ, 2026–27ನೇ ಸಾಲಿನಲ್ಲಿ 8ನೇ ತರಗತಿಗೆ ಆಂಗ್ಲ ಮಾಧ್ಯಮ ವಿಭಾಗವನ್ನು ಪ್ರಾರಂಭಿಸುವ ಸರ್ಕಾರದ ನಿರ್ಧಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬಂದಿದೆ. ಇದರಿಂದ ವಿದ್ಯಾರ್ಥಿಗಳಿಗೆ ನಿರಂತರವಾಗಿ ಆಂಗ್ಲ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಅವಕಾಶ ಸಿಗಲಿದೆ.



> 15 ಜಿಲ್ಲೆಗಳಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ತೆರೆಯಲು 24 ಕೋಟಿ ರೂ. ಖರ್ಚು ಮಾಡಿ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ಇತರೆ ಜಿಲ್ಲೆಗಳಿಗೆ ಹಂತ-ಹಂತವಾಗಿ ಜಾರಿಗೆ ತರಲಾಗುವುದು.
>
> ■ **ಮಧು ಬಂಗಾರಪ್ಪ,** ಶಿಕ್ಷಣ ಸಚಿವ

2019-20ನೇ ಸಾಲಿನಲ್ಲಿ ಆಂಗ್ಲ ಮಾಧ್ಯಮ ವಿಭಾಗ

2019-20ನೇ ಸಾಲಿನಲ್ಲಿ ರಾಜ್ಯದ ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜತೆಗೆ ಆಂಗ್ಲ ಮಾಧ್ಯಮ (ದ್ವಿಭಾಷಾ ಮಾಧ್ಯಮ) ವಿಭಾಗವನ್ನು ಆರಂಭಿಸಲಾಗಿತ್ತು. ಈ ಯೋಜನೆ ಅಡಿಯಲ್ಲಿ 1ನೇ ತರಗತಿಗೆ ದಾಖಲಾದ ವಿದ್ಯಾರ್ಥಿಗಳು ಇದೀಗ 2025-26ನೇ ಸಾಲಿನಲ್ಲಿ 7ನೇ ತರಗತಿಗಳನ್ನು ಪೂರ್ಣಗೊಳಿಸಿದ್ದಾರೆ. ಆಂಗ್ಲ ಭಾಷೆ ದಕ್ಷತೆಯನ್ನು ಆರಂಭಿಕ ಹಂತದಲ್ಲೇ ಬೆಳೆಸುವ ಉದ್ದೇಶದಿಂದ ಜಾರಿಗೆ ತರಲಾದ ಈ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಗುಣಮಟ್ಟದ ಆಂಗ್ಲ ಶಿಕ್ಷಣ ಒದಗಿಸಲು ಸರ್ಕಾರ ಕೈಗೊಂಡ ಈ ಕ್ರಮ ಫಲ ನೀಡುತ್ತಿದೆ ಎಂದು ಶಿಕ್ಷಣ ಇಲಾಖೆ ಅಭಿಪ್ರಾಯಪಟ್ಟಿದೆ.

ಕರ್ನಾಟಕ ಸರ್ಕಾರ

ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಶಿವಮೊಗ್ಗ.

1ನೇ ಮಹಡಿ, ಸತ್ಯಶ್ರೀ ಆರ್ಕೇಡ್, 5ನೇ ಪ್ಯಾರಲಲ್ ರಸ್ತೆ, ದುರ್ಗಿಗುಡಿ.
E-mail- domshimoga@gmail.com PH: (08182) 220206

ಸಂ:ಅಸಂಕಇಶಿ/ಆ.ಸಾ.ಟೆ/ಸಿ.ಆರ್–08/2026–27 ದಿನಾಂಕ: 06/05/2026

E PROCUREMENT SHORT TERM TENDER NOTIFICATION

ಶಿವಮೊಗ್ಗ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ/ ಕಾಲೇಜು, ಮೊ.ದೇ.ವ.ಶಾಲೆ/ ಕಾಲೇಜುಗಳಿಗೆ ಹಾಗೂ ವಿದ್ಯಾರ್ಥಿನಿಲಯಗಳಿಗೆ ಆಹಾರ ಹಾಗು ಇತರೆ ಅವಶ್ಯಕ ಸಾಮಗ್ರಿಗಳ ಪೂರೈಸಲು ಅರ್ಹ ಏಜೆನ್ಸಿ ಆಯ್ಕೆಗಾಗಿ ಆಸಕ್ತಿಯುಳ್ಳ ಟೆಂಡರ್‌ದಾರರಿಂದ E-Procurement (KPPP Portal) ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ. 1. ಟೆಂಡರ್ ನಂ.: MWD/2026-27/IND0128 **ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ:** ರೂ.457.59 ಲಕ್ಷ **ಟೆಂಡರ್ ಅರ್ಜಿ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:** 04.05.2026 **ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:** 19.05.2026 ರಂದು ಸಂಜೆ 5.00 ಗಂಟೆ **ಟೆಂಡರ್ ಅರ್ಜಿ ಶುಲ್ಕ:** As pe E-Procurement (KPPP Portal) **ಇ.ಎಂ.ಡಿ ಮೊತ್ತ :** 6.86 ಲಕ್ಷ

ಆಸಕ್ತಿಯುಳ್ಳ ಟೆಂಡರ್‌ದಾರರು Website: http://kppp.karnataka.gov.in ನಲ್ಲಿ ಅಪ್‌ಲೊಡ್ ಮಾಡುವುದು ಹಾಗೂ ಸದರಿ ವೆಬ್‌ಸೈಟ್‌ನಲ್ಲಿ ಟೆಂಡರ್ ದಸ್ತಾವೇಜು ಮತ್ತು ಮಾಹಿತಿಗಳು ಲಭ್ಯವಿದೆ.

ಸಹಿ/– ಜಿಲ್ಲಾ ಅಧಿಕಾರಿಗಳು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಶಿವಮೊಗ್ಗ ಜಿಲ್ಲೆ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/20/05/193

ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ

ದೂರವಾಣಿ ಸಂಖ್ಯೆ: 0836–2741277, 0836–2748374,
ಸತ್ಯಮೇವ ಜಯತೇ ಫ್ಯಾಕ್ಸ್ ಸಂಖ್ಯೆ: 0836–2741277, ಆರೋಗ್ಯವೇ ಭಾಗ್ಯ
Email Id: dsdharwad@gmail.com

ಕ್ರ: ಜಿಆಧಾ/ಪೂರೈಕೆ/ಟೆಂಡರ/ ಕಂಜ್ಯೂಮೇಬಲ್ಸಗಳ /05/2026–27
ದಿನಾಂಕ:06/05/2026

ಟೆಂಡರ್ ಪ್ರಕಟಣೆ

ವಿಷಯ : ಧಾರವಾಡ ಜಿಲ್ಲಾ ಆಸ್ಪತ್ರೆಗೆ 2026–27 ನೇ ಸಾಲಿಗಾಗಿ ಒಳರೋಗಿಗಳಾಗಿ ದಾಖಲಾಗಿರುವ ಹಾಗೂ ಹೊರ ರೋಗಿಗಳಿಗೆ ಅತೀ ಅವಶ್ಯಕವಾಗಿ ಬೇಕಾಗಿರುವ ಕಂಜ್ಯೂಮೇಬಲ್ಸಗಳನ್ನು ಖರೀದಿಸಲು ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸುವ ಕುರಿತು.

ಧಾರವಾಡ ಜಿಲ್ಲಾ ಆಸ್ಪತ್ರೆಗೆ 2026–27ನೇ ಸಾಲಿಗಾಗಿ ಒಳರೋಗಿಗಳಾಗಿ ದಾಖಲಾಗಿರುವ ಹಾಗೂ ಹೊರ ರೋಗಿಗಳಿಗೆ ಅತೀ ಅವಶ್ಯಕವಾಗಿ ಬೇಕಾಗಿರುವ **ಕಂಜ್ಯೂಮೇಬಲ್ಸಗಳ** ದರ ನಿರ್ಧರಣೆ ಮಾಡಲು **(Rate Contract)** ಹಾಗೂ ಕೆ.ಎಸ್.ಎಮ್.ಎಸ್.ಸಿ.ಎಲ್ ಇವರಿಂದ ಪೂರೈಕೆ ಆಗದೆ ಇದ್ದಾಗ ಖರೀದಿಸಲು ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸುವ ಕುರಿತು. ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000ರ ಪ್ರಕಾರ ದ್ವಿ-ಬಿಡ್ (ತಾಂತ್ರಿಕ ಮತ್ತು ಆರ್ಥಿಕ) ಪದ್ಧತಿಯಲ್ಲಿ ಟೆಂಡರ್ (ಇ–ಟೆಂಡರ್) ಆಹ್ವಾನಿಸಲಾಗಿದೆ.

1) ಇ–ಪೋರ್ಟಲ್‌ದಲ್ಲಿ ಅಪ್ ಲೋಡ್ ಮಾಡುವ ದಿನಾಂಕ: **06–05–2026** ರಿಂದ **16–05–2026** ರ ವರೆಗೆ ಸಾಯಂಕಾಲ **4.00** ಗಂಟೆಯವರೆಗೆ 2) **ತಾಂತ್ರಿಕ್ ಬಿಡ್‌ನ್ನು ತೆರೆಯುವ ದಿನಾಂಕ: 18–05–2026 ರಂದು 11.00 ಗಂಟೆಗೆ** 3) **ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 20–05–2026 ರಂದು 11.00 ಗಂಟೆಗೆ**

ಟೆಂಡರಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ (www.kppp.karnataka.gov.in) ದಿಂದ ಪಡೆಯುಬಹುದು ಅಥವಾ ಕಚೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು
ಜಿಲ್ಲಾ ಆಸ್ಪತ್ರೆ ಧಾರವಾಡ

ಡಿಐಪಿಆರ್/ಧಾರವಾಡ/138/ಮಣಿಪಾಲ್/2026–27

ಬೆಳಗಾವಿ ಮಹಾನಗರ ಪಾಲಿಕೆ

ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005,
ಸುಭಾಷನಗರ, ಬೆಳಗಾವಿ. ದೂರವಾಣಿ : 0831–2405304,
Email : itstaff_ulb_belgaum@yahoo.com, Website : www.belgaumcity.mrc.gov.in

ಸಂಖ್ಯೆ : ಮ.ನ.ಪಾ.ಬೆ./ಲೋ.ಶಾ./ಕಾ.ಅ./ಡಿ.ಎಂ./ಟಿ.ಎನ್.ಡಿ./ಇಪ್ರೋ–02/2026–27 ದಿನಾಂಕ : 07–05–2026

ಟೆಂಡರ್ ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಮಹಾನಗರ ಪಾಲಿಕೆಯ ಅನುದಾನದಡಿಯಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯ ವಾಪ್ತಿಯಲ್ಲಿ ವಿವಿದೆಡೆ ವಿದ್ಯುತ್ತಿಕರಣ ಮಾಡುವುದು ಹಾಗೂ ಕಾಯಿಪಲ್ಲೆ ಮಾರುಕಟ್ಟೆ ನಿರ್ಮಾಣ ಮಾಡುವ ಕಾಮಗಾರಿಗಳಿಗೆ SC Category - 02, ST Category - 01, CAT-I - 01, CAT-II(A) - 02 ಹಾಗೂ ಸಾಮಾನ್ಯ ಮಿಸಲಾತಿಗೆ 07 ಹೀಗೆ ಒಟ್ಟು 13 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ : 18–05–2026 ರ ಸಂಜೆ 5.00 ಘಂಟೆವರೆಗೆ. 2) ಟೆಂಡರಿನ ಮೊದಲನೆ ಸಭೆಯ ದಿನಾಂಕ : 19–05–2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 25–05–2026 ರ ಅಪರಾಹ್ನ 4.00 ಘಂಟೆವರೆಗೆ. 4) ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 27–05–2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 5) ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 29–05–2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ ವೆಬ್‌ಸೈಟ್ : https://www.kppp.karnataka.gov.in ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/208/ಮಣಿಪಾಲ್/2026–27

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ವಿಜನಿನಿ, ಭ.ಮೇ.ಯೋ. ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ.
ದೂರವಾಣಿ ಸಂ:08194–200187 Email ID:ubpeediv07@gmail.com

ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಚಿ/2026–27/ 7 & 8
ದಿನಾಂಕ:07.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ನಂ.148 ಎಂಬೇಸಿ ಸ್ಕ್ವೇರ್, ಇನ್‌ಫ್ಯಾಂಟ್ರಿ ರಸ್ತೆ ಬೆಂಗಳೂರು 560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್;ಚಿತ್ರದುರ್ಗ ಕಛೇರಿ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗಳ ದ್ವಿ–ಲಕೋಟೆ ಪದ್ಧತಿಯಲ್ಲಿ Karnataka Public Procurement Portalನ https://kppp.karnataka.gov.in ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಇ.ಎಂ.ಡಿ ಮೊತ್ತ/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕದವರೆಗೆ ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ:08194–200187 ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಇಂಡೆಂಟ್ ಸಂಖ್ಯೆ **(1) VJNL/2025-26/BD/ WORK_INDENT496/ CALL-2 4701 ಲೆಕ್ಕಶೀರ್ಷಿಕೆ:–V.V.Sagara ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ:–41,44,032.78**

(1) VJNL/2025-26/BD/ WORK_INDENT 497/CALL-2
4701 ಲೆಕ್ಕಶೀರ್ಷಿಕೆ:–V.V.Sagara ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ:–41,69,280.73
ಟೆಂಡರ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 15.05.2026 @ 5.00 PM
ಬಿಡ್ಡನ್ನು ತೆರೆಯುವ ದಿನಾಂಕ 16.05.2026 @ 5.30 PM

ಸಹಿ/– ಕಾರ್ಯಪಾಲಕ ಇಂಜಿನಿಯರ್
ವಿ.ಜ.ನಿ.ನಿ, ಭ.ಮೇ.ಯೋ, ವಿಭಾಗ ನಂ.07,
ಹಿರಿಯೂರು ಕ್ಯಾಂಪ್: ಚಿತ್ರದುರ್ಗ

DIPR/CTA/KSMCA/ 90 /2026-27

CHANGE OF NAME

I, **PANDURANG** (Old Name) Resident of AP Bhoj, Tq: Chikodi, Belagavi - 591263, have changed my name as **PANDURANG BHUPAL KAMBLE** (New Name) henceforth I will be called and recognized by new name for all future purposes, dated: 07/05/2026.

CHANGE OF NAME

I, **MARUTI GALATAGE** (Old Name) Resident of AP Bhoj, Tq: Chikodi, Belagavi - 591263, have changed my name as **MARUTI KRISHNA GALATAGE** (New Name) henceforth I will be called and recognized by new name for all future purposes, dated: 07/05/2026.

ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ

ದೂರವಾಣಿ ಸಂಖ್ಯೆ: 0836–2741277, 0836–2748374,
ಫ್ಯಾಕ್ಸ್ ಸಂಖ್ಯೆ: 0836–2741277, ಇ–ಮೇಲ್ ಐಡಿ: dsdharwad@gmail.com

ಸಂಖ್ಯೆ:ಜಿಆಧಾ/ಪೂರೈಕೆ/ಟೆಂಡರ/ಲ್ಯಾಬ್ ರಿಏಜೆಂಟ್ಸಗಳ/06/2026–27 ದಿನಾಂಕ: 06–05–2026

ಟೆಂಡರ್ ಪ್ರಕಟಣೆ

ಧಾರವಾಡ ಜಿಲ್ಲಾ ಆಸ್ಪತ್ರೆಗೆ 2026–27 ನೇ ಸಾಲಿಗಾಗಿ ಒಳರೋಗಿಗಳಾಗಿ ದಾಖಲಾಗಿರುವ ಹಾಗೂ ಹೊರ ರೋಗಿಗಳಿಗೆ ಅತೀ ಅವಶ್ಯಕವಾಗಿ ಬೇಕಾಗಿರುವ ಲ್ಯಾಬ್ ರಿಏಜೆಂಟ್ಸಗಳನ್ನು ದರ ನಿರ್ಧರಣೆ ಮಾಡಲು (Rate Contract) ಹಾಗೂ ಕೆ.ಎಸ್.ಎಮ್.ಎಸ್.ಸಿ.ಎಲ್ ಇವರಿಂದ ಪೂರೈಕೆ ಆಗದೆ ಇದ್ದಾಗ ಖರೀದಿಸಲು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000 ರ ಪ್ರಕಾರ ದ್ವೀ–ಬಿಡ್ (Technical and Financial) ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ.

1) ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ದಿನಾಂಕ: **06–05–2026** ರಿಂದ **16–05–2026 ರಂದು ಸಂಜೆ 4.00 ಘಂಟೆವರೆಗೆ. 2)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **18–05–2026 ರಂದು ಬೆಳಿಗ್ಗೆ 11.00 ಘಂಟೆಗೆ. 3)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **20–05–2026 ರಂದು ಬೆಳಿಗ್ಗೆ 11.00 ಘಂಟೆಗೆ.**

ಟೆಂಡರಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಇ–ಪ್ರೊಕ್ಯೂರಮೆಂಟ್ ವೆಬ್‌ಸೈಟ್: **(www.kppp.karnataka.gov.in)** ದಿಂದ ಪಡೆಯುಬಹುದು ಅಥವಾ ಕಚೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು
ಜಿಲ್ಲಾ ಆಸ್ಪತ್ರೆ, ಧಾರವಾಡ.

ವಾಸಾಸಂಇ/ಧಾರವಾಡ/40/ಅಡ್ವರ್ಟೋ/2026–27

ನಗರಸಭಾ ಕಾರ್ಯಾಲಯ, ನೆಲಮಂಗಲ

ಬೆಂಗಳೂರು ಗ್ರಾಮಾಂತರ ಜಿಲ್ಲೆ–562123
ದೂರವಾಣಿ ಸಂ.: 080–27222135 e-mail: ka.nelmangala.cmc@gmai.com

ಸಂ.: ನಸನೆ/ತಾಂತ್ರಿಕ(ವಿ)/ಟೆಂಡರ್/16/2026–27 ದಿನಾಂಕ: 07.05.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

(ಸ್ಟಾಂಡರ್ಡ್ ಡಾಕ್ಯೂಮೆಂಟ್ KW 1&2 ರ & KG ನಿಬಂಧನೆಗಳಂತೆ ಟೆಂಡರ್ ಆಹ್ವಾನಿಸಲಾಗಿದೆ)

ಪೌರಾಯುಕ್ತರು, ನಗರಸಭೆ ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2026–27ನೇ ಸಾಲಿನ ನಗರಸಭೆ ನಿಧಿಯಡಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ಮೊತ್ತ **ರೂ: 149.93** ಲಕ್ಷಗಳ ಕಾಮಗಾರಿಗಳ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್‌ನ ಕೆಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ತೆರೆಯುವ ದಿನಾಂಕ ಮುಂತಾದ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ **https://kppp.karnataka.gov.in** ಹಾಗೂ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ವಿವರಗಳು ಈ ಕೆಳಕಂಡಂತಿದೆ:

ಕ್ರ ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2026-27/OW/WORK_INDENT57600	49.96
2	DMA/2026-27/OW/WORK_INDENT57593	49.98
3	DMA/2026-27/RD/WORK_INDENT57599	49.99

ಸಹಿ/– ಅಧ್ಯಕ್ಷರು ನಗರಸಭೆ, ನೆಲಮಂಗಲ
DIPR/CP/546/SA/2026-27
ಸಹಿ/– ಪೌರಾಯುಕ್ತರು ನಗರಸಭೆ, ನೆಲಮಂಗಲ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/ಕೆಎಂಎಆರ್‌ಸಿ/2026–27/540 ದಿನಾಂಕ: 29–04–2026.

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಸಿ.ಇ.ಪಿ.ಎಂ.ಐ.ಜಡ್ (ಕೆ.ಎಂ.ಇ.ಆರ್.ಸಿ.) ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಹಾಗೂ ಅನುಮೋದನೆಯಾದ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಈ ಕೆಳಕಾಣಿಸಿದ ಸೇವೆ ಮತ್ತು ಟೆಂಡರ್ ಕಾಮಗಾರಿಗಳಿಗೆ ಏಕ ಹಾಗೂ ದ್ವಿ ಲಕೋಟೆ ಪದ್ಧತಿಯಂತೆ ಕೆಪಿ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಯೋಜನಾ ಸಮಾಲೋಚಕರುಗಳು ಹಾಗೂ ಗುತ್ತಿಗೆದಾರರು ವೆಬ್‌ಸೈಟ್ **https:kppp.karnataka.gov.in** ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು. ಸದರಿ ಸೇವೆ ಟೆಂಡರ್/ಕಾಮಗಾರಿಗಳ ವಿವರ ಈ ಕೆಳಗೆನಂತಿವೆ.

ಸದರಿ ಕಾಮಗಾರಿಗಳ ವಿವರ ಈ ಕೆಳಗೆನಂತಿವೆ – PWD/2026-27/BD/WORK_INDENT35971, PWD/2026-27/BD/WORK_INDENT35837, PWD/2026-27/BD/WORK_INDENT35853, PWD/2026-27/SE1194 and PWD/2026-27/SE1187

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ದಾಖಲೆಗಳನ್ನು ಇ–ಪ್ರೋಕೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಲು ನಿಗಧಿಪಡಿಸಿದ ದಿನಾಂಕ ಮತ್ತು ಸಮಯ : ದಿನಾಂಕ: **05–05–2026** ರಿಂದ **03–06–2026** ರ **16.00** ಗಂಟೆವರೆಗೆ. ಆ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ : **18–05–2026** ರಂದು **11.30** ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ. ಇ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **29–05–2026** ರಂದು **16.00** ಗಂಟೆಯ ವರೆಗೆ. ಈ)ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **03–06–2026** ರಂದು **16.00** ಗಂಟೆಯ ವರೆಗೆ. ಉ)ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **04–06–2026** ರಂದು **16.30** ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು. ಊ)ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/123

ಕರ್ನಾಟಕ ಸರ್ಕಾರ

(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ) ಕರ್ನಾಟಕ ಜಲಸಾರಿಗೆ ಮಂಡಳಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಬೈತ್‌ಖೋಲ್, ಕಾರವಾರ

ಕ್ರಸಂ.ಕಜಮಂ–60/ಕಾಮಗಾರಿ–III/2025–26 ದಿನಾಂಕ: 05.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ: ಕಾರವಾರ ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ಒಜಸಾ) ರವರಿಗೆ ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗೆ ಹವಾನಿಯಂತ್ರಿತ (ಎ.ಸಿ.) ಖಾಸಗಿ ವಾಹನವನ್ನು ಚಾಲಕ ಸಮೇತ ಹೊರಗುತ್ತಿಗೆಯ ಮೂಲಕ ಬಾಡಿಗೆ ಆಧಾರದಲ್ಲಿ ಒದಗಿಸುವುದು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ : ಸಿಅಸುಇ : 30: ಶಿವಾನಿ : 2019 ಬೆಂಗಳೂರು, ದಿನಾಂಕ : 31.03.2022

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಬಂಒಜಸಾ ನಿರ್ದೇಶನಾಲಯ, ಕಾರವಾರರವರಿಗೆ ಕಛೇರಿಯ ಹಾಗೂ ಒಳನಾಡು ಜಲಸಾರಿಗೆ ಅಧಿಕೃತ ಕೆಲಸ ಕಾರ್ಯಗಳಿಗೆ ಹವಾನಿಯಂತ್ರಿತ ಸೆಡಾನ್ ಕಾರ್ (Sedan Car) (ಮಾರುತಿ ಸ್ವಿಫ್ಟ್ ಡಿಜೈರ್ / ರ್ರಿಗಾ ಮಾರುತಿ ಸುಜುಕಿ/ ಹ್ಯುಂಡೈ–ಎಕ್ಸೆಂಟ್/ ಹೊಂಡಾ – ಅಮೇಜ್ / ಟೊಯೊಟಾ – ಪ್ಲಾಟಿನಂ ಇಟಿಯೋಸ್ / ಟಾಟಾ – ಟಿಗೋರ್) / ಅದೇ ರೀತಿ ಮಾದರಿಯ ಖಾಸಗಿ ವಾಹನವನ್ನು 2026–27 ನೇ ಸಾಲಿಗೆ ಬಾಡಿಗೆ ಆಧಾರದ ಮೇಲೆ ಪಡೆಯಲು 2021 ರಿಂದ ಮೇಲ್ಪಟ್ಟ ಮಾದರಿಯ ವಾಹನದ ದರವನ್ನು ಅನುಬಂಧ–I ರಂತೆ ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 19.05.2026 ರಂದು ಅಪರಾಹ್ನ 4:00 ಗಂಟೆಯ ಒಳಗಾಗಿ ಬಂದರು ಇಂಜಿನೀಯರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿರವರ ಕಛೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರರವರಿಗೆ ಮೊಹರು ಮಾಡಿದ ಲಕೋಟೆಯಲ್ಲಿ ಕಚೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು. ಸ್ವೀಕರಿಸಿದ ಲಕೋಟೆಗಳನ್ನು ದಿನಾಂಕ: 19.05.2026 ಅಪರಾಹ್ನ 4:30 ಗಂಟೆಗೆ ಬಂದರು ಇಂಜಿನೀಯರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿರವರ ಕಛೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಕಾಮಗಾರಿಯ ಹೆಸರು: ಕಾರವಾರ ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ಒಜಸಾ) ರವರಿಗೆ ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗೆ ಹವಾನಿಯಂತ್ರಿತ (ಎ.ಸಿ.) ಖಾಸಗಿ ವಾಹನವನ್ನು ಚಾಲಕ ಸಮೇತ ಹೊರಗುತ್ತಿಗೆಯ ಮೂಲಕ ಬಾಡಿಗೆ ಆಧಾರದಲ್ಲಿ ಒದಗಿಸುವುದು. ಟೆಂಡರ್‌ಗಿಟ್ಟ ಮೊತ್ತ: ರೂ. 4,03,600.00, ಮುಂಗಡ ಠೇವಣಿ: ರೂ. 10,500.00, ಕಾಮಗಾರಿ ಮುಗಿಸಲು ಕಾಲಾವಧಿ: 10 ತಿಂಗಳು, ಖಾಲಿ ಟೆಂಡರು ಫಾರ್ಮ ಬೆಲೆ: ರೂ. 500.00 (ತೆರಿಗೆ ರಹಿತ), ಕಛೇರಿ ವೇಳೆಯಲ್ಲಿ ಟೆಂಡರು ಫಾರ್ಮಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08.05.2026, ಕಛೇರಿ ವೇಳೆಯಲ್ಲಿ ಟೆಂಡರು ಫಾರ್ಮು ನೀಡುವ ದಿನಾಂಕ: 12.05.2026, ಭರ್ತಿ ಮಾಡಿದ ಟೆಂಡರು ಸಲ್ಲಿಸಲು ಕೊನೆಯ ದಿನಾಂಕ: 19.05.2026 (ಸಂಜೆ 4.00 ಗಂಟೆಯವರೆಗೆ), ಷರಾ:.....

ಸಹಿ/– ಬಂದರು ಇಂಜಿನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ

DIPR/KWR/KSMCA/108/26-27 Dt: 07.05.2026

ಕ್ರಿ. ಮಿ. ನಂ. 56/2026
ಮಾನ್ಯ 2ನೇ ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ : ಶ್ರೀ ಜಿ. ಶ್ರೀನಿ ರಾಯಲು, ವಯಾ : 48 ವರ್ಷ, ಉದ್ಯೋಗ : ಖಾಸಗಿ ಕೆಲಸ, ಸಾ॥ # 201, ಜನತಾ ಕಾಲೋನಿ, ಕುಸುಗಲ್ಲ ರಸ್ತೆ, ಹುಬ್ಬಳ್ಳಿ, ಜಿ॥ ಧಾರವಾಡ.

ವಿರುದ್ಧ

ಎದುರುಗಾರರು : ಜನನ ವ ಮರಣ ನೋಂದಣಿ ಅಧಿಕಾರಿಗಳು, ವಲಯ ಕಚೇರಿ ನಂ. 06, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ನೋಟಿಸ

ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ ನಿಮ್ಮ ವಿರುದ್ಧ ನ್ಯಾಯಾಲಯದಲ್ಲಿ, ಅರ್ಜಿದಾರನ ಅಜ್ಜಿಯಾದ **ಶ್ರೀಮತಿ ಬತ್ತುಲಾ ಆಶೀರ್ವಾದಮ್ಮ ಇವರು ದಿ: 09–05–2020 ರಂದು ಚಾಲುಕ್ಯನಗರ ಸಮುದಾಯ ಭವನ ಹತ್ತಿರ ಗದಗ ರೋಡ, ಹುಬ್ಬಳ್ಳಿಯಲ್ಲಿ ಫೋತಿ ಯಾಗಿರುತ್ತಾರೆ.** ಸದರಿ ಅರ್ಜಿದಾರ ತನ್ನ ಅಜ್ಜಿಯ ಮರಣ ಪ್ರಮಾಣ ಪತ್ರವನ್ನು ಪಡೆಯಲು ಎದುರು ಗಾರರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದು ಇರುತ್ತದೆ. ಸದರ ಮರಣ ಧಾಖಲಾತಿ ಕುರಿತು, ಯಾರಾದರೂ ಯಾವುದೇ ರೀತಿಯ ತಂಟೆ ವ ತಕರಾರು ಇದ್ದಲ್ಲಿ ಅವರ ಹಾಜರಾತಿಗಾಗಿ ದಿ: 10–06–2026 ರಂದು ಬೆಳಿಗ್ಗೆ 10.30 ಘಂಟೆಗೆ ಮುದ್ದತ್ತು ನೇಮಿಸಿದ್ದು, ಸದರೀ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕವಾಗಲಿ ತಕರಾರು ಸಲ್ಲಿಸ ಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳುವುದು. ನ್ಯಾಯಾಲಯದ ಮೊಹರಿನೊಂದಿಗೆ ದಿ:07–06–2026 ರಂದು ನೀಡ ಲಾಯಿತು.

ಹುಬ್ಬಳ್ಳಿ (ಕೋರ್ಟ ಮೊಹರು)
ದಿ: 07–05–2026
ಎಸ್.ವಿ.ರಾಯ್ಕರ,
ಅರ್ಜಿದಾರ ಪರ ವಕೀಲರು, ಹುಬ್ಬಳ್ಳಿ

ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/–ಶಿರಸ್ತೇದಾರರು
ಮಾನ್ಯ 2ನೇ ಜೆ.ಎಂ.ಎಫ್.ಸಿ.,
ನ್ಯಾಯಾಧೀಶರ
ನ್ಯಾಯಾಲಯ, ಹುಬ್ಬಳ್ಳಿ

ಕ್ರಿ. ಮಿ. ನಂ : 539/2026.
ಮಾನ್ಯ ಪ್ರಿನ್ಸಿಪಲ್ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ. ರಾಣೇಬೆನ್ನೂರು ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು: ಕರಿಯಪ್ಪ ತಂದೆ ಹೊಳಬಸಪ್ಪ ಯಲ್ಲಾಪುರ. ಸಾ: ರಾಹುತನಕಟ್ಟಿ ತಾಲ್ಲೂಕ: ರಾಣೇಬೆನ್ನೂರು. ಜಿಲ್ಲಾ: ಹಾವೇರಿ.

ವಿರುದ್ಧ

ಎದುರುಗಾರರು: ಉಪ ತಹಶೀಲ್ದಾರ ನಾಡಕಚೇರಿ ಸಾ: ಮೇಡ್ಲೇರಿ. ತಾಲ್ಲೂಕ: ರಾಣೇಬೆನ್ನೂರು ಜಿಲ್ಲಾ: ಹಾವೇರಿ.

ಸಿ.ಪಿ.ಸಿ. ಕ್ರಮಾದೇಶ 5 ನಿಯಮ 20 ರ ಕೆಳಗೆ ಅರ್ಜಿ ಇಸ್ತಿಯಾರ ನಾಮಾ:

ಇವರಲ್ಲಿ ಅರ್ಜಿದಾರನ ಖಾಸ ತಾಯಿಯಾದ ಶ್ರೀಮತಿ ಚೌಡವ್ವ ಕೋಂ ಹೊಳಬಸಪ್ಪ ಮೈದೂರ ಉರ್ಫ ಯಲ್ಲಾಪುರ ಇವರು ದಿನಾಂಕ: 05–01–2012 ರಂದು ರಾಹುತನಕಟ್ಟಿ ಗ್ರಾಮದಲ್ಲಿ ತಮ್ಮ ಸ್ವಂತ ಮನೆಯಲ್ಲಿ ಮರಣ ಹೊಂದಿದ್ದು ಇರುತ್ತದೆ. ಸದರಿಯವರ ಮರಣ ದಿನಾಂಕವನ್ನು ಎದುರುಗಾರ ಕಛೇರಿಯ ಮರಣ ನೋಂದಣಾ ದಾಖಲಾತಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಅತಿ ಅವಶ್ಯವಿದ್ದು, ಇದರ ಬಗ್ಗೆ ಸಾರ್ವಜನಿಕರ ಯಾವುದೇ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ: 15–06–2026 ರಂದು ಬೆಳಿಗ್ಗೆ 10–30 ಗಂಟೆಗೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶವನ್ನು ಮಾಡುತ್ತಾರೆ ಅಂತಾ ಕೊಟ್ಟ ಇಸ್ತಿಯಾರ ನಾಮಾ.

ಈ ದಿನಾಂಕ: 7–5–2026 ರಂದು ನ್ಯಾಯಾಲಯದ ಮೊಹರನೊಂದಿಗೆ ಕೊಡಲ್ಪಟ್ಟಿರುತ್ತದೆ.

ನ್ಯಾಯಾಲಯದ ಆದೇಶದ ಮೇರಿಗೆ
ಸಹಿ/– ಶಿರಸ್ತೆದಾರರು
ಪ್ರಿ. ಹಿರಿಯ ದಿವಾಣಿ ನ್ಯಾಯಾಧೀಶರು
ನ್ಯಾಯಾಲಯ ರಾಣೇಬೆನ್ನೂರು.
ಅರ್ಜಿದಾರರ ಪರ ವಕೀಲರು
ಸಹಿ/– ಶ್ರೀ ವ್ಹಿ. ವ್ಹಿ. ಕೋಟಿಹಾಳ್
ವಕೀಲರು, ರಾಣೇಬೆನ್ನೂರು

ಕರ್ನಾಟಕ ಸರ್ಕಾರ

ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ

ಸಂಖ್ಯೆ:ಅಸಂಕಇ/ಹೊಸಂಸೇಸಿ/ಸಿಆರ್–04/2026–27 ದಿನಾಂಕ: 28–04–2026

ಪ್ರಕಟಣೆ

2026–27ನೇ ಸಾಲಿಗೆ ಚಿಕ್ಕಮಗಳೂರು ಜಿಲ್ಲೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕಚೇರಿ/ಜಿಲ್ಲಾ ಮತ್ತು ತಾಲ್ಲೂಕು ಅರಿವು ಮಾಹಿತಿ ಕೇಂದ್ರ, ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯ /ಮಹಿಳಾ ಪದವಿ ಪೂರ್ವ ಕಾಲೇಜು / ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ / ಕಾಲೇಜು, ಮೊರಾರ್ಜಿ ದೇಸಾಯಿ ವಸತಿ ಶಾಲೆ / ಕಾಲೇಜುಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಮಾನವ ಸೇವೆಯನ್ನು ತಾತ್ಕಾಲಿಕವಾಗಿ ಪಡೆಯುವ ಸಲುವಾಗಿ ಟೆಂಡರ್‌ನ್ನು ಇ–ಪೋರ್ಟಲ್ https://kppp.karnataka.gov.in ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್ ಅಂದಾಜು ಮೊತ್ತ ರೂ. 170.00ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.2.55 ಲಕ್ಷಗಳು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:**27–05–2026** ರ ಸಂಜೆ: **5.00** ಗಂಟೆ.

ಹೆಚ್ಚಿನ ಮಾಹಿತಿಗಾಗಿ:
https://kppp.karnataka.gov.in ವೆಬ್‌ಸೈಟ್‌ಗೆ ಲಾಗಿನ್ ಆಗಬಹುದು ಅಥವಾ ಜಿಲ್ಲಾ ಕಚೇರಿ ದೂರವಾಣಿ ಸಂಖ್ಯೆ:08262–295848ಗೆ ಸಂಪರ್ಕಿಸಬಹುದು.

ಸಹಿ/–ಜಿಲ್ಲಾ ಅಧಿಕಾರಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಚಿಕ್ಕಮಗಳೂರು

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀರಿಂಗ್ ವಿಭಾಗ, ಬೆಳಗಾವಿ

ಕ್ರ.ಸಂ.:ಪಂರಾಇಂ/ವಿಬೆ/ಓಜಿ–1/ಟೆಂಡರ್–05/2026–27/524 ದಿನಾಂಕ: 06–05–2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 & 2 ರಲ್ಲಿ ಒಟ್ಟು **18 (26304, 26239, 25441/call-4, 25437/call-4, 25432/call-4, 26159/call-2, 26167/call-2, 26166/call-2, 26147, 26149, 26137, 26158/call-2, 26163/call-2, 26100/call-2, 26153, 26125, 26123/call-2, 26112/call-2)** ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ **ರೂ.100.00** ಹಾಗೂ **ರೂ.5.50 ಲಕ್ಷ**ಗಳು ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ **ರೂ.2,00,000/–** ಹಾಗೂ **ರೂ.13,750/–**ಗಳು ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: **16–05–2026 ಸಂಜೆ 17:28** ರೊಳಗಾಗಿ, ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ: **16–05–2026 ಸಂಜೆ 17.30** ಗಂಟೆಯವರೆಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **18–05–2026.** ಮುಂಜಾನೆ **11:00** ಗಂಟೆಯ ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: **18–05–2026** ರಂದು ಮುಂಜಾನೆ **11.30** ಗಂಟೆಗೆ ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www.kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರು,
ಪಂ. ರಾ. ಇಂ. ವಿಭಾಗ, ಬೆಳಗಾವಿ.

ವಾ.ಸಾ.ಇ./ಬೆಳಗಾವಿ/205/2026–27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ–02/2026–27/541 ದಿನಾಂಕ: 06–05–2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 13–05–2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 14–05–2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 15–05–2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 18–05–2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀಷಿಕೆ: Mitigation- 8443-Deposite Contribution During 2025-26 ವರ್ಕ ಇನಡೆಂಟ್ (1) PWD/2025-26/OW/WORK_INDENT32655

(ಕೆಡಬ್ಲೂ–4) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/110/26-27 dt. 06.05.2026

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ) ಕಚೇರಿ, ಹುಬ್ಬಳ್ಳಿ.

ನಂ. ಎಚ್‌ಡಿಎಮ್‌ಸಿ/63/04/2026–27 ದಿನಾಂಕ: 07–05–2026

ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2023 ರ ಪ್ರಕಾರ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಸಿವ್ಹಿಲ್ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಸನ್ 2025–26 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.48658/10.82ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.47246/10.00ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.48222/2.50ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.49733/5.00ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.51690/4.36ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.49586/ 7.45ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54694/6.00ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.54691/9.45ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.54855/ 30.00ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.49574/6.20ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.49592/8.00ಲಕ್ಷ/ 4ನೇಕರೆ/ಸಾಮಾನ್ಯ, ಇಂಡೆಂಟ್ ನಂ.49730/10.00ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.52363/6.32ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.52316/3.06ಲಕ್ಷ/4ನೇಕರೆ/ ಸಾಮಾನ್ಯ, ಇಂಡೆಂಟ್ ನಂ.52268/32.41ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.52315/4.57ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.51688/15.00ಲಕ್ಷ/ 4ನೇಕರೆ/ಸಾಮಾನ್ಯ, ಇಂಡೆಂಟ್ ನಂ.54689/4.88ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54865/9.00ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54867/ 25.75ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54871/ 3.70ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.43605/2.94ಲಕ್ಷ/5ನೇಕರೆ/ಸಾಮಾನ್ಯ, ಇಂಡೆಂಟ್ ನಂ.48985/ 9.88ಲಕ್ಷ/3ನೇಕರೆ/ ಸಾಮಾನ್ಯ, ಇಂಡೆಂಟ್ ನಂ.55493/15.00ಲಕ್ಷ/2ನೇಕರೆ/ಪ.ಜಾ(ಎಸ್.ಸಿ), ಇಂಡೆಂಟ್ ನಂ.55494/20.00ಲಕ್ಷ/ 2ನೇಕರೆ/ಪ.ಪಂ(ಎಸ್.ಟಿ) ಇಂಡೆಂಟ್ ನಂ.55305/28.25ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.55304/18.75ಲಕ್ಷ/ 2ನೇಕರೆ/ಪ.ಜಾ(ಎಸ್.ಸಿ), ಇಂಡೆಂಟ್ ನಂ.55303/27.50ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.56078/4.23ಲಕ್ಷ/ 2ನೇಕರೆ/ಪ್ರವರ್ಗII(ಎ), ಇಂಡೆಂಟ್ ನಂ.49593/9.70ಲಕ್ಷ/2ನೇಕರೆ/ ಪ್ರವರ್ಗII(ಎ), ಇಂಡೆಂಟ್ ನಂ.54740/20.00ಲಕ್ಷ/ 2ನೇಕರೆ/ಪ.ಜಾ(ಎಸ್.ಸಿ), ಇಂಡೆಂಟ್ ನಂ.56265/31.82ಲಕ್ಷ/ಪ್ರವರ್ಗII(ಎ), ಇಂಡೆಂಟ್ ನಂ.49731/3.00ಲಕ್ಷ/ 2ನೇಕರೆ/ಸಾಮಾನ್ಯ, ಇಂಡೆಂಟ್ ನಂ.55766/7.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.55762/4.20ಲಕ್ಷ/ಸಾಮಾನ್ಯ, ಇಂಡೆಂಟ್ ನಂ. 56727/15.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.56729/10.00ಲಕ್ಷ/ಪ್ರವರ್ಗII(ಎ), ಇಂಡೆಂಟ್‌ನಂ.57913/18.17ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57912/5.63ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57910/7.10ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57925/6.31ಲಕ್ಷ/ ಪ್ರವರ್ಗII(ಎ), ಇಂಡೆಂಟ್ ನಂ.57911/3.00ಲಕ್ಷ/ ಪ.ಜಾ(ಎಸ್.ಸಿ) ಇಂಡೆಂಟ್ ನಂ.57914/12.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57918/8.00ಲಕ್ಷ/ಪ್ರವರ್ಗII(ಎ), ಇಂಡೆಂಟ್ ನಂ.57928/12.67ಲಕ್ಷ/ ಸಾಮಾನ್ಯ, ಇಂಡೆಂಟ್ ನಂ.57909/7.35ಲಕ್ಷ/ ಸಾಮಾನ್ಯ, ಇಂಡೆಂಟ್ ನಂ.57919/2.50ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57921/14.00ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57923/7.65ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57924/15.00ಲಕ್ಷ/ಪ.ಪಂ(ಎಸ್.ಟಿ), ಇಂಡೆಂಟ್ ನಂ.57926/4.63ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57927/10.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57915/6.14ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57917/4.48ಲಕ್ಷ/ ಪ.ಪಂ(ಎಸ್.ಟಿ), ಇಂಡೆಂಟ್ ನಂ.57790/6.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57789/9.41ಲಕ್ಷ/ಸಾಮಾನ್ಯ, ಇಂಡೆಂಟ್‌ನಂ.57791/39.88ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57788/29.50ಲಕ್ಷ/ಸಾಮಾನ್ಯ, ಸನ್ 2026–27 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.57943/49.00ಲಕ್ಷ/ಪ್ರವರ್ಗI, ಇಂಡೆಂಟ್ ನಂ.57944/20.00ಲಕ್ಷ/ ಸಾಮಾನ್ಯ, ಸನ್ 2024–25 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.36183/14.70ಲಕ್ಷ/6ನೇಕರೆ/ಸಾಮಾನ್ಯ, ಇಂಡೆಂಟ್ ನಂ.33790/6.00ಲಕ್ಷ/7ನೇಕರೆ/ಸಾಮಾನ್ಯ, ಇಂಡೆಂಟ್ ನಂ.37759/13.50ಲಕ್ಷ/6ನೇಕರೆ/ಸಾಮಾನ್ಯ ಇಂಡೆಂಟ್ ನಂ.37468/ 18.89ಲಕ್ಷ/6ನೇಕರೆ/ಸಾಮಾನ್ಯ, ಇಂಡೆಂಟ್ ನಂ.34041/2.00ಲಕ್ಷ/6ನೇಕರೆ/ಸಾಮಾನ್ಯ ಸನ್ 2024–25ನೇ ಸಾಲಿನ ಪೂಜ್ಯ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.56080/4.00ಲಕ್ಷ/2ನೇಕರೆ/ಪ್ರವರ್ಗI, ಸನ್ 2025–26ನೇ ಸಾಲಿನ ಪೂಜ್ಯ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.54678/10.00ಲಕ್ಷ/3ನೇಕರೆ/ಸಾಮಾನ್ಯ ಇಂಡೆಂಟ್ ನಂ.56069/5.00ಲಕ್ಷ/2ನೇಕರೆ/ಪ.ಪಂ(ಎಸ್.ಟಿ) ಇಂಡೆಂಟ್ ನಂ.56081/10.00ಲಕ್ಷ/ 2ನೇಕರೆ/ಪ.ಜಾ(ಎಸ್.ಸಿ), ಸನ್ 2024–25ನೇ ಸಾಲಿನ ಉಪ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.36184/5.00ಲಕ್ಷ/7ನೇಕರೆ/ಸಾಮಾನ್ಯ, ಇಂಡೆಂಟ್ ನಂ.43159/8.00ಲಕ್ಷ/5ನೇಕರೆ/ಸಾಮಾನ್ಯ ಇಂಡೆಂಟ್ ನಂ.40713/15.00ಲಕ್ಷ/5ನೇಕರೆ/ಸಾಮಾನ್ಯ, ಸನ್ 2024–25ನೇ ಸಾಲಿನ ಉಪ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.51684/4.50ಲಕ್ಷ/ 3ನೇಕರೆ/ಸಾಮಾನ್ಯ, ಸನ್ 2025–26ನೇ ಸಾಲಿನ ಉಪ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.51685/ 25.00ಲಕ್ಷ/3ನೇಕರೆ/ಸಾಮಾನ್ಯ, ಸನ್ 2025–26ನೇ ಸಾಲಿನ ನಾಮನಿರ್ದೇಶಿತ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.40719/10.00ಲಕ್ಷ/5ನೇಕರೆ/ಸಾಮಾನ್ಯ, ಇಂಡೆಂಟ್ ನಂ.48225/5.25ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.57276/15.00ಲಕ್ಷ/ ಸಾಮಾನ್ಯ, ಇಂಡೆಂಟ್ ನಂ.57438/5.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57792/21.75ಲಕ್ಷ/ಸಾಮಾನ್ಯ, ಸನ್ 2025–26ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ **(Village development Fund)** ಇಂಡೆಂಟ್ ನಂ.52680/49.82ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.56730/37.70ಲಕ್ಷ/ಸಾಮಾನ್ಯ, ಸನ್ 2024–25ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್‌ನಂ.49734/10.00ಲಕ್ಷ/3ನೇಕರೆ/ಸಾಮಾನ್ಯ, ಸನ್ 2023–24ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್ ನಂ.20268/15.64ಲಕ್ಷ/ 8ನೇಕರೆ/ಸಾಮಾನ್ಯ, ಸನ್ 2025–26ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್ ನಂ.54823/15.00ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.57583/2.63ಲಕ್ಷ/ಸಾಮಾನ್ಯ, ಸನ್ 2026–27ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ ಇಂಡೆಂಟ್ ನಂ.57895/5.00ಲಕ್ಷ/ಪ್ರವರ್ಗII (ಎ), ಇಂಡೆಂಟ್ ನಂ.57963/5.00ಲಕ್ಷ/ಪ.ಪಂ(ಎಸ್.ಟಿ), ಸನ್ 2025–26 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.31079/49.25ಲಕ್ಷ/4ನೇಕರೆ/ಸಾಮಾನ್ಯ, ಸನ್ 2025–26ನೇ ಸಾಲಿನ 50% ಅನುಪಾತದಲ್ಲಿ ಪಾಲಿಕೆ ಹಾಗೂ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾದಡಿಯಲ್ಲಿ ಇಂಡೆಂಟ್ ನಂ.57962/8.00ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57960/8.00ಲಕ್ಷ /ಸಾಮಾನ್ಯ, ಸನ್ 2024–25ನೇ ಸಾಲಿನ 50% ಅನುಪಾತದಲ್ಲಿ ಪಾಲಿಕೆ ಹಾಗೂ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾದಡಿಯಲ್ಲಿ ಇಂಡೆಂಟ್ ನಂ.57751/8.00ಲಕ್ಷ/ಸಾಮಾನ್ಯ ಸನ್ 2025–26ನೇ ಸಾಲಿನ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾದಡಿಯಲ್ಲಿ ಇಂಡೆಂಟ್ ನಂ.54853/17.00ಲಕ್ಷ/ಪ.ಜಾ(ಎಸ್.ಸಿ) ಸನ್ 2024–25ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.57920/3.03ಲಕ್ಷ/ಪ್ರವರ್ಗII(ಎ) ಇ–ಪ್ರೋಕ್ಯೂರಮೆಂಟ್ ನಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗೆ ಸಂಬಂಧಿಸಿದ ಹೆಸರು ಇ.ಎಂ.ಡಿ ಕಾಮಗಾರಿ ನಿರ್ವಹಣಾ ಅವಧಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು **https://kppp.karnataka.gov.in** ರಲ್ಲಿ ಪಡೆಯಬಹುದು. ಸದರ ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ:13–05–2026 ರಿಂದ ಪಡೆಯಬಹುದಾಗಿದೆ. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

1) ಟೆಂಡರ್ ಸಲ್ಲಸಲು ಕೊನೆಯ **ದಿನಾಂಕ: 29/05/2026 ಸಂಜೆ: 4.00 ಗಂಟೆ ವರೆಗೆ** ಹಾಗೂ

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)
ಹು.ಧಾ.ಮ. ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ./ಧಾರವಾಡ/142/2026–27/ದೇಶಪಾಂಡೆಪಬ್ಲಿಸಿಟಿ

ಕ್ರಿಮಿ. ನಂ. 36/2026
ಮಾನ್ಯ 1ನೇ ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.

ಅರ್ಜಿದಾರ : ಶೀಲತ ತಂದೆ ರಾಮಪ್ಪ ಅಮ್ಮಿನಭಾವಿ

ವಿರುದ್ಧ

ಎದುರುಗಾರರು :ಮಾನ್ಯ ಮುಖ್ಯ ನೋಂದಣಾಧಿಕಾರಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಲಯ ನಂ.8, ಜನನ ಮತ್ತು ಮರಣ ನೋಂದಣಾಧಿಕಾರಿಗಳು ಹುಬ್ಬಳ್ಳಿ

ನೋಟಿಸು.

ಮೇಲ್ಕಂಡ ಪ್ರಕರಣದಲ್ಲಿ ವಾದಿಯು ನಿಮ್ಮ ವಿರುದ್ಧ ನ್ಯಾಯಾಲಯದಲ್ಲಿ

ಅರ್ಜಿದಾರಳು ತನ್ನ ಅಜ್ಜಿಯಾದ ಶ್ರೀಮತಿ ಯಲ್ಲವ್ವ ಕೋಂ. ಯಲ್ಲಪ್ಪ ಅಮ್ಮಿನಭಾವಿ ಇವರು ದಿನಾಂಕ : 08-08-1994 ರಂದು ಕುದರಿ ಚಾಳ, ಮಂಟೂರ ರೋಡ, ಹುಬ್ಬಳ್ಳಿಯ ಸ್ವಗೃಹದಲ್ಲಿ ಪೋತಿಯಾಗಿ ರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಎದುರುಗಾರರ ವಿರುದ್ಧ ಪ್ರಕರಣವನ್ನು ದಾಖಲಿ ಸಿರುತ್ತದೆ. ಸದರ ಮರಣ ದಾಖಲಾತಿ ಕುರಿತು ಯಾರಾದರೂ ಯಾವುದೇ ರೀತಿಯ ತಂಟೆ ವ ತಕರಾರು ಇದ್ದಲ್ಲಿ ಅವರ ಹಾಜರಾತಿಗಾಗಿ ದಿನಾಂಕ: 03-06-2026 ರಂದು ಬೆಳಗ್ಗೆ 11 ಘಂಟೆಗೆ ಮುದ್ದತ್ತು ನೇಮಿಸಿದ್ದು, ಸದರೀ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕವಾಗಲಿ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳುವುದು. ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 04-05-2026 ರಂದು ನೀಡಲಾಯಿತು.

ಹುಬ್ಬಳ್ಳಿ (ಕೋರ್ಟ ಮೊಹರು) ಕೋರ್ಟಿನ ಆಜ್ಞೆಯ ಮೇರೆಗೆ
ದಿ: 04-05-2026 ಸಹಿ/-ಶಿರಸ್ತೇದಾರರು
ರಾಕೇಶ ಆರ್. ಜಾಧವ, ಅರ್ಜಿದಾರ ಪರ ವಕೀಲರು, ಹುಬ್ಬಳ್ಳಿ
ಮಾನ್ಯ 1ನೇ ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹುಬ್ಬಳ್ಳಿ

ಕ್ರಿಮಿ. ನಂ. 35/2026
ಮಾನ್ಯ 1ನೇ ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.

ಅರ್ಜಿದಾರ : ಶೀಲತ ತಂದೆ ರಾಮಪ್ಪ ಅಮ್ಮಿನಭಾವಿ

ವಿರುದ್ಧ

ಎದುರುಗಾರರು :ಮಾನ್ಯ ಮುಖ್ಯ ನೋಂದಣಾಧಿಕಾರಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಲಯ ನಂ.8, ಜನನ ಮತ್ತು ಮರಣ ನೋಂದಣಾಧಿಕಾರಿಗಳು ಹುಬ್ಬಳ್ಳಿ

ನೋಟಿಸು.

ಮೇಲ್ಕಂಡ ಪ್ರಕರಣದಲ್ಲಿ ವಾದಿಯು ನಿಮ್ಮ ವಿರುದ್ಧ ನ್ಯಾಯಾಲಯದಲ್ಲಿ

ಅರ್ಜಿದಾರಳು ತನ್ನ ಅಜ್ಜನಾದ ಶ್ರೀ ಯಲ್ಲಪ್ಪ ತಂದೆ [illegible] ಅಮ್ಮಿನಭಾವಿ ಇವರು ದಿನಾಂಕ : 14-11-1959 ರಂದು ಕುದರಿ ಚಾಳ, ಮಂಟೂರ ರೋಡ, ಹುಬ್ಬಳ್ಳಿಯ ಸ್ವಗೃಹದಲ್ಲಿ ಪೋತಿಯಾಗಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಎದುರುಗಾರರ ವಿರುದ್ಧ ಪ್ರಕರಣವನ್ನು ದಾಖಲಿ ಸಿರುತ್ತದೆ. ಸದರ ಮರಣ ದಾಖಲಾತಿ ಕುರಿತು ಯಾರಾದರೂ ಯಾವುದೇ ರೀತಿಯ ತಂಟೆ ವ ತಕರಾರು ಇದ್ದಲ್ಲಿ ಅವರ ಹಾಜರಾತಿಗಾಗಿ ದಿನಾಂಕ: 03-06-2026 ರಂದು ಬೆಳಗ್ಗೆ 11 ಘಂಟೆಗೆ ಮುದ್ದತ್ತು ನೇಮಿಸಿದ್ದು, ಸದರೀ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕವಾಗಲಿ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳುವುದು. ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 04-05-2026 ರಂದು ನೀಡಲಾಯಿತು.

ಹುಬ್ಬಳ್ಳಿ (ಕೋರ್ಟ ಮೊಹರು) ಕೋರ್ಟಿನ ಆಜ್ಞೆಯ ಮೇರೆಗೆ
ದಿ: 04-05-2026 ಸಹಿ/-ಶಿರಸ್ತೇದಾರರು
ರಾಕೇಶ ಆರ್. ಜಾಧವ, ಅರ್ಜಿದಾರ ಪರ ವಕೀಲರು, ಹುಬ್ಬಳ್ಳಿ
ಮಾನ್ಯ 1ನೇ ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹುಬ್ಬಳ್ಳಿ

ಜಾಹೀರಾತಿಗಾಗಿ ಸಂಪರ್ಕಿಸಿ 8892497927

ಕ್ರಿಮಿನಿಲ್ ಮಿಸಲೇನಿಯಸ್ ನಂ 109/2026
ಮೆ॥ ಜೆ.ಎಂ.ಎಫ್.ಸಿ. ನರಗುಂದ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು 1) ಮಂಜುಳಾ ಕೋಂ. ಮಲ್ಲಪ್ಪ ಕುರಿ
2) ಗೀತಾ ಕೋಂ. ಫುಲಿಗೆಪ್ಪ ದಿಳ್ಳಿಕೊಪ್ಪ
3) ಉಮೇಶ ಮಲ್ಲಪ್ಪ ಬಡಕಣ್ಣವರ

ವಿರುದ್ಧ

ಎದುರದಾರರು : ಜನನ-ಮರಣ ನೋಂದಣಾಧಿಕಾರಿಗಳು ಪುರಸಭೆ ನರಗುಂದ

ಸಾರ್ವಜನಿಕ ತಿಳುವಳಿಕೆ ನೋಟೀಸು

ಅರ್ಜಿದಾರರ ತಾಯಿಯಾದ ನಿಂಗವ್ವ ಕೋಂ. ಮಲ್ಲಪ್ಪ ಬಡಕಣ್ಣವರ ಇವರು ನರಗುಂದ ನಗರದ ದಂಡಾಪೂರ ಓಣಿಯ ಅರ್ಜಿದಾರರ ಮನೆಯಲ್ಲಿ ದಿನಾಂಕ : 30/02/1992 ರಂದು ನಿಧನರಾಗಿದ್ದು ಸದರ ದಿನಾಂಕವನ್ನು ಎದುರುದಾರನಲ್ಲಿ ದಾಖಲಿಸಿಕೊಳ್ಳುವಂತೆ ಆದೇಶ ಕೋರಿ ಅರ್ಜಿ ನೀಡಿರುತ್ತಾರೆ. ಸದರ ಪ್ರಕರಣವು ದಿನಾಂಕ: 02/7/26 ರಂದು ಇದ್ದು ಮೇಲ್ಕಂಡ ಪ್ರಕರಣದಲ್ಲಿ ಯಾರಿಗಾದರು ಹಕ್ಕು ಹಿತಾಸಕ್ತಿ ಇದ್ದಲ್ಲಿ ತಕರಾರು ಇದ್ದಲ್ಲಿ ಮಾನ್ಯ ನ್ಯಾಯಲಯವು ನಿಗದಿಪಡಿಸಿದ ದಿನದಂದು ಅಂದರೆ ದಿನಾಂಕ:02/7/26 ರಂದು ಬೆಳಿಗ್ಗೆ 10-30 ಘಂಟೆಗೆ ಸ್ವತಃ ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು ಇಲ್ಲದಿದ್ದರೆ. ನಿಮ್ಮ ಗೈರು ಹಾಜರಾತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಾಲಯವು ಕಾನೂನಿನ ಪ್ರಕಾರ ಮುಂದಿನ ಆದೇಶ ಮಾಡುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಈ ದಿವಸ ದಿ: 07/05/2026 ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.

ನರಗುಂದ
ದಿ: 07/05/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಜೆ.ಎಮ್.ಎಫ್.ಸಿ. ನ್ಯಾಯಾಲಯ ನರಗುಂದ
ಸಹಿ/- ಸಿ.ಎಸ್. ಪಾಟೀಲ, ವಕೀಲರು, ನರಗುಂದ

ಪಿ.&ಎಸ್.ಸಿ. ನಂ. 17/2026
ಮೆ॥ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ

1. ಶ್ರೀಮತಿ. ಫಾತೀಮಾ ಗಂ. ಮೆಹಬೂಬ ಮಕಾಂದಾರ .....ಅರ್ಜಿದಾರಳು

-ವಿರುದ್ಧ-

1. ಯಾರು ಇಲ್ಲ ....ಎದುರುದಾರರು

[illegible]

ಸಲ್ಲಿಸತಕ್ಕದ್ದು, ಇಲ್ಲದಿದ್ದರೆ ಏಕತರ್ಫ ಆದೇಶವನ್ನು ಮಾಡಲು ಬರುವದು.

ಸದರ ನೋಟೀಸ ಇವತ್ತಿನ ದಿನಾಂಕ: 05/4/2026 ರಂದು ಮಾನ್ಯ ನ್ಯಾಯಾಲಯದ ಸಹಿ ಹಾಗೂ ಮುದ್ರೆಯೊಂದಿಗೆ ಕೊಡಲ್ಪಟ್ಟಿರುತ್ತದೆ.

ಸ್ಥಳ: ಬಾಗಲಕೋಟ
ದಿ: 05-4-2026

ಸಹಿ/- ಸಿ.ಇ.ಓ.
ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ

CHANGE OF NAME

I, **TAHASEENTAJ SHEKH SANADI** (Old Name) Resident of H No: 2258 Malatesh Nagar Guttal Dist Haveri 581108 (address), have changed my name as **TAHASEENTAJ JEELANI MULAGUND** (New Name) henceforth I will be called and recognized by new name for all future purposes, dated: 07/05/2026.

CHANGE OF NAME

I, **SHREYAS NAGOJI** (Old Name) Resident of MIG 560, Samruddi, Surya Nagar, 3rd Phase, 3rd Block, Jigala, Attibele, Bengaluru - 562107, Karnataka, India, have changed my name as **SHREYAS BASAVARAJ NAGOJI** (New Name) henceforth I will be called and recognized by new name for all future purposes, dated: 07/05/2026.

CHANGE OF NAME

I, **SHAHIDALI ABBASALI BABA** (Old Name) Resident of H No: 01 Podar International School Nikil Garden Keshwapur Hubli 580023 (address), have changed my name as **SHAHIDALI BABA** (New Name) henceforth I will be called and recognized by new name for all future purposes, dated: 07/05/2026.

CHANGE OF NAME

I, **SANIYA BANU RANEBENNUR** (Old Name) Resident of APMC 3rd Gate, Near Vaishnavi Temple, Eshwar Nagar, Hubballi Navanagar, Dharwad, Karnataka - 580025, have changed my name as **SANIYA M K BASAVANAGOWDA** (New Name) henceforth I will be called and recognized by new name for all future purposes, dated: 07/05/2026.

CHANGE OF NAME

I, **PRAVEEN BELLOBBI** (Old Name) Resident of Chandranath Nagar, Near Ashok Nagar, Hubli, Hubballi - Dharwad City - 580032, Karnataka, India, have changed my name as **PRAVEEN BELLOBBI** (New Name) henceforth I will be called and recognized by new name for all future purposes, dated: 07/05/2026.

CHANGE OF NAME

I, **AAKANKSHA** (Old Name) Resident of 118, Swadarshan, Adhyapak Nagar, Near Siddappaja Temple, Navanagar, Hubli - 580025, have changed my name as **AAKANKSHA ALISARY** (New Name) henceforth I will be called and recognized by new name for all future purposes, dated: 07/05/2026.

CHANGE OF NAME

I, **YASHAS NAGOJI** (Old Name) Resident of MIG 560, Surya Nagar 3rd Phase, 3rd Block, Jigala Village, Attibele, Bengaluru Rural - 562107, Karnataka, India, have changed my name as **YASHAS BASAVARAJ NAGOJI** (New Name) henceforth I will be called and recognized by new name for all future purposes, dated: 07/05/2026.

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 610 /2026

ದುರದೃಷ್ಟವಶಾತ್, ಸರ್ದಾರ್ ಪಟೇಲರು ಅತೀವ ಆಸಕ್ತಿಯಿಂದ ಕಂಡ ಕನಸಿನ ಸಾಕಾರವನ್ನು ಕಣ್ಣಾರೆ ಕಾಣಲು ವಿಧಿ ಅವರಿಗೆ ಅವಕಾಶ ನೀಡಲಿಲ್ಲ. ಪುನರ್‌ನಿರ್ಮಿತ ಸೋಮನಾಥ ದೇವಾಲಯವು ಭಕ್ತರಿಗಾಗಿ ತನ್ನ ಬಾಗಿಲುಗಳನ್ನು ತೆರೆಯುವ ಮೊದಲೇ ಅವರು ಈ ಲೋಕವನ್ನು ಅಗಲಿದ್ದರು. ಆದರೂ, ಅವರ ಪ್ರಭಾವವು ಪ್ರಭಾಸ ಪಟ್ಟಣದ ಪವಿತ್ರ ತೀರಗಳಲ್ಲಿ ಅನುರಣಿಸುತ್ತಲೇ ಇತ್ತು. ಅವರ ದೃಷ್ಟಿಕೋನವನ್ನು ಶ್ರೀ ಕೆ.ಎಂ. ಮುನ್ಷಿಯವರು ಮುಂದುವರಿಸಿದರು ಮತ್ತು ಅವರಿಗೆ ನವನಗರದ ಜಾಮ್ಸಾಹೇಬರು ಸಮರ್ಥ ಬೆಂಬಲ ನೀಡಿದರು. 1951ರಲ್ಲಿ ದೇವಾಲಯದ ನಿರ್ಮಾಣ ಪೂರ್ಣಗೊಂಡಾಗ, ಉದ್ಘಾಟನಾ ಸಮಾರಂಭಕ್ಕೆ ಭಾರತದ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ್ ಅವರನ್ನು ಆಹ್ವಾನಿಸಲು ನಿರ್ಧರಿಸಲಾಯಿತು. ಅಂದಿನ ಪ್ರಧಾನಮಂತ್ರಿ ಪಂಡಿತ್ ನೆಹರೂ ಅವರ ತೀವ್ರ ವಿರೋಧವನ್ನೂ ಮೀರಿ, ಡಾ. ಪ್ರಸಾದ್ ಅವರು ಸಮಾರಂಭದಲ್ಲಿ ಭಾಗವಹಿಸಿದರು, ತನ್ಮೂಲಕ ಆ ಕ್ಷಣವನ್ನು ಮತ್ತಷ್ಟು ವಿಶೇಷ ಮತ್ತು ಐತಿಹಾಸಿಕವಾಗಿಸಿದರು.

ನನ್ನ ಮನಸ್ಸು 2001ರ ಅಕ್ಟೋಬರ್ ತಿಂಗಳಿಗೂ ಮರಳುತ್ತಿದೆ, ಆಗಷ್ಟೇ ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದೆ. 2001ರ ಅಕ್ಟೋಬರ್ 31, ಸರ್ದಾರ್ ಪಟೇಲರ ಜಯಂತಿಯ ದಿನದಂದು, ಸೋಮನಾಥ ದೇವಾಲಯವು ತನ್ನ ಬಾಗಿಲುಗಳನ್ನು ತೆರೆದು 50 ವರ್ಷಗಳಾದ ಸವಿನೆನಪಿಗಾಗಿ ಕಾರ್ಯಕ್ರಮವೊಂದನ್ನು ಆಯೋಜಿಸುವ ಗೌರವ ಗುಜರಾತ್ ಸರ್ಕಾರಕ್ಕೆ ಲಭಿಸಿತ್ತು. ಇದು ಸರ್ದಾರ್ ಪಟೇಲರ 125ನೇ ಜನ್ಮ ಜಯಂತಿಯ ಆಚರಣೆಯ ಸಮಯವೂ ಆಗಿತ್ತು. ಅಂದಿನ ಪ್ರಧಾನಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿ ಮತ್ತು ಅಂದಿನ ಗೃಹ ಸಚಿವರಾದ ಎಲ್.ಕೆ. ಅಡ್ವಾಣಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

1951ರ ಮೇ 11 ರಂದು ನೀಡಿದ ತಮ್ಮ ಭಾಷಣದಲ್ಲಿ, ಡಾ. ರಾಜೇಂದ್ರ ಪ್ರಸಾದ್ ಅವರು ಸೋಮನಾಥ ದೇವಾಲಯವು ಜಗತ್ತಿಗೆ ಸಾರುವುದೇನೆಂದರೆ, ಅಪ್ರತಿಮ ನಂಬಿಕೆ ಮತ್ತು ಪ್ರೀತಿಯನ್ನು ಹೊಂದಿರುವ ಯಾವುದನ್ನೇ ಆಗಲಿ ನಾಶಪಡಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಈ ದೇವಾಲಯವು ಜನರ ಹೃದಯಗಳಲ್ಲಿ ನೆಲೆಸಲಿದೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು. ದೇವಾಲಯದ ಪುನರ್‌ನಿರ್ಮಾಣವು ಸರ್ದಾರ್ ಪಟೇಲರ ಕನಸಿನ ಸಾಕಾರವಾಗಿದೆ. ಆದರೆ, ಅದೇ ಸ್ಫೂರ್ತಿಯನ್ನು ಮುಂದಕ್ಕೆ ಕೊಂಡೊಯ್ಯುತ್ತಾ, ಜನರ ಜೀವನದಲ್ಲಿ ಸಮೃದ್ಧಿಯನ್ನು ಮರಳಿ ತರುವುದು ಮುಖ್ಯ ಎಂದು ಅವರು ಹೇಳಿದರು. ಇವು ಅವರು ನೀಡಿದ ಪ್ರಮುಖ ಮತ್ತು ಸ್ಫೂರ್ತಿದಾಯಕ ಸಂದೇಶಗಳಾಗಿವೆ.

ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ನಾವು ಇದೇ ಹಾದಿಯಲ್ಲಿ ಸಾಗುತ್ತಿದ್ದೇವೆ. ವಿಕಾಸದ ಜತೆಗೆ ಪರಂಪರೆ (ವಿಕಾಸ್ ಭಿ, ವಿರಾಸತ್ ಭಿ) ಎಂಬ ತತ್ವದಿಂದ ಸ್ಫೂರ್ತಿ ಪಡೆದು, ಸೋಮನಾಥದಿಂದ ಕಾಶಿಯವರೆಗೆ, ಕಾಮಾಖ್ಯದಿಂದ ಕೇದಾರನಾಥದವರೆಗೆ, ಅಯೋಧ್ಯೆಯಿಂದ ಉಜ್ಜಯಿನಿಯವರೆಗೆ ಹಾಗೂ ತ್ರಯಂಬಕೇಶ್ವರದಿಂದ ಶ್ರೀಶೈಲದವರೆಗೆ, ನಮ್ಮ ಆಧ್ಯಾತ್ಮಿಕ ಕೇಂದ್ರಗಳ ಸಾಂಪ್ರದಾಯಿಕ ಸ್ವರೂಪವನ್ನು ಸಂರಕ್ಷಿಸುತ್ತಲೇ ಅವುಗಳನ್ನು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಸಜ್ಜುಗೊಳಿಸುವ ಅವಕಾಶ ನಮ್ಮ ತಂಡಕ್ಕೆ ಲಭಿಸಿರುವುದನ್ನು ನಾನು ನನ್ನ ಸೌಭಾಗ್ಯವೆಂದು ಪರಿಗಣಿಸುತ್ತೇನೆ. ಇದರೊಂದಿಗೆ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನಗಳು ಹೆಚ್ಚಿನ ಜನರು ಈ ಸ್ಥಳಗಳಿಗೆ ಭೇಟಿ ನೀಡುವುದನ್ನು ಖಚಿತಪಡಿಸುತ್ತವೆ. ಇದು ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸುತ್ತದೆ, ಜೀವನೋಪಾಯವನ್ನು ಭದ್ರಪಡಿಸುತ್ತದೆ ಮತ್ತು ಏಕ್ ಭಾರತ, ಶ್ರೇಷ್ಠ ಭಾರತದ ಸ್ಫೂರ್ತಿಯನ್ನು ಗಾಢವಾಗಿಸುತ್ತದೆ.

ಸೋಮನಾಥವನ್ನು ರಕ್ಷಿಸಲು ಪ್ರಾಣ ಅರ್ಪಿಸಿದವರ ಮತ್ತು ಅದನ್ನು ಪದೇ ಪದೇ ಪುನರ್‌ನಿರ್ಮಿಸಿದವರ ಹೋರಾಟಗಳು ಮತ್ತು ತ್ಯಾಗಗಳನ್ನು ಎಂದಿಗೂ ಮರೆಯಲಾಗುವುದಿಲ್ಲ. ಭಾರತದ ವಿವಿಧ ಮೂಲೆಗಳಿಂದ ಬಂದ ಅಸಂಖ್ಯಾತ ವ್ಯಕ್ತಿಗಳು ಅದರ ವೈಭವವನ್ನು ಮರುಸ್ಥಾಪಿಸಲು ಕೊಡುಗೆ ನೀಡಿದ್ದಾರೆ. ಅವರು ಭಾರತದ ಪ್ರತಿಯೊಂದು ಭಾಗವನ್ನೂ ಪವಿತ್ರವೆಂದು ಕಂಡರು, ಭೌಗೋಳಿಕತೆಯನ್ನು ಮೀರಿದ ಏಕತೆಯ ಭಾವನೆಯಿಂದ ಅವರು ಒಂದಾಗಿದ್ದರು. ವಿಭಜನೆಗಳಿಂದ ಕೂಡಿದ ಇಂದಿನ ಜಗತ್ತಿನಲ್ಲಿ, ಈ ಏಕತೆಯ ಮನೋಭಾವವು ಎಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದೆ. ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಏಕತೆಯ ಭಾವನೆ ಮತ್ತು ಸಾಮೂಹಿಕ ನಾಗರಿಕ ಪ್ರಜ್ಞೆ ಜೀವಂತವಾಗಿರುವುದರಿಂದ, ಸೋಮನಾಥವು ತನ್ನೆಲ್ಲಾ ವೈಭವದೊಂದಿಗೆ ಅಚಲವಾಗಿ ನಿಲ್ಲುವುದನ್ನು ಮುಂದುವರಿಸುತ್ತದೆ. ಇದಕ್ಕೆ ಗೌರವ ಸಲ್ಲಿಸುವ ಸಲುವಾಗಿ, ಸಾವಿರ ವರ್ಷಗಳ ಅಸಾಧಾರಣ ಶೌರ್ಯವನ್ನು ಸ್ಮರಿಸುತ್ತಾ, ಮುಂದಿನ ಸಾವಿರ ದಿನಗಳ ಕಾಲ ಸೋಮನಾಥದಲ್ಲಿ ವಿಶೇಷ ಪೂಜೆಗಳು ನಡೆಯಲಿವೆ. ಈ ಪೂಜೆಗಳಿಗಾಗಿ ಅನೇಕ ಜನರು ದೇಣಿಗೆ ನೀಡುತ್ತಿರುವುದು ಸಂತಸ ತಂದಿದೆ.

ಈ ವಿಶೇಷ ಸಮಯದಲ್ಲಿ ಸೋಮನಾಥಕ್ಕೆ ಪ್ರಯಾಣಿಸಬೇಕೆಂದು ನಾನು ಭಾರತೀಯರಲ್ಲಿ ವಿನಂತಿಸುತ್ತೇನೆ. ನೀವು ಸೋಮನಾಥದ ತೀರದಲ್ಲಿ ನಿಂತಾಗ, ಅಲ್ಲಿನ ಪ್ರಾಚೀನ ಪ್ರತಿಧ್ವನಿಗಳು ನಿಮ್ಮೊಂದಿಗೆ ಮಾತನಾಡಲು ಅವಕಾಶ ಮಾಡಿಕೊಡಿ. ನೀವು ಕೇವಲ ಭಕ್ತಿಪರವಶರಾಗುವುದು ಮಾತ್ರವಲ್ಲದೆ, ಎಂದಿಗೂ ಮಾಸದ, ಅಖಂಡವಾದ ಮತ್ತು ಅಚಲವಾದ ನಾಗರಿಕತೆಯ ಚೇತನದ ಬಲಿಷ್ಠ ನಾಡಿಮಿಡಿತವನ್ನು ಅನುಭವಿಸುವಿರಿ. ನೀವು ಭಾರತದ ಅಜೇಯ ಚೇತನವನ್ನು ಅನುಭವಿಸುವಿರಿ ಮತ್ತು ಎಷ್ಟೇ ಪ್ರಯತ್ನಗಳ ಹೊರತಾಗಿಯೂ ನಮ್ಮ ಸಂಸ್ಕೃತಿಯು ಏಕೆ ಪರಾಜಯಗೊಳ್ಳದೆ ಉಳಿಯಿತು ಎಂಬುದನ್ನು ಅರ್ಥಮಾಡಿಕೊಳ್ಳುವಿರಿ; ಅಷ್ಟೇ ಅಲ್ಲದೆ, ಶಾಶ್ವತ ವಿಜಯದ ದರ್ಶನವನ್ನು ಪಡೆಯುವ ಅವಕಾಶ ನಿಮ್ಮದಾಗಲಿದೆ. ಇದು ಖಂಡಿತವಾಗಿಯೂ ಮರೆಯಲಾಗದ ಅನುಭವವಾಗಲಿದೆ.

ಜೈ ಸೋಮನಾಥ.

(ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀ ಸೋಮನಾಥ ಟ್ರಸ್ಟ್‌ನ ಅಧ್ಯಕ್ಷರೂ ಆಗಿದ್ದಾರೆ)

ಕಿರುಸುದ್ದಿ

ಅಹವಾಲು ಸ್ವೀಕಾರ

◆**ಗದಗ:** ಕರ್ನಾಟಕ ಲೋಕಾಯುಕ್ತ, ಗದಗ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ಮೇ 13 ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 1ರವರೆಗೆ ಪುರಸಭೆ ಕಾರ್ಯಾಲಯ ಲಕ್ಷ್ಮೇಶ್ವರದಲ್ಲಿ ಲೋಕಾಯುಕ್ತ ಜನ ಸಂಪರ್ಕ ಸಭೆ ಮತ್ತು ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಸಾರ್ವಜನಿಕರಿಂದ ದೂರು/ಅಹವಾಲುಗಳನ್ನು ಸ್ವೀಕರಿಸಲಾಗುವುದು.

ಸಾರ್ವಜನಿಕರು ತಮ್ಮ ಕುಂದು-ಕೊರತೆಗಳನ್ನು, ಅಹವಾಲುಗಳನ್ನು ಹಾಗೂ ತಮ್ಮ ಸರಕಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಯಾವುದೇ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಮಾಡಿಕೊಡಲು ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ವಿಳಂಬ ಮಾಡುತ್ತಿರುವ ಬಗ್ಗೆ ಲಿಖಿತ ದೂರನ್ನು ದಾಖಲಿಸುವ ಬಗ್ಗೆ, ಸರ್ಕಾರಿ ಅಧಿಕಾರಿಗಳು ಸರ್ಕಾರದ ಯೋಜನೆಗಳ ಲಾಭವನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಉದ್ದೇಶ ಪೂರ್ವಕ ತಾರತಮ್ಯ ಮಾಡುತ್ತಿರುವ ಬಗ್ಗೆ ಲಿಖಿತ ದೂರನ್ನು ದಾಖಲಿಸುವ ಬಗ್ಗೆ, ಸರಕಾರದ ಯೋಜನೆಗಳ ಅನುಷ್ಠಾನದಲ್ಲಿ ಅನಗತ್ಯ ವಿಳಂಬ, ಕಳಪೆ ಕಾಮಗಾರಿ ನಡೆಸಿ ಹಣ ದುರುಪಯೋಗ ಪಡಿಸಿದ ದೂರುಗಳ ಬಗ್ಗೆ ಲಿಖಿತ ದೂರನ್ನು ದಾಖಲಿಸುವ ಬಗ್ಗೆ, ಸಾರ್ವಜನಿಕರ ಕೆಲಸ ಕಾರ್ಯಗಳನ್ನು ನಿಗದಿತ ಸಮಯದೊಳಗೆ ಮಾಡಿಕೊಡದೆ, ಅಕ್ರಮ ಸಂಭಾವನೆ (ಲಂಚದ ಹಣ)ಯ ಸಲುವಾಗಿ ಅನಗತ್ಯ ವಿಳಂಬ ಮಾಡುತ್ತಿದ್ದರೆ ಲಿಖಿತ ದೂರನ್ನು ದಾಖಲಿಸುವ ಬಗ್ಗೆ, ಯಾವುದೇ ಸರ್ಕಾರಿ ಅಧಿಕಾರಿಯು ತಾನು ಕರ್ತವ್ಯ ನಿರ್ವಹಿಸಲು ನಿಯೋಜಿಸಿದ ಕರ್ತವ್ಯವನ್ನು ನಿರ್ವಹಿಸುವಲ್ಲಿ ದುರ್ನಡತೆಯ ಪ್ರದರ್ಶಿಸುವಂತಹ ಅಧಿಕಾರಿಗಳ ಮೇಲೆ ಲಿಖಿತ ದೂರನ್ನು ದಾಖಲಿಸುವ ಬಗ್ಗೆ, ಪತ್ರ 1 ಮತ್ತು 2 ರಲ್ಲಿ ಅಫಿಡವಿಟ್‌ನೊಂದಿಗೆ ಅಗತ್ಯ ದಾಖಲಾತಿಗಳೊಂದಿಗೆ ಲಿಖಿತ ದೂರನ್ನು ಸಲ್ಲಿಸಬಹುದಾಗಿದೆ. ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುವಂತಹ ಪ್ರಕರಣಗಳಿಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕ ವಿಜಯ ಬಿರಾದಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

◆**ಗದಗ:** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಹೊಸದಾಗಿ ಮಂಜೂರಾಗಿರುವ ಮಹಿಳಾ ಪದವಿಪೂರ್ವ ಕಾಲೇಜು, ಗದಗ ಇಲ್ಲಿ ಪ್ರಥಮ ಪಿ.ಯು.ಸಿ. ವಿದ್ಯಾರ್ಥಿನಿಗಳಿಗೆ ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಉರ್ದು, ವಿಜ್ಞಾನ ವಿಭಾಗಕ್ಕೆ (ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಹಾಗೂ ಜೀವಶಾಸ್ತ್ರ) ವಾಣಿಜ್ಯ ವಿಭಾಗಕ್ಕೆ (ಕಂಪ್ಯೂಟರ್ ವಿಜ್ಞಾನ, ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ ಮತ್ತು ಲೆಕ್ಕಶಾಸ್ತ್ರ) ಕಲಾ ವಿಭಾಗಕ್ಕೆ (ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ) ವಿಷಯಗಳನ್ನು ಬೋಧಿಸಲು ಅರ್ಹ ಅತಿಥಿ ಉಪನ್ಯಾಸಕರು ಆಸಕ್ತಿಯುಳ್ಳ ಅರ್ಹ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಮೇ 15 ರೊಳಗಾಗಿ ತಮ್ಮ ಶೈಕ್ಷಣಿಕ ದಾಖಲಾತಿಗಳನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ ಭವನ, ಜಿಲ್ಲಾ ನ್ಯಾಯಾಲಯದ ಎದುರಿಗೆ, ಹುಬ್ಬಳ್ಳಿ ರೋಡ್, ಗದಗ ಕಚೇರಿಗೆ ಖುದ್ದು ಭೇಟಿ ನೀಡಿ ಅರ್ಜಿ ಸಲ್ಲಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಅಮಿತ ಬಿದರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಮಹಾಬಳೇಶ್ವರ ಕುಂದನಗಾರ



◆**ನರಗುಂದ:** ಪಟ್ಟಣದ ಶಂಕರಲಿಂಗನ ಓಣಿ ನಿವಾಸಿ ಮಹಾಬಳೇಶ್ವರ ಮನೋಹರ ಕುಂದನಗಾರ (54) ಬುಧವಾರ ನಿಧನರಾದರು. ಮೃತರು ಪತ್ನಿ, ಸಹೋದರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	4420-6924
ಅಲಸಂದೆ	1219-5869
ಕಡಲೆ	1109-5669
ಉದ್ದು	3009-3009
ಹವೀಜ	3519-3519
ಹೆಸರು	1877-5590
ಜೋಳ	2569-4221
ಗೋವಿಜೋಳ	1417-1851
ನವಣಿ	2744-2744
ಕುಸುಬಿ	4100-5326
ಸೂರ್ಯಕಾಂತಿ	6182-6672
ತೊಗರಿ	4312-4312
ಗೋಧಿ	1414-4868
ಹತ್ತಿ	1300-7250
ಹುರಳಿ	2812-2812



ಗದಗ: ಜಿಲ್ಲಾ ವಿಕಾಸ ವೇದಿಕೆಯಿಂದ ಗದಗ- ಹರಪನಹಳ್ಳಿ ಮಾರ್ಗದ ರೈಲ್ವೆ ಹೋರಾಟ ಸಮಿತಿ ಸಂಸ್ಥಾಪಕ ಬಸವರಾಜ ನವಲಗುಂದ ಸೇರಿ ಸಮಿತಿ ಸದಸ್ಯರಿಗೆ ನಗರದ ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಗದಗ-ಹರಪನಹಳ್ಳಿ ರೈಲು ಮಾರ್ಗ ಬೇಗನ ಕೈಗೂಡಲಿ ಎಂದು ಗದಗ- ಹರಪನಹಳ್ಳಿ ಮಾರ್ಗದ ರೈಲ್ವೆ ಹೋರಾಟ ಸಮಿತಿ ಸಂಸ್ಥಾಪಕ ಬಸವರಾಜ ನವಲಗುಂದ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ಗದಗ ಜಿಲ್ಲಾ ವಿಕಾಸ ವೇದಿಕೆ ಅಧ್ಯಕ್ಷ ವಿಶ್ವನಾಥ ಖಾನಾಪೂರ, ನಗರಸಭೆ ಮಾಜಿ ಸದಸ್ಯ ಮಂಜುನಾಥ ಮುಳಗುಂದ, ಎಂ.ಎಸ್. ಪರ್ವತಗೌಡ, ಚನ್ನಕೇಶವ ಹಿರೇಮಠ ಇತರರಿದ್ದರು.

ಶಿಕ್ಷಣದಿಂದ ವ್ಯಕ್ತಿತ್ವ ವಿಕಸನ: ಪಲ್ಲೇದ

◆**ಗದಗ:** ಶಿಕ್ಷಣ ವ್ಯಕ್ತಿತ್ವ ವಿಕಸನಗೊಳಿಸುವ ಮೂಲಕ ವ್ಯಕ್ತಿಯನ್ನು ಉನ್ನತ ಸ್ಥಾನಕ್ಕೇರಿಸುವ ಅದ್ಭುತ ಶಕ್ತಿ ಶಿಕ್ಷಣಕ್ಕಿದೆ ಎಂದು ನಿವೃತ್ತ ಜಿಲ್ಲಾ ನ್ಯಾಯಾಧೀಶ, ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರ ಎಸ್.ಜಿ.ಪಲ್ಲೇದ ಹೇಳಿದರು.

ನಗರದ ಶಿಕ್ಷಣ ಪ್ರೇಮಿ ಬಿ.ಜಿ.ಅಣ್ಣಿಗೇರಿ ಆಶ್ರಮದಲ್ಲಿ ಬಿ.ಜಿ.ಅಣ್ಣಿಗೇರಿ ಗುರುಗಳ ಪ್ರತಿಭಾ ಪ್ರತಿಷ್ಠಾನ ಏರ್ಪಡಿಸಿದ್ದ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಚಿಂತನ ಮಾಲಿಕೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಡಿಡಿಪಿಐ ಆರ್.ಎಸ್.ಬುರಡಿ ಮಾತನಾಡಿ, ಈ ಸಲ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವು ಅತ್ಯುತ್ತಮವಾಗಿ ಬರಲು ಶಿಕ್ಷಕರ ಪರಿಶ್ರಮ ವಿದ್ಯಾರ್ಥಿಗಳ ನಿರಂತರ ಓದುವಿಕೆಯಿಂದಾಗಿ ಸಾಕಾರಗೊಂಡಿದೆ ಎಂದರು. ನಿವೃತ್ತ ಪ್ರಾಚಾರ್ಯ ಡಾ.ಉಮೇಶ ಪುರದ, ಜಿಮ್ಸ್ ವೈದ್ಯಾಧಿಕಾರಿ ಡಾ.ಅರವಿಂದ ಹಾಗೂ ನಗರಸಭೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಲಕ್ಷ್ಮಣ ಜೋಗದಂಡಕರ ಮಾತನಾಡಿದರು. ಮಕ್ಕಳಿಗೆ ದಾಸೋಹ ಸೇವೆ ವಹಿಸಿಕೊಂಡಿದ್ದ ಪ್ರಸನ್ನ ಆರಳಿ ಮತ್ತು ಅತಿಥಿಗಳನ್ನು ಸನ್ಮಾನಿಸಲಾಯಿತು. ಸಿದ್ದಣ್ಣ ಕವಲೂರ, ಆಂಜನೇಯ ಕಟಗಿ, ತೋಂಟೇಶ ವೀರಲಿಂಗಯ್ಯನಮಠ, ರವಿ ದಂಡಿನ, ಡಾ.ಚನ್ನಪ್ಪಗೌಡ್ರ, ಡಾ.ಬಸಯ್ಯ ಬೆಳ್ಳೇರಿಮಠ, ಸುಭಾಶ್ಚಂದ್ರ ಬೆಟ್ಟದೂರ, ಗುರುರಾಜ ಅಣ್ಣಿಗೇರಿ, ಆಶ್ರಮದ ಶಿಕ್ಷಕರಾದ ರೇಣುಕಾ ಕೆಲೂರ, ಭೀಮಪ್ಪ ಇಬ್ರಾಂಪೂರ, ಪ್ರಸನ್ನಕುಮಾರ ಗುತ್ತಿ, ಗುರುರಾಜ ಅಣ್ಣಿಗೇರಿ, ಮಂಜುಳಾ ತುಮ್ಮರಮಟ್ಟಿ, ಜ್ಯೋತಿ ವಡಗೇರಿ, ಹುಲಿಗೆಮ್ಮ ಹಂಚಿನಾಳ, ಸಂತೋಷ ಹಾದಿ, ದೀಪಾ, ನೇಹಾ ಖಟವಟೆ, ತೇಜಸ್ವಿನಿ ಕುರ್ತಕೋಟಿ ಇದ್ದರು.



ಲಕ್ಷ್ಮೇಶ್ವರ: ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಲಕ್ಷ್ಮೇಶ್ವರದ ದಿ ಯೂನಿಕ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ ದತ್ತಿ ಉಪನ್ಯಾಸಗಳನ್ನು ವೈದ್ಯ ಡಾ.ಪಿ.ಡಿ.ತೋಟದ ಉದ್ಘಾಟಿಸಿದರು. ಶಿಕ್ಷಕ ಸಾಹಿತಿ ಆರ್.ಎಸ್.ಪಾಟೀಲ, ಚೇತನಾ ಕೋಳಿವಾಡ, ಯೂನಿಕ್ ಶಾಲೆಯ ಮುಖ್ಯೋಪಾಧ್ಯಾಯ ಅರವಿಂದ ದೇಶಪಾಂಡೆ ಇತರರಿದ್ದರು. ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಈಶ್ವರ ಮೆಡ್ಲೇರಿ ಪ್ರಾಸ್ತಾವಿಸಿದರು. ಸಲಹಾ ಸಮಿತಿಯ ಎಸ್.ಬಿ.ಅಣ್ಣಿಗೇರಿ ದತ್ತಿದಾನಿಗಳು ಹಾಗೂ ಉಪನ್ಯಾಸಕರ ಸನ್ಮಾನ ಕಾರ್ಯಕ್ರಮ ನಡೆಸಿಕೊಟ್ಟರು.

ಸಿಸಿ ರಸ್ತೆ ನಿರ್ಮಾಣಕ್ಕೆ ಚಾಲನೆ | ಸಂಗನಗೌಡ ಪಾಟೀಲ ಅಭಿಮತ

ಮಾರನಬಸರಿ ಅಭಿವೃದ್ಧಿಗೆ ಬದ್ಧ

◆**ಗದಗ:** ಶಾಸಕ ಜಿ.ಎಸ್.ಪಾಟೀಲ ಮಾರನಬಸರಿ ಗ್ರಾಮದ ಮೇಲೆ ವಿಶೇಷ ಪ್ರೀತಿಯನ್ನು ಇಟ್ಟುಕೊಂಡಿದ್ದಾರೆ. ಗ್ರಾಮದ ಸಮಗ್ರ ಅಭಿವೃದ್ಧಿಗೆ ಸದಾ ಬದ್ಧರಾಗಿದ್ದಾರೆ ಎಂದು ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ ಹೇಳಿದರು.

ಗುರುವಾರ ರೋಣ ಗ್ರಾಮದ ಜಕ್ಕಲಿ ಹಾಗೂ ಮಾರನಬಸರಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ಬ್ರಿಜ್‌ನಿಂದ ಗ್ರಾಮದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯ 31 ಲಕ್ಷ ರೂ.ಗಳ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಭೂಮಿಪೂಜೆಯನ್ನು ನೆರವೇರಿಸಿ ಮಾತನಾಡಿದರು.

2013 ಹಾಗೂ 18ನೇ ಸಾಲಿನಲ್ಲಿ ಶಾಸಕ ಜಿ.ಎಸ್.ಪಾಟೀಲರು ನರೇಗಲ್ಲ ಹಾಗೂ ಕಳಕಾಪೂರ ರಸ್ತೆಯನ್ನು ನಿರ್ಮಿಸಿದ್ದಾರೆ.ಗ್ರಾಮದಲ್ಲಿ ಸಿಸಿ ರಸ್ತೆ, ಯಾತ್ರಾ ನಿವಾಸ, ಶಾದಿಮಹಲ್,ಜಕ್ಕಲಿಯಿಂದ ಕೊಪ್ಪದ ಕ್ರಾಸ್ ವರೆಗೆ ಡಬಲ್ ರಸ್ತೆ, ಹಾಲುಮತದ ಸಮುದಾಯ ಭವನ ಸೇರಿದಂತೆ ಕೋಟ್ಯಾಂತರ ರೂ.ಗಳ ವೆಚ್ಚದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು ಇತಿಹಾಸವಾಗಿದೆ ಎಂದ ಅವರು, ಪ್ರೌಢ ಶಾಲಾ ನಿರ್ಮಾಣಕ್ಕೂ ತಮ್ಮ ಕಾಳಜಿ ತೋರಿಸಿದ್ದಾರೆ ಎಂದರು.

ಈಗ ಮತ್ತೆ ಅಧಿಕಾರಕ್ಕೆ ಬಂದ ನಂತರ ಗ್ರಾಮದಲ್ಲಿ 70 ಲಕ್ಷ ರೂ.ಗಳಲ್ಲಿ ಸಿಸಿ ರಸ್ತೆಗಳನ್ನು ನಿರ್ಮಿಸಿದ್ದಾರೆ.20 ಲಕ್ಷ ರೂ.ಗಳ ವೆಚ್ಚದಲ್ಲಿ ಗ್ರಂಥಾಲಯವನ್ನು ನಿರ್ಮಿಸುವ ಜೊತೆಗೆ ಗ್ರಂಥಾಲಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಸಿಸಿ ರಸ್ತೆಯನ್ನಾಗಿ ಪರಿವರ್ತನೆಗೊಳಿಸಿದ್ದಾರೆ. 10 ಲಕ್ಷ ರೂ.ಗಳ ವೆಚ್ಚದಲ್ಲಿ ಸಿದ್ದನಕೊಳ್ಳದ ಸಿದ್ಧ ಶ್ರೀಗಳ ಸಮುದಾಯ ಭವನವನ್ನು ನಿರ್ಮಿಸಲು ಚಾಲನೆ ಕೊಟ್ಟಿದ್ದಾರೆ. ಗ್ರಾಮ ದೇವತೆಯ ಸಮುದಾಯ ಭವನಕ್ಕೂ ಅನುದಾನವನ್ನು ಒದಗಿಸಿದ್ದು,ಅವರು ಗ್ರಾಮದ ಮೇಲೆ ಇಟ್ಟಿರುವ ನಂಬಿಕೆಯನ್ನು ಸಾದರಪಡಿಸುತ್ತದೆ ಎಂದರು.

ಇದೇ ಸಂಧರ್ಭದಲ್ಲಿ ಗ್ರಾಮಸ್ಥರು ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ ಅವರಿಗೆ ಸನ್ಮಾನಿಸಿದರು. ನರೇಗಲ್ಲ ಬ್ಲಾಕ್ ಕ್ಯಾಂಗ್ರೆಸ್ ಸಮಿತಿ ಅಧ್ಯಕ್ಷ ಶರಣಪ್ಪ ಬೆಟಗೇರಿ, ಶರಣಪ್ಪ ಕುರಿ, ರೈಮಾನಸಾಬ ಮೋತೆಖಾನ್, ಅಡಿವೇಪ್ಪ ಜಿಗಳೂರ, ಮರ್ತುಜಸಾಬ ಮೋತೆಖಾನ್, ಶಂಕ್ರಪ್ಪ ಸರ್ವಿ, ಉಮೇಶಗೌಡ ಪಾಟೀಲ, ಎಸ್.ಎಚ್.ಹಾದಿಮನಿ, ಎ.ಸಿ.ಪಾಟೀಲ, ಶಿವಪ್ಪ ಚಾಲಿಹಾಳ, ಈರಪ್ಪ ನಿಡಗುಂದಿ, ನಬಿಸಾಬ ಹುಡೇದ, ಕಾಧಿರಸಾಬ ಕಳಕಾಪೂರ, ಹನ್ಮಂತಪ್ಪ ತಳವಾರ, ಡಿ.ಡಿ.ದೋಟಿಹಾಳ, ರಿಯಾಜ ಆಲೂರ, ಮಹ್ಮದ ಸವಡಿ, ವೀರಣ್ಣ ಶಾಖಾ, ರವಿ ಅಬ್ಬಿಗೇರಿ, ಸಂತೋಷ ಅಬ್ಬಿಗೇರಿ, ಕಲ್ಲಪ್ಪ ಸಂಗಟಿ, ಚಂದ್ರಶೇಖರಯ್ಯ ವಸ್ತ್ರದ, ಯಲ್ಲಪ್ಪ ಡೊಳ್ಳಿನ, ಅಲ್ಲಾಸಾಬ ಮೋತೆಖಾನ್ ಇದ್ದರು.



ಶೀಘ್ರ ಪೂರ್ಣ

ಗ್ರಾಮದಲ್ಲಿರುವ ಪುಟ್ಟರಾಜ ಕವಿ ಗವಾಯಿಗಳ ಸಮುದಾಯ ಭವನ ಅರ್ಧಕ್ಕೆ ನಿಂತಿದ್ದು, ಶೀಘ್ರ ಸಮುದಾಯ ಭವನದ ಕಾರ್ಯವನ್ನು ಸಂಪೂರ್ಣಗೊಳಿಸಲಾಗುವುದು. ಕೆಂಚಮ್ಮ ದೇವಸ್ಥಾನ ಮತ್ತು ಬಸವೇಶ್ವರ ದೇವಸ್ಥಾನಗಳ ಜೀರ್ಣೋದ್ದಾರ ಕಾರ್ಯಗಳಿಗೂ ಸಹ ಶಾಸಕರು ಚಾಲನೆ ನಿಡಲಿದ್ದಾರೆ. ಗ್ರಾಮಸ್ಥರ ಇಚ್ಚೆಯಂತೆ ಗ್ರಾಮದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ನರೇಗಲ್ಲ ರಸ್ತೆಯಿಂದ ವಾಲ್ಮೀಕಿ ವಠಾರಕ್ಕೆ ತೆರಳುವ ರಸ್ತೆ ಸುಧಾರಣೆಗೆ ಸಂಬಂಧಪಟ್ಟಂತೆ ಶಾಸಕರ ಗಮನಕ್ಕೆ ತರುವ ಮೂಲಕ ಶೀಘ್ರ ಅನುದಾನವನ್ನು ಒದಗಿಸಲಾಗುವುದು. ಗ್ರಾಮದಲ್ಲಿ ಉಳಿದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಮಗ್ರ ಮಾಹಿತಿ ಸಲ್ಲಿಸಿ ಹಂತಹಂತವಾಗಿ ಕಾರ್ಯಗಳನ್ನು ನೆರವೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ ಹೇಳಿದರು.

ನೀರಿನ ತೊಟ್ಟಿಯಿಟ್ಟು ಕಾಳು ಹಾಕಿ: ಹಂಚಿನಾಳ

◆**ಮುಂಡರಗಿ:** ಮನುಷ್ಯ ನಿಸರ್ಗದ ಮೇಲೆ ಅವಲಂಬಿತವಾದ ಪ್ರಾಣಿ, ನಿಸರ್ಗದಲ್ಲಿ ಮರಗಿಡಗಳನ್ನು ಹೆಚ್ಚೆಚ್ಚು ಬೆಳೆಸುವುದರೊಂದಿಗೆ ಪ್ರಾಣಿ-ಪಕ್ಷಿಗಳ ಉಳಿವಿಗಾಗಿ ಶ್ರಮಿಸಬೇಕು. ಬೇಸಿಗೆಯಲ್ಲಿ ಪ್ರಾಣಿ-ಪಕ್ಷಿಗಳು ನೀರು ಮತ್ತು ಆಹಾರವಿಲ್ಲದೆ ಸಂಕಷ್ಟದಲ್ಲಿ ಸಿಲುಕುತ್ತವೆ. ಅವುಗಳ ಉಳಿವಿಗಾಗಿ ಸಾಧ್ಯವಾದ ಕಡೆಗೆ ನೀರಿನ ತೊಟ್ಟಿಗಳನ್ನು ಇಟ್ಟು, ಕಾಳುಗಳನ್ನು ಹಾಕಿ ಪ್ರಾಣಿ-ಪಕ್ಷಿಗಳ ಸಂಕುಲಗಳನ್ನು ಉಳಿಸುವ ಮಾನವೀಯ ಕೆಲಸವನ್ನು ಸರ್ವರೂ ಮಾಡಬೇಕು ಎಂದು ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ಈಶ್ವರಪ್ಪ ಹಂಚಿನಾಳ ಹೇಳಿದರು.

ಅವರು ಇಲ್ಲಿಯ ಶ್ರೀ ಸ್ವಾಮಿ ವಿವೇಕಾನಂದ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಆವರಣದಲ್ಲಿ ಇರುವ 60ಕ್ಕೂ ಹೆಚ್ಚು ಗಿಡಗಳಿಗೆ ನೀರಿನ ತೊಟ್ಟಿಗಳನ್ನು ಕಟ್ಟಿ,ಪಕ್ಷಿಗಳಿಗೆ ಕಾಳುಗಳನ್ನು ಚೆಲ್ಲುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಾಣಿ-ಪಕ್ಷಿಗಳನ್ನು ನಿರ್ಲಕ್ಷ ಮಾಡಿದರೆ ಪರಿಸರ ಸಮತೋಲನವನ್ನು ಕಳೆದುಕೊಂಡು ಹಾನಿ ಅನುಭವಿಸಬೇಕಾಗುತ್ತದೆ. ಶಾಲಾ ಮಕ್ಕಳು ಬೇಸಿಗೆಯ ಕಾಲದಲ್ಲಿ ತಮ್ಮ ಮನೆಯ ಮೇಲೆ ಮತ್ತು ಮನೆಯಂಗಳದಲ್ಲಿ ಪ್ರಾಣಿ ಪಕ್ಷಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಮೂಲಕ ಪ್ರಾಣಿ-ಪಕ್ಷಿ ಸಂಕುಲ ಉಳಿವಿಗೆ ಸಾಕ್ಷಿಯಾಗಬೇಕು ಎಂದರು.

ಸಿಂಗಟಾಲೂರ ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಕರಬಸಪ್ಪ ಹಂಚಿನಾಳ ತೊಟ್ಟಿಗಳಿಗೆ ನೀರನ್ನು ಮತ್ತು ಮರಗಳ ಬುಡದಲ್ಲಿ ಆಹಾರದ ಕಾಳುಗಳನ್ನು ಹಾಕಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮಾಜಿ ಸೈನಿಕ ಶೇಖರಗೌಡ ಪಾಟೀಲ ಮಾತನಾಡಿ, ಪ್ರಾಣಿ-ಪಕ್ಷಿಗಳಾವು ಪರಿಸರಕ್ಕೆ ಹಾನಿಯನ್ನು ಮಾಡುವುದಿಲ್ಲ, ನುಷ್ಯರಾದ ನಾವುಗಳು ಪರಿಸರಕ್ಕೆ ಪೂರಕವಾದ ಕಾರ್ಯ ಮಾಡಬೇಕೇ ವಿನಃ ಪರಿಸರಕ್ಕೆ ಹಾನಿಯಾಗುವ ಕಾರ್ಯ ಮಾಡಬಾರದು ಎಂದರು.

ಸಂಸ್ಥೆಯ ಆಡಳಿತಾಧಿಕಾರಿ ಸಿ.ಎಸ್.ಅರಸನಾಳ ಉಪನ್ಯಾಸ ನೀಡಿ, ಬೇಸಿಗೆಯಲ್ಲಿ ನಮಗೆ ಅನಕೂಲವಾದ ಕಡೆ ಪ್ರಾಣಿ-ಪಕ್ಷಿಗಳಿಗೆ ಕುಡಿಯಲು ನೀರನ್ನು ಒದಗಿಸುವ ಕಾರ್ಯ ಮಾಡಬೇಕು. ಬೇಸಿಗೆಯಲ್ಲಿ ನೀರಿನ ಮೂಲಗಳು ಬತ್ತಿ ಹೋಗುತ್ತಿರುವುದರಿಂದ ಪ್ರಾಣಿ-ಪಕ್ಷಿಗಳಿಗೆ ಕುಡಿಯಲು ನೀರು ಸಿಗದೆ ಪರಿತಪಿಸುತ್ತವೆ. ಅವುಗಳ ಉಳಿವಿಗಾಗಿ ಪ್ರತಿಯೊಬ್ಬರೂ ಈ ಕಾರ್ಯ ಮಾಡಬೇಕು. ನಮ್ಮ ಸುತ್ತಮುತ್ತ ಮರಗಿಡಗಳ ಸಂಖ್ಯೆ ಹೆಚ್ಚಾಗುವಂತೆ ಎಚ್ಚರವಹಿಸಬೇಕು. ಇದರಿಂದ ಭೂಮಿಯ ತಾಪಮಾನ ಹತೋಟಿಗೆ ಬರುವುದಲ್ಲದೆ ಪ್ರಾಣಿ-ಪಕ್ಷಿಗಳಿಗೆ ಆಶ್ರಯ ನೀಡುತ್ತವೆ ಎಂದರು.

ದೇವಪ್ಪ ಇಟಗಿ, ಶರಣು ಸೊಲಗಿ, ಸಿ.ಕೆ.ಗಣಪ್ಪನವರ, ಪ್ರಧಾನ ಗುರು ಪರಮೇಶ ನಾಯಕ, ಬಿ.ಡಿ.ನದಾಫ್,ಜೆ.ಎಂ.ಜಿಂದೆ ಮುಂತಾದವರಿದ್ದರು. ಮುಖ್ಯೋಪಾಧ್ಯಾಯ ಡಿ.ಟಿ.ಇಮ್ರಾಪೂರ ಸ್ವಾಗತಿಸಿರು. ಶಿಕ್ಷಕ ಗುಡದೀರಪ್ಪ ಲಿಂಗಶೆಟ್ಟರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಕೃಷಿಯಲ್ಲಿ ಬಂಡವಾಳ ಹೂಡಿಕೆ ಕಡಿಮೆ: ಬೊಮ್ಮಾಯಿ

◆**ಗದಗ:** ನಮ್ಮ ದೇಶದಲ್ಲಿ ಕೃಷಿ ಬೆಳೆದಿದೆ. ಆದರೆ ರೈತ ಎಲ್ಲಿದ್ದನೋ ಅಲ್ಲಿಯೇ ಇದ್ದಾನೆ. ಕೃಷಿಯಲ್ಲಿ ಬಂಡವಾಳ ಹೂಡಿಕೆ ಕಡಿಮೆಯಾಗಿದೆ. ಒಂದು ಕಾಲದಲ್ಲಿ ಕೃಷಿಯಿಂದ ಶೇ.60 ಕ್ಕಿಂತ ಹೆಚ್ಚು ಜಿಡಿಪಿ ಇತ್ತು. ಆದರೆ ಕೃಷಿಯಿಂದ ಜಿಡಿಪಿ ಕಡಿಮೆಯಾಗಿದೆ. ಕೃಷಿ ವಲಯದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಚರ್ಚೆ ನಡೆಸುವುದು ಅಗತ್ಯವಿದೆ ಎಂದು ಮಾಜಿ ಮುಖ್ಯಮಂತಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಸೂಡಿ ಗ್ರಾಮದಲ್ಲಿ ಗುರುವಾರ ವೀರಶೈವ ಧರ್ಮಪೀಠದ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ 50ನೇ ವರ್ಷದ ರಥೋತ್ಸವದ ನಿಮಿತ್ತವಾಗಿ ನೂತನ ರಥ ಲೋಕಾರ್ಪಣೆ ಹಾಗೂ ಧರ್ಮಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಜಗತ್ತು ಮಾನವೀಯತೆಯನ್ನು ಕಳೆದುಕೊಂಡಿದೆ. ಪ್ರತಿ ದಿನ ಯುದ್ಧ ನಡೆಯುತ್ತಿದೆ. ಯುದ್ಧ ಹಿಂದೆ ನ್ಯಾಯಕ್ಕಾಗಿ, ಧರ್ಮಕ್ಕಾಗಿ ನಡೆಯುತ್ತಿತ್ತು. ಸತ್ಯದಸ್ಥಾಪನೆಗಾಗಿ ಯುದ್ಧ ನಡೆಯುತ್ತಿತ್ತು. ಈಗ ಯಾರು ಯಾಕೆ ಯುದ್ಧ ಮಾಡುತ್ತಿದ್ದಾರೆ ಎಂದು ಯಾರಿಗೂ ಗೊತ್ತಿಲ್ಲ. ಇದು ಸರಿಯುಲ್ಲ ಎಂದು ಹೇಳುವ ಶಕ್ತಿ ಯಾರಿಗೂ ಇಲ್ಲ, ಹೀಗಾಗಿ ಜಗತ್ತಿನಲ್ಲಿ ಮಾನವೀಯತೆ ಸಂಪೂರ್ಣ ಮಾಯವಾಗಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಬಂದ ಮೇಲೆ ಆಂತಃಕರಣ ಇಲ್ಲದಾಗಿದೆ. ರೈತರು ಬೆಳೆದ ಬೆಳೆಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ಬೆಲೆ ನಿಗದಿ ಮಾಡುತ್ತದೆ. ರೈತನಿಗೆ ಆರ್ಥಿಕತೆಯ ಹಿಡಿತ ಸಿಗುತ್ತಿಲ್ಲ, ಎಷ್ಟು ಬಂಡವಾಳ ಹೂಡಬೇಕು, ಎಷ್ಟು ಲಾಭ ಬರುತ್ತದೆ ಎನ್ನುವ ಲೆಕ್ಕ ಸಿಗುತ್ತಿಲ್ಲ ಎಂದರು. ಒಂದು ಕಾಲದಲ್ಲಿ ಕೃಷಿಯಲ್ಲಿ ಶೇ.60ಕ್ಕಿಂತ ಹೆಚ್ಚು ಜಿಡಿಪಿ ಇತ್ತು. ಶೇ.65ರಷ್ಟು ಉದ್ಯೋಗ ಸೃಷ್ಟಿ ಮಾಡುತ್ತಿತ್ತು. ಈಗಲೂ ಕೃಷಿ ವಲಯದಲ್ಲಿ ಶೇ.65 ರಷ್ಟು ಉದ್ಯೋಗ ಕೃಷ್ಟಿಯಾಗುತ್ತಿದೆ. ಆದರೆ ಜಿಡಿಪಿ ಕಡಿಮೆಯಾಗಿದೆ ಎಂದರು.

ಡಾ.ಕೊಟ್ಟೂರ ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ, ವೀರೇಶ್ವರ ಶಿವಾಚಾರ್ಯ ಸ್ವಾಮೀಜಿ, ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಪಂಚಗ್ರಹ ಹಿರೇಮಠ, ಕರಿಬಸವ ಶಿವಾಚಾರ್ಯ ಸ್ವಾಮೀಜಿ, ಮದ್ದಾನಿ ಹಿರೇಮಠ, ಮಲ್ಲಿಕಾರ್ಜುನ ಸ್ವಾಮೀಜಿ, ಡಾ. ಭೀಮೇಶ್ವರ ಜೋಶಿ, ಶಾಸಕ ಜಿ.ಎಸ್. ಪಾಟೀಲ್, ಮಾಜಿ ಶಾಸಕ ಕಳಕಪ್ಪ ಬಂಡಿ, ಭಾರತೀಯ ಜನತಾ ಪಾರ್ಟಿಯ ಜಿಲ್ಲಾಧ್ಯಕ್ಷ ರಾಜು ಕುರಡಗಿ, ರೋಣ ಮಂಡಳದ ಅಧ್ಯಕ್ಷ ಉಮೇಶ ಮಲ್ಲಾಪೂರ ಇದ್ದರು.



ಆಸಕ್ತಿಗೆ ಅನುಗುಣವಾಗಿ ಪ್ರೋತ್ಸಾಹಿಸಿ: ಸಿಸಿಪಾ



◆**ನರಗುಂದ:** ವಿದ್ಯಾರ್ಥಿಗಳು ಭವಿಷ್ಯದ ಪ್ರಜೆಗಳು. ಅವರ ಆಸಕ್ತಿಗೆ ಅನುಗುಣವಾಗಿ ಪಾಲಕರು ಮತ್ತು, ಶಿಕ್ಷಕರು ಗುರಿ ತಲುಪಿಸಬೇಕು ಎಂದು ಲಯನ್ಸ್ ಶಿಕ್ಷಣ ಸಂಸ್ಥೆ ಚೇರ್ಮನರಾದ ಶಾಸಕ ಸಿ.ಸಿ.ಪಾಟೀಲ ಹೇಳಿದರು.

ಪಟ್ಟಣದ ಲಯನ್ಸ್ ಶಿಕ್ಷಣ ಸಂಸ್ಥೆಯ ಲಯನ್ಸ್ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ನಡೆದ 2026-27ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.95 ಕ್ಕೂ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪಾಲಕರು ಮಕ್ಕಳಿಗೆ ಇಂಜಿನಿಯರೇ ಆಗಬೇಕು, ಡಾಕ್ಟರೇ ಆಗಬೇಕು ಎಂದು ಒತ್ತಡ ಹೇರದೇ ಅವರ ಮನದಾಳವನ್ನು ಅರಿಯಬೇಕು ಎಂದರು.

ವಿದ್ಯಾರ್ಥಿಗಳಿಗೆ ಎಸ್ ಎಸ್ ಎಲ್ ಸಿ ಆರಂಭಿಕ ಹಂತ. ಆದರೆ ಪಿಯುಸಿ ಜೀವನದ ಮುಖ್ಯ ಘಟ್ಟವಾಗಿದೆ. ಅದನ್ನು ಶ್ರಮ ಪಟ್ಟು ಮುಗಿಸಿ ಜೀವನ ರೂಪಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಲಿಖಿತಾ ಹಿರೇಮಠ, ದ್ವಿತೀಯ ಸ್ಥಾನ ಪಡೆದ ಕೇತನ ರಾಮಣ್ಣವರ, ಶಾಲೆಗೆ ತೃತೀಯ ಸ್ಥಾನ ಪಡೆದ ಮಣಿಕಂಠ ಆನೇಗುಂದಿ, ಶೇ.95ಕ್ಕೂ ಹೆಚ್ಚು ಅಂಕ ಪಡೆದ ರಿಜವಾನಾ ನದಾಫ್, ತನಿಷಾ ಪುರೋಹಿತ , ಚಂದನ ಕವಲೂರು, ಪ್ರೀತಂ ಪಟ್ಟಣಶೆಟ್ಟಿ, ಶಾರದಾ ಸವದಿ, ಶ್ರೇಯಾ ಬೇಲೇರಿ, ಶ್ರೇಯಾ ಕುರುಬಗಟ್ಟಿ, ಪಿಯುಸಿಯಲ್ಲಿ ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆದ ಹಳೆಯ ವಿದ್ಯಾರ್ಥಿ ಶ್ರೀನಿಕಾ ಗುಡಿಸಾಗರ ಅವರ ತಂದೆ ವೆಂಕಟೇಶ ಗುಡಿಸಾಗರ ಅವರನ್ನು ಸನ್ಮಾನಿಸಲಾಯಿತು. ಕಾರ್ಯದರ್ಶಿ ಡಾ.ಪ್ರಭು ನಂದಿ, ವೈಸ್ ಚೇರ್ಮನ್ ಉಮೇಶಗೌಡ ಪಾಟೀಲ, ಸಹಕಾರ್ಯದರ್ಶಿ ವಿಜಯಕುಮಾರ ಬೇಲೇರಿ, ನಿರ್ದೇಶಕರಾದ ಜಿ.ಟಿ.ಗುಡಿಸಾಗರ, ಜಿ.ಬಿ.ಕುಲಕರ್ಣಿ, ಡಾ.ಬಿ.ಎಂ.ಜಾಬಣ್ಣವರ, ಸಿ.ಎಸ್.ಸಾಲೂಟಗಿಮಠ, ಎಸ್.ಎಸ್.ಪಾಟೀಲ, ಜೆ.ವಿ.ಕಂಠಿ,. ರಾಘವೇಂದ್ರ ಆನೇಗುಂದಿ, ಪ್ರಾಚಾರ್ಯ ಎಸ್.ಜಿ.ಜಕ್ಕಲಿ ಇದ್ದರು. ಮುಖ್ಯೋಪಾಧ್ಯಾಯ ಜಿ.ಬಿ.ಹಿರೇಮಠ ಸ್ವಾಗತಿಸಿದರು. ಡಾ.ಬಸವರಾಜ ಹಲಕುರ್ಕಿ ನಿರೂಪಿಸಿ, ವಂದಿಸಿದರು.

ಕ್ರಿಯಾಶೀಲತೆ ಜೀವನದ ಗುರಿಯಾಗಲಿ


◆**ಲಕ್ಷ್ಮೇಶ್ವರ:** ಸಿರಿತನ ಬಂದಾಗ ಹಿಗ್ಗದೇ ಬಡತನ ಬಂದಾಗ ಕುಗ್ಗದೇ ಕ್ರಿಯಾಶೀಲನಾಗಿ ಬಾಳುವುದೇ ಜೀವನದ ಗುರಿಯಾಗಬೇಕಾಗಿದೆ. ಹೊರಗಿನ ಶ್ರೀಮಂತಿಕೆ ಹೆಚ್ಚಿಸಿಕೊಳ್ಳುವುದರ ಜೊತೆಗೆ ಒಳಗಿರುವ ಆಧ್ಯಾತ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಆಧ್ಯಾತ್ಮ ಸಂಪತ್ತಿನಿಂದ ಜೀವನದಲ್ಲಿ ಸುಖ ಶಾಂತಿ ಪ್ರಾಪ್ತವಾಗುತ್ತದೆ ಎಂದು ಬಾಳೆಹೊನ್ನೂರು ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ಹಾಲೇವಾಡಿಮಠದ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರದ ರಜತ ಮಹೋತ್ಸವ-ಜಯಂತ್ಯುತ್ಸವ ಹಾಗೂ ಮಾತಾ ಪಿತೃಗಳ ಪುಣ್ಯಸ್ಮರಣೆ ಅಂಗವಾಗಿ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ನೇತೃತ್ವ ವಹಿಸಿದ್ದ ಮುಕ್ತಿಮಂದಿರ ಕ್ಷೇತ್ರದ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ದುಡಿಮೆಯ ಬದುಕಿನಿಂದ ಉತ್ಕರ್ಷ ಸಾಧ್ಯ. ನಡೆಯುವ ಕಾಲು ದುಡಿಯುವ ಕೈಗಳು ಇರದಿದ್ದರೆ ಏನೂ ಮಾಡಲಾಗದು ಎಂದರು. ಸಮಾರಂಭ ಉದ್ಘಾಟಿಸಿದ ಆನಂದ ಮೆಕ್ಕಿ ಮಾತನಾಡಿ, ಭೌತಿಕ ಬದುಕಿಗೆ ಸಂಪತ್ತಷ್ಟೇ ಮುಖ್ಯವಲ್ಲ, ಅದರೊಂದಿಗೆ ಧರ್ಮ ಶ್ರದ್ಧೆ ಮತ್ತು ಸದಾಚಾರ ಬೆಳೆದು ಬರಬೇಕಾಗಿದೆ. ಈ ದಿಶೆಯಲ್ಲಿ ಹಾಲೇವಾಡಿಮಠ ಸಹೋದರರ ಕಾರ್ಯ ಸ್ತುತ್ಯವಾದುದೆಂದರು. ಚಂಬಣ್ಣ ಬಾಳಿಕಾಯಿ ಅವರು ಭಾವಚಿತ್ರ ಬಿಡುಗಡೆ ಮಾಡಿದರು. ಡಾ.ಪ್ರಭುಸ್ವಾಮಿ ಜಿ. ಹಾಲೇವಾಡಿಮಠ ಪ್ರಾಸ್ತಾವಿಸಿದರು. ಗದಗ ಸರ್ಕಾರಿ ಮಹಿಳಾ ಕಾಲೇಜಿನ ಡಾ. ಸಿದಲಿಂಗೇಶ ಸಜ್ಜನಶೆಟ್ರ ಉಪನ್ಯಾಸ ನೀಡಿದರು. ಮೈಸೂರು-ಬನ್ನಿಕೊಪ್ಪದ ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯರು, ಗಂಜೀಗಟ್ಟಿ ಡಾ. ವೈಜನಾಥ ಶಿವಾಚಾರ್ಯರು, ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯರು, ಕರೇವಾಡಿಮಠ ಮಳೆಮಲ್ಲಿಕಾರ್ಜುನ ಶಿವಾಚಾರ್ಯರು, ಕರೆವಾಡಿ ಮಠದ ಉತ್ತರಾಧಿಕಾರಿ ಮಂಜುನಾಥಯ್ಯ ದೇವರು ಪಾಲ್ಗೊಂಡು ಉಪದೇಶಾಮೃತವನ್ನಿತ್ತರು. ವೀರೇಶ ಕೂಗು, ವಿಜಯ ಮಹಾಂತಶೆಟ್ಟರ, ಕುಬೇರಪ್ಪ ಮಹಾಂತಶೆಟ್ಟರ ಸುನೀಲ ಮಹಾಂತಶೆಟ್ಟರ ಇದ್ದರು. ಶಿವಲಿಂಗಯ್ಯ ಹಾಲೇವಾಡಿಮಠ ಡಾ. ಎಸ್.ಜಿ.ಹಾಲೇವಾಡಿಮಠ, ಪಾರ್ವತಿ ಕಳ್ಳಿಮಠ, ಬಸವರಾಜ ಹಿರೇಮಠ, ಡಾ. ಗುರುಪಾದಯ್ಯ ಸಾಲಿಮಠ ಕಾರ್ಯಕ್ರಮ ನಿರ್ವಹಿಸಿದರು.



ರಸ್ತೆ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ



◆**ಗಜೇಂದ್ರಗಡ:** ನಗರದ ಗದಗ ರಸ್ತೆ, ಜೋಡು ರಸ್ತೆ, ಬಸ್ ಸ್ಟ್ಯಾಂಡ್ ಹತ್ತಿರ ಮುಖ್ಯರಸ್ತೆ ಹದಗೆಟ್ಟಿದ್ದು, ಕೂಡಲೇ ರಸ್ತೆ ದುರಸ್ತಿಗೆ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಪಟ್ಟಣದ ಬಸ್ ನಿಲ್ದಾಣ ಬಳಿ ಜಯ ಕರ್ನಾಟಕ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಪುರಸಭೆಗೆ ಮನವಿ ಸಲ್ಲಿಸಿದರು.

ರಸ್ತೆ ವಿಭಜಕದಲ್ಲಿ ತಗ್ಗು ಬಿದ್ದಿರುವುದರಿಂದ ವಾಹನ ಸವಾರರು ತೊಂದರೆ ಅನುಭವಿಸುವಂತಾಗಿದೆ. ಗದಗ ರಸ್ತೆ, ಡಬಲ್ ರೋಡ್, ಬಸ್ ನಿಲ್ದಾಣ ಮುಂಭಾಗದಲ್ಲಿ ಅವಘಡಗಳು ಸಂಭವಿಸುತ್ತಿವೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಸ್ತೆ ಬಂದ್ ಮಾಡಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪುರಸಭೆ ವ್ಯವಸ್ಥಾಪಕ ಎಚ್.ಎನ್. ಬಾಜಕ್ಕನವರ ಮನವಿ ಸ್ವೀಕರಿಸಿದರು. ಮಹಮ್ಮದ್ ಗೌಸ್ ಅಕ್ಕಿ ಶರಣು ಹಲಗಿ, ಶರಣಪ್ಪ ಹೂಗಾರ, ರಾಣೆಜಿ ಕಲಾಲ, ಗಣೇಶ ರಾಠೋಡ, ರಾಜು ತಟಗಾರ, ಆನಂದ ಕಲಾಲ, ವಿರೂಪಾಕ್ಷ ಶೆಟ್ಟರ, ಬಸವರಾಜ ಗಂಜಿ, ರಾಜು ಭೋಸಲೆ, ರಮೇಶ ಕಲಾಲ, ಹನುಮಂತ ಜಿಗೇರಿ, ಆಸೀಫ್ ಕಟ್ಟಿಮನಿ, ರಮೇಶ ತಳವಾರ, ಗಣೇಶ ಮುದಗಲ್, ಸಾಧಿಕ್ ಮೋಮಿನ್ ಮಹೇಶ ಮಾಳೋತ್ತರ, ಸಾಧಿಕ್ ಡಾಲಾಯತ್, ರಾಘವೇಂದ್ರ ಹೂಗಾರ, ರವಿ ಬಂದನವರ, ಶಿವು ಗಡಗಿ, ಸಾಧಿಕ್ ಮನಿಯಾರ, ಇಮ್ರಾನ್ ಅತ್ತಾರ, ಆನಂದ ಸೂಡಿ ಸೇರಿದಂತೆ ಇತರರಿದ್ದರು.

ಸಾಹಿತ್ಯ ಸಮ್ಮೇಳನ

◆**ಗದಗ:** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಎಂ.ಎಸ್. ಹುಲ್ಲೂರ ಎ1, ಹೈಟೆಕ್ ಕೋಚಿಂಗ್ ಸೆಂಟರ್ ಸಹಯೋಗದಲ್ಲಿ ಎರಡು ದಿನಗಳ ಮಕ್ಕಳ ಸಾಹಿತ್ಯ ಸಮ್ಮೇಳನ ಮೇ 9 ಹಾಗೂ 10ರಂದು ವಿಜಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದೆ.

ಸಮ್ಮೇಳನದಲ್ಲಿ ಮಕ್ಕಳಸಾಹಿತಿಗಳ ಸಮಾವೇಶ, ಕವಿಗೋಷ್ಠಿ, ಕತೆ ರಚನೆ , ಕಾವ್ಯ ರಚನೆ, ಚಿತ್ರ ರಚನೆ, ಕರಕುಶಲ ಕಲೆ, ಭಾಷಾ ಆಟಗಳು ಮುಂತಾದ ಪ್ರಾಯೋಗಿಕ ಚಟುವಟಿಕೆಗಳು ಜರುಗಲಿವೆ. ಈ ಚಟುವಟಿಕೆಗಳಲ್ಲಿ ಭಾಗವಹಿಸಲು ಇಚ್ಚಿಸುವ 10 ರಿಂದ 18 ವಯೋಮಾನದ ವಿದ್ಯಾರ್ಥಿಗಳು ತಮ್ಮ ಹೆಸರನ್ನು ದೂ. 9845304504, 9483657131, 7338359971, 7483271920 ನೋಂದಾಯಿಸಲು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಭೂಮಿ ತಾಯಿ ರಕ್ಷಣೆ ನಮ್ಮೆಲ್ಲರ ಹೊಣೆ

◆**ಶಿರಹಟ್ಟಿ:** ಭೂಮಿಯ ಫಲವತ್ತತೆ ಹೆಚ್ಚಿಸಲು ರೈತರು ಸಾಗಣೆ ಗೊಬ್ಬರ, ಕುರಿ ಹಾಗೂ ಸಾವಯವ ಗೊಬ್ಬರವನ್ನು ಸದ್ಬಳಕೆ ಮಾಡಿಕೊಂಡು ಭೂಮಿಯ ಫಲವತ್ತತೆ ಕಾಪಾಡುವ ಮೂಲಕ ಉತ್ತಮ ಫಸಲು ಬೆಳೆಯಬೇಕು ಎಂದು ಗದಗ ಜಂಟಿ ಕೃಷಿ ನಿರ್ದೇಶಕ ಚೇತನ ಪಾಟೀಲ ಹೇಳಿದರು.

ತಾಲೂಕಿನ ರಣತೂರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕೃಷಿ ಇಲಾಖೆಯಿಂದ ಭೂಮಿ ತಾಯಿ ರಕ್ಷಣೆ ಕಣ್ಗಾವಲು ಸಮಿತಿ ಸಭೆಯಲ್ಲಿ ನೈಸರ್ಗಿಕ ಕೃಷಿ ಹಾಗೂ ಸಾವಯವ ಕೃಷಿ ಕುರಿತು ಸಮಗ್ರ ಮಾಹಿತಿ ನೀಡಿ ಮಾತನಾಡಿದರು. ಮಣ್ಣಿನ ಮೇಲೆ ಕೆಮಿಕಲ್ ಗೊಬ್ಬರ ಹಾಕುವುದರಿಂದ ಭೂಮಿಯ ಶಕ್ತಿ ಕುಂದುತ್ತದೆ. ಡಿ.ಎ.ಪಿ ಮತ್ತು ಯೂರಿಯಾ ಗೊಬ್ಬರವಷ್ಟೇ ಬಳಸದೇ ಕಾಂಪ್ಲೆಕ್ಸ್ ಗೊಬ್ಬರ, ತಿಪ್ಪೆಯ ಗೊಬ್ಬರ ಹೆಚ್ಚು ಉಪಯೋಗಿಸಬೇಕು. ಅಂದಾಗ ಮಣ್ಣಿನ ಗುಣಮಟ್ಟ ಹೆಚ್ಚುತ್ತದೆ ಎಂದರು.

ರೈತ ಮುಖಂಡ ಬಸವರಾಜ ನಾವಿ ಮಾತನಾಡಿ, ಭೂಮಿಯ ಸತ್ವ ಉಳಿದರೆ ಮಾತ್ರ ರೈತ ಉಳಿದಂತೆ. ಹೀಗಾಗಿ ರೈತರು ಕೆಮಿಕಲ್ಸ್ ಗೊಬ್ಬರ ಸಾಧ್ಯವಾದಷ್ಟು ಕಡಿಮೆ ಬಳಸಬೇಕು. ಕೆಮಿಕಲ್ಸ್ ಗೊಬ್ಬರ ಹೆಚ್ಚು ಹಾಕುವುದರಿಂದ ಮಣ್ಣಿನ ಸತ್ವ ಕಡಿಮೆಯಾಗುತ್ತದೆ, ಆಹಾರವು ವಿಷಯುಕ್ತವಾಗಿ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದರು.

ಗದಗ ಉಪ ಕೃಷಿ ನಿರ್ದೇಶಕಿ ಸ್ಫೂರ್ತಿ ಮಾತನಾಡಿದರು. ಸಹಾಯಕ ಕೃಷಿ ನಿರ್ದೇಶಕ ಶಿವಕುಮಾರ ಕಾಶಪ್ಪನವರ, ಕೃಷಿ ಅಧಿಕಾರಿ ಆರ್.ಸಿ ಚಾಕಲಬ್ಬಿ ಇತರರಿದ್ದರು.



ಪ್ರವೇಶಾತಿ ಆರಂಭ

◆**ರೋಣ:** ಪಟ್ಟಣದಲ್ಲಿ ಪ್ರಸಕ್ತ ಸಾಲಿನಿಂದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಆರಂಭಗೊಂಡಿದ್ದು, ಪ್ರವೇಶಾತಿ ಕೂಡ ನಡೆದಿದೆ. ಹೀಗಾಗಿ ವಿದ್ಯಾರ್ಥಿಗಳು ಲಾಭ ಪಡೆದುಕೊಳ್ಳಬೇಕು ಎಂದು ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಸಕ್ತ ಸಾಲಿನಿಂದ ಕಾಲೇಜು ಆರಂಭಗೊಂಡಿದ್ದು, ಸುಸಜ್ಜಿತ ಕಟ್ಟಡ ಹಾಗೂ ಪ್ರಯೋಗಾಲಯ ಕೂಡ ಹೊಂದಿದೆ. ಉನ್ನತ ಮಟ್ಟದ ಉಪನ್ಯಾಸಕರನ್ನು ಹೊಂದಿದ್ದು ಡಿಪ್ಲೋಮಾ ಇಂಜಿನಿಯರಿಂಗ್ ಪ್ರವೇಶಾತಿಗೆ ಅಧಿಸೂಚನೆ ಹೊರಡಿಸಲಾಗಿದೆ. ಪ್ರವೇಶ ಬಯಸುವ ವಿದ್ಯಾರ್ಥಿಗಳು 10ನೇ ತರಗತಿ ಪಾಸಾಗಿರಬೇಕು. ಜೊತೆಗೆ ಮೊದಲು ಬಂದವರಿಗೆ ಆದ್ಯತೆ ನಿಡಲಾಗುವುದು ಎಂದು ಪ್ರಚಾರ್ಯ ಮಹಾಂತೇಶ ಗುಡ್ಡಿನ ತಿಳಿಸಿದ್ದಾರೆ.


ಪ್ರಚಲಿತ ವಿದ್ಯಮಾನಕ್ಕೆ ಕವಿತೆ ಬೆಳಕಾಗಲಿ

◆**ಗದಗ:** ಪ್ರಚಲಿತ ವಿದ್ಯಮಾನಗಳ ಮೇಲೆ ಬೆಳಕು ಚೆಲ್ಲುವ ಕವಿತೆಗಳು ಹೊರಹೊಮ್ಮಬೇಕು. ವಾಸ್ತವಿಕ ಬದುಕಿಗೆ ಹತ್ತಿರವಾಗುವ ಕವಿತೆಗಳು ಜನಮನ ಸೆಳೆಯಬಲ್ಲವು. ಅಂತಹ ಕವಿತೆಗಳ ರಚನೆಗೆ ಯುವ ಬರಹಗಾರರು ಮುಂದಾಗಬೇಕೆಂದು ಸಾಹಿತಿ ಶಿವಶಾಂತಾ ಬಿಸನಳ್ಳಿ ಹೇಳಿದರು.

ನಗರದ ಲಾಯನ್ಸ್ ಭವನದಲ್ಲಿ ಕರ್ನಾಟಕ ರಾಜ್ಯ ಲೇಖಕಿಯರ ಸಂಘ ಜಿಲ್ಲಾ ಘಟಕ ಹಾಗೂ ಶರಣೆ ಅಕ್ಕಮಹಾದೇವಿ ಕದಳಿಶ್ರೀ ವೇದಿಕೆ ಗದಗ ಜಿಲ್ಲಾ ಘಟಕ ಧಾರವಾಡದ ಚೇತನ ಫೌಂಡೇಶನ್, ಬೆಂಗಳೂರಿನ ಗಂಧದ ಗುಡಿ ಕನ್ನಡ ಸಂಘ ಏರ್ಪಡಿಸಿದ್ದ ರಾಜ್ಯ ಮಟ್ಟದ ಕನ್ನಡ ನುಡಿ ಸಡಗರ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಾಹಿತಿ ಪರ್ವಿನ್ ಭಾನು ಬುಳ್ಳಣ್ಣವರ, ರಾಜೇಶ್ವರಿ ಹಿರೇಮಠ, ಮಂಜುನಾಥ ಭೀಮಕ್ಕಣ್ಣವರ, ಎಲ್.ಐ.ಲಕ್ಕಮ್ಮನವರ, ಸಾಹಿತಿ ಶಿವಲಿಂಗಪ್ಪ ಅಣ್ಣಿಗೇರಿ, ಶರಣಪ್ಪ ಹೊಸಂಗಡಿ ಆಗಮಿಸಿದ್ದರು. ಕವಿಗೋಷ್ಠಿಯಲ್ಲಿ ಬಸವಣ್ಣೆವ್ವ ಹರ್ತಿ, ಜೆ.ಎನ್.ಪಾಟೀಲ, ನೇತ್ರಾ ಕುರಬರ, ಬೂದೇಶ ಮಜ್ಜಿಗುಡ್ಡ, ಸೌಜನ್ಯ ಪಾಟೀಲ, ಭಾಗ್ಯಶ್ರೀ ಹುರಕಡ್ಲಿ, ಶಿಲ್ಪಾ ಮಿಣಜಗಿ, ಕಸ್ತೂರಿ ಕಡಗದ, ರೇಖಾ ನಾಲ್ವಾಡ, ಮೇಘಾ ಬೆಳದಡಿ, ವಿಜಯಲಕ್ಷ್ಮೀ ಬಂಡಿವಾಡ, ಶಶಿಕಲಾ ಕಮತರ, ಜೆ.ಚಂದ್ರಶೇಖರ ಸೇರಿದಂತೆ ಹಲವು ಕವಿಗಳು ನಾಡು, ನುಡಿ, ದೇಶಾಭಿಮಾನ, ಅತ್ತೆ-ಸೊಸೆ, ಸಮಯದ ಮಹತ್ವ, ಹೆಣ್ಣು, ಬಾಲ್ಯ ವಿವಾಹ, ಪರಿಸರ ಕುರಿತಾಗಿ ಕವನ ವಾಚಿಸಿದರು. ಚೇತನಾ ಫೌಂಡೇಶನ್ ಅಧ್ಯಕ್ಷ ಚಂದ್ರಶೇಖರ ಮಾಡಲಗೇರಿ ಸ್ವಾಗತಿಸಿದರು, ಡಾ.ಜೆ.ಪ್ರೇಮಾ ನಿರೂಪಿಸಿದರು ಸುಜಾತಾ ಪಾಟೀಲ ವಂದಿಸಿದರು. ದೀಪ್ತಿ ಪಾಠಕ, ಪುಷ್ಪಲತಾ ಬಸವರಾಜ ಬಳ್ಳಾರಿ, ಚಂಪಾ ಪಾಟೀಲ, ಸುಮತಿ ಮುರುಗೇಶ ಗದಗಿನಮಠ, ಉಡಚಮ್ಮ ಮುದಿಯಪ್ಪ ವಾಲ್ಮೀಕಿ, ಪ್ರೊ. ಸಿದ್ಧಲಿಂಗೇಶ ಸಜ್ಜನಶೆಟ್ಟರ, ನಿರ್ಮಲಾ ಚಿತ್ತಾಮೂರ, ಶಕುಂತಲಾ ಬಂಡಿ, ರೇಖಾ ರೊಟ್ಟಿ, ಚಂದ್ರಕಲಾ ಸ್ಥಾವರಮಠ, ವಿಜಯಲಕ್ಷ್ಮೀ ಹಳ್ಳಿ, ಸಂಧ್ಯಾ ಕೋಟಿ, ಸುಶೀಲಾ ಕೋಟಿ, ವೀಣಾ ಕಾವೇರಿ, ಮೀನಾಕ್ಷಿ ಕೊರವನವರ, ಕಾವ್ಯಾ ದಂಡಿನ ಇದ್ದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದಲ್ಲಿ ಪ್ರಬಲ ಹಿಂದುತ್ವದ ಪ್ರತಿಪಾದಕರಲ್ಲಿ ಒಬ್ಬರು. ಕೇವಲ ಪ್ರಚಾರಕ್ಕೆ ಮಾತ್ರ ಹಿಂದುತ್ವ ಜಪಿಸದೇ, ಉಪ ಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿ ಹುದ್ದೆಗೆ ಏರಿದ ಸಂದರ್ಭದಲ್ಲಿ ತಾವು ಪ್ರತಿಪಾದಿಸುತ್ತಿದ್ದ ಅಂಶಗಳನ್ನು ಜಾರಿಗೊಳಿಸಲು ತಮ್ಮ ಬದ್ಧತೆಯನ್ನು ತೋರ್ಪಡಿಸಿದರು. ಯಡಿಯೂರಪ್ಪ ಅವರ ಶ್ರಮದ ಫಲವಾಗಿಯೇ ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ, ಮತಾಂತರ ನಿಷೇಧ ಕಾಯ್ದೆಗಳು ಜಾರಿಗೆ ಬಂದವು. ಈಗಲೂ ಅವು ಜಾರಿಯಲ್ಲಿವೆ. ಇದಷ್ಟೇ ಅಲ್ಲದೆ ಹಿಂದುತ್ವದ ಪರವಾದ ಅನೇಕ ಹೋರಾಟವನ್ನು ಕರ್ನಾಟಕದಲ್ಲಿ ಮುಂಚೂಣಿಯಲ್ಲಿ ನಿಂತು ಮುನ್ನಡೆಸಿದ್ದೇ ಯಡಿಯೂರಪ್ಪ.

ಹಿಂದುತ್ವದ ಪ್ರಬಲ ಧ್ವನಿ ಬಿಎಸ್‌ವೈ



ರಾಮ ಜನ್ಮಭೂಮಿ ಹೋರಾಟದಲ್ಲಿ ಶ್ರದ್ಧೆಯ ಕರಸೇವಕ

ಅಯೋಧ್ಯೆಯ ಶ್ರೀರಾಮ ಮಂದಿರ ಹೋರಾಟವನ್ನು ದೇಶಾದ್ಯಂತ ಲಾಲ್‌ಕೃಷ್ಣ ಅಡ್ವಾನಿ, ಮುರಳಿ ಮನೋಹರ ಜೋಷಿ, ಉಮಾಭಾರತಿ ಮೊದಲಾದವರು ಮುನ್ನಡೆಸಿದರೆ ಕರ್ನಾಟಕದಲ್ಲಿ ರಾಮನ ಜನ್ಮಸ್ಥಾನ ಹಿಂದುಗಳಿಗೆ ಬಿಟ್ಟು ಕೊಡಬೇಕೆಂದು ಬಲವಾಗಿ ಪ್ರತಿಪಾದಿಸಿದವರು ಯಡಿಯೂರಪ್ಪ. ಯಡಿಯೂರಪ್ಪ ಅವರು 1992ರ ಡಿಸೆಂಬರ್‌ನಲ್ಲಿ ಅಯೋಧ್ಯೆಯಲ್ಲಿ ನಡೆದ ರಾಮ ಜನ್ಮಭೂಮಿ ಚಳವಳಿಯಲ್ಲಿ ಕರಸೇವಕರಾಗಿ ನೇರವಾಗಿ ಭಾಗವಹಿಸಿದ್ದರು. ಅವರು ಅಂದು ಅಯೋಧ್ಯೆಯಲ್ಲಿ ಹಿರಿಯ ಮುಖಂಡರೊಂದಿಗೆ ಇದ್ದರು. ಇದಕ್ಕೂ ಮೊದಲು ಕರ್ನಾಟಕದಲ್ಲಿ ರಥಯಾತ್ರೆ ಸಂಚರಿಸಿದ ಸಂದರ್ಭದಲ್ಲಿ ರಾಜ್ಯದುದ್ದಕ್ಕೂ ಯಡಿಯೂರಪ್ಪ ಪ್ರವಾಸ ಮಾಡಿದ್ದರು. 2020ರಲ್ಲಿ ಮಂದಿರದ ಭೂಮಿ ಪೂಜೆ ನೆರವೇರಿದಾಗ, ಕರಸೇವಕನಾಗಿದ್ದ ನನಗೆ ಇದು ಸುದೀರ್ಘ ಕಾಲದ ಕನಸು ನನಸಾದ ಕ್ಷಣ ಎಂದು ಅವರು ಭಾವುಕರಾಗಿ ಸ್ಮರಿಸಿದ್ದರು. ರಾಮಮಂದಿರ ನಿರ್ಮಾಣಕ್ಕಾಗಿ ನಡೆದ ನಿಧಿ ಸಂಗ್ರಹ ಅಭಿಯಾನದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. 2024ರ ಉದ್ಘಾಟನಾ ಸಮಾರಂಭಕ್ಕೆ ಮುಂಚಿತವಾಗಿ ಮನೆ-ಮನೆಗೆ ತೆರಳಿ ಮಂತ್ರಾಕ್ಷತೆ ವಿತರಿಸಿ ಜನರನ್ನು ಆಮಂತ್ರಿಸಿ ತಮ್ಮ ಶ್ರದ್ಧೆಯನ್ನು ಸಾಬೀತುಪಡಿಸಿದ್ದರು.



ಗೋಹತ್ಯೆ ನಿಷೇಧ ಕಾಯ್ದೆ

ಕರ್ನಾಟಕದಲ್ಲಿ ಗೋಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತರುವಲ್ಲಿ ಯಡಿಯೂರಪ್ಪ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ ನೇತೃತ್ವದ ಬಿಜೆಪಿ ಸರ್ಕಾರವು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ-2020ನ್ನು ಜಾರಿಗೆ ತಂದಿತು. 2010ರಲ್ಲಿ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಮೊದಲ ಬಾರಿಗೆ 1964ರ ಕಾಯ್ದೆಗಿಂತ ಕಠಿಣವಾದ ನಿಬಂಧನೆಗಳೊಂದಿಗೆ ಈ ಮಸೂದೆಯನ್ನು ಮಂಡಿಸಿದ್ದರು. ಆದರೆ ಅಂದಿನ ರಾಜ್ಯಪಾಲರಾಗಿದ್ದ ಎಚ್.ಆರ್. ಭಾರದ್ವಾಜ್ ಅವರು ಇದಕ್ಕೆ ಅಂಕಿತ




ಹಾಕದ ಕಾರಣ ಮತ್ತು ನಂತರ ಬಂದ ಕಾಂಗ್ರೆಸ್ ಸರ್ಕಾರ ಅದನ್ನು ಹಿಂಪಡೆದಿದ್ದರಿಂದ ಅದು ಜಾರಿಯಾಗಲಿಲ್ಲ. ಆದರೆ ಪಟ್ಟು ಬಿಡದ ಯಡಿಯೂರಪ್ಪ 2020ರಲ್ಲಿ ಅವರಿಗೆ ಅವಕಾಶ ಸಿಕ್ಕಾಗ ಮತ್ತೆ ಗೋಮಾತೆಯ ಬಗ್ಗೆ ತಮಗಿದ್ದ ಬದ್ಧತೆಯನ್ನು ಪ್ರದರ್ಶಿಸಿದರು. ಡಿಸೆಂಬರ್ 2020ರಲ್ಲಿ ವಿಧಾನಸಭೆಯಲ್ಲಿ ಹೊಸ ವಿಧೇಯಕ ಮಂಡಿಸಿ ತೀವ್ರ ವಿರೋಧದ ನಡುವೆಯೂ ಅನುಮೋದನೆ ಪಡೆದರು. ಫೆಬ್ರವರಿ 25, 2021ರಿಂದ ಈ ಕಾಯ್ದೆಯ ಎಲ್ಲಾ ನಿಬಂಧನೆಗಳು ರಾಜ್ಯದಲ್ಲಿ ಅಧಿಕೃತವಾಗಿ ಜಾರಿಗೆ ಬಂದವು. ಹೊಸ ಕಾಯ್ದೆಯು ಹಸು, ಆಕಳು ಕರು, ಹೋರಿ, ಎತ್ತು ಮತ್ತು 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಮ್ಮೆ ಹಾಗೂ ಕೋಣಗಳ ಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ. ಕಾಯ್ದೆಯಡಿ ಗೋಹತ್ಯೆ ಮಾಡುವುದು ಅಪರಾಧ. ತಪ್ಪಿತಸ್ಥರಿಗೆ 3 ರಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 50,000 ರಿಂದ 5 ಲಕ್ಷದವರೆಗೆ ದಂಡ ವಿಧಿಸಲು ಅವಕಾಶವಿದೆ. ವಿಧಾನಸಭೆಯಲ್ಲಿ ಮಸೂದೆ ಅಂಗೀಕಾರವಾದ ನಂತರ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ಕಾವೇರಿ ನಿವಾಸದಲ್ಲಿ ಗೋಪೂಜೆ ಮಾಡಿ ಸಂಭ್ರಮಿಸಿದ್ದರು.

ಮತಾಂತರ ನಿಷೇಧ ಕಾಯ್ದೆ

ಬಿ.ಎಸ್. ಯಡಿಯೂರಪ್ಪ ಅವರು ಕರ್ನಾಟಕದಲ್ಲಿ ಮತಾಂತರ ನಿಷೇಧ ಕಾಯ್ದೆ (ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆ) ಜಾರಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಮತ್ತು ನಂತರವೂ ಬಲವಂತದ ಮತಾಂತರ ತಡೆಯಲು ಕಠಿಣ ಕಾನೂನಿನ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದರು. ಪ್ರಲೋಭನೆ ಅಥವಾ ಒತ್ತಾಯದ ಮೂಲಕ ನಡೆಯುವ ಮತಾಂತರಗಳು ದೇಶದ ಹಿತಾಸಕ್ತಿಗೆ ವಿರುದ್ಧವಾಗಿವೆ ಎಂಬುದು ಅವರ ನಿಲುವು. 2021ರ ಡಿಸೆಂಬರ್‌ನಲ್ಲಿ ಬೆಳಗಾವಿ ಅಧಿವೇಶನದಲ್ಲಿ ಈ ವಿಧೇಯಕವನ್ನು ಮಂಡಿಸಲಾಯಿತು. ಈ ಸಂದರ್ಭದಲ್ಲಿ ಯಡಿಯೂರಪ್ಪ ಅವರು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ವಿಧೇಯಕವನ್ನು ಸರ್ವಾನುಮತದಿಂದ ಅಂಗೀಕರಿಸಬೇಕು ಎಂದು ಮನವಿ ಮಾಡಿದ್ದರು. ಮತಾಂತರದ ವಿರುದ್ಧದ ಹೋರಾಟದಲ್ಲಿ ಬಿ.ಎಸ್. ಯಡಿಯೂರಪ್ಪ ಅವರ ಪಾತ್ರವು ಕೇವಲ ರಾಜಕೀಯ ನಿರ್ಧಾರವಾಗಿರದೆ, ಅವರ ಸುದೀರ್ಘ ಸಾರ್ವಜನಿಕ ಜೀವನದ ಒಂದು ಪ್ರಮುಖ ಭಾಗವಾಗಿದೆ.

ಲವ್ ಜಿಹಾದ್ ವಿರುದ್ಧ ನಿಲುವು

ಯುವತಿಯರನ್ನು ಆಮಿಷ ಅಥವಾ ಮದುವೆಯ ಭರವಸೆಯ ಮೂಲಕ



ಮತಾಂತರ ಮಾಡುವುದನ್ನು (ಲವ್ ಜಿಹಾದ್) ರಾಜ್ಯದಲ್ಲಿ ಸಹಿಸುವುದಿಲ್ಲ ಎಂದು 2020ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪ ಅವರು ಕಠಿಣ ಎಚ್ಚರಿಕೆ ನೀಡಿದ್ದರು. ಈ ಕುರಿತು ಕಾನೂನು ರೂಪಿಸಲು ಅವರು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದರು. 2021ರ ಡಿಸೆಂಬರ್‌ನಲ್ಲಿ ಬೆಳಗಾವಿ ಅಧಿವೇಶನದಲ್ಲಿ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ ಮಂಡನೆಯಾದಾಗ, ಯಡಿಯೂರಪ್ಪ ಅವರು ಸಕ್ರಿಯವಾಗಿ ಭಾಗವಹಿಸಿ ವಿರೋಧ ಪಕ್ಷಗಳ ಮನವೊಲಿಸಲು ಪ್ರಯತ್ನಿಸಿದ್ದರು. ಇದು ದೇಶದ ಹಿತದೃಷ್ಟಿಯಿಂದ ಜಾರಿಗೆ ಬರಬೇಕಾದ ಕಾಯ್ದೆ ಎಂದು ಅವರು ಪ್ರತಿಪಾದಿಸಿದ್ದರು. ಮತಾಂತರವು ಕೇವಲ ಧಾರ್ಮಿಕ ವಿಷಯವಲ್ಲ, ಅದು ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗುತ್ತದೆ ಎಂಬುದು ಅವರ ನಿಲುವು.

ಮಠಗಳಿಗೆ ಭರಪೂರ ಅನುದಾನ

ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಾಜ್ಯದ ವಿವಿಧ ಮಠಗಳು ಮತ್ತು ದೇವಸ್ಥಾನಗಳಿಗೆ ದೊಡ್ಡ ಪ್ರಮಾಣದಲ್ಲಿ ಅನುದಾನ ಮತ್ತು ದೇಣಿಗೆಯನ್ನು ಬಜೆಟ್‌ನಲ್ಲೇ ಘೋಷಣೆ ಮಾಡಿದರು. ಹಿಂದೆ ಯಾವುದೇ ಸರ್ಕಾರ ಈ ಪ್ರಮಾಣದ ಅನುದಾನ ನೀಡಿ ಬೆಂಬಲಿಸಿರಲಿಲ್ಲ. ಅವರ ಮೊದಲ ಅವಧಿಯ (2008–2011) ಆಡಳಿತದಲ್ಲಿ ಸುಮಾರು 110 ಕೋಟಿ ರಾಜ್ಯ ಮತ್ತು ಹೊರರಾಜ್ಯಗಳ 269 ದೇವಸ್ಥಾನಗಳಿಗೆ ಅನುದಾನ ನೀಡಿದ್ದು ದಾಖಲೆಯಾಗಿದೆ. 2019-20ನೇ ಸಾಲಿನ ಬಜೆಟ್‌ನಲ್ಲಿ ಹಿಂದೂ ದೇವಾಲಯಗಳು ಮತ್ತು ಧಾರ್ಮಿಕ ಸಂಸ್ಥೆಗಳಿಗಾಗಿ ಯಡಿಯೂರಪ್ಪ ಅವರ ನೇತೃತ್ವದ ಸರ್ಕಾರವು 294 ಕೋಟಿ ಅನುದಾನ ಮೀಸಲಿಟ್ಟಿತ್ತು. ಆದಿಚುಂಚನಗಿರಿ ಮಠ, ಸಿದ್ದಗಂಗಾ ಮಠ, ಕಾಗಿನೆಲೆ ಮಠ ಸೇರಿದಂತೆ ಪ್ರಮುಖ ಧಾರ್ಮಿಕ ಸಂಸ್ಥೆಗಳಿಗೆ ಕೋಟ್ಯಂತರ ರೂ. ಅನುದಾನ ನೀಡಿದರು. ಅಯೋಧ್ಯೆಯ ಶ್ರೀರಾಮ ಜನ್ಮಭೂಮಿಯಲ್ಲಿ ಕರ್ನಾಟಕದ ಯಾತ್ರಿಕರಿಗಾಗಿ ಯಾತ್ರಿ ನಿವಾಸ ನಿರ್ಮಿಸಲು 10 ಕೋಟಿ ಅನುದಾನ ಘೋಷಿಸಲಾಗಿತ್ತು. ಕೋವಿಡ್ ಸಂಕಷ್ಟದ ನಡುವೆಯೂ, ನವೆಂಬರ್ 2020ರಲ್ಲಿ ರಾಜ್ಯ ಸರ್ಕಾರ 143 ಮಠಗಳು, ಟ್ರಸ್ಟ್‌ಗಳು ಮತ್ತು ದೇವಾಲಯಗಳಿಗೆ 88.75 ಕೋಟಿ ಅನುದಾನ ಬಿಡುಗಡೆ ಮಾಡಿತ್ತು. ಇದರಲ್ಲಿ 39 ಮಠಗಳಿಗೆ ತಲಾ 1 ಕೋಟಿ ನೀಡಲಾಯಿತು.

ಅಭಿವೃದ್ಧಿ ಪ್ರಾಧಿಕಾರಗಳಿಗೆ

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ **10 ಕೋಟಿ**, ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ಮತ್ತು ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ಅನುದಾನವನ್ನು ವಿವಿಧ ಹಂತಗಳಲ್ಲಿ ನೀಡಿದ್ದಾರೆ. ಆದಿಚುಂಚನಗಿರಿ ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿಗೆ 5 ಕೋಟಿ ಮತ್ತು ತುಮಕೂರು ಜಿಲ್ಲೆಯ ಯಡಿಯೂರು ಸಿದ್ದಲಿಂಗೇಶ್ವರ ಕ್ಷೇತ್ರಕ್ಕೆ **10 ಕೋಟಿ** ಅನುದಾನ ನೀಡಲಾಗಿತ್ತು. ಸಂತ ಸೇವಾಲಾಲ್ ಜನ್ಮಸ್ಥಳವಾದ ಸೂರಗೊಂಡನಕೊಪ್ಪದ ಅಭಿವೃದ್ಧಿಗೂ ವಿಶೇಷ ಆದ್ಯತೆ ನೀಡಿದ್ದರು.



ರಾಮಸೇತು ನಮ್ಮ ಅಸ್ಮಿತೆ

ಯುಪಿಎ ಸರ್ಕಾರದ ಅವಧಿಯಲ್ಲಿ ಸೇತುಸಮುದ್ರಂ ಹಡಗು ಕಾಲುವೆ ಯೋಜನೆ ಜಾರಿಗೆ ಬಂದಾಗ, ರಾಮಸೇತು ಉಳಿಸಬೇಕು ಎಂಬ ಹೋರಾಟದಲ್ಲಿ ಅವರು ಮುಂಚೂಣಿಯಲ್ಲಿದ್ದರು. ರಾಮಸೇತು ಕೇವಲ ನಂಬಿಕೆಯಲ್ಲ, ಅದು ಈ ದೇಶದ ಅಸ್ಮಿತೆ ಎಂದು ಘಂಟಾಘೋಷವಾಗಿ ನುಡಿದಿದ್ದರು. ರಾಮಸೇತು



ಕೇವಲ ಭೌಗೋಳಿಕ ರಚನೆಯಲ್ಲ, ಬದಲಾಗಿ ಕೋಟ್ಯಂತರ ಹಿಂದೂಗಳ ಧಾರ್ಮಿಕ ಭಾವನೆಯ ಪ್ರತೀಕ ಎಂದು ಯಡಿಯೂರಪ್ಪ ಪ್ರತಿಪಾದಿಸಿದ್ದರು. ಸೇತುಸಮುದ್ರಂ ಯೋಜನೆಗಾಗಿ ರಾಮಸೇತುವನ್ನು ಧ್ವಂಸಗೊಳಿಸುವುದನ್ನು ವಿರೋಧಿಸಿ ಕರ್ನಾಟಕದಲ್ಲಿ ವಿವಿಧ ರ‍್ಯಾಲಿಗಳು ಮತ್ತು ಪ್ರತಿಭಟನೆಗಳಲ್ಲಿ ಅವರು ಸಕ್ರಿಯ ನೇತೃತ್ವ ವಹಿಸಿದ್ದರು. ರಾಮಸೇತು ಒಂದು ಪ್ರಾಚೀನ ಮಾನವ ನಿರ್ಮಿತ ಸೇತುವೆ ಎಂದು ನಂಬಿರುವ ಅವರು, ಅದನ್ನು ರಾಷ್ಟ್ರೀಯ ಪಾರಂಪರಿಕ ಸ್ಮಾರಕವೆಂದು ಘೋಷಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದರು. ವಿಶ್ವಹಿಂದೂ ಪರಿಷತ್ ಮತ್ತು ರಾಮಸೇತು ರಕ್ಷಣಾ ವೇದಿಕೆಗಳೊಂದಿಗೆ ಸೇರಿ ಅವರು ಅನೇಕ ಬಾರಿ ಧರಣಿ ನಡೆಸಿದ್ದರು. ರಾಮಸೇತುವಿಗೆ ಧಕ್ಕೆಯಾಗದಂತೆ ಪರ್ಯಾಯ ಮಾರ್ಗಗಳ ಮೂಲಕ ಯೋಜನೆಯನ್ನು ಕೈಗೊಳ್ಳಲು ಯಡಿಯೂರಪ್ಪ ಸಲಹೆ ನೀಡಿದ್ದರು.

ಕಾಶ್ಮೀರ ಭಾರತ ಮಾತೆಯ ಸಿಂಧೂರ

ಅಖಂಡ ಭಾರತದ ಪರಿಕಲ್ಪನೆ ಹೊಂದಿರುವ ಯಡಿಯೂರಪ್ಪನವರು ದೇಶ ವಿಭಜನೆಯ ಕೃತ್ಯವನ್ನು ಖಂಡಿಸುವವರು. ಮತ್ತು ಪಾಕ್ ಆಕ್ರಮಿತ ಕಾಶ್ಮೀರ ಭಾರತಕ್ಕೆ ಸೇರಬೇಕೆಂಬ ನಂಬಿಕೆ ಉಳ್ಳವರು. ಕಾಶ್ಮೀರದಲ್ಲಿನ ಹಿಂಸಾಚಾರ ಮತ್ತು ಕಾಶ್ಮೀರಿ ಪಂಡಿತರ ಮೇಲಾಗುತ್ತಿದ್ದ ನಿರಂತರ ದೌರ್ಜನ್ಯವನ್ನು ಸದನದ ಒಳಗೆ ಮತ್ತು



ಹೊರಗೆ ಬಲವಾಗಿ ಖಂಡಿಸಿದ್ದಾರೆ. 1991ರಲ್ಲಿ ಮುರಳಿ ಮನೋಹರ ಜೋಶಿ ಅವರ ನೇತೃತ್ವದಲ್ಲಿ ನಡೆದ ಏಕತಾ ಯಾತ್ರೆಯಲ್ಲಿ ಯಡಿಯೂರಪ್ಪ ಅವರು ಕರ್ನಾಟಕದಿಂದ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಈ ಯಾತ್ರೆಯು ಕನ್ಯಾಕುಮಾರಿಯಿಂದ ಆರಂಭವಾಗಿ ಶ್ರೀನಗರದ ಲಾಲ್ ಚೌಕ್‌ನಲ್ಲಿ ರಾಷ್ಟ್ರಧ್ವಜ ಹಾರಿಸುವುದರೊಂದಿಗೆ ಮುಕ್ತಾಯಗೊಂಡಿತ್ತು. ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂಬ ಸಂದೇಶವನ್ನು ಸಾರುವಲ್ಲಿ ಈ ಯಾತ್ರೆ ಪ್ರಮುಖ ಪಾತ್ರ ವಹಿಸಿತ್ತು ಮತ್ತು ಉಗ್ರಗಾಮಿಗಳ ದಾಳಿಯ ಎಚ್ಚರಿಕೆಯನ್ನೂ ಮೀರಿ ಈ ಯಾತ್ರೆ ನಡೆದಿತ್ತು.

370ನೇ ವಿಧಿ ರದ್ದತಿಗೆ ಬೆಂಬಲ

2019ರಲ್ಲಿ ಕೇಂದ್ರ ಸರ್ಕಾರವು ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುತ್ತಿದ್ದ 370ನೇ ವಿಧಿಯನ್ನು ರದ್ದುಗೊಳಿಸಿದಾಗ, ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಈ ನಿರ್ಧಾರವನ್ನು ಐತಿಹಾಸಿಕ ಎಂದು ಬಣ್ಣಿಸಿದ್ದರು. ಒಂದು



ದೇಶ, ಒಂದು ಸಂವಿಧಾನ ಎಂಬ ಜನಸಂಘದ ಸಂಸ್ಥಾಪಕ ಶ್ಯಾಮ್‌ಪ್ರಸಾದ್ ಮುಖರ್ಜಿ ಅವರ ಕನಸು ನನಸಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದರು. ಜನಸಂಘದ ಕಾಲದಿಂದಲೂ ಕಾಶ್ಮೀರ ಸಮಸ್ಯೆಯ ಕುರಿತು ಜಾಗೃತಿ ಮೂಡಿಸಲು ಕರ್ನಾಟಕದಾದ್ಯಂತ ಹಮ್ಮಿಕೊಂಡಿದ್ದ ವಿವಿಧ ಪ್ರತಿಭಟನೆ ಮತ್ತು ಜಾಗೃತಿ ಸಭೆಗಳ ನೇತೃತ್ವವನ್ನು ಅವರು ವಹಿಸಿದ್ದರು. ಕಾಶ್ಮೀರದ ಅಭಿವೃದ್ಧಿ ಮತ್ತು ಅಲ್ಲಿನ ಭಯೋತ್ಪಾದನೆಯ ನಿರ್ಮೂಲನೆಗೆ ಕಠಿಣ ಕ್ರಮಗಳ ಅಗತ್ಯವಿದೆ ಎಂದು ಅವರು ಹಲವು ವೇದಿಕೆಗಳಲ್ಲಿ ಪ್ರತಿಪಾದಿಸಿದ್ದಾರೆ.

ವೀರಶೈವ ಲಿಂಗಾಯತರು ಹಿಂದುಗಳು..!

ಹಿಂದು ಸಿದ್ಧಾಂತವನ್ನು ಮತ್ತು ಆಚರಣೆಯನ್ನು ಸಮರ್ಥವಾಗಿ ಮುನ್ನಡೆಸಿದ್ದು ಯಡಿಯೂರಪ್ಪ ವಿಶೇಷತೆ. **12ನೇ** ಶತಮಾನದ ಸಮಾಜ ಸುಧಾರಕ ಬಸವಣ್ಣನವರ ತತ್ವಗಳನ್ನು ಆಡಳಿತದಲ್ಲಿ



ಅಳವಡಿಸಿಕೊಳ್ಳಲು ಶ್ರಮಿಸಿದರು. ಬೆಂಗಳೂರಿನಲ್ಲಿ ಬಸವಣ್ಣನವರ ಪ್ರತಿಮೆ ಸ್ಥಾಪನೆ ಮತ್ತು ಲಂಡನ್‌ನಲ್ಲಿ ಅವರ ಪ್ರತಿಮೆ ಅನಾವರಣಕ್ಕೆ ಶ್ರಮಿಸಿದ್ದು ಇವರ ಸಾಧನೆಗಳಲ್ಲಿ ಒಂದು. ಆದರೆ ಪ್ರತ್ಯೇಕ ಲಿಂಗಾಯತ ಧರ್ಮ ಹೋರಾಟವನ್ನು ಬೆಂಬಲಿಸದ ಯಡಿಯೂರಪ್ಪನವರು ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ ಎಂದು ಪ್ರತಿಪಾದಿಸಿದ್ದರು. ಈ ಸಂಬಂಧ ಶಾಮನೂರು ಶಿವಶಂಕರಪ್ಪ ಅವರ ಬಳಿ ಅನೇಕ ಬಾರಿ ಮಾತುಕತೆ ನಡೆಸಿದ್ದರು. ಮತ್ತು ಈ ವಿಭಜನೆ ತಡೆವಲ್ಲಿ ಯಶಸ್ವಿಯಾಗಿದ್ದರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವೀರಶೈವ ಮತ್ತು ಲಿಂಗಾಯತ ಹಿಂದು ಧರ್ಮದ ಭಾಗ ಎಂದೇ ಅವರ ನಂಬಿಕೆಯಾಗಿದೆ. ಗಣತಿಯ ವೇಳೆ ಈ ಸಂಬಂಧ ಯಡಿಯೂರಪ್ಪನವರು ರಾಜ್ಯದಲ್ಲಿ ಉಂಟಾಗುತ್ತಿದ್ದ ಗೊಂದಲವನ್ನು ಸಮುದಾಯದ ನಾಯಕನಾಗಿ ನಿವಾರಿಸುವಲ್ಲಿ ಯಶಸ್ವಿಯಾಗಿದ್ದಾರೆ.



ದತ್ತಮಾಲೆ ಧರಿಸಿದ್ದ ಬಿಎಸ್‌ವೈ

ಯಡಿಯೂರಪ್ಪ ಅವರು ಚಿಕ್ಕಮಗಳೂರಿನ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ (ದತ್ತ ಪೀಠ) ವಿವಾದಕ್ಕೆ ಸಂಬಂಧಿಸಿ ಹಿಂದೂಗಳ ಪರವಾದ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಪೀಠದ ಸಂರಕ್ಷಣೆಗಾಗಿ ಹಲವು ದಶಕಗಳಿಂದ ಶ್ರಮಿಸಿದ್ದಾರೆ. ಜೊತೆಗೆ ದತ್ತಮಾಲೆಯನ್ನು ಸ್ವತಃ ಧರಿಸಿ ಈ ಹೋರಾಟದ ಬಗ್ಗೆ ತಮಗಿದ್ದ ಬದ್ಧತೆಯನ್ನು ಪ್ರದರ್ಶಿಸಿದ್ದರು. ದತ್ತ ಪೀಠದಲ್ಲಿ ಮುಜಾವರ್‌ಗಳ ಬದಲು ಹಿಂದೂ ಅರ್ಚಕರನ್ನು ನೇಮಿಸಬೇಕು ಎಂಬ ದೀರ್ಘಕಾಲದ ಬೇಡಿಕೆಗೆ ಅವರು ನಿರಂತರ ಬೆಂಬಲ ನೀಡುತ್ತಾ ಬಂದಿದ್ದಾರೆ. ಈ ವಿಷಯದಲ್ಲಿ ಹಿಂದೂಗಳ ಆರಾಧನಾ ಹಕ್ಕನ್ನು ಎತ್ತಿಹಿಡಿಯುವುದು ಬಿಎಸ್‌ವೈರ ಪ್ರಮುಖ ಗುರಿಯಾಗಿತ್ತು.

ಕಿರುಸುದ್ದಿ

ನಡುರಸ್ತೆಯಲ್ಲೇ ಬಿದ್ದ ವಾಹನ

ಕಾರವಾರ: ಕೈಗಾ ಅಣುಸ್ಥಾವರದ 5 ಮತ್ತು 6 ನೇ ಘಟಕದ ಕಾಮಗಾರಿಗೆ ಅಗತ್ಯವಿರುವ ಬೃಹತ್ ಯಂತ್ರೋಪಕರಣ ಹೊತ್ತು ನಾಲ್ಕು ತಿಂಗಳ ಹಿಂದೆ ಗುಜರಾತಿನಿಂದ ಹೊರಟ ಬೃಹತ್ ಟ್ರಾಲಿ ವಾಹನ ಇನ್ನೇನು ಕೈಗಾ ಅಣುಸ್ಥಾವರ ಪ್ರದೇಶ ತಲುಪಲಿದೆ ಎನ್ನುವಷ್ಟರಲ್ಲಿ ರಸ್ತೆಗೆ ಅಡ್ಡವಾಗಿ ಬಿದ್ದಿದ್ದು ಮಲ್ಲಾಪುರ ಕೈಗಾ ನಡುವೆ ವಾಹನ ಸಂಚಾರ ಸ್ಥಗಿತಗೊಂಡಿದೆ.



ಮಲ್ಲಾಪುರ-ಕೈಗಾ ವಾಹನ ಸಂಚಾರ ಸ್ಥಗಿತ

ಕೈಗಾ ಯೋಜನಾ ಪ್ರದೇಶದಿಂದ ಕೇವಲ 5 ಕಿಲೋ ಮೀಟರ್ ಹಿಂದಿರುವ ಹರ್ಟಿಗಾ ಎನ್ನುವಲ್ಲಿ ಟ್ರಾಲಿ ವಾಹನ ನಿಯಂತ್ರಣ ತಪ್ಪಿ ರಸ್ತೆಯಲ್ಲಿ ಉರುಳಿ ಬಿದ್ದಿದೆ. ಗುಜರಾತಿನಿಂದ ಹೊರಟು ಸಾವಿರಾರು ಕಿಲೋ ಮೀಟರ್ ದೂರವನ್ನು ನಿಧಾನಗತಿಯಲ್ಲಿ ಕ್ರಮಿಸಿ ಜಾಗರೂಕತೆಯಿಂದ ಸಾಗಿ ಬಂದ ಭಾರೀ ಯಂತ್ರ ಇರುವ ವಾಹನ ಇನ್ನೇನು ಗುರಿ ತಲುಪಲಿದೆ ಎನ್ನುವಷ್ಟರಲ್ಲಿ ಅಪಘಾತಕ್ಕೀಡಾಗಿರುವುದು ದುರ್ದೈವ ಎಂದೇ ಹೇಳಬಹುದಾಗಿದೆ. ಭಾರೀ ವಾಹನದಲ್ಲಿರುವ ಬೃಹತ್ ಯಂತ್ರೋಪಕರಣ ಮತ್ತು ವಾಹನ ಎತ್ತಿ ರಸ್ತೆ ಸುಗಮಗೊಳಿಸುವುದು ಸವಾಲಿನ ಕೆಲಸವಾಗಲಿದ್ದು ತಾಂತ್ರಿಕ ಸಿಬ್ಬಂದಿಗಳು ಅತ್ಯಾಧುನಿಕ ಯಂತ್ರಗಳು ಕಾರ್ಯನಿರ್ವಹಿಸಬೇಕಿದೆ.

ಪ್ರತಿ ಯೂನಿಟ್ ವಿದ್ಯುತ್‌ಗೆ 10 ಪೈಸೆ ಮರುಪಾವತಿ

ಹಾವೇರಿ: ಇಂಧನ ಸಚಿವ ಕೆ.ಜೆ ಜಾರ್ಜ್ ಮಾರ್ಗದರ್ಶನಲ್ಲಿ ಹೆಸ್ಕಾಂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, 2024-25ರ ಸಾಲಿನಲ್ಲಿ ರೂ.153.46 ಕೋಟಿ ಉಳಿತಾಯ ಮಾಡಿದ್ದು, ಈ ಹಣವನ್ನು ಗ್ರಾಹಕರಿಗೆ ಮರು ಪಾವತಿಸುತ್ತಿದ್ದೇವೆ ಎಂದು ಹೆಸ್ಕಾಂ ಅಧ್ಯಕ್ಷ ಅಜೀಮ್‌ಪೀರ್ ಖಾದ್ರಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ್ದು, ವಿದ್ಯುತ್ ಖರೀದಿ, ಪೂರೈಕೆಯನ್ನು ಉತ್ತಮವಾಗಿ ನಿರ್ವಹಿಸಿದ ಪರಿಣಾಮ 2024-2025ರಲ್ಲಿ ಹೆಸ್ಕಾಂ ರೂ.153.46 ಕೋಟಿ ಉಳಿತಾಯ ಮಾಡಿದೆ.



ಹೆಸ್ಕಾಂ ಅಧ್ಯಕ್ಷ ಅಜೀಮ್ ಪೀರ್ ಖಾದ್ರಿ ಮಾಹಿತಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಆದೇಶದ ಅನ್ವಯ 2024-25ನೇ ಆರ್ಥಿಕ ವರ್ಷದ ಪ್ರತಿಯೊಬ್ಬ ಗ್ರಾಹಕರಿಗೆ ಮಾತ್ರ 2024-25ನೇ ಸಾಲಿನ ಅವಧಿಯಲ್ಲಿ ಅವರ ನಿಜವಾದ ಬಳಕೆಯನ್ನು ಆಧರಿಸಿ ಪ್ರತಿ ಯೂನಿಟ್‌ಗೆ 10ಪೈಸೆಯಂತೆ 2026-2027ರಲ್ಲಿ ಪ್ರತಿ ತಿಂಗಳು ಸಮಾನ ಕಂತುಗಳಲ್ಲಿ (12 ಕಂತುಗಳು) ಮರು ಪಾವತಿಸಲಾಗುತ್ತದೆ. ಈ ಮೊತ್ತವನ್ನು ವಿದ್ಯುತ್ ಬಿಲ್‌ನಲ್ಲಿ ಆರ್ಥಿಕ ವರ್ಷ 25 ಟ್ರೂ ಅಪ್ ಶುಲ್ಕ ಎಂದು ಪ್ರತ್ಯೇಕವಾಗಿ ನಮೂದಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಸಿಎಂ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಸದಾ ರೈತರ ಪರ ಕೆಲಸ ಮಾಡುತ್ತಿದೆ. ರೈತರಿಗೆ ಹಗಲು ಹೊತ್ತಿನಲ್ಲೇ 7ಗಂಟೆಗಳ ಕಾಲ ವಿದ್ಯುತ್ ನೀಡುವ ನಿಟ್ಟಿನಲ್ಲಿ ಕುಸುಮ್ ಬಿ ಹಾಗೂ ಕುಸುಮ್ ಸಿ ಯೋಜನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಗ್ರಾಹಕರಿಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ ಗೃಹಜ್ಯೋತಿ ಯೋಜನೆ ಯಶಸ್ವಿಯಾಗಿದೆ. ಸಿಎಂ ಹಾಗೂ ಇಂಧನ ಸಚಿವರ ಸಹಕಾರದೊಂದಿಗೆ ಹೆಸ್ಕಾಂ ಜನಪರವಾಗಿ ಕೆಲಸ ಮಾಡುತ್ತಿದೆ. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ನೀಡಲು ನವೀಕೃತ ಶೀಘ್ರ ಸಂಪರ್ಕ ಯೋಜನೆಯನ್ನೂ ಜಾರಿಗೆ ತರಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಹೊಂಡದಲ್ಲಿ ಮುಳಗಿ ಬಾಲಕರಿಬ್ಬರ ಸಾವು

ಧಾರವಾಡ: ನೀರಿನ ಹೊಂಡದಲ್ಲಿ ಮುಳಗಿ ಇಬ್ಬರು ಬಾಲಕರು ಮೃತಪಟ್ಟ ಘಟನೆ ತಾಲೂಕಿನ ಮನಸೂರು ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ. ಕುಮಾರ ಮುದಕಣ್ಣವರ(7) ಹಾಗೂ ಪ್ರಥಮ್ ಉಳ್ಳಾಗಡ್ಡಿ(13) ಮೃತಪಟ್ಟ ಬಾಲಕರು. ಬುಧವಾರ ಸಂಜೆ ಇಬ್ಬರು ಬಾಲಕರು ಆಟವಾಡಲು ಹೊರಗಡೆ ಹೋಗಿದ್ದಾಗ ನಿರ್ಮಾಣ ಹಂತದ ಕಟ್ಟಡದ ಹತ್ತಿರ ನೀರಿನ ಹೊಂಡದಲ್ಲಿ ಆಕಸ್ಮಿಕವಾಗಿ ಕಾಲು ಜಾರಿದ್ದು, ಈಜು ಬಾರದೆ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಈ ಕುರಿತು ಧಾರವಾಡ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎರಡುವರೆ ವರ್ಷದಲ್ಲಿ 601 ಪ್ರಕರಣ ದಾಖಲು | 123 ಕೆಜಿ ವಶ

ಹೆಚ್ಚುತ್ತಿರುವ ಗಾಂಜಾ ಘಮಲು !

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ವರ್ಷದಿಂದ ವರ್ಷಕ್ಕೆ ಗಾಂಜಾ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಸಾರ್ವಜನಿಕರು ಹಾಗೂ ಪಾಲಕರ ಆತಂಕಕ್ಕೆ ಕಾರಣವಾಗಿದೆ.

ಕಳೆದ ಎರಡುವರೆ ವರ್ಷದಲ್ಲಿ ಒಟ್ಟು 601 ಪ್ರಕರಣಗಳು ದಾಖಲಾಗಿದ್ದು, ಪೊಲೀಸರು ಕಾರ್ಯಚರಣೆ ಮಾಡುವ ಮೂಲಕ 1933 ಜನ ಗಾಂಜಾ ಮಾರಾಟ ಹಾಗೂ ಸೇವಿಸುವವರ ಬಂಧಿಸಿ, ಅವರಿಂದ 123 ಕ್ಕೂ ಹೆಚ್ಚು ಕೆ.ಜಿ. ಗಾಂಜಾ ವಶಕ್ಕೆ ಪಡೆದುಕೊಂಡಿದ್ದಾರೆ.

ದಿಗಂತ ವಿಶೇಷ

ಕೆಲವರು ಗಾಂಜಾ ಸೇವಿಸಿ ಹಲವು ಅಪರಾಧಗಳಲ್ಲಿ ತೊಡಗಿರುವ ಪ್ರಕರಣಗಳು ಬೆಳಕಿಗೆ ಬಂದಿದೆ. ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಅವರು ನಿರಂತರವಾಗಿ ಗಾಂಜಾ ಡ್ರೈವ್ ಮಾಡುತ್ತಿದ್ದು, ಹೊಸ ಪ್ರಕರಣಗಳು ದಾಖಲಾಗುತ್ತಿವೆ ಹೊರತು ಅಕ್ರಮವಾಗಿ ಗಾಂಜಾ ಮಾರಾಟ ತಡೆಯಲು ಸಾಧ್ಯವಾಗುತ್ತಿಲ್ಲ.

ವಿದ್ಯಾರ್ಥಿಗಳು, ಹರಿಹರೆಯದ ಯುವಕರನ್ನೇ ಟಾರ್ಗೆಟ್ ಮಾಡುವ ಕೆಲ ದಂಧೆಕೋರರು, ಕಳ್ಳ ಮಾರ್ಗಗಳ ಮೂಲಕ ಗಾಂಜಾ ತಂದು ಮಾರಾಟ ಮಾಡುತ್ತಿದ್ದಾರೆ. ಹೊರ ರಾಜ್ಯಗಳಿಂದ ಮಾದಕ ವಸ್ತುಗಳನ್ನು ರೈಲು, ಬಸ್, ಖಾಸಗಿ ವಾಹನ ಹಾಗೂ ಬೈಕ್‌ಗಳಲ್ಲಿ ಸಾಗಾಟ ಮಾಡಿರುವುದು ಪ್ರಕರಣಗಳಿಂದ ಬೆಳಕಿಗೆ ಬಂದಿವೆ. ಅವಳಿನಗರದಲ್ಲಿ ನೂರಾರು ಕಾಲೇಜ್‌ಗಳಿದ್ದು, ಲಕ್ಷಾಂತರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಹೀಗೆ ವಿದ್ಯಾರ್ಥಿಗಳು ಹಾಗೂ ಯುವ ಜನತೆಯನ್ನು ಗುರಿಯಾಗಿಸಿಕೊಂಡು ದಂಧೆ ಮಾಡುವ ಮೂಲಕ ಹೆಚ್ಚು ಹಣ ಗಳಿಸುತ್ತಿದ್ದಾರೆ. ಅವಳಿನಗರದಲ್ಲಿ ಬಂಧನಕ್ಕೊಳಗಾಗಿರುವ ಬಹುತೇಕ ಆರೋಪಿಗಳು 20-30 ವರ್ಷದ ಒಳಗಿನವರು. ಯುವಕರು ಗಾಂಜಾ, ಸಿಗರೇಟ್ ಹಾಗೂ ಇನ್ನಿತರ ಮಾದಕ ವಸ್ತುಗಳ ಚಟಕ್ಕೆ ಬಲಿಯಾಗಿ ತಮ್ಮ ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ.



ವರ್ಷ	ದಾಖಲಾದ ಪ್ರಕರಣ	ಬಂಧಿತ ಆರೋಪಿಗಳು	ವಶಕ್ಕೆ ಪಡೆದ ಗಾಂಜಾ
2024	245	1011	55 ಕೆ.ಜಿ.
2025	258	694	41 ಕೆ.ಜಿ.
2026 ಇಲ್ಲಿವರೆಗೆ	96	228	27 ಕೆ.ಜಿ

ಗಾಂಜಾ ಮಾರಾಟ ದೊಡ್ಡ ಪ್ರಮಾಣದಲ್ಲಿ ನಿಯಂತ್ರಿಸಲಾಗಿದೆ. ಕಳೆದ ವರ್ಷ 27 ಹಾಗೂ ಈ ವರ್ಷ 25 ಜನ ಗಡಿಪಾರು ಮಾಡಲಾಗಿದೆ. ಮುಂದೆಯೂ ಮಾದಕ ವಸ್ತುಗಳ ಮಾರಾಟಕ್ಕೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗುವುದು.
■ ಎನ್. ಶಶಿಕುಮಾರ ಆಯುಕ್ತ ಹು-ಧಾ ಪೊಲೀಸ್ ಕಮಿಷನರೇಟ್

ಪೊಲೀಸರಿಂದ ಡ್ರೈವ್: ಮಾದಕ ವಸ್ತುಗಳಿಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆಯಿಂದ ನಿರಂತರ ಡ್ರೈವ್ ನಡೆಯುತ್ತಿದೆ. ಗಾಂಜಾ ಮಾರಾಟ ಹಾಗೂ ಸೇವೆ ಮಾಡುವವರು ವಶಕ್ಕೆ ಪಡೆದು, ಅವರಿಗೆ ತಜ್ಞರಿಂದ ಕೌನ್ಸಿಲಿಂಗ್ ಮಾಡಿಸಿ ಪಾಲಕರ ಗಮನಕ್ಕೆ ತರುವ ಮೂಲಕಮುಂದೆಇಂತಹಕೃತ್ಯಗಳಲ್ಲಿಭಾಗಿಯಾಗದಂತೆ ಕ್ರಮ ವಹಿಸಲು ಸೂಚಿಸುತ್ತಾರೆ. ಇಷ್ಟಾದರೂ ಹು-ಧಾ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಗಾಂಜಾ ಘಾಟು ಕಡಿಮೆಯಾಗುತ್ತಿಲ್ಲ, ಗಾಂಜಾ ಮಾರಾಟ ಮಾಡುವ ದಂಧೆಕೂರರನ್ನು ಹಿಡಿದು, ಗಾಂಜಾ ಮಾರಾಟವಾಗದಂತೆ ಕ್ರಮ ವಹಿಸಬೇಕು ಎಂಬುವುದು ಸಾರ್ವಜನಿಕರ ಅಗ್ರಹವಾಗಿದೆ.

ಕಸಾಯಿಖಾನೆಗೆ ಅಕ್ರಮವಾಗಿ ಸಾಗಿಸುತ್ತಿದ್ದ ಗೋವುಗಳ ರಕ್ಷಣೆ

ಕಲಬುರಗಿ: ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳ ಕಾರ್ಯಕರ್ತರ ಸಹಕಾರದೊಂದಿಗೆ ಕಲಬುರಗಿ ಪೊಲೀಸರು ಅಕ್ರಮವಾಗಿ ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಗೋವುಗಳನ್ನು ರಕ್ಷಣೆ ಮಾಡಿದ ಘಟನೆ ನಗರದಲ್ಲಿ ನಡೆದಿದೆ.

ಬುಧವಾರ ಮಧ್ಯಾಹ್ನ ಸುಮಾರು 3 ಗಂಟೆಗೆ ಕಲಬುರಗಿ ನಗರದ ಕಣ್ಣಿ ಮಾರ್ಕೆಟ್ ಸಮೀಪ ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದ ವೇಳೆ ಮಹೀಂದ್ರ ಬೊಲೆರೋ ಪಿಕ್‌ಅಪ್ ವಾಹನ (ಕೆಎ-36-ಎ-5474) ಅನುಮಾನಾಸ್ಪದವಾಗಿ ಸಂಚರಿಸುತ್ತಿರುವುದು ಗಮನಕ್ಕೆ ಬಂದಿದೆ. ಪೊಲೀಸರು ವಾಹನವನ್ನು ನಿಲ್ಲಿಸಲು ಸೂಚಿಸಿದಾಗ ಚಾಲಕ ವಾಹನವನ್ನು ಬಿಟ್ಟು ಪರಾರಿಯಾಗಿದ್ದಾನೆ. ನಂತರ ಪೊಲೀಸರು ಹಾಗೂ ಸ್ಥಳೀಯರ ಸಹಾಯದಿಂದ ವಾಹನವನ್ನು ಪರಿಶೀಲಿಸಿದಾಗ ಅದರೊಳಗೆ ಏಳು ಗೋವುಗಳು ಮತ್ತು ಕರುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿತ್ತು ಎಂಬುದು ಬೆಳಕಿಗೆ ಬಂದಿದೆ. ಗೋವುಗಳನ್ನು ಹಗ್ಗಗಳಿಂದ ಬಿಗಿಯಾಗಿ ಕಟ್ಟಿ ಅಮಾನವೀಯವಾಗಿ ಸಾಗಿಸಲಾಗುತ್ತಿತ್ತು ಎಂದು ತಿಳಿದುಬಂದಿದೆ. ಘಟನಾ ಸ್ಥಳಕ್ಕೆ ಆಗಮಿಸಿದ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳ ಕಾರ್ಯಕರ್ತರು ಗೋವುಗಳ ರಕ್ಷಣೆಯಲ್ಲಿ ಪೊಲೀಸರಿಗೆ ಸಹಕರಿಸಿದರು. ಬಳಿಕ ಗೋವುಗಳನ್ನು ಸುರಕ್ಷಿತವಾಗಿ ಗೋಶಾಲೆಗೆ ರವಾನಿಸಲಾಯಿತು. ಪೊಲೀಸರು ವಾಹನವನ್ನು ವಶಕ್ಕೆ ಪಡೆದು ಸುಮಾರು 2 ಲಕ್ಷ ಮೌಲ್ಯದ ವಾಹನ ಹಾಗೂ ಗೋವುಗಳನ್ನು ಜಪ್ತಿ ಮಾಡಿದ್ದಾರೆ.

ಈ ಸಂಬಂಧ ಅಶೋಕ್ ನಗರ ಪೊಲೀಸ್ ಠಾಣೆಯಲ್ಲಿ ಕರ್ನಾಟಕ ಗೋಹತ್ಯೆ ನಿಷೇಧ ಮತ್ತು ಗೋಸಂರಕ್ಷಣಾ ಕಾಯ್ದೆ-2020ರ ವಿವಿಧ ಕಲಂ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ತನಿಖೆ ಮುಂದುವರಿದಿದೆ.



ಮೇ 8ರಿಂದ ರಾಷ್ಟ್ರ ಮಟ್ಟದ ತಂತ್ರಜ್ಞಾನ ಸಾಂಸ್ಕೃತಿಕ ಉತ್ಸವ ಪ್ಲೀಡೀಸ್-2026

ಹುಬ್ಬಳ್ಳಿ: ನಗರದ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಮೇ 8 ರಿಂದ 10 ರ ವರೆಗೆ ಮೂರು ದಿನಗಳು ರಾಷ್ಟ್ರ ಮಟ್ಟದ ತಂತ್ರಜ್ಞಾನ ಸಾಂಸ್ಕೃತಿಕ ಉತ್ಸವ ಪ್ಲೀಡೀಸ್ -2026 ಸಮಾರಂಭವನ್ನು ವಿದ್ಯಾನಗರ ಬಿವಿಬಿ ಕಾಲೇಜ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಂಸ್ಥೆ ಸಂಸ್ಥಾಪಕ ಬಿ.ವಿ. ಭೂಮರಡ್ಡಿ ಅವರ 141ನೇ ಜಯಂತಿ ಅಂಗವಾಗಿ ಸಮಾರಂಭ ಆಚರಿಸಲಾಗುತ್ತಿದೆ.

ಈ ಮೂರು ದಿನಗಳು ನಡೆಯುವ ಸಮಾರಂಭದಲ್ಲಿ ದೇಶದ್ಯಾಂತದ ವಿದ್ಯಾರ್ಥಿಗಳು, ಉದ್ಯಮಿಗಳು, ಕಲಾವಿದರು ಹಾಗೂ ಉದ್ಯಮ ನಾಯಕರು ಭಾಗವಹಿಸಲಿದ್ದಾರೆ. ಪ್ಲೀಡೀಸ್ 26 ಉತ್ಸವ ಕಲಿಕೆ, ಸ್ಪರ್ಧೆ, ಸಂಸ್ಕೃತಿ ಹಾಗೂ ಸಂಭ್ರಮದ ಅಪೂರ್ವ ಸಂಗಮವಾಗಿ ರೂಪ ಗೊಂಡಿದೆ. 13 ಚಾಲೆಂಜಿಂಗ್ ಸ್ಪರ್ಧೆಗಳು, 7 ಸ್ಪ್ರಿಂಟ್ ಕಾರ್ಯಾಗಾರಗಳು, 3 ಸ್ಪಾಟ್ ಲೈಟ್ ಉಪನ್ಯಾಸಗಳು, 3 ಸಾಂಸ್ಕೃತಿಕ ಸಮಾರಂಭ ಹಾಗೂ 20 ಪೆವಿಲಿಯನ್‌ಗಳ ನಡೆಯಲಿವೆ. ಉತ್ಸವದಲ್ಲಿ 8,000ಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ. ಎಲ್ಲ ಸ್ಪರ್ಧೆಗಳಿಗೆ 5 ಲಕ್ಷಕ್ಕೂ ಹೆಚ್ಚಿನ ಬಹುಮಾನ ಘೋಷಿಸಲಾಗಿದೆ. ಮೂರು ದಿನಗಳ ಕಾಲ ಡಾ. ಪ್ರಭಾಕರ ಕೊರೆ ಕ್ರೀಡಾಂಗಣದಲ್ಲಿ ಬೆಳಿಗ್ಗೆ 11 ಗಂಟೆಯಿಂದ ಸ್ಪಾಟ್ ಲೈಟ್ ಉಪನ್ಯಾಸಗಳು ನಡೆಯಲಿವೆ. ಬೋಟ್‌ನ ಸಿಇಒ ಅಮನ್ ಗುಪ್ತಾ, ಬೋಲ್ಪ್ಲಾಂಟ್ ಇಂಡಸ್ಟ್ರೀಸ್ ಸಂಸ್ಥಾಪಕ ಶ್ರೀಕಾಂತ ಬೊಲ್ಲಾ, ಖ್ಯಾತ ಸ್ಟ್ಯಾಂಡ್ ಅಪ್ ಕಾಮಿಡಿಯನ್ ವಿವೇಕ ಸಾಮತನಿ ಭಾಗವಹಿಸುವರು. ಸ್ಪ್ರಿಂಟ್ ಕಾರ್ಯಾಗಾರದಲ್ಲಿ ಕಲಿಕಾ ಅವಧಿ ಪ್ಲೀಡೀಸ್ ಉತ್ಸವ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದೆ. ಅನುಭವಿ ತಜ್ಞರು, ಶಿಕ್ಷಣತಜ್ಞರು ಮತ್ತು ವಿಚಾರನಾಯಕರ ನೇತೃತ್ವದಲ್ಲಿ ಕೇಂದ್ರೀಕೃತ ಕೌಶಲ್ಯ-ವರ್ಧನಾ ಕಾರ್ಯಾಗಾರಗಳನ್ನು ಒಳಗೊಂಡಿದೆ. ಎಲ್ಲ ಸ್ಪ್ರಿಂಟ್ ಅವಧಿಗಳು ಮಧ್ಯಾಹ್ನ 1. 30 ಗಂಟೆಗೆ ನಡೆಯಲಿವೆ. ಮೇ 8 ರಂದು ಕೆಎಲ್‌ಇ ಟೆಕ್ ಸಭಾಂಗಣದಲ್ಲಿ ಉತ್ಸವವು ಆರಂಭಗೊಳಲಿದ್ದು ನಿವೃತ್ತ ಸೇನಾ ಅಧಿಕಾರಿ ಕರ್ನಲ್ ಭಾರ್ಗವ್ ಅವರು ಕಾರ್ಯಾಗಾರ ನಡೆಸಲಿದ್ದಾರೆ. ಮೇ 9 ರಂದು ಕೆಎಲ್‌ಇ ಟೆಕ್ ಸಭಾಂಗಣದಲ್ಲಿ ಐಐಟಿ, ಪಿಎಚ್‌ಡಿ ಪದವೀಧರರಾದ ಹಾಗೂ ಫಿಲಿಪ್ಸ್ ಸಂಸ್ಥೆಯಲ್ಲಿ 30 ಕ್ಕೂ ಹೆಚ್ಚು ವರ್ಷಗಳ ಕಾಲ ಎಂಜಿನಿಯರಿಂಗ್ ಅನುಭವ ಹೊಂದಿದ ಡಾ. ಸುಕಾಂತ ಭಟ್ ಕಾರ್ಯಾಗಾರ ನಡೆಸಲಿದ್ದಾರೆ. ದೇಶಪಾಂಡೆ ಫೌಂಡೇಶನ್ ಸಭಾಂಗಣದಲ್ಲಿ ಐಐಐಟಿ ಉಪ ಡೀನ್ ಡಾ. ಸುನೀಲ್ ಸೌಮ್ಯ ಅವರಿಂದ ಕಾರ್ಯಾಗಾರ ನಡೆಯಲಿದೆ. ಲಿಂಕ್ಡ್‌ಇನ್ ಸೇಲ್ಸ್ ಬೀಕನ್ ಪ್ರಶಸ್ತಿ ಪುರಸ್ಕೃತ ಸಿಂಚು ರಾಜು, ಮುಂದೆ ಒನ್ನಿ ಸಂಸ್ಥಾಪಕ ವಸಂತ ಶೆಟ್ಟಿ ಹಲವು ವಿಷಯಗಳ ಕುರಿತು ಕಾರ್ಯಾಗಾರ ನಡೆಸಿಕೊಡಲಿದ್ದಾರೆ.

ಜಿಮ್‌ಖಾನ್ ಮೈದಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ಭಾರತ ಜನಪ್ರಿಯ ಗಾಯಕಿ ಮೋನಾಲಿ ಠಾಕೂರ ನಡೆಸಿಕೊಡಲಿದ್ದಾರೆ ಎಂದು ಸಂಸ್ಥೆ ಪ್ರಕಟಣೆಗೆ ತಿಳಿಸಿದೆ.

ನೌಕಾ ಸೇನೆಯ ನಿವೃತ್ತ ಅಧಿಕಾರಿಗೆ 10 ಲಕ್ಷ ರೂ. ಪಂಗನಾಮ !

ದಾಂಡೇಲಿ: ಫೇಸ್‌ಬುಕ್ ಒಂದರಲ್ಲಿ ಬಂದ ಹಣ ತೊಡಗಿಸುವ ಕಂಪನಿಯ ಮಾತಿಗೆ ನಂಬಿ ದಾಂಡೇಲಿಯ ಸಾಯಿನಗರದ ನೌಕಾ ಸೇನೆಯ ನಿವೃತ್ತ ಅಧಿಕಾರಿಯೋರ್ವರು 10 ಲಕ್ಷ ರೂ. ಕಳೆದುಕೊಂಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಸಾಯಿನಗರದ ದಿವಾಕರ್ ನಾರಾಯಣ್ ಎಂಬವರೇ ಸೈಬರ್ ವಂಚನೆಯಲ್ಲಿ ಹಣ ಕಳೆದುಕೊಂಡವರಾಗಿದ್ದಾರೆ. ಇವರು ನೌಕಾಸೇನೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದು, ಈಗ ದಾಂಡೇಲಿಯ ಸಾಯಿ ನಗರದಲ್ಲಿ ತಮ್ಮ ಪತ್ನಿಯೊಂದಿಗೆ ವಾಸವಾಗಿದ್ದಾರೆ. ಇವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಪತ್ನಿಯೊಂದಿಗೆ ಜಂಟಿ ಖಾತೆ ಹೊಂದಿದ್ದಾರೆ.

ಸೈಬರ್ ವಂಚನೆ

2025ರಲ್ಲಿ ದಿವಾಕರ ಅವರ ಪತ್ನಿ ಫೇಸುಬುಕ್ ಬಳಸುವಾಗ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭವನ್ನು ಡಾಲರ್ ರೂಪದಲ್ಲಿ ಪಡೆಯಿರಿ ಎಂದುಹೇಳಿ, ಇದು ಸರ್ಕಾರಿ ಯೋಜನೆಎಂದು ತೋರಿಸಿದ ಜಾಹೀರಾತನ್ನು ನಂಬಿ ಕ್ಲಿಕ್ ಮಾಡಿ, ಅಲ್ಲಿ ಕೇಳಿದ ಮಾಹಿತಿಯನ್ನು ನೀಡಿ ತಮ್ಮ ಸಂಪರ್ಕ ವಿವರಗಳನ್ನು ಹಂಚಿಕೊಂಡಿದ್ದಾರೆ. ನಕಲಿ ಲಾಭ ತೋರಿಸಿ ನಂಬಿಸಿದ ವಂಚಕರು ನವೆಂಬರ್ ಹಾಗೂ ಡಿಸೆಂಬರ್ ತಿಂಗಳಲ್ಲಿ ಮತ್ತೆ ಕರೆ ಹಾಗೂ ವಾಟ್ಸಪ್ ಮೂಲಕ ಸಂಪರ್ಕಿಸಿ, ನಿಮ್ಮ ಹಣ ಡಾಲರ್‌ನಲ್ಲಿ ಇದೆ, ಅದನ್ನು ಮರಳಿ ಪಡೆಯಲು ಶುಲ್ಕ ಪಾವತಿಸಬೇಕು ಎಂದು ನಂಬಿಸಿದ್ದಾರೆ. ಈ ಮಾತುಗಳನ್ನು ನಂಬಿದ ದಿವಾಕರ ದಂಪತಿ ಫೆಬ್ರವರಿಯಿಂದ ಏಪ್ರಿಲ್ ತಿಂಗಳವರೆಗೆ ವಿವಿಧ ಬ್ಯಾಂಕ್ ಖಾತೆಗಳಿಗೆ ಒಟ್ಟು 10,60,436 ರೂ. ಹಣ ವರ್ಗಾವಣೆ ಮಾಡಿದ್ದಾರೆ. ಮುಂದೆ ತಾವು ಹೂಡಿಕೆ ಮಾಡಿದ ಹಣ ವಾಪಸ್ ಬಾರದಿರುವುದನ್ನು ಗಮನಿಸಿ, ಹಾಗೂ ಬ್ಯಾಂಕ್‌ನಿಂದ ಬಂದ ಕರೆ ಮೂಲಕ ನೀವು ಕಳುಹಿಸಿದ ಹಣ ಸೈಬರ್ ಕ್ರೈಂ ಸಂಬಂಧಿತ ಖಾತೆಗೆ ಹೋಗಿದೆ ಎಂದು ತಿಳಿದ ನಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ನಗರ ಠಾಣೆಯ ಪಿಎಸ್‌ಐ ಕಿರಣ ಪಾಟೀಲ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಸಜ್ಜನ ರಾಜಕಾರಣಿ ರಮಾನಂದ ನಾಯಕ ಇನ್ನಿಲ್ಲ

ಅಂಕೋಲಾ: ಉತ್ತರ ಕನ್ನಡ ಜಿಲ್ಲಾ ಪಂಚಾಯತ್ ಪ್ರಥಮ ಅಧ್ಯಕ್ಷರಾಗಿ ಜನಾನುರಾಗಿ ಆಡಳಿತದ ಮೂಲಕ ರಾಜ್ಯದ ಗಮನ ಸೆಳೆದಿದ್ದ ಸಜ್ಜನ ರಾಜಕಾರಣಿ ಎಂದೇ ಗುರುತಿಸಿಕೊಂಡಿದ್ದ ರಮಾನಂದ ನಾಯಕ ಹಿಚ್ಕಡ(76) ಅವರು ಅನಾರೋಗ್ಯದಿಂದ ಬೆಂಗಳೂರಿನಲ್ಲಿ ಗುರುವಾರ ಬೆಳಿಗ್ಗೆ ನಿಧನರಾದರು.



ಸಜ್ಜನ, ಪ್ರಾಮಾಣಿಕ ರಾಜಕಾರಣದಿಂದ ಹೆಸರುವಾಸಿಯಾಗಿದ್ದ ಇವರು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಆಪ್ತರಾಗಿದ್ದು, ಜನತಾ ಪರಿವಾರದಿಂದ ತಮ್ಮ ರಾಜಕೀಯ ಜೀವನ ಆರಂಭಿಸಿದ್ದರು. ಜಿಲ್ಲಾ ಪರಿಷತ್ ವ್ಯವಸ್ಥೆ ಜಾರಿಗೆ ಬಂದಾಗ ಉ.ಕ ಜಿಲ್ಲಾ ಪಂಚಾಯತ್‌ನ ಮೊದಲ ಅಧ್ಯಕ್ಷರಾಗಿ ದಕ್ಷ, ಜನಾನುರಾಗಿ ಆಡಳಿತ ನೀಡುವ ಮೂಲಕ ರಾಜ್ಯದ ಗಮನ ಸೆಳೆದಿದ್ದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಇವರು ಕಾಂಗ್ರೆಸ್ ಪಕ್ಷವನ್ನು ಸೇರಿ ಕೊನೆಯವರೆಗೆ ಸಕ್ರೀಯ ರಾಜಕಾರಣದಲ್ಲಿದ್ದರು. ಕ್ಷೇತ್ರ ಪುನರ್ ರಚನೆಯ ಹೋರಾಟ ಸಮಿತಿಯ ಅಧ್ಯಕ್ಷರಾಗಿ, ಮುಂದೆ ಹುಬ್ಬಳ್ಳಿ ಅಂಕೋಲಾ ರೈಲ್ವೆ ಹೋರಾಟ ಸಮಿತಿಯ ಅಧ್ಯಕ್ಷರಾಗಿ ಸುಮಾರು ಎರಡೂವರೆ ದಶಕಗಳ ಕಾಲ ಹುಬ್ಬಳ್ಳಿ ಅಂಕೋಲಾ ನಡುವೆ ರೈಲು ಮಾರ್ಗ ನಿರ್ಮಾಣಕ್ಕೆ ಹಲವಾರು ಹೋರಾಟಗಳನ್ನು ನಡೆಸಿದ್ದರು. ಇವರ ಕನಸು ಸಾಕಾರವಾಗುವ ಹೊಸ್ತಿಲಲ್ಲಿ ವಿಧಿ ಇವರ ಬಾಳಿನಲ್ಲಿ ಆಟವಾಡಿದೆ.

ಶೆಟಗೇರಿಯ ಸತ್ಯಾಗ್ರಹ ಸ್ಮಾರಕ ವಿದ್ಯಾಲಯದ ಅಧ್ಯಕ್ಷರಾಗಿ, ನಾಡವರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕಾರವಾರ-ಅಂಕೋಲಾ ವಿಧಾನಸಭಾ ಕ್ಷೇತ್ರದಲ್ಲಿ ಒಮ್ಮೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಹ ಸ್ಪರ್ಧೆ ಮಾಡಿದ್ದರು. ಅಜಾತಶತ್ರುವಾಗಿ

ರಾಜಕೀಯವಾಗಿ ಎಲ್ಲ ಪಕ್ಷದವರಿಂದ ಗೌರವಕ್ಕೆ ಪಾತ್ರರಾಗಿದ್ದ ಇವರು ಧಾರ್ಮಿಕ, ಸಹಕಾರಿ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. ಇವರು ಪತ್ನಿ , ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಗುರುವಾರ ಬೆಳಿಗ್ಗೆ 10 ಗಂಟೆಗೆ ಸ್ವಗ್ರಾಮ ಹಿಚ್ಕಡದಲ್ಲಿ ಅವರ ಅಂತ್ಯಕ್ರಿಯೆ ನಡೆಯಲಿದೆ.

ತೀವ್ರ ಸಂತಾಪ : ರಮಾನಂದ ನಾಯಕ ನಿಧನಕ್ಕೆ ಹಲವಾರು ಗಣ್ಯರು , ರಾಜಕೀಯ ಧುರೀಣರು ಸಂಘ ಸಂಸ್ಥೆಗಳು ತೀವ್ರ ಸಂತಾಪ ವ್ಯಕ್ತಪಡಿಸಿವೆ. ಶಾಸಕ ಆರ್.ವಿ. ದೇಶಪಾಂಡೆ, ಸಚಿವ ಮಂಕಾಳ ವೈದ್ಯ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಶಿವರಾಮ ಹೆಬ್ಬಾರ್, ದಿನಕರ ಶೆಟ್ಟಿ, ಸತೀಶ ಸೈಲ್, ಭೀಮಣ್ಣ ನಾಯ್ಕ, ಮಾಜಿ ಶಾಸಕಿ ರೂಪಾಲಿ ನಾಯ್ಕ, ವಿ.ಪ ಸದಸ್ಯ ಗಣಪತಿ ಉಳ್ವೇಕರ್, ಜನಶಕ್ತಿ ವೇದಿಕೆ ಅಧ್ಯಕ್ಷ ಮಾಧವ ನಾಯಕ, ಬಿಜೆಪಿ ಪ್ರಮುಖ ಭಾಸ್ಕರ ನಾರ್ವೇಕರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುಜಾತಾ ಗಾಂವಕರ್, ನ್ಯಾಯವಾದಿ ಸುಭಾಸ ನಾರ್ವೇಕರ್, ಉಮೇಶ ನಾಯ್ಕ ಮತ್ತಿತರರು ಸಂತಾಪ ಸೂಚಿಸಿದ್ದಾರೆ. ಹುಬ್ಬಳ್ಳಿ- ಅಂಕೋಲಾ ಹೋರಾಟ ಕ್ರಿಯಾ ಸಮಿತಿ ಶೋಕ ವ್ಯಕ್ತಪಡಿಸಿದೆ.

ತುಂಗಭದ್ರಾ ಜಲಾಶಯದಲ್ಲಿನ ಹೂಳು ತೆರವುಗೊಳಿಸಿ

ಬಳ್ಳಾರಿ: ಲಕ್ಷಾಂತರ ರೈತರ ಜೀವನಾಡಿ ತುಂಗಭದ್ರಾ ಜಲಾಶಯದಲ್ಲಿ ವರ್ಷದಿಂದ ವರ್ಷಕ್ಕೆ ಹೂಳಿನ ಪ್ರಮಾಣ ಹೆಚ್ಚುತ್ತಿದ್ದು, ಇದರಿಂದ ನೀರಿನ ಸಂಗ್ರಹ ಸಾಮರ್ಥ್ಯ ಕುಸಿಯುತ್ತಿದೆ. ಕೂಡಲೇ ಸರ್ಕಾರ ಜಲಾಶಯದಲ್ಲಿನ ಹೂಳು ತೆರವು ಕಾರ್ಯಕ್ಕೆ ಚಾಲನೆ ನೀಡಬೇಕು. ನಿರ್ಲಕ್ಷ್ಯ ವಹಿಸಿದರೆ ತುಂಗಭದ್ರ ಜಲಾಶಯದ ಮುಂಭಾಗದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ತುಂಗಭದ್ರಾ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ ಡಾ.ಜಿ. ಪುರುಷೋತ್ತಮ ಗೌಡ ಅವರು ಎಚ್ಚರಿಸಿದರು.



ನಗರದ ಪತ್ರಿಕಾ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ತುಂಗಭದ್ರಾ ಜಲಾಶಯದ ಇಂದಿನ ದುಸ್ಥಿತಿ ಕುರಿತು ಸರ್ಕಾರದ ಗಮನಕ್ಕಿದ್ದರೂ ಆಳುವ ಯಾವುದೇ ಸರ್ಕಾರಗಳು ಗಮನಹರಿಸುತ್ತಿಲ್ಲ. ರೈತಪರ ಹೋರಾಟದಿಂದ ಬಂದ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಮನಹರಿಸಲಿದ್ದಾರೆ ಎಂದು ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದೆವು. ಅವರು ಇಲ್ಲಿವರೆಗೂ ಜಲಾಶಯದ ಹೂಳಿನ ಬಗ್ಗೆ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಕೂಡಲೇ ಸರ್ಕಾರ ಈ ಕುರಿತು ಗಮನಹರಿಸಿ, ಕೂಡಲೇ ಹೂಳು ತೆರವು ಕಾರ್ಯಾಚರಣೆಗೆ ಚಾಲನೆ ನೀಡಬೇಕು ಎಂದು ಅಗ್ರಹಿಸಿದರು.

ಕಳೆದ 2017ರಲ್ಲಿಯೇ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿ "ಹೂಳಿನ ಜಾತ್ರೆ" ಮೂಲಕ ಸರ್ಕಾರವನ್ನು ಎಚ್ಚರಿಸಲಾಗಿತ್ತು. ಆದರೆ, ಇದುವರೆಗೆ ಸಮರ್ಪಕ ಕ್ರಮ ಕೈಗೊಳ್ಳದ ಪರಿಣಾಮ ಡ್ಯಾಂ ನೀರಿನ ಮಟ್ಟ ಕುಸಿಯುವ ಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

ಟಿಬಿ ಬೋರ್ಡ್‌ನಲ್ಲಿ ಒಂದು ಅಡಿ ಎತ್ತರದ ಗೇಟ್ ನಿರ್ಮಾಣ ಮಾಡಿದರೂ ಜಲಾಶಯದ ನೀರು ಸಂಗ್ರಹ ಮಟ್ಟ ಹೆಚ್ಚಾಗಿಲ್ಲ, ಪ್ರಸ್ತುತ ಡ್ಯಾಂನ ನೀರು ಸಂಗ್ರಹ ಸಾಮರ್ಥ್ಯ ಕೇವಲ 102 ಅಡಿ ಮಟ್ಟಕ್ಕೆ ಸೀಮಿತವಾಗಿರುವುದು ಆತಂಕಕಾರಿ ಬೆಳವಣಿಗೆ ಎಂದು ಹೇಳಿದರು.

ಈ ಹಿನ್ನೆಲೆ ತ್ವರಿತಗತಿಯಲ್ಲಿ ಹೂಳು ತೆರವು ಕಾರ್ಯಕ್ಕೆ ಚಾಲನೆ ನೀಡಬೇಕು, ಡ್ಯಾಂನ ಮೂಲ ಸಾಮರ್ಥ್ಯವನ್ನು ಉಳಿಸಬೇಕು ಎಂದು ಒತ್ತಾಯಿಸಿದರು.

ಟಿಬಿ ಬೋರ್ಡ್‌ನ ಸಂಪೂರ್ಣ ಮಾಹಿತಿ ಹೊಂದಿರುವ ನಿವೃತ್ತ ಅಧಿಕಾರಿ ಬಿ.ಎಸ್. ಹುದ್ಯಾಳ್ ಮಾತನಾಡಿ, ಈ ಮಹತ್ವದ ವಿಚಾರದಲ್ಲಿ ಪಕ್ಷಾತೀತವಾಗಿ ಎಲ್ಲ ಸರ್ಕಾರಗಳು ಹಾಗೂ ಜನಪ್ರತಿನಿಧಿಗಳು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ನಿವೃತ್ತ ಅಧಿಕಾರಿ ಉದ್ಯಾಳ್, ದೊಡ್ಡದಾಸಪ್ಪ, ಕೊಂಚಗೇರಿ ರಾಜಗೌಡ, ವೀರಭದ್ರಗೌಡ, ಶ್ರೀಧರ್, ಧರೂರ ಬಸವರಾಜ್, ಗೋವಿಂದಪ್ಪ, ಶ್ರೀಧರಗೌಡ ಚಾಲಿಹಾಳ ಸೇರಿದಂತೆ ವಿವಿಧ ರೈತ ಮುಖಂಡರು ಉಪಸ್ಥಿತರಿದ್ದರು.

ಕೇಂದ್ರ ಕಾರಾಗೃಹದಲ್ಲಿದ್ದ ಕೈದಿ ಬಿಮ್ಸ್ ಆಸ್ಪತ್ರೆಯಲ್ಲಿ ಸಾವು

ಬಳ್ಳಾರಿ: ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಕೈದಿಯೊಬ್ಬ ಮೃತಪಟ್ಟ ಘಟನೆ ಬುಧವಾರ ನಗರದ ಬಿಮ್ಸ್ ಆಸ್ಪತ್ರೆಯಲ್ಲಿ ನಡೆದಿದೆ.

ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಸಂಕನಾಳು ಗ್ರಾಮನಿವಾಸಿ ಹನುಮಂತು (25) ಮೃತಪಟ್ಟ ಕೈದಿ. ಕಳೆದ ಏ.29ಕ್ಕೆ ಹೊಟ್ಟೆ ನೋವು ಕಾರಣಕ್ಕೆ ಬಳ್ಳಾರಿ ಜೈಲಿನಿಂದ ಬಿಮ್ಸ್ ಆಸ್ಪತ್ರೆಗೆ ಹನುಮಂತು ಅವರನ್ನು ದಾಖಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಪ್ರಕರಣವೊಂದರಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಕೈದಿ ಹನುಮಂತು ರಾಯಚೂರು ಜಿಲ್ಲೆಯಿಂದ ಕಳೆದ ಜನವರಿ ತಿಂಗಳಲ್ಲಿ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿತ್ತು. ಹನುಮಂತು ಅನಾರೋಗ್ಯ ಮತ್ತು ಆಸ್ಪತ್ರೆಗೆ ದಾಖಲಾದ ಬಗ್ಗೆ ನಮಗೆ ಮಾಹಿತಿ ನೀಡಿಲ್ಲ, ಮೃತಪಟ್ಟ ಬಳಿಕ ಪೊಲೀಸರು ಮಧ್ಯರಾತ್ರಿ ಮಾಹಿತಿ ನೀಡಿದ್ದಾರೆ ಎಂದು ಮೃತರ ಸಂಬಂಧಿಕರು ಆರೋಪಿಸಿದ್ದಾರೆ. ಕಳೆದ ನಾಲ್ಕು ತಿಂಗಳು ಕಾಲ ಬಳ್ಳಾರಿ ಜೈಲಿನಲ್ಲಿ ಆರಾಮವಾಗಿದ್ದ, ಇದೀಗ ಏಕಾಏಕಿ ಮೃತಪಟ್ಟಿರುವ ಬಗ್ಗೆ ನಮಗೆ ಅನುಮಾನವಿದೆ, ಘಟನೆಯಲ್ಲಿ ಯಾರೇ ನಿರ್ಲಕ್ಷ್ಯ ವಹಿಸಿದರು ಕಾನೂನು ಕ್ರಮ ಜರುಗಿಸಬೇಕು, ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಕುಟುಂಬಸ್ಥರು ಒತ್ತಾಯಿಸಿದ್ದಾರೆ.


ಗಾಂಧಿ ಕುಟುಂಬದ ಪ್ರತಿಮೆ ಸ್ಥಾಪನೆಗೆ ಬಿಜೆಪಿ ವಿರೋಧ

ಕಲಬುರಗಿ: ಕಲಬುರಗಿಯ ಎಪಿಎಂಸಿ, ಕೆಎಂಎಫ್ ಹಾಗೂ ಮಹಾನಗರ ಪಾಲಿಕೆ ಆವರಣಗಳಲ್ಲಿ ಕಾಂಗ್ರೆಸ್ ಸರ್ಕಾರ ಗಾಂಧಿ ಕುಟುಂಬದ ನಾಯಕರ ಪ್ರತಿಮೆ ಸ್ಥಾಪಿಸಲು ಮುಂದಾಗಿರುವ ಕ್ರಮಕ್ಕೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸುತ್ತದೆ ಎಂದು ಬಿಜೆಪಿ ರಾಜ್ಯ ವಕ್ತಾರೆ ಡಾ. ಸುಧಾ ಆರ್ ಹಾಲಕಾಯಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣದಲ್ಲಿ ಜವಾಹರಲಾಲ್ ನೆಹರು ಅವರ ಪ್ರತಿಮೆ ಸ್ಥಾಪಿಸಲು ಸಚಿವ ಪ್ರಿಯಾಂಕ್ ಖರ್ಗೆ ನಡೆಸುತ್ತಿರುವ ಪ್ರಯತ್ನ ತರ್ಕಹೀನವಾಗಿದೆ.

ಎಪಿಎಂಸಿ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಕೇಂದ್ರವಾಗಿರುವುದರಿಂದ, ಅಲ್ಲಿ ಕೃಷಿ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ ಮಹನೀಯರ ಪ್ರತಿಮೆಯನ್ನು ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ಹಸಿರು ಕ್ರಾಂತಿಯ ಹರಿಕಾರ ಹಾಗೂ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಶ್ರಮಿಸಿದ ಡಾ. ಎಂ.ಎಸ್. ಸ್ವಾಮಿನಾಥನ್ ಅವರ ಪ್ರತಿಮೆಯನ್ನು ಸ್ಥಾಪಿಸಿದರೆ ಅದು ಹೆಚ್ಚು ಅರ್ಥಪೂರ್ಣ.ಇದೇ ವೇಳೆ, ಕಲಬುರಗಿ ಪ್ರಾದೇಶಿಕ ಕೆಎಂಎಫ್ ಆವರಣದಲ್ಲಿ ರಾಜೀವ್ ಗಾಂಧಿ ಅವರ ಪ್ರತಿಮೆ ಸ್ಥಾಪಿಸಲು ಕಾಂಗ್ರೆಸ್ ಸರ್ಕಾರ ಮುಂದಾಗಿರುವುದನ್ನೂ ಟೀಕಿಸಿದರು. ದೇಶದಲ್ಲಿ ಕ್ಷೀರ ಕ್ರಾಂತಿಗೆ ಕಾರಣರಾದ ವರ್ಗೀಸ್ ಕುರಿಯನ್ ಅವರ ಪ್ರತಿಮೆ ಅಲ್ಲಿ ಸ್ಥಾಪಿಸುವುದು ಹೆಚ್ಚು ಸಮಂಜಸ ಎಂದು ಅಭಿಪ್ರಾಯಪಟ್ಟರು.



ಕಲಬುರಗಿ ಮಹಾನಗರ ಪಾಲಿಕೆ ಆವರಣದಲ್ಲಿ ಇಂದಿರಾ ಗಾಂಧಿಯವರ ಪ್ರತಿಮೆ ಸ್ಥಾಪನೆಗೆ ಕಾಂಗ್ರೆಸ್ ಮುಂದಾಗಿರುವುದಕ್ಕೂ ಬಿಜೆಪಿ ವಿರೋಧ ವ್ಯಕ್ತಪಡಿಸಿದ್ದು,ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣ ನೀಡುವಲ್ಲಿ ಮಹತ್ವದ ಪಾತ್ರ ವಹಿಸಿದ ಅಬ್ದುಲ್ ನಜೀರ್ ಸಾಬ್ ಅಥವಾ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರಂತಹ ನಾಯಕರ ಕೊಡುಗೆಯನ್ನು ಸ್ಮರಿಸುವ ಬದಲು, ಕಾಂಗ್ರೆಸ್ ಕೇವಲ ಗಾಂಧಿ ಕುಟುಂಬದ ಹೆಸರನ್ನೇ ಮುಂದಿರಿಸುತ್ತಿದೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಹಿರಿಯ ಮುಖಂಡ ಗಿರಿರಾಜ್ ಯಳಮೇಲಿ ಇದ್ದರು.

ಕಳೆದ 75 ವರ್ಷಗಳಿಂದ ಕಾಂಗ್ರೆಸ್ ಪಕ್ಷವು ದೇಶದ ಅನೇಕ ಯೋಜನೆಗಳು, ರಸ್ತೆಗಳು, ಕ್ರೀಡಾಂಗಣಗಳು ಹಾಗೂ ವಿಶ್ವವಿದ್ಯಾಲಯಗಳಿಗೆ ನೆಹರು, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಅವರ ಹೆಸರನ್ನೇ ನಾಮಕರಣ ಮಾಡುತ್ತಾ ಬಂದಿದೆ. ಕರ್ನಾಟಕದ ಅಸ್ಮಿತೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವ್ಯಕ್ತಿಗಳನ್ನು ಕಡೆಗಣಿಸಿ ಕುಟುಂಬ ರಾಜಕಾರಣ ಮಾಡಲಾಗುತ್ತಿದೆ. ಸರ್ಕಾರ ತನ್ನ ಏಕಪಕ್ಷೀಯ ನಿರ್ಧಾರವನ್ನು ಹಿಂಪಡೆದು, ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದ ಮಹನೀಯರ ಹೆಸರನ್ನೇ ನಾಮಕರಣಕ್ಕೆ ಪರಿಗಣಿಸಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ಖಂಡಿತ.
■ ಡಾ.ಸುಧಾ ಹಾಲಕಾಯಿ, ರಾಜ್ಯ ವಕ್ತಾರೆ,ಬಿಜೆಪಿ

ಸಂಸ್ಕೃತಿ, ಪರಂಪರೆ ಉಳಿಸುವ ಜಾತ್ರೆ

ಸವದತ್ತಿ: ಗ್ರಾಮದೇವಿ ಜಾತ್ರಾ ಮಹೋತ್ಸವ ಕೇವಲ ಧಾರ್ಮಿಕ ಆಚರಣೆಯಲ್ಲ, ಸಮಾಜದ ಸಂಸ್ಕೃತಿ, ಪರಂಪರೆ, ಸಹೋದರತ್ವ ಹಾಗೂ ಭಕ್ತಿಭಾವ ಬೆಳೆಸುವ ಜೀವಂತ ಪರಂಪರೆಯಾಗಿದೆ ಎಂದು ಜಾತ್ರಾ ಕಮಿಟಿ ಗೌರವಾಧ್ಯಕ್ಷ, ಶಾಸಕ ವಿಶ್ವಾಸ ವೈದ್ಯ ಹೇಳಿದರು.

ನಗರದಲ್ಲಿ ಇತ್ತೀಚಿಗೆ ನಡೆದ ಧಾರ್ಮಿಕ ಸಭೆ ಹಾಗೂ ಸಾಂಸ್ಕೃತಿಕ ಸಮಾರಂಭದಲ್ಲಿ ಮಾತನಾಡಿ, ಸುಮಾರು 45 ವರ್ಷಗಳ ಬಳಿಕ ನಡೆಯುತ್ತಿರುವ ಗ್ರಾಮದೇವಿ ಜಾತ್ರೆ ಸವದತ್ತಿಯ ಐತಿಹಾಸಿಕ ಮಹತ್ವ ಸಾರಿದೆ. ಜಾತ್ರೆ ಯಶಸ್ಸಿಗೆ ಸಾರ್ವಜನಿಕರು, ರೈತರು, ಭಕ್ತರು ಹಾಗೂ ವಿವಿಧ ಸಮಿತಿಗಳ ಸಹಕಾರ ಶ್ಲಾಘನೀಯ ಎಂದರು.

ಜಾತ್ರಾ ಕಮಿಟಿ ಅಧ್ಯಕ್ಷ ವಿರೂಪಾಕ್ಷ ಮಾಮನಿ ಮಾತನಾಡಿ, ಜಾತ್ರೆ ಧಾರ್ಮಿಕ ಕಾರ್ಯಕ್ರಮ ಮಾತ್ರವಲ್ಲದೆ ಸಮಾಜದಲ್ಲಿ ಒಗ್ಗಟ್ಟು, ಸೌಹಾರ್ದ ಹಾಗೂ ಭಕ್ತಿಭಾವ ಬೆಳೆಸುವ ಮಹೋತ್ಸವವಾಗಿದೆ ಎಂದರು.



ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಡಾ.ಗುರುಸಿದ್ಧ ರಾಜಯೋಗೀಂದ್ರ ಶ್ರೀಗಳು, ಡಾ.ಮಹಾಂತ ಶ್ರೀಗಳು, ಅಮರಸಿದ್ಧೇಶ್ವರ ಶ್ರೀಗಳು, ಅಭಿನವ ಶಾಂತಲಿಂಗ ಶಿವಾಚಾರ್ಯರು ಆಶೀರ್ವಚನ ನೀಡಿದರು. ಮೂಲಿಮಠದ ಮಲ್ಲಿಕಾರ್ಜುನ ಶಿವಾಚಾರ್ಯರು ದೇವಿ ಮಹಾತ್ಮ ಕುರಿತು ಪ್ರವಚನ ನೀಡಿದರು.

ಮಾಜಿ ಶಾಸಕ ರಾಮನಗೌಡ ಪಾಟೀಲ ಅಧ್ಯಕ್ಷೀಯ ಭಾಷಣ ಮಾಡಿದರು. ಶಾಸಕ ಮಹಾದೇವಪ್ಪ ಯಾದವಾಡ, ಉದ್ಯಮಿ ಸದಾಶಿವ ಕೌಜಲಗಿ, ಹಿರಿಯ ವೈದ್ಯ ಡಾ.ಸಿ.ಬಿ.ನಾವದಗಿ ಹಾಗೂ ಡಾ.ಎ.ಸಿ.ಕಬ್ಬಿಣ ಅವರನ್ನು ಸನ್ಮಾನಿಸಲಾಯಿತು.

ನೀಲಪ್ಪ ಅಣ್ಣಿಗೇರಿ, ಸಂಜೀವ ನವಲಗುಂದ, ಬಾಬು ಇನಾಮತಿ, ಸುಧೀಂದ್ರ ವೈದ್ಯ, ಸಿ.ಬಿ.ದೊಡ್ಡಗೌಡ್ರ, ಕೆ.ಪಿ.ಅನಿಗೋಳ, ಶಿವಾನಂದ ಹೂಗಾರ, ವಿಜಯ ಅಂಗಡಿ, ಸುರೇಶ ಬೆಳವಡಿ ಹಾಗೂ ಡಾ.ವೈ.ಎಂ.ಯಾಕೊಳ್ಳಿ ಉಪಸ್ಥಿತರಿದ್ದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಎನ್.ಬಿ.ಸ್ಟೆಪ್ ಅಪ್ ಡಾನ್ಸ್ ಗ್ರೂಪ್ ವತಿಯಿಂದ ಗುಂಪು ನೃತ್ಯಗಳು ಹಾಗೂ ರಾಘವೇಂದ್ರ ಮೆಲೋಡಿಸ್ ಗೋಕಾಕ ತಂಡದಿಂದ ಜಾನಪದ ಜಾತ್ರೆ ಕಾರ್ಯಕ್ರಮ ಪ್ರೇಕ್ಷಕರ ಮನರಂಜಿಸಿತು.

ನಾಳೆ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ
ಮೂಜಗು ಶ್ರೀಗಳಿಗೆ ಆಹ್ವಾನ



ಹುಬ್ಬಳ್ಳಿ: ಚಿತ್ರದುರ್ಗ ನಗರದಲ್ಲಿ ಮೇ 9ರಂದು ನಡೆಯುವ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಹುಬ್ಬಳ್ಳಿಯಲ್ಲಿ ಮೂರುಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರಮಹಾಸ್ವಾಮಿಗಳಿಗೆ ಆಹ್ವಾನ ನೀಡಲಾಯಿತು.

ಹುಬ್ಬಳ್ಳಿ ಧಾರವಾಡ ಭಾರತೀಯ ಜನತಾ ಪಕ್ಷದ ಅಧ್ಯಕ್ಷ ತಿಪ್ಪಣ್ಣ ಮಜ್ಜಗಿ ನೇತೃತ್ವದಲ್ಲಿ ಆಮಂತ್ರಣ ಪತ್ರಿಕೆ ನೀಡಿ ಆಹ್ವಾನಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದಾದ್ಯಂತ ಸೈಕಲ್ ಮೇಲೆ ಸಂಚರಿಸಿ ಪಕ್ಷ ಬೆಳೆಸಿದ್ದಾರೆ. ಸಾಮಾನ್ಯ ವ್ಯಕ್ತಿಯಾಗಿ ಬೆಳೆದು ರಾಜ್ಯದ ಮುಖ್ಯಮಂತ್ರಿಯಾಗಿ ಉತ್ತಮ ಆಡಳಿತ ನೀಡಿದ್ದಾರೆ. ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮ ಯಶಸ್ವಿಯಾಗಬೇಕು ಎಂದರು.

ಮೂರುಸಾವಿರಮಠದ ಗುರುಸಿದ್ಧರಾಜ ಯೋಗೀಂದ್ರ ಸ್ವಾಮೀಜಿ ಮಾತನಾಡಿ, ಯಡಿಯೂ ರಪ್ಪ ಅನ್ನುವುದು ಕೇವಲ ಹೆಸರಲ್ಲಾ ಒಂದು ಶಕ್ತಿ. ಯಡಿಯೂರಪ್ಪ ಅನ್ನುವುದು ರಾಜ್ಯದ ಜನತೆಗೆ ಅತಿ ಹತ್ತಿರವಾದದ್ದು. ಅವರು ಸದಾ ಕಾಲ ಕ್ರಿಯಾಶೀಲ ವ್ಯಕ್ತಿ, ರಾಜಕೀಯ ಕ್ಷೇತ್ರದ ಮೂಲಕ ನಾಡಿನ ಸೇವೆ ಮಾಡಿದಂತ ಶ್ರೇಷ್ಠ ರಾಜಕಾರಣಿ,ಶ್ರೀಮಂತ ನಾಯಕ ಎಂದು ತಿಳಿಸಿದರು.

ಸಣ್ಣ ಪುಟ್ಟ ವಿಚಾರಗಳಿಗೆ ತಲೆ ಕೇಡಿಸಿಕೊಂಡವರಲ್ಲ, ಯಾವಾಗಲೂ ಉದಾತ್ತ ಚಿಂತನೆ ಮಾಡುತ್ತಿದ್ದರು. ರಾಜಕೀಯ ಧರ್ಮ ಮತ್ತು ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ರಾಜ್ಯದಲ್ಲಿ ಅಸ್ತಿತ್ವದಲ್ಲಿರದ ಬಿಜೆಪಿಗೆ ಒಂದು ಅಸ್ತಿತ್ವ ತಂದು ಕೊಟ್ಟವರು. ಬಿಜೆಪಿ ಬೇರು ಬಿಟ್ಟು ಚಿಗುರು ಒಡೆದು ಹೂವಾಗಿ ಕಾಯಿಕೊಡುವಂತೆ ಜನರ ಮನಸ್ಸಿನಲ್ಲಿ ಸದಾ ಇರುವಂತೆ ಮಾಡಿದ್ದು ಯಡಿಯೂರಪ್ಪ ಎಂದರು.

ಹು-ಧಾ ಪೂರ್ವ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾದ ಮಂಜುನಾಥ ಕಾಟಕರ, ಮಾಜಿ ಮಹಾಪೌರರಾದ ಡಿ.ಕೆ. ಚವ್ಹಾಣ, ರಂಗಾ ಬದ್ದಿ, ಪ್ರಭು ನವಲಗುಂದಮಠ, ಪಾಲಿಕೆ ಸದಸ್ಯರಾದ ಪ್ರೀತಿ ವಿನಾಯಕ ಲದವಾ, ರಾಜು ಕೋರ್ಯಾಣಮಠ, ವೆಂಕಟೇಶ ಕಾಟವೆ, ಶಿವಾನಂದ ಅಂಬಿಗೇರ, ಜಗದೀಶ್ ಕಂಬಳಿ, ನರಸಯ್ಯಾ ಬಿಜವಾಡ, ಕಿರಣ ಲದವಾ, ನೀಲಕಂಠ ತಡಸದಮಠ ಇನ್ನೂ ಅನೇಕರು ಉಪಸ್ಥಿತರಿದ್ದರು.

ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ



ರಾಣೇಬೆನ್ನೂರ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ರಂಗ ಪ್ರವೇಶಿಸಿ 50 ವರ್ಷ ಪೂರೈಯಿಸಿದ ಹಿನ್ನೆಲೆಯಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ ಬೃಹತ್ ಪ್ರಮಾಣದಲ್ಲಿ ಅಭಿಮಾನೋತ್ಸವ ಸಮಾರಂಭ ಹಮ್ಮಿಕೊಳ್ಳಲಾಗಿದ್ದು, ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಅವರ ಅಭಿಮಾನಿಗಳು ಪಾಲ್ಗೊಳ್ಳಬೇಕು ಎಂದು ಮಾಜಿ ಶಾಸಕ ಅರುಣಕುಮಾರ ಪೂಜಾರ ಮನವಿ ಮಾಡಿದರು.

ನಗರದ ಬಿಜೆಪಿ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಡಿಯೂರಪ್ಪನವರ ಸಮಾಜಮುಖಿ ಕಾರ್ಯಗಳು ಮತ್ತು ಮುಖ್ಯಮಂತ್ರಿಯಾಗಿದ್ದಾಗ ಅವರು ಸಾರ್ವಜನಿಕರಿಗೆ ನೀಡಿರುವ ಯೋಜನೆಗಳು ಇಂದಿಗೂ ಜನರಿಗೆ ಅನುಕೂಲವಾಗಿವೆ. ರಾಣೆಬೆನ್ನೂರಿಗೂ ಯಡಿಯೂರಪ್ಪನವರ ಕೊಡುಗೆ ಅಪಾರವಾಗಿದೆ. ಎಪಿಎಂಸಿ ಮೇಗಾ ಮಾರುಕಟ್ಟೆ ನಿರ್ಮಾಣ, ನಗರಕ್ಕೆ 24★7 ಕುಡಿಯುವ ನೀರಿನ ಯೋಜನೆ ಜಾರಿ ಸೇರಿ ಸಾವಿರಾರು ಕೋಟಿ ರೂ. ಅನುದಾನವನ್ನು ರಾಣೆಬೆನ್ನೂರಿಗೆ ನೀಡಿದ್ದಾರೆ. ಆದ್ದರಿಂದ ಅವರ ಅಭಿಮಾನೋತ್ಸವ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು.

ಅಂದು ಸಮಾರಂಭಕ್ಕೆ ತೆರಳಲು ಪಕ್ಷದ ಕಾರ್ಯಕರ್ತರು, ಅಭಿಮಾನಿಗಳಿಗಾಗಿ 170 ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಎಲ್ಲರಿಗೂ ಉಪಹಾರ, ಊಟ ಸೇರಿ ಸಕಲ ಸೌಲಭ್ಯ ಮಾಡಲಾಗಿದೆ ಎಂದರು.

ಬಿಜೆಪಿ ನಗರ ಟಕದ ಅಧ್ಯಕ್ಷ ಮಂಜುನಾಥ ಕಾಟಿ, ಗ್ರಾಮೀಣ ಟಕದ ಅಧ್ಯಕ್ಷ ಸುಭಾಸ ಸಿರಗೇರಿ, ಪ್ರಮುಖರಾದ ಮಲ್ಲಣ್ಣ ಅಂಗಡಿ, ನಿಂಗರಾಜ ಕೋಡಿಹಳ್ಳಿ, ಮಂಜುನಾಥ ಓಲೇಕಾರ, ಸಿದು ಚಿಕ್ಕಬಿದರಿ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ಅಭಿಮಾನೋತ್ಸವಕ್ಕೆ ತೆರಳಲು ಕಾರ್ಯಕರ್ತರು ಸಜ್ಜಾಗಿ

ಕುಷ್ಟಗಿ: ಚಿತ್ರದುರ್ಗದಲ್ಲಿ ಮೇ 9 ರಂದು ನಡೆಯಲಿರುವ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಸುದೀರ್ಘ 50 ವರ್ಷದ ಜನಸೇವೆ ಅಭಿಮಾನೋತ್ಸವಕ್ಕೆ ಮತ ಕ್ಷೇತ್ರದಲ್ಲಿ ಕಾರ್ಯಕರ್ತರು ಸಜ್ಜಾಗಿ ಎಂದು ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್ ಹೇಳಿದರು.

ಪಟ್ಟಣದ ಶಾಖಾಪೂರು ರಸ್ತೆಯಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಬುಧವಾರ ಅಭಿಮಾನೋತ್ಸವದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದರು.

ಚಿತ್ರದುರ್ಗದ ಮಾದರ ಚನ್ನಯ್ಯ, ಬೋವಿ ಗುರುಪೀಠದ ಮಠಾಧೀಶರು ಸೇರಿದಂತೆ ಅನೇಕ ಗಣ್ಯರು ಸಾಕ್ಷಿಯಾಗಲಿದ್ದಾರೆ. ರಾಜ್ಯದಲ್ಲಿ ಅನ್ನದಾತರ ಹೆಸರಿನ ಮೇಲೆಪ್ರಮಾಣ ವಚನ ಸ್ವೀಕರಿಸಿ, ಸತತ 4 ಬಾರಿ ಮುಖ್ಯಮಂತ್ರಿ ಆಗಿ ಆಡಳಿತ ನಡೆಸಿದ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಹಾಗೂ ಸ್ವಾಭಿಮಾನೋತ್ಸವ ಕಾರ್ಯಕ್ರಮಕ್ಕೆ ಈಗಾಗಲೇ ಭವ್ಯ ಮೆರವಣಿಗೆ ವೇದಿಕೆ ನಿರ್ಮಾಣವಾಗಿದೆ. ಮತ ಕ್ಷೇತ್ರದಲ್ಲಿ ಸುಮಾರು 5-6 ಸಾವಿರ ಕಾರ್ಯಕರ್ತರು ತೆರಳುವ ನಿರೀಕ್ಷೆಯಿದೆ. ಪ್ರತಿಯೊಬ್ಬ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಿದೆ ಎಂದರು.

ಬಿಜೆಪಿ ಮಂಡಲದ ತಾಲೂಕಾಧ್ಯಕ್ಷ ಮಹಾಂತೇಶ ಬದಾಮಿ, ಜಿಪಂ ಮಾಜಿ ಸದಸ್ಯ ಕೆ.ಮಹೇಶ್, ಬಿಜೆಪಿ ಮುಖಂಡರಾದ ಅಶೋಕ ಬಳೂಟಗಿ, ಯುವಮೋರ್ಚಾದ ಅಧ್ಯಕ್ಷ ಉಮೇಶ್ ಯಾದವ್, ಶಶಿಧರ್ ಕವಲಿ, ಮಲ್ಲಣ್ಣ ಪಲ್ಲೇದ್, ಲಾಡಸಾಬ್ ಕೊಳ್ಳಿ, ಪ್ರಕಾಶ್ ಗೌಡ ಬೆದವಟ್ಟಿ ನಿತ್ಯಾನಂದಗೌಡ ಪಾಟೀಲ್ ಇನ್ನಿತರ ಮುಖಂಡರು ಇದ್ದರು.



ಮಟ್ಟೂರು ಗ್ರಾಮದಲ್ಲಿ ಹೊಸ ಕನ್ನಡ ಶಾಸನ ಪತ್ತೆ

ಸಿದ್ದಯ್ಯ ಹೆಸರೂರು

ಮಸ್ಕಿ: ತಾಲೂಕಿನ ಮಟ್ಟೂರು ಗ್ರಾಮದಲ್ಲಿ ರಾಮಲಿಂಗೇಶ್ವರ, ಬಸವೇಶ್ವರ, ಹನುಮಂತ ಹಾಗೂ ಸುಂಕಲಮ್ಮ, ಯಲ್ಲಮ್ಮ, ಗಣೇಶ, ದಾವಲ್ ಮಲಿಕ್, ಹೀಗೆ ಅನೇಕ ಶಕ್ತಿ ದೇವತೆಗಳ ದೇವಸ್ಥಾನಗಳು ಹಾಗೂ ವೀರಗಲ್ಲುಗಳು ಇವೆ.

ಇದೇ ಗ್ರಾಮದ ಹನುಮಂತ ದೇವಾಲಯದ ಎದುರು ಪಶ್ಚಿಮ ದಿಕ್ಕಿನಲ್ಲಿರುವ ಕಲ್ಯಾಣ ಚಾಲುಕ್ಯರ ಅರಸ ಒಂದನೆಯ ಸೋಮೇಶ್ವರನ ಕ್ರಿ.ಶ 1050 ರ ಶಾಸನವನ್ನು ಡಾ.ಚನ್ನಬಸಪ್ಪ ಮಲ್ಕಂದಿನ್ನಿ ಅವರು ಶೋಧಿಸಿ ಪ್ರಕಟಿಸಿದ್ದಾರೆ.

ಪ್ರಸ್ತುತ ಮಹಮ್ಮದ್ ರಫಿ ಲಿಂಗಸಗೂರು ಅವರ ನೆರವಿನಿಂದ ಮತ್ತೊಂದು ಶಾಸನವನ್ನು ಪತ್ತೆ ಮಾಡಿದ್ದಾರೆ.

ದಿಗಂತ ವಿಶೇಷ

ಈ ಶಾಸನವು ಗ್ರಾಮದ ಉತ್ತರ ದಿಕ್ಕಿಗೆ ನಾಲ್ಕು ಕಿಲೋಮೀಟರ್ ದೂರದ ಪಂಪಣ್ಣ ಜಾವೂರು ರವರ ಹೊಲದ ಸರ್ವೆ ನಂಬರ್ 143/3 ರಲ್ಲಿ ಪತ್ತೆಯಾಗಿದೆ. ಇದು ಕಣ ಶಿಲೆಯಲ್ಲಿದ್ದು, ಕಿಶ್ರ 13ನೇ ಶತಮಾನಕ್ಕೆ ಸೇರಿದೆ. ಇದರ ಎತ್ತರ ಮೂರುವರೆ ಅಡಿ,ಅಗಲ ಎರಡೂವರೆ ಅಡಿ ಇದೆ.

ಈ ಶಾಸನದಲ್ಲಿ ಒಟ್ಟು ಐದು ಸಾಲಗಳಿದ್ದು ಕನ್ನಡ ಭಾಷೆ ಕನ್ನಡ ಲಿಪಿಯಲ್ಲಿದೆ. ಈ ಶಾಸನದ ಮೇಲ್ಭಾಗದಲ್ಲಿ ಸೂರ್ಯ ಮೂರು ಅಕ್ಷರಗಳು (ನಕ್ಷತ್ರ) ಚಂದ್ರರ ಶಿಲ್ಪಗಳಿವೆ. ಕೆಳ ಭಾಗದಲ್ಲಿ ನಾಲ್ಕು ಸಾಲುಗಳಿಂದ ರಚಿತಗೊಂಡಿದೆ. ಸೇವುಣ ಅರಸ ಇಮ್ಮಡಿ ಸಿಂಘಣ (ಕ್ರಿ.ಶ. 1199- 1247)ನ ಕಾಲದಲ್ಲಿ ದೇವಗಿರಿಯಿಂದ ರಾಜ್ಯಭಾರ ಮಾಡುತ್ತಿರುವ ಕಾಲದಲ್ಲಿ ಮುದಗಲ್ ಭಾಗದ ಪ್ರದೇಶವನ್ನು ಈತನ ಮಹಾ ಪ್ರಧಾನ ದಂಡನಾಯಕ ಪರಸಯ್ಯ ಎಂಬುವವರು ನೋಡಿಕೊಳ್ಳುತ್ತಿದ್ದರು.



ಈ ಪರಸಯ್ಯನು ತನ್ನ ಕೆಳಗೆ ಸೇವೆ ಸಲ್ಲಿಸುತ್ತಿದ್ದ ಮಾಳಯ್ಯ ಎಂಬಾತನಿಗೆ ವೃತ್ತಿ ಮಾನ್ಯವಾಗಿ ಗೇಣ ಕೋಲಿನಿಂದ ಆರು ಮತ್ತರು ಭೂಮಿ ಅಳೆದು ದತ್ತಿ ನೀಡಿದ ವಿಷಯವಿದೆ ಎಂದು ಇತಿಹಾಸದ ಶಾಸನ ಸಂಶೋಧಕರಾದ ಡಾ.ಚನ್ನಬಸಪ್ಪ ಮಲ್ಕಂದಿನ್ನಿ ಅವರು ಪ್ರಕಟನೆಯ ಮೂಲಕ ತಿಳಿಸಿದ್ದಾರೆ.

ಇಂಡಿ ಒಕ್ಕೂಟಕ್ಕೆ ಪ್ರಜಾಪಭುತ್ವದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ: ಬೊಮ್ಮಾಯಿ

ಹಾವೇರಿ: ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಹೀನಾಯವಾಗಿ ಸೋತರೂ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡದೇ ಭಂಡತನ ತೋರುತ್ತಿರುವ ಮಮತಾ ಬ್ಯಾನರ್ಜಿಗೆ ಬೆಂಬಲ ಕೊಡುತ್ತಿರುವ ಇಂಡಿ ಒಕ್ಕೂಟಕ್ಕೆ ಸಂವಿಧಾನ, ಪ್ರಜಾಪಭುತ್ವ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅಸಮಾಧಾನ ವ್ಯಕ್ತಪಡಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಪ್ರತಿಯೊಂದರಲ್ಲೂ ಸಂವಿಧಾನ ವಿರೋಧಿಯಾಗಿ ನಡೆದುಕೊಂಡಿದೆ. ಅವರು ಸಂವಿಧಾನದ ಪ್ರಕಾರ ಮಹಿಳೆಯರು, ಬಡವರು, ಸಾಮಾನ್ಯ ಜನರನ್ನು ರಕ್ಷಣೆ ಮಾಡಿಲ್ಲ. ಈಗ ಟಿಎಂಸಿ ಚುನಾವಣೆಯಲ್ಲಿ ಹೀನಾಯ ಸೋಲು ಕಂಡರೂ, ಮಮತಾ ಬ್ಯಾನರ್ಜಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲು ಭಂಡತನ ತೋರುತ್ತಿದ್ದು, ಅವರು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡಿಲ್ಲ, ಅವರು ಯಾವಾಗಲೂ ಸರ್ವಾಧಿಕಾರದಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ. ಅದು ಈಗ ಬಹಿರಂಗಗೊಂಡಿದೆ. ಆದ್ದರಿಂದ ಮಮತಾ ಬ್ಯಾನರ್ಜಿಗೆ ಬೆಂಬಲ ಕೊಡುತ್ತಿರುವ ಇಂಡಿ ಒಕ್ಕೂಟಕ್ಕೆ ಸಂವಿಧಾನ, ಪ್ರಜಾಪಭುತ್ವ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ ಎಂದರು.

ಕೆಪಿಎಸ್‌ಸಿ ಉನ್ನತ ಮಟ್ಟದ ಸಮಿತಿಗೆ ನೇಮಕ

ಸಿಂಧನೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನಡೆಯುತ್ತಿರುವ ಅಕ್ರಮಗಳಿಗೆ ಕಡಿವಾಣ ಹಾಕಲು ಮತ್ತು ಆಯೋಗದ ಕಾರ್ಯವೈಖರಿಯಲ್ಲಿ ಸಮಗ್ರ ಸುಧಾರಣೆ ತರಲು ರಾಜ್ಯ ಸರ್ಕಾರವು ಮಹತ್ವದ ಸದನ ಸಮಿತಿಯನ್ನು ರಚಿಸಿದೆ.



ಈ ಉನ್ನತ ಮಟ್ಟದ ಸಮಿತಿಯ ಸದಸ್ಯರನ್ನಾಗಿ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ ಅವರನ್ನು ನೇಮಕ ಮಾಡಲಾಗಿದೆ. ಆಯೋಗದಲ್ಲಿ ಪಾರದರ್ಶಕತೆ ತರುವುದು ಮತ್ತು ಅಭ್ಯರ್ಥಿಗಳಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ಸಮಿತಿಯು ಮಹತ್ವದ ಸಲಹೆಗಳನ್ನು ನೀಡಲಿದೆ.

ನೀಟ್ ಪರೀಕ್ಷೆ: ಎಕ್ಸಲಂಟ್‌ನ ಚನ್ನವೀರೇಶನಿಗೆ 700 ಅಂಕಗಳ ನಿರೀಕ್ಷೆ

ವಿಜಯಪುರ: ಸೈನಿಕ, ನವೋದಯ, ಕಿತ್ತೂರು ಶಾಲೆಗಳ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಪ್ರಾರಂಭಗೊಂಡು ಉತ್ತರ ಕರ್ನಾಟಕ ಭಾಗದ ಹೆಮ್ಮೆಯ ಶಿಕ್ಷಣ ಸಂಸ್ಥೆಯಾಗಿ ತಲೆ ಎತ್ತಿರುವ ನಗರದ ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆ ತನ್ನ ಪರಿಣಾಮಕಾರಿ ಬೋಧನೆ, ಅತ್ಯುತ್ತಮ ಫಲಿತಾಂಶದ ಮೂಲಕ ಮನೆ ಮಾತಾಗಿದ್ದು, ಸದ್ಯ ಮತ್ತೆ ನೀಟ್ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳ ಮೈಲುಗಲ್ಲು ಸ್ಥಾಪನೆಗೆ ಸಜ್ಜಾಗಿದೆ.

ಈ ಬಾರಿ ನೀಟ್ ಪರೀಕ್ಷೆಯ ಬಳಿಕ ವಿದ್ಯಾರ್ಥಿಗಳು ಕೀ ಉತ್ತರವನ್ನು ಪರಿಶೀಲಿಸಿಕೊಂಡಿದ್ದು, ಸಾಕಷ್ಟು ನಿರೀಕ್ಷೆಗಳು ಗರಿಗೆದರಿವೆ. ಈ ಬಗ್ಗೆ ಮಾಹಿತಿ ಹಂಚಿಕೊಂಡ ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಚೇರಮನ್ ಬಸವರಾಜ್ ಕೌಲಗಿ ಅವರು, ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜು ಪ್ರಾರಂಭಗೊಂಡ ಮರು ವರ್ಷದಿಂದಲೇ ತನ್ನ ಸಾಧನೆಯ ವಿಜಯ ಪತಾಕೆ ಹಾರಿಸುತ್ತಲೇ ಬಂದಿದೆ. ಶ್ರೀಧರ ದೊಡಮನಿ ಎನ್ನುವ ವಿದ್ಯಾರ್ಥಿಯು ನೀಟ್ ಹಾಗೂ ಕೆ-ಸಿಇಟಿನಲ್ಲಿ ರಾಜ್ಯಕ್ಕೆ ಮೊದಲ ರ್‍ಯಾಂಕ್ ಪಡೆಯುವ ಮೂಲಕ ಸಾಧನೆಯ ಹಾದಿಯಲ್ಲಿ ಮೊದಲ ಹೆಜ್ಜೆ ಗಟ್ಟಿಯಾಗಿ ಊರಿದವನು. ನಂತರದ ಬ್ಯಾಚ್‌ಗಳಲ್ಲಿ ಬಂದಂತಹ ಅತ್ಯುತ್ತಮ ಫಲಿತಾಂಶವು ಜನತೆಗೆ ಎಕ್ಸಲಂಟ್ ಮೇಲಿದ್ದ ನಂಬಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸಿತು. ಕಳೆದ ಬಾರಿ ಅಭಿಷೇಕ ಬಂಡಾರಕವಟೆ ಎನ್ನುವ ವಿದ್ಯಾರ್ಥಿ ನೀಟ್ ಪರೀಕ್ಷೆಯಲ್ಲಿ 700 ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಕಾಲೇಜಿಗೆ ಮತ್ತೊಂದು ಗರಿ ಮೂಡಿಸಿದ್ದಾನೆ ಎಂದು ಹೇಳಿದರು.



ಆದರ ನಂತರದಲ್ಲಿ ಬಂದ ಫಲಿತಾಂಶದಲ್ಲಿ ಅಶ್ವಿನಿ ಯಕ್ಕುಂಡಿ ಕೆಸಿಇಟಿ ಅಗ್ರಿಯಲ್ಲಿ ರಾಜ್ಯಕ್ಕೆ 3ನೇ ರ್‍ಯಾಂಕ್ ಹಾಗೂ ವೆಟರ್ನರಿಯಲ್ಲಿ ರಾಜ್ಯಕ್ಕೆ 9 ನೇ ರ್‍ಯಾಂಕ್ ಪಡೆದುಕೊಂಡರೆ ಕಾವ್ಯಾ ಶಿಂಧೆ ಅಗ್ರಿಯಲ್ಲಿ ರಾಜ್ಯಕ್ಕೆ 5ನೇ ರ್‍ಯಾಂಕ್ ಹಾಗೂ ವೆಟರ್‌ನರಿಯಲ್ಲಿ ರಾಜ್ಯಕ್ಕೆ 10ನೇ ರ್‍ಯಾಂಕ್ ಪಡೆದುಕೊಂಡು ಸಾಧನೆ ಮಾಡಿದರು. ಇನ್ನು 102 ಎಂಬಿಬಿಎಸ್, 79 ಬಿಎಎಂಎಸ್, 14 ಬಿಡಿಎಸ್ ಸೇರಿದಂತೆ 195 ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆದು ಸೀಟು ಗಿಟ್ಟಿಸಿಕೊಳ್ಳುವ ಮೂಲಕ ವೈದ್ಯರಾಗಬೇಕು ಎನ್ನುವ ತಮ್ಮ ಕನಸನ್ನು ಈಡೇರಿಸಿಕೊಂಡಿದ್ದಾರೆ. ಅದೇ ರೀತಿ ಈ ಬಾರಿಯ ನೀಟ್ ಪರೀಕ್ಷೆಯನ್ನು ಮುಗಿಸಿದ ವಿದ್ಯಾರ್ಥಿಗಳ ಕೀ ಉತ್ತರಗಳಿಗೆ ಅನುಗುಣವಾಗಿ ನೋಡಿದರೆ ಚನ್ನವೀರೇಶ ಕುಂಬಾರ 700, ಸಲ್ಮಾನ ಗೋಡಿಹಾಳ 685, ಸಾಗರ ಬನಹಟ್ಟಿ 682, ಗಂಗಾಧರ ಮುತ್ತಗಿ 680, ಅನುಷಾ 662, ಸುಮಿತ ಎ.ಪಿ. 657, ಬಸವನಗೌಡ ಭೈರವಾಡಗಿ 645, ಪ್ರತೀಕ ಚವ್ಹಾಣ 640, ಸ್ವಾತಿ ಮಲೆದ 600 ಅಂಕಗಳನ್ನು ಪಡೆದುಕೊಳ್ಳುವ ನಿರೀಕ್ಷೆ ಇದ್ದು ಕಳೆದ ಬಾರಿಗಿಂತ ಈ ಬಾರಿ ಫಲಿತಾಂಶ ಇನ್ನು ಹೆಚ್ಚಾಗುವ ನಂಬಿಕೆ ಇದೆ ಎಂದರು.

ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಮಾಡುವುದರಲ್ಲಿ ಹೆಸರು ಪಡೆದುಕೊಂಡಿರುವನಮ್ಮಸಂಸ್ಥೆಯು ಮಕ್ಕಳಿಗೆ ಬೇಕಾಗಿರುವ ಶೈಕ್ಷಣಿಕ ಮೂಲಭೂತವಾದ ಅಂಶಗಳನ್ನು ತಿಳಿಸಿಕೊಡುವ ಮೂಲಕ ಅವರಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಲಾಗುತ್ತದೆ. ನಮ್ಮಲ್ಲಿ ನುರಿತ ಉಪನ್ಯಾಸಕ ಬಳಗವಿದ್ದು, ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ಬೇಕಾಗುವ ಶೈಕ್ಷಣಿಕ ವಾತಾವರಣವಿದೆ. ನೀಟ್, ಜೆಇಇ, ಕೆ-ಸಿಇಟಿ, ಎನ್‌ಡಿಎಗೆ ಬೇಕಾಗುವ ತರಬೇತಿಯನ್ನು ನೀಡುತ್ತಿದೆ. ಈ ಬಾರಿಯೂ ನೀಟ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿದ್ದು, ಪಾಲಕರು ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಗಟ್ಟಿಗೊಳಿಸುತ್ತೇವೆ ಎಂದು ಭರವಸೆ ವ್ಯಕ್ತಪಡಿಸಿದರು.

Hosadiganta Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೪

ಉತ್ತರ ಕನ್ನಡ

ಗರಿಷ್ಠ 35° | ಕನಿಷ್ಠ 24°
ಶುಕ್ರವಾರ
8 ಮೇ 2026
ಹುಬ್ಬಳ್ಳಿ

ಕಿರುಸುದ್ದಿ

ಹಲವೆಡೆ ವರುಣನ ಸಿಂಚನ

ಬನವಾಸಿ: ಕದಂಬ ರಾಜಧಾನಿ ಬನವಾಸಿಯಲ್ಲಿ ಗುರುವಾರ ಮಳೆಯು ಸಿಂಚನವಾಗಿದೆ. ಭಾರೀ ಬಿಸಿಲಿನ ದಗೆಯಿಂದ ಕಾದ ಕಾವಲಿಯಾಗಿದ್ದ ಪಟ್ಟಣದಲ್ಲಿ ಸಂಜೆ ಗುಡುಗು ಸಹಿತ ಮಳೆಯಾದ ಪರಿಣಾಮ ಜನರು ತುಸು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಸಂಜೆ ಸುರಿದ ಮಳೆಯಿಂದಾಗಿ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ನೀರಿಲ್ಲದೇ ಒಣಗುತ್ತಿದ್ದ ಬೆಳೆಗೆ ಮಳೆಯು ಜೀವ ಕಳೆ ಬಂದಂತಾಗಿದೆ. ಸಮೀಪದ ಮಧುರವಳ್ಳಿ, ಗುಡ್ನಾಪುರ, ಹಾಡಲಗಿ, ಅಜ್ಜರಣಿ, ನರೂರ,ಭಾಶಿ, ಮೊಗವಳ್ಳಿ, ಮತ್ತುಗುಣಿ ಗ್ರಾಮದಲ್ಲಿಯು ಮಳೆಯಾಗಿದೆ.

ರಮಾನಂದ ನಾಯಕ ನಿಧನಕ್ಕೆ ರೂಪಾಲಿ ನಾಯ್ಕ ಸಂತಾಪ

ಕಾರವಾರ: ಆದರ್ಶ ರಾಜಕಾರಣಿ, ಜನಸೇವಕರಾದ ರಮಾನಂದ ನಾಯಕ ಅವರ ನಿಧನಕ್ಕೆ ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್ ನಾಯ್ಕ ಸಂತಾಪ ವ್ಯಕ್ತಪಡಿಸಿದ್ದಾರೆ. ರಮಾನಂದ ನಾಯಕ ಜಿಲ್ಲಾ ಪರಿಷತ್ ವ್ಯವಸ್ಥೆ ಬಂದ ಆರಂಭದಲ್ಲೆ ಅಧ್ಯಕ್ಷಸ್ಥಾನಕ್ಕೇರಿ ಮಾದರಿಯಾಗಿ ಕೆಲಸ ಮಾಡಿದವರು. ಸರಳ, ಸಜ್ಜನರಾಗಿ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳಲ್ಲೂ ತೊಡಗಿಕೊಂಡಿದ್ದರು. ಆದರಲ್ಲೂ ಅಂಕೋಲಾ ಹುಬ್ಬಳ್ಳಿ ರೈಲು ಮಾರ್ಗಕ್ಕಾಗಿ ಸತತ ಹೋರಾಟ ಮಾಡುವ ಮೂಲಕ ಜನಮೆಚ್ಚುಗೆಗೆ ಪಾತ್ರರಾಗಿದ್ದರು. ಅವರನ್ನು ಕಳೆದುಕೊಂಡಿರುವುದು ದುರ್ದೈವದ ಸಂಗತಿಯಾಗಿದ್ದು ಅವರ ಆತ್ಮಕ್ಕೆ ಭಗವಂತ ಶಾಂತಿ ಕರುಣಿಸಲಿ, ಅವರ ಕುಟುಂಬಕ್ಕೆ, ಅಭಿಮಾನಿಗಳಿಗೆ ದು:ಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುವುದಾಗಿ ರೂಪಾಲಿ ಎಸ್.ನಾಯ್ಕ ತಿಳಿಸಿದ್ದಾರೆ.

ನಾಡಕರ್ಣಿ ದಂಪತಿ ಸಂತಾಪ

ಅಂಕೋಲಾ: ಹಿರಿಯ ರಾಜಕಾರಣಿ, ಉತ್ತರ ಕನ್ನಡ ಜಿಲ್ಲಾ ಪರಿಷತ್ ಮೊದಲ ಅಧ್ಯಕ್ಷ ರಮಾನಂದ ನಾಯಕ ಅವರ ನಿಧನಕ್ಕೆ ಅಂಕೋಲಾ ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷ ಅರುಣ ನಾಡಕರ್ಣಿ ಮತ್ತು ಪುರಸಭೆಯ ಮಾಜಿ ಅಧ್ಯಕ್ಷೆ ಶಾಂತಲಾ ನಾಡಕರ್ಣಿ ಸಂತಾಪ ವ್ಯಕ್ತಪಡಿಸಿದ್ದಾರೆ. ಅಂಕೋಲಾ ಹುಬ್ಬಳ್ಳಿ ರೈಲ್ವೆಗಾಗಿ ರಮಾನಂದ ನಾಯಕರ ಹೋರಾಟ ಅವಿಸ್ಮರಣೀಯವಾಗಿದ್ದು ರೈಲ್ವೆ ಹೋರಾಟ ಸಮಿತಿಯ ಮೂಲಕ ರೈಲ್ವೆ ಮಾರ್ಗದ ಅಗತ್ಯತೆ ಕುರಿತಂತೆ ಸಂಬಂಧಿಸಿದವರಿಗೆ ಮನವರಿಕೆ ಮಾಡುವ ಪ್ರಯತ್ನ ರಮಾನಂದ ನಾಯಕರ ನೇತೃತ್ವದಲ್ಲಿ ಹಲವಾರು ಬಾರಿ ನಡೆದಿತ್ತು ಒಬ್ಬ ಸರಳ,ಸಜ್ಜನ ಹಿರಿಯ ಮಾರ್ಗದರ್ಶಕರನ್ನು ಕಳೆದುಕೊಂಡಿದ್ದೇವೆ ಎಂದು ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷ ಅರುಣ ನಾಡಕರ್ಣಿ ಹೇಳಿದ್ದಾರೆ.



ಸಿದ್ದಾಪುರ: ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ವತಿಯಿಂದ ಒಂದು ದಿನದ 'ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕಾರ್ಯಾಗಾರ ' ನಡೆಸಲಾಯಿತು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62299	69199
ಬಿಳಿಗೋಟು	25699	37700
ಕೆಂಪುಗೋಟು	26589	37699
ಬೆಟ್ಟೆ	42899	51699
ರಾಶಿ	50909	54099
ಚಾಲಿ	44399	48539
ಬಿ.ಕಾಳುಮೆಣಸು	75000	87999

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58921	58921
ರಾಶಿ	50100	56899
ಬೆಟ್ಟೆ	39506	48999
ಕೆಂಪುಗೋಟು	20189	36991
ಬಿಳಿಗೋಟು	20786	38199
ಚಾಲಿ	39309	48485
ಕೋಕಾ	17501	34599
ಕಾಳುಮೆಣಸು	58615	67299



ಬನವಾಸಿ: ಕದಂಬ ರಾಜಧಾನಿ ಬನವಾಸಿಯಲ್ಲಿ ಗುರುವಾರ ಮಳೆಯ ಸಿಂಚನವಾಗಿದೆ. ಭಾರೀ ಬಿಸಿಲಿನ ದಗೆಯಿಂದ ಕಾದ ಕಾವಲಿಯಾಗಿದ್ದ ಪಟ್ಟಣದಲ್ಲಿ ಸಂಜೆ ಗುಡುಗು ಸಹಿತ ಮಳೆಯಾದ ಪರಿಣಾಮ ಜನರು ತುಸು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಮೇ 19ರಂದು ಸಹಸ್ರ ಸುವಾಸಿನೀ ಪೂಜೆ

ಕುಮಟಾ : ಹೊಳೆಗದ್ದೆಯ ಶಾಂತಿಕಾ ಪರಮೇಶ್ವರಿ ದೇವಾಲಯದಲ್ಲಿ ಮೇ 19ರಂದು ಬೆಳಗ್ಗೆ 8.30 ರಿಂದ ಸಹಸ್ರ ಸುವಾಸಿನಿ ಪೂಜಾ ಕಾರ್ಯಕ್ರಮ ಶ್ರೀ ರಾಮಚಂದ್ರಾಪುರ ಮಠದ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರಭಾರತೀ ಶ್ರೀಗಳ ಸಾನಿಧ್ಯದಲ್ಲಿ ನಡೆಯಲಿದೆ. ಈ ದಿವ್ಯ ಕಾರ್ಯಕ್ರಮದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವರ ಹಾಗೂ ಗುರುಗಳ ಆಶೀರ್ವಾದಕ್ಕೆ ಭಾಜನರಾಗಬೇಕೆಂದು ಸಮಿತಿಯ ಪ್ರಧಾನ ಸಂಯೋಜಕ ಮಂಜುನಾಥ ಭಟ್ಟ ಸುವರ್ಣಗದ್ದೆ ವಿನಂತಿಸಿದರು. ಅವರು ಹೊಳೆಗದ್ದೆಯ ಶ್ರೀ ಶಾಂತಿಕಾ ಪರಮೇಶ್ವರಿ ದೇವಾಲಯದಲ್ಲಿ ಕಾರ್ಯಕ್ರಮದ ಆಮಂತ್ರಣ ಬಿಡುಗಡೆಗೊಳಿಸಿ ಮಾತನಾಡಿದರು. ಮಹಾಮಂಡಲ ಉಪಾಧ್ಯಕ್ಷ ಜಿ.ಎಸ್ ಹೆಗಡೆ ಮಾತನಾಡಿದರು. ಸಂಚಾಲಕರುಗಳಾದ ಪಿ.ಎನ್ ಭಟ್ಟ, ಎಸ್.ವಿ ಹೆಗಡೆ, ಜಯರಾಮ ಭಟ್ಟ, ಸಹಸಂಯೋಜಕ ಕೃಷ್ಣಾನಂದ ಭಟ್ಟ, ಕೃಷ್ಣ ಹೆಗಡೆ, ಲೆಕ್ಕಪತ್ರ ವಿಭಾಗ ಜಿ. ಎಸ್ ಹೆಗಡೆ, ದೇವಾಲಯದ ಆಡಳಿತ ಕಾರ್ಯದರ್ಶಿ ದಯಾನಂದ ಭಟ್ಟ, ಧಾರೇಶ್ವರ ವಲಯದ ಅಧ್ಯಕ್ಷ ನಾಗರಾಜ ಜೋಶಿ, ಮಾತೃಪ್ರಧಾನೆ ಭುವನೇಶ್ವರಿ ಭಟ್ಟ, ವೈದಿಕ ಪ್ರಧಾನ ಶ್ರೀಧರ ಭಟ್ಟ, ಯುವ ಪ್ರಧಾನ ಈಶ್ವರ ಭಟ್ಟ, ಪ್ರಸಾರ ವಿಭಾಗದ ಅರುಣ ಹೆಗಡೆ, ಗುರಿಕಾರ ಪರಮೇಶ್ವರ ಹೆಗಡೆ, ಅನಂತ ಭಟ್ಟ ಪ್ರಮುಖರುಗಳಾದ ಶ್ರೀಧರ ಭಟ್ಟ, ಜಯಶ್ರೀ ಭಟ್ಟ, ಗಾಯತ್ರಿ ಭಟ್ಟ, ಶಶಿಕಾಂತ ಭಟ್ಟ, ವೆಂಕಟೇಶ ಭಟ್ಟ, ಅನಂತ ಭಟ್ಟ, ಗೋಪಾಲ ಭಟ್ಟ, ರವಿ ಭಟ್ಟ ಹಾಗೂ ಇತರ ಕುಳಾವಿ ಭಕ್ತರು ಇದ್ದರು.



ಕುಮಟಾ: ಹೊಳೆಗದ್ದೆಯ ಶ್ರೀ ಶಾಂತಿಕಾ ಪರಮೇಶ್ವರಿ ದೇವಾಲಯದಲ್ಲಿ ಕಾರ್ಯಕ್ರಮದ ಆಮಂತ್ರಣವನ್ನು ಸಮಿತಿಯ ಪ್ರಧಾನ ಸಂಯೋಜಕ ಮಂಜುನಾಥ ಭಟ್ಟ ಸುವರ್ಣಗದ್ದೆ ಬಿಡುಗಡೆಗೊಳಿಸಿದರು.

ಜನ ಮನ ಸೆಳೆಯುತ್ತಿರುವ ಗುಲ್ಮೊಹರ್

ಸುಧೀರ್ ನಾಯರ್

ದಿಗಂತ ವಿಶೇಷ

ಬನವಾಸಿ: ಸುಡೋ ಬೇಸಿಗೆ ನಡುವೆ ಆಗೋಮ್ಮೆ ಈಗೋಮ್ಮೆ ಇಣುಕಿ ಹೋಗೋ ಮೋಡಗಳು. ಇವೆಲ್ಲದಕ್ಕೂ ಹೊಂದಿಕೊಂಡು ಪಳ ಪಳ ಹೊಳೆಯುವ ಕೆಂಪನೆ ಹೂಗಳು ದೂರ ದೂರಕ್ಕೂ ಕಣ್ಸೆಳೆಯುವ,ಹತ್ತಿರ ಬಂದ್ರೆ ಆಹ್ಲಾದ ನೀಡುವ, ಆಸರೆ ಯಾಚಿಸಿದ್ರೆ ಕೂಲ್ ಕೂಲ್ ಅನುಭವ ನೀಡುವ ಅಪೂರ್ವ ಪುಷ್ಪವೃಕ್ಷ. ಬೇಸಿಗೆಯ ಬಿಸಿಲಿನ ಬೇಗೆಗೆ ಬೆಂದಿರುವ ಮಲೆನಾಡ ಭಾಗದ ಜನತೆಯ ಮನಸ್ಸಿಗೆ ನಳ ನಳಿಸಿ ಮುದ ನೀಡುವ ಡಿಪರೆಂಟ್ ಹೂಗಳು. ತಿಂಗಳ ಹೆಸರನ್ನೇ ಧರಿಸಿಕೊಂಡು ಮೆರೆಯುವ ಮೇ ಫ್ಲವರ್ ಗಳು ಇದೀಗ ಶಿರಸಿ-ಬನವಾಸಿ ರಸ್ತೆ ಬದಿಯಲ್ಲಿ ಸಾರ್ವಜನಿಕರನ್ನ ಸ್ವಾಗತಿಸುತ್ತಿವೆ.

ಹೌದು? ಯಾವ ಕಲಾವಿದನ ಕುಂಚದಲ್ಲಿ ಅರಳಿದ ಪ್ರಕೃತಿ ಸೌಂದರ್ಯವೋ ಗೊತ್ತಿಲ್ಲ. ಪ್ರಕೃತಿ ಮಾತೆ ಶೃಂಗರಿಸಿಕೊಂಡ ಮನಮೋಹಕ ದೃಶ್ಯವಿದು. ಕಣ್ಣು ಹಾಯಿಸಿದಷ್ಟು ಎಲ್ಲೆಲ್ಲೂ ಹಸಿರಿನೊಂದಿಗೆ ಕೆಂಪು ಬಣ್ಣವೋ ಬಣ್ಣ. ಕಣ್ಣಿಗೆ ಹಿತ ನೀಡಿ ಮನಸ್ಸನ್ನು ಉಲ್ಲಾಸಗೋಳಿಸುವ ಪುಷ್ಪದ ಹೆಸರು ಮೇ ಫ್ಲವರ್ಸ್ ಅಂತಾ? ಮಲೆನಾಡ ಹಚ್ಚ ಹಸರಿನಿಂದ ಕೂಡಿರುವ ಪರಿಸರದ ಮಧ್ಯೆ ಕೆಂಪು ಹೂಗಳಿಂದ ತುಂಬಿಕೊಂಡು ಬೇಸಿಗೆ ಝಳಕ್ಕೆ ಬೇಸತ್ತ ಜನರ ಮನಸ್ಸಿಗೆ ಮುದ ಕಣ್ಣಿಗೂ ತಂಪು ನೀಡುತ್ತಿವೆ. ಕೆಂಪು, ಹಳದಿ, ಕೇಸರಿ ಬಣ್ಣಗಳ ಮಿಶ್ರಿತದಲ್ಲಿ ಮೇ ತಿಂಗಳಲ್ಲೇ ಬೆಳೆಯೋ ಡಿಫರೆಂಟ್ ಹೂವುಗಳಿವು. ಅಗಲವಾಗಿ ಬೆಳೆಯುವ ಮೇ ಫ್ಲವರ್ಸ್ ಮರ ಬೇಸಿಗೆಯ ದಿನವಾದ ಮೇ ತಿಂಗಳಲ್ಲಿ ಮಾತ್ರ ಹೂ ಬಿಡುವುದು ಇದರ ಮತ್ತೊಂದು ವಿಶೇಷ. ಸುಡೋ ಬಿಸಿಲಲ್ಲೂ ಕೂಡ ಇಲ್ಲಿನ ಗಿಡಗಳ ತುಂಬೆಲ್ಲ ಕೆಂಪು ಹೂಗಳು ನಳನಳಿಸುತ್ತಿವೆ. ಶಿರಸಿ-ಬನವಾಸಿ ಮಾರ್ಗದ ರಸ್ತೆ ಬದಿಯಲ್ಲಿ 200 ಕ್ಕೂ ಹೆಚ್ಚು ಮೇ ಫ್ಲವರ್ಸ್ ಗಿಡಗಳು ದಾರಿ ಹೋಕರನ್ನ ಆಕರ್ಷಿಸುತ್ತಿವೆ. ಈ ಹೂಗಳನ್ನು ನೋಡುತ್ತಿದ್ದರೆ ಸಾರ್ವಜನಿಕರಿಗೆ ಏನೋ ಮನಸ್ಸಿಗೆ ಒಂದು ಆನಂದ. ಹಚ್ಚ ಹಸಿರಿನ ಗಿಡಗಳ ಮಧ್ಯೆ ಈ ಮೇ ಫ್ಲವರ್ಸ್ ಗಿಡಗಳ ಹೂವುಗಳು ಅರಳಿನಿಂತಿವೆ. ಬೇಸಿಗೆಯ ಬಿಸಿಲಿಗೆ ಬೆಂಡಾಗಿ ನೆರಳಿದೆ ಎಂದು ಮೇ ಫ್ಲವರ್ಸ್ ಕೆಳಗೆ ನಿಂತವರಿಗೆ ಕಣ್ಣಿಗೆ ತಂಪು, ಮನಸ್ಸಿಗೆ ಮುದ ನೀಡುತ್ತಿವೆ.

ಈ ಬಾರಿಯ ಬೇಸಿಗೆ ಬಿಸಿಲು ಜನರಲ್ಲಿ ನಡುಕು ಹುಟ್ಟಿಸಿದ್ದು, ಜನತೆ ಮನೆಯಿಂದ ಹೊರ ಬರಲು ಹೆದರುತ್ತಿದ್ದಾರೆ. ಯಾವಾಗ ಈ ಹಾಳಾದ ಬೇಸಿಗೆ ಮುಗಿಯುತ್ತದೆ ಎಂಬ ಚಿಂತೆಯಲ್ಲಿದ್ದಾರೆ. ಮೇ ತಿಂಗಳೇ ಹಾಗೆ ಸುಡು ಸುಡು ಬಿಸಿಲು. ಮರಗಳೆಲ್ಲ ಎಲೆ ಉದುರಿಸಿ ಕೊಳ್ಳುವ ಕಾಲ. ಮನೆಯಿಂದ ಹೊರಗೆ ಬರಲು ಸಾಧ್ಯವಿಲ್ಲದಂತಹ ಕಾಲ. ಅಂತಹ ಕಾಲದಲ್ಲೂ ಕೂಡ ಮೇ ಫ್ಲವರ್ ಮಾತ್ರ ಹೂ ಬಿಟ್ಟು ಬಿಸಿಲಿನ ಜಳವನ್ನ ಜನರಿಂದ ಕೊಂಚ ದೂರ ಉಳಿಸುತ್ತಿದೆ. ತನ್ನ ಹೂವಿನಿಂದಲೇ ಜನರನ್ನು ಆಕರ್ಷಿಸುತ್ತಿದೆ. ವಾಯು ವಿಹಾರಿಗಳಿಗಂತೂ ಈ ರೀತಿಯಾಗಿ ಅರಳಿ ನಿಂತಿರುವ ಹೂಗಳ ಸೌಂದರ್ಯವನ್ನು ಕಣ್ತುಂಬಿಕೊಳ್ಳುವುದೇ ಮಹದಾನಂದ. ಈ ಬೇಸಿಗೆಯಲ್ಲೂ ಮೇ ಫ್ಲವರ್ಸ್ ಜನತೆಯನ್ನ ಆಕರ್ಷಿಸಿ ಮೋಹಗೊಳಿಸುತ್ತಿದೆ. ಮೇ ಫ್ಲವರ್ಸ್ ನಾರಿಯ ಮುಡಿ ಏರೋದಿಲ್ಲ, ದೇವರ ಪೂಜೆಗೂ ಬಳಕೆ ಆಗೋದಿಲ್ಲ. ನೋಡುಗರ ಮನಸ್ಸನ್ನ ಅರಳಿಸಿ ಸಂತೋಷ ಕೊಡುವುದಷ್ಟೆ ಅದರ ಕೆಲಸ. ಕೆಲ ಗಂಟೆಗಳ ಕಾಲ ಮುಗುಳ್ನಕ್ಕು ನಂತರ ಮುದುಡಿಕೊಳ್ಳುವ ಇವುಗಳು ಅರಳಿ ಸೃಷ್ಟಿಸುವ ಚಿತ್ತಾರ ಮಾತ್ರ ಮನಮೋಹಕ. ಆದ್ರೆ ರಸ್ತೆ ಅಂಚಿನಲ್ಲೇ ಹೆಚ್ಚಾಗಿ ಕಾಣಸಿಗೋ ಈ ಗಿಡಗಳನ್ನ ರಸ್ತೆ ಅಗಲೀಕರಣದ ಹೆಸರಲ್ಲಿ ಕತ್ತರಿಸಲಾಗುತ್ತಿದೆ.



ಹೂವಿನ ಹಬ್ಬದ ಸಂಭ್ರಮ

ಶಿರಸಿ-ಬನವಾಸಿ ಭಾಗದ ಮಂದಿಗೆ ಈ ಪುಷ್ಪಾಲಂಕಾರ ಮುಂಗಾರಿಗೆ ಸ್ವಾಗತ ಕೋರುತ್ತಿವೆ. ಈ ಹೂವಿನ ಹಬ್ಬದ ಲೋಕವನ್ನು ಅದರ ಬಣ್ಣಗಳ ಸಂಭ್ರಮವನ್ನು ಹತ್ತಿರದಿಂದ ನೋಡಿದಾಗ ನಿಜಕ್ಕೂ ಮನಸ್ಸು ರೋಮಾಂಚನವಾಗುತ್ತದೆ. ಇದರ ಒಳ ಲೋಕ ರಂಗೋ ರಂಗೋ. ಸಸ್ಯಲೋಕ ತನ್ನ ಗರ್ಭದಲ್ಲಿ ಎಷ್ಟೊಂದು ಅತ್ಯದ್ಭುತ, ಆಶ್ಚರ್ಯಕರ ಬಣ್ಣ, ವಿನ್ಯಾಸ, ಗುಣಗಳನ್ನ ಅಳವಡಿಸಿಕೊಂಡಿದಿಯೋ ಗೊತ್ತಿಲ್ಲ. ಆದ್ರೆ, ಪ್ರಕೃತಿಯು ಈ ಸೊಬಗಿಗೆ ಮಾತ್ರ ನಾವುಗಳು ಫೀದಾ ಆಗಲೇಬೇಕು.

ಕಾಂಕ್ರೀಟ್ ರಸ್ತೆಗೆ ಡಾಂಬರು: ರೂಪಾಲಿ ನಾಯ್ಕ ಆಕ್ರೋಶ



ಕಾರವಾರ: ಕಾರವಾರದ ಹಬ್ಬುವಾಡ ಕಾಂಕ್ರೀಟ್ ರಸ್ತೆಗೆ ಡಾಂಬರು ಹಾಕಿ ಮತ್ತೆ ತೆಗೆಯುತ್ತಿರುವ ಕಾಮಗಾರಿ ನೋಡಿ ಬುಧವಾರ ಕಾಮಗಾರಿ ಮಾಡುತ್ತಿದ್ದವರನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ತರಾಟೆಗೆ ತೆಗೆದುಕೊಂಡರು.

ಸದೃಢವಾಗಿರುವ ಕಾಂಕ್ರೀಟ್ ರಸ್ತೆಗೆ ಡಾಂಬರು ಹಾಕಲು ಹೇಳಿದವರು ಯಾರು? ಈಗ ಡಾಂಬರು ತೆಗೆಯಲು ಹೇಳಿದವರು ಯಾರು? ಯಾವ ಪುರುಷಾರ್ಥಕ್ಕಾಗಿ ಕಾಮಗಾರಿ ಮಾಡುತ್ತಿದ್ದೀರಿ. ಗ್ರಾಮೀಣ ಪ್ರದೇಶದ ಎಷ್ಟೋ ರಸ್ತೆಗಳು ಹದಗೆಟ್ಟು ಹೋಗಿದ್ದರೂ ಅಲ್ಲಿ ಕೇಳುವವರೆ ಇಲ್ಲ, ಆದರೆ ಸುಸ್ಥಿತಿಯಲ್ಲಿ ಇರುವ ಕಾಂಕ್ರೀಟ್ ರಸ್ತೆಗೆ ಡಾಂಬರು ಹಾಕುವ ಅವಶ್ಯಕತೆ ಏನಿತ್ತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜನತೆಯ ಬೇಡಿಕೆ ಹಿನ್ನೆಲೆಯಲ್ಲಿ ನಾನು ಶಾಸಕಿಯಾಗಿದ್ದಾಗ ಈ ರಸ್ತೆ ಮಂಜೂರು ಮಾಡಿಸಿದ್ದೆ. ಒಳ್ಳೆಯ ಕಾಂಕ್ರೀಟ್ ರಸ್ತೆ ನಿರ್ಮಾಣವಾಗಿದೆ. ಅದನ್ನು ಹಾಳುಗೆಡಹುವ ಮನಸ್ಥಿತಿ ಏಕೆ ಎಂದು ತರಾಟೆಗೆ ತೆಗೆದುಕೊಂಡರು.



ಭಟ್ಕಳ : ಚಿತ್ರದುರ್ಗದಲ್ಲಿ ಮೇ 9ರಂದು ಮಾಜಿ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪನವರ ಅಭಿಮಾನೋತ್ಸವ ಆಹ್ವಾನವನ್ನು ಬಿಜೆಪಿ ಮಂಡಲದ ವತಿಯಿಂದ ಪಕ್ಷ ಹಿರಿಯ ಕಾರ್ಯಕರ್ತರಿಗೆ ನೀಡಲಾಯಿತು. ಮಂಡಲ ಅಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ನಾಯ್ಕ, ಶಿರಾಲಿ ಗ್ರಾಪಂ ಮಾಜಿ ಅಧ್ಯಕ್ಷರಾದ ಭಾಸ್ಕರ್ ದೈಮನೆ ಇದ್ದರು.

ದೇವಾಲಯಗಳಿಗೆ ಹೆಚ್ಚು ಭೇಟಿ ನೀಡಿ: ಶ್ರೀಗಳು

ಹೊನ್ನಾವರ: ತಾಲೂಕಿನ ಕಾನಗೋಡ ಶ್ರೀ ಚೆನ್ನಕೇಶವ ದೇವರ ನೂತನ ಮಹಾದ್ವಾರ ಲೋಕಾರ್ಪಣೆಯನ್ನು ಸಿದ್ದಾಪುರದ ಶ್ರೀ ಮುನ್ನೆಲೆಮಾವಿನಮಠದ ಶ್ರೀ ಮಜ್ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಮಾಧವಾನಂದ ಭಾರತೀ ಶ್ರೀಗಳುಳಿಂದ ನಡೆಯಿತು.

ದೇವಾಲಯದ ಆವಾರಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಈ ಮಹಾದ್ವಾರ ದೇವಾಲಯಕ್ಕೆ ದ್ವಾರ ಮಾತ್ರವಲ್ಲ, ಮನುಷ್ಯನ ಜೀವನದ ಉನ್ನತಿಗೆ, ಶ್ರದ್ಧಾ, ಭಕ್ತಿಗು ಕಾರಣವಾಗುತ್ತದೆ. ಮಹಾದ್ವಾರ ಎನ್ನುವುದು ದೇವರ ಪಾದ, ಅದು ಎಲ್ಲಿಂದ ಪ್ರಾರಂಭವಾಗುತ್ತದೆಯೋ ಅಲ್ಲಿಂದ ದೇವರು ಮಲಗಿದ್ದಾನೆ ಎನ್ನುವುದು ಶಾಸ್ತ್ರದಲ್ಲಿದೆ. ನಾವು ಇಂದು ದೇವಾಲಯಕ್ಕೆ ಭೇಟಿ ನೀಡಲು ಸಮಯ ನೀಡುತ್ತಿಲ್ಲ.ದೇವಾಲಯ ಎಂದರೆ ಸಮುದ್ರವಿದ್ದಂತೆ ಮನೆ ಎಂದರೆ ಬಾವಿ ಇದ್ದಂತೆ. ದೇವಾಲಯದಲ್ಲಿ ಹೋಮ,ಹವನಾದಿ,ಅಭಿಷೇಕಗಳು ನಡೆಯುವುದರಿಂದ ದೇವರ ಸಾನಿಧ್ಯ, ಶಕ್ತಿ ಸಂಚಯ ಹೆಚ್ಚಿರುತ್ತದೆ. ಆದಕ್ಕಾಗಿ ದೇವಾಲಯಗಳಿಗೆ ಹೆಚ್ಚೆಚ್ಚು ಭೇಟಿ ನೀಡಿ. ಶ್ರದ್ಧೆ, ಭಕ್ತಿ ಇದ್ದಾಗ ಮಾತ್ರ ದೇವರ ಅನುಗ್ರಹ ದೊರೆಯುತ್ತದೆ ಎಂದರು.ಶ್ರೀ ಕ್ಷೇತ್ರದ ವೇ.ಜಯರಾಮ ಅಡಿಯವರು ಸ್ವಾಗತ ಸ್ವೀಕರಿಸಿದ ಮಾತನಾಡಿ, ಕೇವಲ ಸಂಪತ್ತು ಇದ್ದಾಗ ಮಾತ್ರ ಎಲ್ಲವು ಸಾಧಿಸಲಾಗುವುದಿಲ್ಲ.ಆದಕ್ಕೆ ಶಾರೀರಿಕ, ಮಾನಸಿಕ ಸಿದ್ದತೆ ಇರಬೇಕು. ದೇವತಾಕೃಪೆ ಇದ್ದಾಗ ಮಾತ್ರ ಇಂತಹ ಮಹತ್ಕಾರ್ಯ ನೆರವೇರಲು ಸಾಧ್ಯ. ನನಗೆ ದೇವರ ಕೃಪೆ ಇದ್ದಿದರಿಂದ ಇಲ್ಲಿ ಮಹಾದ್ವಾರ ನಿರ್ಮಾಣಕ್ಕೆ ಪ್ರೇರಣೆ ದೊರೆಯಿತು ಎಂದರು.

ಆಧ್ಯಕ್ಷತೆ ವಹಿಸಿದ್ದ ಡಾ.ಜಿ.ಜಿ ಸಭಾಹಿತ ಮಾತನಾಡಿದರು.ವಿದ್ವಾನ್ ಗಜಾನನ ಭಟ್ ಸಭಾಪೂಜೆ ನೆರವೇರಿಸಿದರು. ಗಣೇಶ ಹೆಗಡೆ ದಂಪತಿಗಳು ಶ್ರೀಗಳಿಗೆ ಫಲಸಮರ್ಪಣೆ ನೀಡಿದರು. ಐಸಿರಿ, ಶ್ರಾವಣಿ ಪ್ರಾರ್ಥಿಸಿದರು. ಗಣೇಶ ಹೆಗಡೆ ಸ್ವಾಗತಿಸಿದರು. ಶಿವಾನಂದ ಹೆಗಡೆ ನಿರೂಪಿಸಿದರು. ಗೋಪಾಲ ಹೆಗಡೆ ವಂದಿಸಿದರು. ಗೇರುಸೊಪ್ಪ ಶ್ರೀ ಸೀಮಾ ಮುಖ್ಯಪ್ರಾಣ ದೇವರ ಪಲ್ಲಕ್ಕಿ ಉತ್ಸವ ನಡೆಯಿತು. ದೇವಸ್ಥಾನದಿಂದ ಪೂರ್ಣಕುಂಭ,ಮಂಗಳವಾದ್ಯದ ಮೂಲಕ ಸಿಂಗರಿಸಿದ ರಥದಲ್ಲಿ ಶ್ರೀ ಗುರುಗಳನ್ನು ಮಹಾದ್ವಾರದ ಹತ್ತಿರ ಮೆರವಣಿಗೆ ಮುಖಾಂತರ ಸ್ವಾಗತಿಸಿದರು. ನಂತರ ದೇವಾಲಯದಲ್ಲಿ ಮಹಾಮಂಗಳಾರತಿ, ಸಭಾಕಾರ್ಯಕ್ರಮದ ನಂತರ ಅನ್ನಸಂತರ್ಪಣೆ ನಡೆಯಿತು. ಸಾವಿರಾರು ಸಂಖ್ಯೆಯಲ್ಲಿ ಭಕ್ತಾಧಿಗಳು ಪಾಲ್ಗೊಂಡಿದ್ದರು. ರಾತ್ರಿ 'ಭೀಷ್ಮ ವಿಜಯ-ಕೃಷ್ಣಾರ್ಜುನ ಕಾಳಗ' ಯಕ್ಷಗಾನ ನಡೆಯಿತು.



ನೀರು ಸಂರಕ್ಷಣೆ ತಜ್ಞ ಉಪನ್ಯಾಸ ಯಶಸ್ವಿ

ಹಳಿಯಾಳ : ಕೆಎಲ್ಎಸ್ ವಿಡಿಐಟಿ ಹಳಿಯಾಳದ ಸಿವಿಲ್ ವಿಭಾಗವು ನೀರು ಸಂರಕ್ಷಣೆ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮ ಗುರುವಾರ ಹಮ್ಮಿಕೊಂಡಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಅಲ್ಟ್ರಾಟೆಕ್ ಸಿಮೆಂಟ್ ಪ್ರೈ. ಲಿ ನ ಉಕ ಹಾಗೂ ಗೋವಾ ಭಾಗದ ತಾಂತ್ರಿಕ ಮುಖ್ಯಸ್ಥ ಅಶೋಕ ರೆಡ್ಡಿ ಕೊಲ್ಲೂರ್ ಆಗಮಿಸಿದ್ದರು. ನೀರು ಅತ್ಯಮೂಲ್ಯ ಸಂಪತ್ತಾಗಿದ್ದು, ಜಾಗರುಕತೆಯಿಂದ ಅಪವ್ಯಯ ವಾಗದಂತೆ ಬಳಸಬೇಕು ಎಂದರು.

ನೀರಿನ ಸಂರಕ್ಷಣೆ ಗೆ ಬಳಕೆ ಮಾಡಲಾಗುತ್ತಿರುವ ನೂತನ ತಂತ್ರಜ್ಞಾನದ ಕುರಿತಾಗಿ ತಿಳಿಸಿದರು. ಕೊಳಚೆ ನೀರಿನ ಮರುಶುದ್ದಿಕರಣ ಹಾಗೂ ಸಮರ್ಪಕ ಬಳಕೆ ತಿಳಿಸುತ್ತ, ಭೂಮಿಯಲ್ಲಿ ಅಂತರ್ಜಲ ಹೆಚ್ಚಿಸಲು ತೆಗೆದುಕೊಳ್ಳಬೇಕಾದ ಉಪಕ್ರಮದ ಕುರಿತಾಗಿ ಬೆಳಕು ಚೆಲ್ಲಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾ. ಡಾ. ವಿ.ಎ ಕುಲಕರ್ಣಿ ಮಹಾವಿದ್ಯಾಲಯವು ಅಂತರ್ಜಲ ಸಮೃದ್ಧಿಕರಣಕ್ಕೆ ಮಳೆ ಕೊಯ್ಲು ಅಳವಡಿಸಿ ಕೊಂಡಿದೆ ಎಂದರು. ಅಲ್ಟ್ರಾಟೆಕ್ ಸಿಮೆಂಟ್ ನ ಗಿರೀಶ್ ಪವಾರ್ ಹಾಗೂ ಪ್ರಸನ್ನ ಉಪ್ಪಿನ್ ಉಪಸ್ಥಿತರಿದ್ದರು.

ಕಾಂಕ್ರೀಟ್ ಟೆಕ್ನಾಲಜಿ ವಿಷಯದಲ್ಲಿ ಅತೀ ಹೆಚ್ಚು ಅಂಕಗಳಿಸಿದ ಅಭಿಷೇಕ್ ಯಂತೂರ್ ಗೆ ಅಲ್ಟ್ರಾಟೆಕ್ ವತಿಯಿಂದ ಇದೇ ಸಂಧರ್ಭದಲ್ಲಿ ಸನ್ಮಾನಿಸಲಾಯಿತು.

ವಿಭಾಗ ಮುಖ್ಯಸ್ಥ ಪ್ರೊ. ಹರ್ಷ ಜಾಧವ ಸ್ವಾಗತಿಸಿದರು. ಡಾ ಸ್ನೇಹಾ ಕುಲಕರ್ಣಿ ಮತ್ತು ಪ್ರೊ. ಸೀಮಾ ಬಸರಿಕಟ್ಟಿ ಕಾರ್ಯಕ್ರಮ ಸಂಯೋಜಿಸಿದ್ದರು. 180ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಉಪಸ್ಥಿತರಿದ್ದರು.



ಹರ್ಷಾ ತಂಡಕ್ಕೆ ಚಾಂಪಿಯನ್ ಟ್ರೋಫಿ

ಮುಂಡಗೋಡ: ತಾಲೂಕಿನ ಇಂದೂರ ಗ್ರಾಮದಲ್ಲಿ ಇಂದೂರ ಪ್ರಿಮಿಯರ ಲೀಗ್ ಗುರುವಾರ ಮುಕ್ತಾಯಗೊಂಡ (ಐಪಿಎಲ್) 7ನೇ ಆವೃತ್ತಿಯ ಕ್ರಿಕೆಟ್ ಟೂರ್ನಾಮೆಂಟ್‌ನಲ್ಲಿ ಹರ್ಷಾ ಕ್ರಿಕೆಟರ್ಸ್ ತಂಡವು ಚಾಂಪಿಯನ್ ಆಗಿ ಟ್ರೋಫಿ ತಮ್ಮದಾಗಿಸಿಕೊಂಡರು.

ಮೊದಲು ಬ್ಯಾಟಿಂಗ್ ಮಾಡಿದ ಹರ್ಷಾ ಕ್ರಿಕೆಟರ್ಸ್ ತಂಡವು ನಿಗದಿತ ಹತ್ತು ಓವರಗಳಲ್ಲಿ 88 ರನ್‌ಗಳನ್ನು ಕಲೆ ಹಾಕಿತು. ಪ್ರೀತಮ್ ಸಿಂಗ್ ಪಂದ್ಯ ಪುರುಷೋತ್ತಮ ಹಾಗೂ ಪ್ರಜ್ವಲ ಕಮ್ಮಾರ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು. ಹರ್ಷಾ ಕ್ರಿಕೆಟರ್ಸ್, ಅನಿಶ್ ಕ್ರಿಕೆಟರ್ಸ್, ನೇಗಿಲ ಯೋಗಿ, ಎಂಬಿಡಿ ಬಾಯ್ಸ್, ವಿಠಲ ವಾರಕರಿ, ವಾಯುಪುತ್ರ ವಾರಿಯರ್ಸ್, ನೂರ್ ಕನಸ್ಟ್ರಕ್ಷನ್, ಶ್ರೇಯಾ ಕ್ರಿಕೆಟರ್ಸ್ ತಂಡಗಳು ಈ ಆವೃತ್ತಿಯಲ್ಲಿ ಪಾಲ್ಗೊಂಡಿದ್ದವು. ರಾಮಕೃಷ್ಣ ಘಟಕಾಂಬಳೆ, ಸಿದ್ದಪ್ಪ ಹಡಪದ, ಕೆಂಜೋಡಿ ಗಲಬಿ, ಯಲ್ಲಪ್ಪ ಕದಂ, ನಿಜಗುಣಯ್ಯ ಪೂಜಾರ, ದೇವೇಂದ್ರ ಕೆಂಚಗೊಣ್ಣವರ, ಚಂದ್ರಶೇಖರ ನಡಗೇರಿ, ವಿರುಪಾಕ್ಷ ಪಾಟೀಲ, ಮೋನ್ಸಿ ಥಾಮಸ್, ಅಕ್ಬರ ಚಾಕಲಬ್ಬಿ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.



ಮೇ 10ರಂದು ಹೇಮರೆಡ್ಡಿ ಮಲ್ಲಮ್ಮ ಜಯಂತಿ

ಕಾರವಾರ: ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಮೇ 10ರಂದು ಬೆಳಗ್ಗೆ 10 ಗಂಟೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.ಕಾರ್ಯಕ್ರಮವನ್ನು ಮೀನುಗಾರಿಕೆ ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್.ವೈದ್ಯ ಉದ್ಘಾಟಿಸಲಿದ್ದು, ಕರ್ನಾಟಕ ರಾಜ್ಯ ಮಾರ್ಕೇಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವಟೈಸಿಂಗ್ ಅಧ್ಯಕ್ಷ ಹಾಗೂ ಶಾಸಕ ಸತೀಶ್ ಕೆ. ಸೈಲ್ ಅಧ್ಯಕ್ಷತೆ ವಹಿಸಲಿದ್ದಾರೆ.ವಿಪ ಸಭಾಪತಿ ಬಸವರಾಜ ಹೊರಟ್ಟಿ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಆರ್.ವಿ. ದೇಶಪಾಂಡೆ, ಶಿವರಾಮ್ ಹೆಬ್ಬಾರ್, ದಿನಕರ್ ಶೆಟ್ಟಿ, ಭೀಮಣ್ಣ ಟಿ. ನಾಯ್ಕ, ವಿಪ ಸದಸ್ಯರಾದ ಎಸ್.ವಿ ಸುಂಕನೂರು, ಶಾಂತರಾಮ ಬುಡ್ನ ಸಿದ್ದಿ, ಡಿ. ಗಣಪತಿ ಉಳ್ವೇಕರ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.ಹಿಂದೂ ಹೈಸ್ಕೂಲ್‌ನ ಶಿಕ್ಷಕಿ ವನಿತಾ ಶೇಟ್ ಹೇಮರೆಡ್ಡಿ ಮಲ್ಲಮ್ಮನವರ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸಂಸ್ಥೆಗಳ ಸಂಘದ ಜಿಲ್ಲಾ ಸಮನ್ವಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅವಾಚ್ಯ ಶಬ್ದಗಳಿಂದ ನಿಂದನೆ, ಬೆದರಿಕೆ ಪ್ರಕರಣ ನ್ಯಾಯವಾದಿ ನಾಗರಾಜ ನಾಯಕ ಧರಣಿ

ಅಂಕೋಲಾ: ಇಲ್ಲಿಯ ವಂದಿಗೆಯಲ್ಲಿ ಯಕ್ಷಗಾನ ಕಾರ್ಯಕ್ರಮವೊಂದರ ಸಭಾ ವೇದಿಕೆಯಲ್ಲಿ ನ್ಯಾಯವಾದಿ ನಾಗರಾಜ ನಾಯಕ ಅತಿಥಿಯಾಗಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ಕೆಲವರು ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿರುವ ಘಟನೆ ಈಗ ನಗರದಲ್ಲಿ ಸಂಘರ್ಷಕ್ಕೆ ಕಾರಣವಾಗಿದೆ.

ಘಟನೆಯಹಿನ್ನೆಲೆಯಲ್ಲಿ ನ್ಯಾಯವಾದಿ ನಾಗರಾಜ ನಾಯಕ ಪೊಲೀಸ್ ಠಾಣೆಯ ಹೊರಭಾಗದಲ್ಲಿ ಧರಣಿ ನಡೆಸಿದ್ದು, ನ್ಯಾಯ ಸಿಗುವವವರೆಗೆ ಪ್ರತಿಭಟನೆ ನಡೆಸುವುದಾಗಿ ಹೇಳಿದ್ದಾರೆ. ಸ್ಥಳದಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠ ದೀಪನ್.ಎಂ.ಎನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ,ಡಿ.ವೈ.ಎಸ್ .ಪಿ ಗಿರೀಶ್ ಸ್ಥಳಕ್ಕೆ ಭೇಟಿ ನೀಡಿದರು.

ಘಟನೆ ವಿವರ :

ವಂದಿಗೆಯಲ್ಲಿ ಹಿರಿಯ ಯಕ್ಷಗಾನ ಕಲಾವಿದರ ಸ್ಮರಣಾರ್ಥ ಆಯೋಜಿಸಲಾಗಿದ್ದ ಯಕ್ಷಗಾನ ಕಾರ್ಯಕ್ರಮದ ವೇದಿಕೆಯಲ್ಲಿ ಅತಿಥಿಯಾಗಿ ಮಾತನಾಡುತ್ತಿರುವ ಸಂದರ್ಭದಲ್ಲಿ ಮಂಜುನಾಥ ಗಣಪತಿ ನಾಯಕ, ನಾರಾಯಣ ಹರೀಶ ನಾಯಕ, ಹರೀಶ ಬೀರಣ್ಣ ನಾಯಕ ಮತ್ತು ಪ್ರೀತಂ ಗೋಪಾಲ ನಾಯಕ ಎನ್ನುವವರು ಅವಾಚ್ಯ ಶಬ್ದಗಳಿಂದ ಬಯ್ದು ಬೆದರಿಕೆ ಹಾಕಿರುವುದಾಗಿ



ನಾಗರಾಜ ನಾಯಕ ದೂರಿದ್ದಾರೆ. ಗೃಹ ಸಚಿವರ ಆಪ್ತ ಗೋಪಾಲಕೃಷ್ಣ ನಾಯಕ ಮತ್ತು ಸೂರಜ ನಾಯಕ ಎನ್ನುವವರ ಚಿತಾವಣೆಯಿಂದ ಆಪಾದಿತರು ಈ ಕೃತ್ಯ ನಡೆಸಿದ್ದಾರೆ ಮತ್ತು ವಕೀಲರ ರಕ್ಷಣಾ ಕಾಯ್ದೆಯ ಉಲ್ಲಂಘನೆ ಮಾಡಲಾಗಿದೆ ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ದೂರು ನೀಡುವ ಸಂದರ್ಭದಲ್ಲಿ ತಮ್ಮ ಜೊತೆಗಿದ್ದವರ ಮೇಲೆ ಪ್ರಕರಣ ದಾಖಲಿಸುವ ಯತ್ನ ನಡೆದಿದೆ ಎಂದು ಆರೋಪಿಸಿ ಮಧ್ಯರಾತ್ರಿಯ ನಂತರ ನಾಗರಾಜ ನಾಯಕ ಪೊಲೀಸ್ ಠಾಣೆಯ ಎದುರು ಧರಣಿ ಆರಂಭಿಸಿದ್ದು ಬೆಳಿಗ್ಗೆ ಕುಮಟಾ ಶಾಸಕ ದಿನಕರ ಶೆಟ್ಟಿ ಮುತ್ತಿತರರು ಧರಣಿಯಲ್ಲಿ ಪಾಲ್ಗೊಂಡು ಬೆಂಬಲ ನೀಡಿದ್ದಾರೆ. ಸಂಜೆಯ ಹೊತ್ತಿಗೆ

ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಮತ್ತು ವಕೀಲರ ರಕ್ಷಣಾ ಕಾಯ್ದೆ ಉಲ್ಲಂಘನೆ ಕಲಂ 4 ರ ಅನ್ವಯ ಅಂಕೋಲಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಪ್ರಮಾಣಕ್ಕೆ ಬರಲಿ: ಗೋಪಾಲಕೃಷ್ಣ

ಈ ಘಟನೆ ಮತ್ತು ಪ್ರಕರಣದ ಹಿನ್ನೆಲೆಯಲ್ಲಿ ಪ್ರತಿ ಹೇಳಿಕೆ ನೀಡಿರುವ ಕೆಪಿಸಿಸಿ ಮಾಜಿ ಕಾರ್ಯದರ್ಶಿ ಗೋಪಾಲಕೃಷ್ಣ ನಾಯಕ , ನಾನು ಈ ಘಟನೆ ನಡೆದ ಸಂದರ್ಭದಲ್ಲಿ ಊರಿನಲ್ಲಿ ಇಲ್ಲ. ವೈದ್ಯಕೀಯ ಚಿಕಿತ್ಸೆಗಾಗಿ ಬೆಂಗಳೂರಿನಲ್ಲಿ ಇದ್ದೇನೆ. ಘಟನೆಯ ನಂತರದಲ್ಲಿ ನನಗೆ ಮಾಹಿತಿ ಬಂತು ಎಂದು ಹೇಳಿದ್ದಾರೆ. ಈ ಘಟನೆಯಲ್ಲಿ ಭಾಗಿಯಾದವರು ನನ್ನ ಆತ್ಮೀಯರೇ. ಆದರೆ ಈ ಕೃತ್ಯದಲ್ಲಿ ನನ್ನ ಪಾತ್ರ ಎಳ್ಳಷ್ಟು ಇಲ್ಲ. ಈ ಬಗ್ಗೆ ನಾನು ಧರ್ಮಸ್ಥಳ ಸಹಿತ ಯಾವುದೇ ದೇವಸ್ಥಾನಕ್ಕೆ ಬಂದು ಪ್ರಮಾಣ ಮಾಡಲು ಸಿದ್ಧ, ನಾಗರಾಜ ನಾಯಕರೂ ಸಹ ಬಂದು ಪ್ರಮಾಣ ಮಾಡಲಿ ಎಂದು ಸವಾಲು ಹಾಕಿದ್ದಾರೆ.

ಕನ್ನಡ ಉಳಿಸಿ ಬೆಳೆಸಿ: ಹೆಗಡೆ



ಹೊನ್ನಾವರ: ಕನ್ನಡವನ್ನು ಉಳಿಸಿ ಬೆಳೆಸಿ ಸಮೃದ್ಧಿಗೊಳಿಸುವ ಉದ್ದೇಶಕ್ಕಾಗಿ ಸ್ಥಾಪನೆಯಾಗಿರುವ ಸಾಹಿತ್ಯ ಪರಿಷತ್ತು ಸಾಹಿತ್ಯ ಬೆಳವಣಿಗೆಗೆ ಪೂರಕವಾಗಿ ಉಪಯುಕ್ತ ಕಾರ್ಯ ಮಾಡುತ್ತಾ ಬಂದಿದೆ ಎಂದು ಎಂ.ಎಸ್.ಹೆಗಡೆ ಗುಣವಂತೆ ಹೇಳಿದರು.

ತಾಲೂಕಿನ ಕೆರೆಕೋಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ವತಿಯಿಂದ ಆಯೋಜಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಪಾಲ್ಗೊಂಡು ಅವರು ಮಾತನಾಡಿದರು. ಸಾಹಿತಿ ಮಾಧವಿ ಭಂಡಾರಿ ಮಾತನಾಡಿದರು. ಸಾಹಿತಿ ಸುಮುಖಾನಂದ ಜಲವಳ್ಳಿ ಕಸಾಪ ಅಧ್ಯಕ್ಷ ಎಸ್.ಎಚ್. ಗೌಡ, ಕನ್ನಡಪರ ಸಂಘಟನೆಗಳ ಪ್ರದೀಪ ಶೆಟ್ಟಿ, ಮಂಜುನಾಥ ಗೌಡ, ಗಣೇಶ ಭಂಡಾರಿ ಮಾತನಾಡಿದರು. ನಾರಾಯಣ ಹೆಗಡೆ, ಸದಸ್ಯರಾದ ಜನಾರ್ಧನ ಕಾಣಕೋಣಕರ, ಎಂ ಡಿ ಹರಿಕಾಂತ, ಸಾಧನಾ ಬರ್ಗಿ, ಶುಭಾ ಸಭಾಹಿತ, ಜ್ಯೋತಿ ಶೆಟ್ಟಿ ಇದ್ದರು.

ಮಹೇಶ ಭಂಡಾರಿ ನಿರ್ವಹಿಸಿದರು. ಕೇಶವ ಶೆಟ್ಟಿ ಸ್ವಾಗತಿಸಿದರು. ಮಂಜುನಾಥ ಶೆಟ್ಟಿ ವಂದಿಸಿದರು.

ಅರಣ್ಯ ಇಲಾಖೆ ಅಧಿಕಾರಿ,ಸಿಬ್ಬಂದಿ ವಿರುದ್ಧ ದೂರು

ಮುಂಡಗೋಡ: ಹಳೆಯ ಮನೆಯ ಕಟ್ಟಿಗೆ ಪಂಚನಾಮೆ ಮಾಡಿ ಕೊಡಲು 10 ಸಾವಿರ ರೂ. ಕೇಳಿದ ಅರಣ್ಯ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ರೈತನೊಬ್ಬ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದಾನೆ.

ತಾಲೂಕಿನ ಉಗ್ಗಿನಕೇರಿ ಗ್ರಾಮದ ರಮೇಶ ವಾಲ್ಮೀಕಿ ಎಂಬುವರೇ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ ರೈತ. ಗುಂಜಾವತಿ ಉಪವಲಯ ಅರಣ್ಯಾಧಿಕಾರಿ ಬಸವರಾಜ ಯಾದವಾಡ ಹಾಗೂ ಯರೇಬೈಲ್ ಅರಣ್ಯ ರಕ್ಷಕ ನಿಸಾರ್ ಪಾಶಾ ರೈತನ ಬಳಿ ಹಣ ಕೇಳಿದವರು.

ಘಟನೆ ವಿವರ: ರಮೇಶ ವಾಲ್ಮೀಕಿ ವಾಸವಿರುವ ಮನೆ ತೀರಾ ಹಳೆಯದಾಗಿತ್ತು. ಅದನ್ನು ತೆರವುಗೊಳಿಸಿ ಹೊಸದಾಗಿ ಮನೆ ಕಟ್ಟಲು ಆ ಮನೆಯಲ್ಲಿನ ಹಳೆಯ ಕಟ್ಟಿಗೆ ಹಾಗೂ ಮನೆಗೆ ಅಳವಡಿಸಿದ ಕಟ್ಟಿಗೆಗಳ ಕೆತ್ತನೆ ಕೆಲಸವನ್ನು ಮಾಡಲು ಅರಣ್ಯ ಇಲಾಖೆಯ ಅನುಮತಿಗಾಗಿ ರಮೇಶ ಅರ್ಜಿ ಸಲ್ಲಿಸಿದ್ದರು. ಉಪವಲಯ ಅರಣ್ಯಾಧಿಕಾರಿ ಬಸವರಾಜ ಯಾದವಾಡ ಮತ್ತು ಅರಣ್ಯ ರಕ್ಷಕ ನಿಸಾರ್ ಪಾಶಾ ಇಬ್ಬರೂ ರಮೇಶ ಅವರ ಮನೆಗೆ ಬಂದು ಹಳೆಯ ಕಟ್ಟಿಗೆಗಳ ಅಳತೆ ಮಾಡಿಕೊಂಡು ಹೋಗಿ ಗುಂಜಾವತಿ ಅರಣ್ಯ ಕಚೇರಿಗೆ ತನ್ನನ್ನು ಕರೆದು 10 ಸಾವಿರ ರೂ. ಕೊಟ್ಟರೆ ಮಾತ್ರ ಅನುಮತಿ ನೀಡುತ್ತೇವೆ ಎಂದರು. ಆಗ ತನ್ನ ಬಳಿ ಹಣವಿಲ್ಲ ಎಂದು ರಮೇಶ ಹೇಳಿದ್ದಾರೆ.ನಂತರ ಮಾರನೇ ದಿನ ನಿಸಾರ್ ಪಾಶಾ ಮತ್ತೆ ತನ್ನ ಮನೆಗೆ ಬಂದು 8ಸಾವಿರ ರೂ. ಕೊಡು ಪರವಾನಿಗೆ ಕೊಡುತ್ತೇವೆ ಹಣ ಕೊಡದಿದ್ದರೆ ಅನುಮತಿ ಕೊಡುವುದಿಲ್ಲ ಎಂದು ಹೇಳಿದ್ದಾನೆ.ನಂತರ ತಾನು ಕಾರವಾರ ಲೋಕಾಯುಕ್ತ ಪೊಲೀಸ್ ಗೆ ದೂರು ಸಲ್ಲಿಸಿದ್ದಾಗಿ ರೈತ ರಮೇಶ ವಾಲ್ಮೀಕಿ ತಿಳಿಸಿದ್ದಾರೆ. ದೂರು ದಾಖಲಿಸಿಕೊಂಡ ಪೊಲೀಸರು ಉಪವಲಯ ಅರಣ್ಯಾಧಿಕಾರಿ ಬಸವರಾಜ ಯಾದವಾಡ ಮತ್ತು ಅರಣ್ಯ ರಕ್ಷಕ ನಿಸಾರ್ ಪಾಶಾ ಇಬ್ಬರಿಗೂ ನೋಟೀಸ್ ನೀಡಿದ್ದಾರೆ.

ಕಿರುಸುದ್ದಿ

ನಾಳೆ ಸಾಧಕ ವಿದ್ಯಾರ್ಥಿಗಳಿಗೆ ಪುರಸ್ಕಾರ



ಹಾನಗಲ್ಲ: ಇಲ್ಲಿನ ಪಿಎಂಶ್ರೀ ಶಾಸಕರ ಮಾದರಿ ಶಾಲೆಯ ಆವರಣದಲ್ಲಿ ಮೇ 9ರಂದು ಬೆಳಗ್ಗೆ 9.30 ಗಂಟೆಗೆ ಶಾಸಕ ಶ್ರೀನಿವಾಸ ಮಾನೆ ಅವರ ನೇತೃತ್ವದಲ್ಲಿ 3 ನೇ ವರ್ಷದ ಸಾಧನೆ ಸಂಭ್ರಮ ಸಾಧಕ ವಿದ್ಯಾರ್ಥಿಗಳಿಗೆ ಪುರಸ್ಕಾರ ಸಮಾರಂಭ ಆಯೋಜಿಸಲಾಗಿದೆ. ಸಮಾರಂಭದಲ್ಲಿ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ, ಬಿಇಡಿ, ಸ್ನಾತಕೋತ್ತರ ಪದವಿ, ಎನ್‌ಎಂಎಂಎಸ್ ಪರೀಕ್ಷೆಗಳಲ್ಲಿ ಸಾಧನೆ ತೋರಿದ ತಾಲೂಕಿನ 400 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ 5 ಲಕ್ಷ ರೂ.ಗೂ ಅಧಿಕ ನಗದು ಬಹುಮಾನದೊಂದಿಗೆ ಪುರಸ್ಕರಿಸಲಾಗುವುದು. ಶಾಸಕ ಶ್ರೀನಿವಾಸ ಮಾನೆ ಪುರಸ್ಕಾರ ನೀಡಲಿದ್ದು, ಪರಿವರ್ತನ ಕಲಿಕಾ ಕೇಂದ್ರದ ಅಧ್ಯಕ್ಷೆ ಸ್ವಾತಿ ಮಾಳಗಿ, ಆಡಳಿತಾಧಿಕಾರಿ ಮಾರುತಿ ಶಿಡ್ಲಾಪೂರ, ರಾಣೇಬೆನ್ನೂರಿನ ಸಂಜೀವಿನಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರಭುಲಿಂಗ ಕೋಡದ, ಬಿಇಒ ಆರ್.ವಿ.ಚಿನ್ನಿಕಟ್ಟಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಮೇ-ಜೂನ್ ಪಡಿತರ ವಿತರಣೆ

ಹಾವೇರಿ: ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಪಡಿತರ ಆಹಾರ ಧಾನ್ಯಗಳನ್ನು ಪೂರೈಸುತ್ತಿದ್ದು, ಮೇ ಹಾಗೂ ಜೂನ್ ಎರಡು ಮಾಹೆಗಳಿಗೆ ಜಿಲ್ಲೆಯ ಅಂತ್ಯೋದಯ ಅನ್ನ ಪಡಿತರ ಚೀಟಿ, ಪಿಎಚ್‌ಎಚ್ (ಬಿಪಿಎಲ್) ಪಡಿತರ ಚೀಟಿದಾರರಿಗೆ ಪಡಿತರ ಆಹಾರಧಾನ್ಯವನ್ನು ವಿತರಣೆ ಮಾಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.

ಮೇ ಹಾಗೂ ಜೂನ್ ಮಾಹೆಗೆ ಸಂಬಂಧಿಸಿದಂತೆ ಅಂತ್ಯೋದಯ ಪಡಿತರ ಚೀಟಿ (ಪ್ರತಿ ಕಾರ್ಡಿಗೆ) 35 ಕೆಜಿ+ 35 ಕೆಜಿ ಸೇರಿ 70 ಕೆ.ಜಿ. ಅಕ್ಕಿ ಹಾಗೂ ಆದ್ಯತಾ (ಬಿಪಿಎಲ್) ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ (ರಾಜ್ಯ ಮತ್ತು ಕೇಂದ್ರ ವರ್ಗದಡಿಯ ಪಡಿತರ ಕಾರ್ಡುಗಳಿಗೆ) 5.ಕೆ.ಜಿ + 5 ಕೆ.ಜಿ ಸೇರಿ 10 ಕೆ.ಜಿ ಅಕ್ಕಿ ವಿತರಣೆ ಮಾಡಲಾಗುತ್ತದೆ.

ಮೇ-2026ನೇ ಮಾಹೆಯಲ್ಲಿ ಕೇಂದ್ರ ವ್ಯಾಪ್ತಿ ಅಂದರೆ, ಎನ್.ಎಫ್.ಎಸ್.ಎ ವರ್ಗದಡಿ ಮೇ ಮತ್ತು ಜೂನ್-2026 ಎರಡೂ ಮಾಹೆಗಳ ಪಡಿತರ ಆಹಾರಧಾನ್ಯವನ್ನು ವಿತರಿಸಲಾಗುತ್ತಿದ್ದು, ಎಲ್ಲ ಅರ್ಹ ಫಲಾನುಭವಿಗಳು ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಲ್ಲಿ ಎರಡೂ ಮಾಹೆಗಳಿಗೆ ಸಂಬಂಧಿಸಿದಂತೆ ಮಾಹೆವಾರು ಪ್ರತ್ಯೇಕವಾಗಿ ಬೆರಳಚ್ಚು ನೀಡಿ ಪಡಿತರ ಪಡೆಯಬೇಕು ಎಂದು ತಿಳಿಸಿದ್ದಾರೆ.

ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ : ದೇವಗಿರಿ ಬ್ಯಾಂಕ್ ಆಫ್ ಬರೋಡಾ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ಮೇ 18ರಿಂದ 29ರವರೆಗೆ 12 ದಿನಗಳ ಉಚಿತ ಫಾಸ್ಟ್ ಫುಡ್ ಸ್ಟಾಲ್ ಉದ್ಯಮಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಊಟ ವಸತಿ ಸಹಿತ ತರಬೇತಿಯು ಉಚಿತವಾಗಿರುತ್ತದೆ. ಹಾವೇರಿ ಜಿಲ್ಲೆಯ ಗ್ರಾಮೀಣ ಭಾಗದ ರೇಷನ್ ಕಾರ್ಡ್ ಹೊಂದಿವರಿಗೆ ಮಾತ್ರ ತರಬೇತಿಗೆ ಅವಕಾಶವಿರುತ್ತದೆ. 18ರಿಂದ 50 ವಯೋಮಿತಿಯ ಯುವಕರು ಮೇ 12ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗದಗ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಹೊಸದಾಗಿ ಮಂಜೂರಾಗಿರುವ ಮಹಿಳಾ ಪದವಿಪೂರ್ವ ಕಾಲೇಜು, ಗದಗ ಇಲ್ಲಿ ಪ್ರಥಮ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಉರ್ದು, ವಿಜ್ಞಾನ ವಿಭಾಗಕ್ಕೆ (ಭೌತಶಾಸ್ತ್ರ ರಸಾಯನಶಾಸ್ತ್ರ, ಗಣಿತ ಹಾಗೂ ಜೀವಶಾಸ್ತ್ರ) ವಾಣಿಜ್ಯ ವಿಭಾಗಕ್ಕೆ (ಕಂಪ್ಯೂಟರ್ ವಿಜ್ಞಾನ, ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ ಮತ್ತು ಲೆಕ್ಕಶಾಸ್ತ್ರ) ಕಲಾ ವಿಭಾಗಕ್ಕೆ (ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ) ವಿಷಯಗಳನ್ನು ಬೋಧಿಸಲು ಅರ್ಹ ಅತಿಥಿ ಉಪನ್ಯಾಸಕರು ಅವಶ್ಯವಿದ್ದು, ಅರ್ಹ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಮೇ 15 ರೊಳಗಾಗಿ ತಮ್ಮ ಶೈಕ್ಷಣಿಕ ದಾಖಲಾತಿಗಳನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ ಭವನ, ಜಿಲ್ಲಾ ನ್ಯಾಯಾಲಯದ ಎದುರುಗಡೆ, ಹುಬ್ಬಳ್ಳಿ ರೋಡ್, ಗದಗ ಕಛೇರಿಗೆ ಖುದ್ದು ಭೇಟಿ ನೀಡಿ ಅರ್ಜಿ ಸಲ್ಲಿಸಲು ಅಲ್ಪಸಂಖ್ಯಾಂತರ ಕಲ್ಯಾಣ ಇಲಾಖೆಯ ಅಧಿಕಾರಿ ಅಮಿತ ಬಿದರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾವೇರಿ: ಬ್ಯಾಡಗಿ ವಿಧಾನಸಭಾ ಕ್ಷೇತ್ರದ ಹಾವೇರಿ ತಾಲೂಕಿನ ಕುರುಬಗೊಂಡ, ದೇವಿಹೊಸೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ 2.49ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬಸವರಾಜ ಶಿವಣ್ಣನವರ ಗುರುವಾರ ಚಾಲನೆ ನೀಡಿದರು.

ವಿವಿಧ ಕಾಮಗಾರಿಗೆ ಶಾಸಕ ಭೂಮಿಪೂಜೆ

ಹಾವೇರಿ: ಬ್ಯಾಡಗಿ ವಿಧಾನಸಭಾ ಕ್ಷೇತ್ರದ ಹಾವೇರಿ ತಾಲೂಕಿನ ಕುರುಬಗೊಂಡ, ದೇವಿಹೊಸೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ 2.49ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬಸವರಾಜ ಶಿವಣ್ಣನವರ ಗುರುವಾರ ಚಾಲನೆ ನೀಡಿದರು.

ಕುರುಬಗೊಂಡ ಗ್ರಾಮದಲ್ಲಿ 30ಲಕ್ಷ ರೂ., ವೆಚ್ಚದಲ್ಲಿ ಕುರುಬಗೊಂಡ-ಹೊಂಬರಡಿ ರಸ್ತೆ ಅಭಿವೃದ್ಧಿ, 30ಲಕ್ಷ ರೂ., ವೆಚ್ಚದಲ್ಲಿ ಕರುಬಗೊಂಡದಿಂದ ಬ್ಯಾಡಗಿ ರಸ್ತೆ, 75ಲಕ್ಷ ರೂ., ವೆಚ್ಚದಲ್ಲಿ ಕಬ್ಬೂರು ತಾಂಡಾದಿಂದ ಸೂಡಂಬಿ ರಸ್ತೆಯವರೆಗೆ ಮುಂದುವರೆದ ಕಾಮಗಾರಿ, 80ಲಕ್ಷ ರೂ., ವೆಚ್ಚದಲ್ಲಿ ಎಂ.ಎ. ತಿಮ್ಮಾಪುರದಿಂದ ಶಿವಾಜಿನಗರ ತಾಂಡಾ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಿದರು. ದೇವಿಹೊಸೂರು ಗ್ರಾಮದ ಆಯುಷ್ಮಾನ್ ಆರೋಗ್ಯ ಮಂದಿರದಲ್ಲಿ 5ಲಕ್ಷ ರೂ., ಶಾಸಕರ ಅನುದಾನದಲ್ಲಿ ನಿರ್ಮಿಸಿರುವ ಊಟದ ಹಾಲ್‌ನ್ನು ಉದ್ಘಾಟಿಸಿದರು.

ದೇವಿಹೊಸೂರು ಗ್ರಾಮದ ಸರ್ಕಾರಿ ಉರ್ದು ಪ್ರೌಢ ಶಾಲೆಯಲ್ಲಿ 14ಲಕ್ಷ ರೂ., ವೆಚ್ಚದಲ್ಲಿ ಕೊಠಡಿ ನಿರ್ಮಾಣ ಕಾಮಗಾರಿಗೆ, 15ಲಕ್ಷ ರೂ., ವೆಚ್ಚದಲ್ಲಿ ದೇವಿಹೊಸೂರ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಸಿಸಿ ರಸ್ತೆ ಮತ್ತು ಸಿಸಿ ಗಟಾರ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಅಧಿಕಾರಿಗಳು ಹಾಜರಿದ್ದರು.



ಹಾವೇರಿ: ಡೊನೇಶನ್ ಹಾವಳಿ ವಿರೋಧಿಸಿ, ಜಿಲ್ಲಾ ಶಿಕ್ಷಣ ರೆಗುಲೇಟಿಂಗ್ ಪ್ರಾಧಿಕಾರವನ್ನು ರಚಿಸುವಂತೆ, ಶಾಲಾ ಕಾಲೇಜುಗಳಲ್ಲಿ ಡೊನೇಶನ್ ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳಲು ಆಗ್ರಹಿಸಿ ಎಸ್‌ಎಫ್‌ಐ ನೇತೃತ್ವದಲ್ಲಿ ಗುರುವಾರ ನಗರದ ಮಹಾತ್ಮಾ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ನರೇಗಾ ಯೋಜನೆಗೆ ವೇಗ: 370 ರೂ. ಕೂಲಿ

ಹಾವೇರಿ : ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಪರಿಣಾಮಕಾರಿಯಾಗಿ ಜಾರಿಯಾಗುತ್ತಿದ್ದು, ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಸ್ಥಳೀಯ ಮಟ್ಟದಲ್ಲೇ ಉದ್ಯೋಗಾವಕಾಶಗಳನ್ನು ಒದಗಿಸುವ ಮೂಲಕ ಗ್ರಾಮೀಣ ಆರ್ಥಿಕತೆಗೆ ಬಲ ತುಂಬಲಾಗುತ್ತಿದೆ ಎಂದು ಜಿಪಂ ಉಪ ಕಾರ್ಯದರ್ಶಿ ಡಾ.ಪುನಿತ್ ತಿಳಿಸಿದ್ದಾರೆ.

8,600 ಕೂಲಿಕಾರರು : ಜಿಲ್ಲೆಯ 223 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಈಗಾಗಲೇ ಸುಮಾರು 8,600ಕ್ಕೂ ಅಧಿಕ ಕೂಲಿಕಾರರು ವಿವಿಧ ಕಾಮಗಾರಿಗಳಲ್ಲಿ ತೊಡಗಿಸಿ ಕೊಂಡಿದ್ದಾರೆ. ಗ್ರಾಮಸ್ಥರಿಗೆ ಊರಿನಲ್ಲೇ ಕೆಲಸ ಸಿಗುತ್ತಿದ್ದು, ವಲಸೆ ಕಡಿಮೆಯಾಗುವ ಜೊತೆಗೆ ಕುಟುಂಬಗಳ ಆರ್ಥಿಕ ಸ್ಥಿತಿಗೂ ನೆರವಾಗುತ್ತಿದೆ. ನರೇಗಾ ಮುಖ್ಯ ಉದ್ದೇಶ ಗ್ರಾಮೀಣ ಕುಟುಂಬಗಳಿಗೆ ವರ್ಷಕ್ಕೆ ಕನಿಷ್ಠ 100 ದಿನಗಳ ಕೂಲಿ ಆಧಾರಿತ ಉದ್ಯೋಗ ಒದಗಿಸುವುದಾಗಿದೆ. ಜಿಲ್ಲೆಯಲ್ಲಿ ಈ ಯೋಜನೆಯಡಿ ಕೆರೆ ಅಭಿವೃದ್ಧಿ, ಮಳೆನೀರು ಸಂಗ್ರಹಣೆ, ತೋಟಗಾರಿಕೆ, ಹಳ್ಳಿಗಳ ರಸ್ತೆ ಅಭಿವೃದ್ಧಿ, ಶಾಲಾ ಆವರಣ ಸುಧಾರಣೆ, ಅಂಗನವಾಡಿ ಕಟ್ಟಡ ಸುತ್ತಮುತ್ತಲಿನ ಕಾಮಗಾರಿಗಳು, ನೀರು ಹರಿವಿನ ಕಾಲುವೆಗಳ ನಿರ್ಮಾಣ, ಗದ್ದೆ ಬದು ನಿರ್ಮಾಣ ಸೇರಿದಂತೆ ಹಲವು ಶಾಶ್ವತ ಆಸ್ತಿ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

26 ಸಾವಿರಕ್ಕೂ ಅಧಿಕ ಕಾಮಗಾರಿ : ಜಿಲ್ಲೆಯಲ್ಲಿ ಈಗಾಗಲೇ ಸುಮಾರು 26,000ಕ್ಕೂ ಅಧಿಕ ಕಾಮಗಾರಿಗಳಿಗೆ ಅನುಮೋದನೆಗೊಂಡಿದ್ದು, ಹಂತ ಹಂತವಾಗಿ ವಿವಿಧ ಗ್ರಾಪಂಗಳಲ್ಲಿ ಕಾಮಗಾರಿಗಳನ್ನು ಆರಂಭಿಸಲಾಗುತ್ತಿದೆ. ಉದ್ಯೋಗಕ್ಕಾಗಿ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಬೇಡಿಕೆ ಸಲ್ಲಿಸಲು ಅವಕಾಶವಿದ್ದು, ವಿಶೇಷವಾಗಿ ಮಹಿಳಾ ಕೂಲಿಕಾರರು, ಹಿರಿಯ ನಾಗರಿಕರು ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಈ ಯೋಜನೆ ಜೀವನೋಪಾಯದ ಪ್ರಮುಖ ಆಧಾರವಾಗುತ್ತಿದೆ.



ನಮೂನೆ 6 ಉದ್ಯೋಗಕ್ಕೆ ಬೇಡಿಕೆ

ಗ್ರಾಪಂ ಮಟ್ಟದಲ್ಲಿ ನೀಡುವುದನ್ನು ಸುಗಮಗೊಳಿಸಿದ್ದು, ಕೂಲಿಕಾರರು ತಮ್ಮ ಗ್ರಾಪಂನಲ್ಲಿ ನಮೂನೆ-6 ಸಲ್ಲಿಸುವ ಮೂಲಕ ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಬಹುದಾಗಿದೆ. ಅದೇ ರೀತಿ ಕಾರ್ಮಿಕ ಸಂಘಟನೆಗಳು ಸಹ ಕೂಲಿಕಾರರ ಪರವಾಗಿ ನಮೂನೆ-6 ಮೂಲಕ ಕೆಲಸದ ಬೇಡಿಕೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಬೇಡಿಕೆ ಬಂದ ತಕ್ಷಣ ತ್ವರಿತವಾಗಿ ಕೆಲಸ ಒದಗಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ರೂ.370 ಕೂಲಿ : ಪ್ರಸ್ತುತ ನರೇಗಾ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿಕಾರರಿಗೆ ಪ್ರತಿದಿನ ರೂ.370/- ಕೂಲಿ ನೀಡಲಾಗುತ್ತಿದೆ. ಸರ್ಕಾರದಿಂದ ನಿಗದಿಪಡಿಸಿದ ಈ ಕೂಲಿ ಮೊತ್ತ ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ಜಮೆಯಾಗಿ ಪಾರದರ್ಶಕತೆ ಮತ್ತು ಭದ್ರತೆ ಹೆಚ್ಚಿದೆ. ಗ್ರಾಮೀಣ ಪ್ರದೇಶದ ಜನರು ತಮ್ಮ ಊರಿನಲ್ಲಿಯೇ ಕೆಲಸ ಮಾಡಿ ಆದಾಯಗಳಿಸುವ ಮೂಲಕ ಕುಟುಂಬದ ಖರ್ಚುಗಳನ್ನು ನಿರ್ವಹಿಸಲು ಹಾಗೂ ಮಕ್ಕಳ ಶಿಕ್ಷಣ, ಆರೋಗ್ಯ ಸೇರಿದಂತೆ ಅನೇಕ ಅಗತ್ಯಗಳನ್ನು ಪೂರೈಸಿಕೊಳ್ಳಲು ನೆರವಾಗುತ್ತಿದೆ.

> ಗ್ರಾಮೀಣ ನಿರುದ್ಯೋಗ ಕಡಿಮೆ ಮಾಡಿ, ಜನರಿಗೆ ಆರ್ಥಿಕ ಭದ್ರತೆ ಒದಗಿಸುವಲ್ಲಿ ನರೇಗಾ ಮಹತ್ವದ ಪಾತ್ರ ವಹಿಸುತ್ತಿದೆ. ಹೆಚ್ಚಿನ ಮಾಹಿತಿ ಹಾಗೂ ಉದ್ಯೋಗಕ್ಕಾಗಿ ಸಂಬಂಧಿಸಿದ ಗ್ರಾಮ ಪಂಚಾಯತಿಯನ್ನು ಸಂಪರ್ಕಿಸಬಹುದಾಗಿದೆ. ಜೊತೆಗೆ ಸರ್ಕಾರದ ಉಚಿತ ಸಹಾಯವಾಣಿಗೆ ಕರೆಮಾಡಿ ಮಾಹಿತಿಯನ್ನು ಪಡೆಯಬಹುದು.
> ■ ಡಾ.ಪುನೀತ್, ಜಿಪಂ ಉಪಕಾರ್ಯದಶಿ

ಗ್ರಾಪಂಗಳಲ್ಲಿ ಉದ್ಯೋಗ ಮೇಳ, ಜಾಗೃತಿ ಸಭೆಗಳು ಹಾಗೂ ಮನೆಮನೆಗೆ ಮಾಹಿತಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಇದರ ಮೂಲಕ ಗ್ರಾಮೀಣ ಜನರಿಗೆ ನರೇಗಾ ಯೋಜನೆಯ ಸೌಲಭ್ಯಗಳ ಕುರಿತು ಅರಿವು ಮೂಡಿಸಲಾಗುತ್ತಿದೆ. ಗ್ರಾಮಸ್ಥರು ತಮ್ಮ ಹಕ್ಕಿನ ಉದ್ಯೋಗವನ್ನು ಪಡೆದು ಸರ್ಕಾರದ ಯೋಜನೆಯ ಸದುಪಯೋಗ ಪಡೆಯಬೇಕು. ನೀರಿನ ಸಂರಕ್ಷಣೆ, ಕೃಷಿ ಅಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆಗೂ ಈ ಯೋಜನೆ ಪೂರಕವಾಗಿದೆ. ಹೀಗಾಗಿ ರೈತರು ಮತ್ತು ಗ್ರಾಮೀಣ ಕಾರ್ಮಿಕರಿಗೆ ದೀರ್ಘಕಾಲಿನ ಲಾಭ ದೊರೆಯುತ್ತಿದೆ ಎಂದರು.

ಜಿಲ್ಲೆಯ ಹಲವೆಡೆ ವರುಣನ ಸಿಂಚನ

ಹಾವೇರಿ: ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಗುರುವಾರ ಮಧ್ಯಾಹ್ನ ಮೋಡ ಕವಿದ ವಾತಾವರಣ ಸೃಷ್ಟಿಯಾಗಿ ಅರ್ಧ ಗಂಟೆಗೂ ಹೆಚ್ಚು ಕಾಲ ಜೋರಾದ ಮಳೆ ಸುರಿಯಿತು.

ಕಳೆದ ಹಲವು ದಿನಗಳಿಂದ ಬಿರು ಬಿಸಿಲಿನ ತಾಪ, ಸೆಕೆ ಹೆಚ್ಚಳವಾಗಿದ್ದು, ಗುರುವಾರ ಮಧ್ಯಾಹ್ನ ಸುರಿದ ಮಳೆ ಧರೆಗೆ ತಂಪೆರೆಯಿತು. ಜಿಲ್ಲಾ ಕೇಂದ್ರ ಹಾವೇರಿ ನಗರದ ಕೆಲವು ಭಾಗಗಳಲ್ಲಿ ಬೆಳಗ್ಗೆಯೂ ಸ್ವಲ್ಪ ಮಳೆಯಾದರೆ, ಇನ್ನೂ ಕೆಲ ಭಾಗಗಳಲ್ಲಿ ತುಂತುರು ಮಳೆಯಾಯಿತು. ಮಧ್ಯಾಹ್ನ 12 ಗಂಟೆಯಿಂದ ಬಿಸಿಲಿನ ಝಳ ಹೆಚ್ಚಳವಾಗಿತ್ತು. ಸಂಜೆ ನಾಲ್ಕು ಗಂಟೆ ಹೊತ್ತಿಗೆ ಸುತ್ತಲೂ ಮೋಡ ಕವಿದು, ಅರ್ಧ ಗಂಟೆಗಳ ಕಾಲ ಗುಡುಗು, ಗಾಳಿ ಸಹಿತ ಜೋರಾದ ಮಳೆ ಸುರಿಯಿತು. ಬಿಸಿಲ ಬೇಗೆಗೆ ಬಸವಳಿದಿದ್ದ ನಗರದ ಜನತೆಗೆ ತಂಪೆರೆಯಿತು.

ಬೀದಿ ಪಾಲಾದ ತರಕಾರಿ: ಜಿಲ್ಲಾ ಕೇಂದ್ರ, ಹಾವೇರಿ ನಗರದಲ್ಲಿ ಸಂತೆ ದಿನವಾಗಿದ್ದ ಗುರುವಾರ ಲಾಲ್ ಬಹದ್ದೂರ ಶಾಸ್ತ್ರಿ ತರಕಾರಿ ಮಾರುಕಟ್ಟೆಯಲ್ಲಿ ಮಧ್ಯಾಹ್ನ ಸುರಿದ ಮಳೆ ಕೆಲಕಾಲ ಗೊಂದಲ ಸೃಷ್ಟಿಸಿತು. ತರಕಾರಿ ಮಾರುಕಟ್ಟೆಗೆ ವಿವಿಧ ಭಾಗಗಳಿಂದ ಆಗಮಿಸಿದ್ದ ವ್ಯಾಪಾರಸ್ಥರು ತರಕಾರಿ, ಬೀದಿ ಬದಿ ವ್ಯಾಪಾರಿಗಳು, ಹಣ್ಣು ಮಾರಾಟಗಾರರು ವ್ಯಾಪಾರ ವಹಿವಾಟು ನಡೆಸಲು ತಾಡಪತ್ರಿ ಕಟ್ಟಿಕೊಂಡಿದ್ದರೂ ಸಹ ಜೋರಾದ ಗಾಳಿಗೆ ತಾಡಪತ್ರಿ ಕಿತ್ತುಕೊಂಡವು. ಕೆಲವು ಗಾಳಿಗೆ ಹಾರಿ ಹೋದವು. ಬಳಿಕ ಸುರಿದ ಮಳೆಗೆ ಕಾಯಿಪಲ್ಯ, ತರಕಾರಿ, ಸೊಪ್ಪು ಮಳೆಯಲ್ಲಿ ತೊಯ್ದು ರಸ್ತೆಯಲ್ಲಿ ತೇಲಾಡಿದವು. ಟೊಮೆಟೊ, ಬದನೆಕಾಯಿ, ಮೆಣಸಿನಕಾಯಿ, ಈರುಳ್ಳಿ ಸೇರಿದಂತೆ ಹಲವು ತರಕಾರಿಗಳು ರಸ್ತೆ ಮೇಲೆ ತೇಲಿ ಚರಂಡಿ ಸೇರಿದವು.

ಇನ್ನೂ ಜಿಲ್ಲೆಯ ಕೆಲವು ಗ್ರಾಮೀಣ ಪ್ರದೇಶದಲ್ಲಿ ಮೋಡ ಮುಸುಕಿದ ವಾತಾವರಣ ಕಂಡು ಬಂದಿದ್ದು, ಬೆಳಗ್ಗೆ ಮತ್ತು ಸಂಜೆ ತುಂತುರು ಮಳೆಯಾಗಿದೆ. ಬೇಸಿಗೆಯಲ್ಲಿ ಕಟಾವು ಮಾಡಿಕೊಂಡು ಬಂದಿದ್ದ ಮೆಕ್ಕೆಜೋಳ ತೆನೆಯ ರಾಶಿಗಳಿಗೆ, ಮೇವಿನ ಬಣವಿಗಳಿಗೆ ತಾಡಪಾತ್ರಿ ಹೊದಿಸಿ ರಕ್ಷಣೆ ಮಾಡಿಕೊಳ್ಳುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿ ಕಂಡಬಂದವು.



ಇಂದು ಸಮುದಾಯ ಭವನ ಲೋಕಾರ್ಪಣೆ

ಹಾನಗಲ್ಲ: ಪಟ್ಟಣದ ಗಂಗಾಮತ ಸಮಾಜದ ಬಹುದಿನಗಳ ಕನಸಾಗಿ ಉಳಿದಿದ್ದ ಗಂಗಾಪರಮೇಶ್ವರಿ ಸಮುದಾಯ ಭವನ ಮೇ 8ರಂದು ಲೋಕಾರ್ಪಣೆಗೊಳ್ಳಲಿದೆ ಎಂದು ಗಂಗಾಮತ ಸಮಾಜ ಸೇವಾ ಸಂಸ್ಥೆಯ ಅಧ್ಯಕ್ಷ ಅನಂತ ವಿಕಾಸ ನಿಂಗೋಜಿ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರಾದ ಶ್ರೀನಿವಾಸ ಮಾನೆ, ವಿಧಾನ ಪರಿಷತ್ ಮುಖ್ಯಸಚೇತಕ ಎನ್.ರವಿಕುಮಾರ, ಉಡಪಿ ಮಾಜಿ ಶಾಸಕ ಹಾಗೂ ನರಸಿಪುರ ಅಂಬಿಗರ ಚೌಡಯ್ಯ ಪೀಠದ ಕಾರ್ಯಾಧ್ಯಕ್ಷ ಪ್ರಮೋದ್ ಮದ್ವರಾಜ ಸೇರಿದಂತೆ ಹಲವಾರು ಗಣ್ಯರು ಜನಪ್ರತಿನಿಧಿಗಳು, ಸಮಾಜದ ಮುಖಂಡರು ಸಹಕಾರದಿಂದ ಮೇ 8ರಂದು ಉದ್ಘಾಟನೆಗೊಳ್ಳಲಿದೆ.

ಕಾರ್ಯಕ್ರಮಕ್ಕೆ ನಿಜಶರಣ ನರಸಿಪುರದ ಅಂಬಿಗರ ಚೌಡಯ್ಯ ಗುರುಪೀಠದ ಶಾಂತಭೀಷ್ಮ ಚೌಡಯ್ಯ ಸ್ವಾಮಿಗಳ ಸಾನಿಧ್ಯದಲ್ಲಿ ಹಾನಗಲ್ಲ ವಿರಕ್ತ ಮಠದ ಹಾಗೂ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಗುರುಸಿದ್ದರಾಜಯೋಗಿಂದ್ರ ಮಹಾ ಸ್ವಾಮಿಗಳ ಸಮ್ಮುಖದಲ್ಲಿ ಶಾಸಕ ಶ್ರೀನಿವಾಸ ಮಾನೆ ಭೋಜನಾಲಯ ಉದ್ಘಾಟನೆ ಮಾಡಲಿದ್ದಾರೆ.

ವಿಪ ಮುಖ್ಯ ಸಚೇತಕ ಎನ್. ರವಿಕುಮಾರವರು ಸಭಾಮಂಟಪ ಉದ್ಘಾಟಿಸಿದರೆ ಉಡಪಿ ಮಾಜಿ ಶಾಸಕ ಪ್ರಮೋದ್ ಮದ್ವರಾಜ್‌ವರು, ಮುಖ್ಯ ಅತಿಥಿಗಳಾಗಿ ವಿಪ ಸದಸ್ಯ ಪ್ರದೀಪ್ ಶೆಟ್ಟರ, ಮಾಜಿ ಲೋಕಸಭಾ ಸದಸ್ಯ ಶಿವಕುಮಾರ ಉದಾಸಿ, ಮಾಜಿ ಜಿಪಂ ಸದಸ್ಯ ರಾಘವೇಂದ್ರ ತಹಶೀಲ್ದಾರ್, ನಿವೃತ್ತ ಡಿ.ವಾಯ್.ಎಸ್‌ಪಿ ಮಂಜುನಾಥ ಮತ್ತೂರ ಉಪಸ್ಥಿತರಿರಲ್ಲಿದ್ದಾರೆ. ಗಂಗಾಮತ ಸಮಾಜ ಸೇವಾ ಸಂಸ್ಥೆಯ ಆಡಳಿತ ಮಂಡಳಿಯ ಪ್ರಧಾನ ಕಾರ್ಯದರ್ಶಿ ಆಶೋಕ ಆರೇಗೊಪ್ಪ, ನಿರ್ದೇಶಕರುಗಳಾದ ಬಾಸ್ಕರ್ ಹುಲ್ಮನಿ, ಮೈಲಾರಪ್ಪ ಶೆಷಗೀರಿ, ಸುರೇಶ್ ಪೂಜಾರ, ಸೇರಿದಂತೆ ಸಮಾಜದ ಮುಖಂಡರಾದ ಗುಡ್ಡಣ್ಣ ಹುಲ್ಲಕ್ಕನವರ, ನಾಗರಾಜ ಸಾಲಿ ಸೇರಿದಂತೆ ಸಮಾಜದ ಮುಖಂಡರು ಹಿರಿಯರು ಉಪಸ್ಥಿತರಿದ್ದರು.

ಚೆನ್ನೈ, ಪಂಡರಪುರಕ್ಕೆ ವೇಗದೂತ ಸಾರಿಗೆ

ಹಾವೇರಿ : ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಹಾವೇರಿ ವಿಭಾಗದ ಹಾವೇರಿ ಘಟಕದಿಂದ ಹಾವೇರಿ-ಚೆನ್ನೈ ಹಾಗೂ ಹಿರೇಕೆರೂರ ಘಟಕದಿಂದ ಹಿರೇಕೆರೂರ-ಪಂಡರಪೂರಕ್ಕೆ ವೇಗದೂತ ಸಾರಿಗೆಗಳನ್ನು ಪ್ರಾರಂಭಿಸಲಾಗಿದೆ. ಹಾವೇರಿ ಘಟಕದಿಂದ ಹಾವೇರಿ- ಚೆನ್ನೈ ಹಾವೇರಿಯಿಂದ ರಾತ್ರಿ 9.30 ಗಂಟೆಗೆ ಹೊರಟು ಮರುದಿನ ಮದ್ಯಾಹ್ನ 3ಗಂಟೆಗೆ ಚೆನ್ನೈ ತಲುಪುವುದು. ಸಂಜೆ ಚೆನ್ನೈಯಿಂದ 5 ಗಂಟೆಗೆ ಹೊರಟು ಬೆಳಗ್ಗೆ 8.30 ಗಂಟೆಗೆ ಹಾವೇರಿ ತಲುಪುವುದು. ಹಿರೇಕೆರೂರ ಘಟಕದಿಂದ ಹಿರೇಕೆರೂರ-ಪಂಡರಪೂರ ಹಿರೇಕೆರೂರಿಂದ ಬೆಳಗ್ಗೆ 8 ಗಂಟೆಗೆ ಹೊರಟು ಸಂಜೆ 7.30 ಗಂಟೆಗೆ ಪಂಡರಪೂರ ತಲುಪುವುದು. ಬೆಳಗ್ಗೆ ಪಂಡರಪೂರ 6 ಗಂಟೆಗೆ ಹೊರಟು ಸಂಜೆ 5.30 ಗಂಟೆಗೆ ಹಿರೇಕೆರೂರ ತಲುಪುವುದು ಎಂದು ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೊನೇಶನ್ ಹಾವಳಿ ವಿರೋಧಿಸಿ ಪ್ರತಿಭಟನೆ

ಹಾವೇರಿ: ಡೊನೇಶನ್ ಹಾವಳಿ ವಿರೋಧಿಸಿ, ಜಿಲ್ಲಾ ಶಿಕ್ಷಣ ರೆಗುಲೇಟಿಂಗ್ ಪ್ರಾಧಿಕಾರವನ್ನು ರಚಿಸುವಂತೆ, ಶಾಲಾ ಕಾಲೇಜುಗಳಲ್ಲಿ ಡೊನೇಶನ್ ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳಲು ಆಗ್ರಹಿಸಿ ಎಸ್‌ಎಫ್‌ಐ ನೇತೃತ್ವದಲ್ಲಿ ಗುರುವಾರ ನಗರದ ಮಹಾತ್ಮಾ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ್ ಮಾತನಾಡಿ, ಸರ್ಕಾರ ನಿಗದಿದ ಅನುದಾನಿತ ಶಿಕ್ಷಣ ಸಂಸ್ಥೆಗಳು ಹಾಗೂ ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಅಭಿವೃದ್ಧಿ ಶುಲ್ಕ (ಡೆವಲಪ್ ಮೆಂಟ್ ಫೀ) ನ್ನು ಸಂಗ್ರಹಿಸಲು ಅವಕಾಶವಿದೆ. ಈ ಹಣವನ್ನು ಒತ್ತಾಯದ ಮೂಲಕ ಸಂಗ್ರಹಿಸುವಂತಿಲ್ಲ, ಇದಕ್ಕೂ ಹೆಚ್ಚು ಸಂಗ್ರಹಿಸುವುದು ಕಾನೂನಿನ ಪ್ರಕಾರ ಅಪರಾಧ. ಶಿಕ್ಷಣ ಹಕ್ಕು ಕಾಯ್ದೆ-1983 ಮತ್ತು 2009ರ ಆರ್‌ಟಿಇ ಕಾಯ್ದೆ ಜಾರಿಯಾದರೂ ಸಮರ್ಪಕವಾಗಿ ಪಾಲನೆಯಾಗುತ್ತಿಲ್ಲ, ಬಹುತೇಕ ಖಾಸಗಿ ಶಾಲೆಗಳಲ್ಲಿ ಲಕ್ಷಾಂತರ ರೂಪಾಯಿಗಳವರೆಗೂ ಹಣ ವಸೂಲಿ ಮಾಡುವುದರ ಮೂಲಕ ಹಗಲು ದರೋಡೆ ಮಾಡುತ್ತಿದ್ದಾರೆ ಎಂದು ದೂರಿದರು.

ಡೊನೇಷನ್ ನಿಯಂತ್ರಣಕ್ಕೆ ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ ಪ್ರಾಧಿಕಾರ (ಡೊನೇಷನ್ ವಿರೋಧಿ ಸಮಿತಿ)ವನ್ನು ತಕ್ಷಣ ರಚಿಸಬೇಕು. ವಂತಿಗೆ ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮಕೈಗೊಳ್ಳಬೇಕು. ಸರ್ಕಾರ ನಿಗದಿಗೊಳಿಸಿರುವ ಪ್ರವೇಶ ಶುಲ್ಕದ ವಿವರವನ್ನು ಮಾಧ್ಯಮಗಳ ಮೂಲಕ ಮತ್ತು ಬಿತ್ತಿ ಪತ್ರ, ಕರಪತ್ರಗಳ ಮೂಲಕ ಪ್ರಚಾರ ಪಡಿಸಬೇಕು.

ಶಿಕ್ಷಣ ಸಂಸ್ಥೆಗಳು ಪ್ರತಿ ತಿಂಗಳಿಗೊಮ್ಮೆ ಪಾಲಕರ ಸಭೆ ಕರೆದು ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸುವಂತೆ ನಿರ್ದೇಶಿಸಬೇಕು. ಜಿಲ್ಲಾಧಿಕಾರಿಗಳು ಡೊನೇಷನ್ ನಿಯಂತ್ರಣಕ್ಕೆ ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರ ರಚನೆ ಕುರಿತು 15 ದಿನಗಳ ಒಳಗಾಗಿ ಪಾಲಕರು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು, ಶಿಕ್ಷಣ ಇಲಾಖೆಯ ಮುಖ್ಯಸ್ಥರು, ವಿದ್ಯಾರ್ಥಿ ಸಂಘಟನೆಯ ಪ್ರತಿನಿಧಿಗಳ ಜಂಟಿಸಭೆ ಕರೆಯಬೇಕು. ಡೊನೇಷನ್ ಹಾವಳಿ ತಡೆಗಟ್ಟಿ ಡೇರಾ ಕಮೀಟಿ ರಚಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಮುಖಂಡರಾದ ಚೈತ್ರಾ ಕೊರವರ, ಕೃಷ್ಣನಾಯ್ಕ, ಮಾಲತೇಶ ಇಚ್ಚಂಗಿ, ಪುನೀತ್ ಕುಮಾರ್, ಮನು ಎನ್, ನಾಗರಾಜ್ ಎಂ.ವೈ, ನವೀನ್ ಬಿ.ಕೆ, ಕುಮಾರ ಸಿ, ಮಾಲತೇಶ ಸಿ, ಆಕಾಶ್ ಕೆ, ಪರಶುರಾಮ ಮಾದರ, ಪ್ರದೀಪ ಲಮಾಣಿ, ಮಲ್ಲಿಕಾರ್ಜುನ ಹಡಪದ, ಉಮೇಶ ಡಿ.ಎಸ್, ಮಾಲತೇಶ ಕೆ.ಟಿ, ಮಜಮಿಲ್ ಅಕ್ಕಿವಳ್ಳಿ, ನಂದೀಶ ಎಲ್, ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮೇ 10ಕ್ಕೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ

ಹಾವೇರಿ : ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಾವೇರಿ ಜಿಲ್ಲಾ ರೆಡ್ಡಿ ಜನಸಂಘದ ಸಹಯೋಗದಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ ಮೇ10ರಂದು ಮಧ್ಯಾಹ್ನ 12 ಗಂಟೆಗೆ ಹಾವೇರಿ ನಗರದ ಪ್ರವಾಸಿತಾಣ ಗಾಂಧಿ ಭವನದಲ್ಲಿ ಜರುಗಲಿದೆ.

ಹುಕ್ಕೇರಿಮಠದ ಶ್ರೀ ಸದಾಶಿವ ಸ್ವಾಮಿಗಳು ಸಾನಿಧ್ಯ ವಹಿಸಲಿದ್ದು, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಗೌರವಾನ್ವಿತ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ. ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಗೌರವ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹೆಸ್ಕಾಂ ಅಧ್ಯಕ್ಷ ಅಜೀಮಪೀರ್ ಖಾದ್ರಿ, ರಾಜ್ಯ ಗ್ಯಾರಂಟಿ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ.ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ಹುಡಾ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾಮಟ್ಟದ ಗ್ಯಾರಂಟಿ ಪ್ರಾಧಿಕಾರ ಅಧ್ಯಕ್ಷ ಎಂ.ಎಂ. ಹಿರೇಮಠ, ತಾಲೂಕುಮಟ್ಟದ ಅಧ್ಯಕ್ಷ ಎಂ.ಎಂ. ಮೈದೂರ ಭಾಗವಹಿಸಲಿದ್ದಾರೆ. ಹಿರೇಕೆರೂರು ಸ.ಪ್ರ.ದ. ಕಾಲೇಜಿನ ಉಪನ್ಯಾಸಕ ಡಾ.ಕಾಂತೇಶರೆಡ್ಡಿ ಉಪನ್ಯಾಸಕರಾಗಿ ಭಾಗವಹಿಸಲಿದ್ದು, ವಿಶೇಷ ಆಹ್ವಾನಿತರಾಗಿ ಜಿಲ್ಲಾ ರೆಡ್ಡಿ ಜನಸಂಘದ ಗೌರವಾಧ್ಯಕ್ಷ ವಿ.ಎಂ. ಕಾಮರಡ್ಡಿ ಹಾಗೂ ಕಾರ್ಯದರ್ಶಿ ವಿ.ಜಿ. ದೊಡ್ಡಗೌಡ್ರ ಅವರು ಭಾಗವಹಿಸಲಿದ್ದಾರೆ.

ಶಾಶ್ವತ ಮನೆ ಮಾಲೀಕತ್ವ ಹಕ್ಕುಪತ್ರ ವಿತರಣೆ

ಹಾನಗಲ್ಲ: ರೈತರು, ಕೂಲಿಕಾರರು, ಬಡವರು, ಮಧ್ಯಮ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ಕುಟುಂಬಗಳು ನಿವೇಶನ ಖರೀದಿಸಲು ಸಾಧ್ಯವಾಗದೇ ಸರ್ಕಾರಿ ಮತ್ತು ಖಾಸಗಿ ಜಮೀನುಗಳಲ್ಲಿ ಮನೆ ನಿರ್ಮಿಸಿಕೊಂಡು ಹತ್ತಾರು ವರ್ಷಗಳಿಂದ ಅತಂತ್ರ ಬದುಕು ನಡೆಸುತ್ತಿದ್ದವು. ಇಂಥ ಸಾವಿರಾರು ಕುಟುಂಬಗಳಿಗೆ ಶಾಶ್ವತ ಮನೆ ಮಾಲಿಕತ್ವದ ಹಕ್ಕುಪತ್ರ ವಿತರಿಸಿ ಇದೀಗ ಸ್ವತಂತ್ರಗೊಳಿಸಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಕಲಕೇರಿ ಗ್ರಾಮದಲ್ಲಿ ನಡೆದ ಸಮಾರಂಭದಲ್ಲಿ ನಾನಾ ಕಂದಾಯ ಗ್ರಾಮ ಮತ್ತು ಉಪ ಗ್ರಾಮಗಳ 492 ಫಲಾನುಭವಿ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿ, 2023 ರಲ್ಲಿ ತಾಲೂಕಿನಲ್ಲಿ 52 ದಿನಗಳ ಕಾಲ ಐತಿಹಾಸಿಕ ದೃಢಸಂಕಲ್ಪ ಯಾತ್ರೆಯ ಮೂಲಕ ಪ್ರತಿಯೊಂದು ಗ್ರಾಮಗಳನ್ನು ಕಾಲ್ನಡಿಗೆಯಲ್ಲಿ ಸಂಚರಿಸಿದ ಸಂದರ್ಭದಲ್ಲಿ ಸಾವಿರಾರು ಕುಟುಂಬಗಳಿಗೆ ಮನೆಯ ಮಾಲಿಕತ್ವ ಇಲ್ಲದಿರುವುದು, ಅನೇಕ ಕಡೆಗಳಲ್ಲಿ ಕೋರ್ಟ್‌ನಿಂದ ನೋಟಿಸ್ ಜಾರಿ ಮಾಡಿ ಮನೆ ತೆರವುಗೊಳಿಸುವಂತೆ ಒತ್ತಾಯಿಸುತ್ತಿರುವ ಬಗ್ಗೆ ಜನ ಆತಂಕ ವ್ಯಕ್ತಪಡಿಸುತ್ತಿದ್ದರು. ಇದೀಗ ಸಂಕಷ್ಟಗಳೆಲ್ಲ ದೂರ ಸರಿದಿವೆ ಎಂದರು.

ತಹಶೀಲ್ದಾರ್ ರೇಣುಕಾ ಎಸ್. ಮಾತನಾಡಿದರು. ಸಮಾರಂಭದಲ್ಲಿ ಕಲಕೇರಿ ಗ್ರಾಮದ 260, ಕಲಕೇರಿ ತಾಂಡಾ ಗ್ರಾಮದ 135, ಮುಳಥಳ್ಳಿಯ 120, ತಾವರಗೊಪ್ಪದ 60, ವೀರಾಪುರದ 40, ವಾಸನದ 23, ಚಿಕ್ಕಹುಲ್ಲಾಳದ 13, ಕನ್ನೇಶ್ವರದ 11, ಹೇರೂರಿನ 9 ಹಾಗೂ ಕೂಸನೂರು ಗ್ರಾಮದ 5 ಫಲಾನುಭವಿ ಕುಟುಂಬಗಳಿಗೆ ಶಾಶ್ವತ ಮನೆ ಮಾಲಿಕತ್ವದ ಹಕ್ಕುಪತ್ರ ವಿತರಿಸಲಾಯಿತು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಜಿಪಂ ಮಾಜಿ ಸದಸ್ಯ ಮಹದೇವಪ್ಪ ಬಾಗಸರ, ಮುಖಂಡರಾದ ಪ್ರಕಾಶ ಬಣಕಾರ, ನಾಗಪ್ಪ ಮೆಳ್ಳಳ್ಳಿ, ಬಿ.ಎಸ್.ಗೋರೆಗೌಡ್ರ, ಉಮೇಶ ಗೌಳಿ, ಹೇಮನಗೌಡ ಅಡಿಗಣ್ಣನವರ, ಮಾಲತೇಶ ಗೋರೆಗೌಡ್ರ, ಮೂಕಪ್ಪ ಕೊಪ್ಪದ, ಜಯಮ್ಮ ಮಳೆಣ್ಣನವರ, ವಸಂತ ವೆಂಕಟಾಪೂರ, ನಿಜಗುಣಿ ಮಳೆಣ್ಣನವರ, ಅಜ್ಜಪ್ಪ ಕಲ್ಲಾದಿ, ರಾಮಚಂದ್ರ ತಳವಾರ, ಅಲ್ತಾಹಿರ್ ಕಚವಿ, ಮಂಜು ಆಲದಕಟ್ಟಿ, ಪ್ರಕಾಶ ಮಾಸಣಗಿ, ಲಕ್ಷ್ಮಣ ಹರಿಜನ, ಸಿದ್ದು ಕಲ್ಲಣ್ಣನವರ, ದಯಾನಂದ ಹಂಚಿನಮನಿ, ಪ್ರಕಾಶಗೌಡ ಪಾಟೀಲ, ಶಂಕರಣ್ಣ ಪಾಟೀಲ, ಇಸ್ಮೈಲಸಾಬ ತಾವರಗೊಪ್ಪ, ಶೇಕಪ್ಪ ಗಾಣಗೇರ, ಗುಡ್ಡನಗೌಡ ಪಾಟೀಲ, ಪ್ರಕಾಶ ಬಾಗಣ್ಣನವರ, ಮಲ್ಲಿಕಾರ್ಜುನ ಕಳ್ಳಿ, ಮಹೇಶ ಬಣಕಾರ, ಬಿ.ಕೆ. ವಾಸನ, ಮಾರ್ತಾಂಡಗೌಡ ಪಾಟೀಲ ಇದ್ದರು.



> ಹಾನಗಲ್ಲ ತಾಲೂಕಿನ ಗುಡ್ಡಗಾಡು ಭಾಗದ ಕೆರೆಗಳ ಒಡಲು ತುಂಬಿಸಲು 220 ಕೋಟಿ ರೂ. ವೆಚ್ಚದ ಕೂಸನೂರು, ನರೇಗಲ್ ಏತ ನೀರಾವರಿ ಯೋಜನೆ ಶೀಘ್ರ ಅನುಷ್ಠಾನಗೊಳಿಸಲಾಗುತ್ತಿದೆ. ಕಲಕೇರಿ ಗ್ರಾಮದಲ್ಲಿ 3.30 ಕೋಟಿ ರೂ. ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸುಸಜ್ಜಿತ ಕಟ್ಟಡ ನಿರ್ಮಿಸಲಾಗುತ್ತಿದೆ.
> ■ ಶ್ರೀನಿವಾಸ ಮಾನೆ, ಶಾಸಕ

ತಿಂಗಳ ಒಳಗಾಗಿ ಕನಕದಾಸ ಮೂರ್ತಿ ಪ್ರತಿಷ್ಠಾಪನೆ

ಹಾವೇರಿ: ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪುಣ್ಯಕ್ಷೇತ್ರ ತಿರುಪತಿಯಲ್ಲಿ ಇತ್ತೀಚೆಗೆ ಭಕ್ತಶ್ರೇಷ್ಠ ಕನಕದಾಸರ ಮೂರ್ತಿ ಪ್ರತಿಷ್ಠಾಪಿಸಲಾಗಿದ್ದು, ಅದೇ ಮಾದರಿಯಲ್ಲಿ ಹಾವೇರಿಯ ಕಾಗಿನೆಲೆ ವೃತ್ತದಲ್ಲಿಯೂ ಕನಕದಾಸ ಮೂರ್ತಿ ಪ್ರತಿಷ್ಠಾಪನೆ ಮಾಡಲು ತೀರ್ಮಾನಿಸಲಾಗಿದೆ ಎಂದು ಕುರುಬ ಸಮುದಾಯದ ಮುಖಂಡರೂ ಆಗಿರುವ ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ 'ಕುರುಬ ಸಮುದಾಯದ ಸಭೆ'ಯಲ್ಲಿ ಅವರು ಮಾತನಾಡಿ, ಭಕ್ತಿಯ ಮೂಲಕ ಸಮಾಜದ ಸುಧಾರಣೆಗೆ ಶ್ರಮಿಸಿದ ಕನಕದಾಸರನ್ನು, ಇಡೀ ದೇಶವೇ ಕೊಂಡಾಡುತ್ತದೆ. ಕನಕದಾಸರು ಹುಟ್ಟಿ-ಬೆಳೆದ ಹಾವೇರಿ ಜಿಲ್ಲೆಯಲ್ಲಿಯೂ ಅವರ ಹೆಸರನ್ನು ಮತ್ತಷ್ಟು ಅಜರಾಮರವಾಗಿಸಬೇಕಿದೆ. ಹಲವು ಕಡೆಗಳಲ್ಲಿ ಈಗಾಗಲೇ ಅವರ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಜಿಲ್ಲಾ ಕೇಂದ್ರದಲ್ಲಿಯೂ ಮೂರ್ತಿ ಬೇಕೆಂಬ ಕೂಗು ಈಗ ನನಸಾಗುತ್ತಿದೆ ಎಂದರು. ಕಾಗಿನೆಲೆ ವೃತ್ತದಲ್ಲಿ ವಾಹನಗಳ ದಟ್ಟಣೆ ಹೆಚ್ಚಿದ್ದು, ಅಪಘಾತಗಳು ಆಗುತ್ತಿವೆ. ಮಧ್ಯದಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ಕಷ್ಟವಾಗುತ್ತದೆ. ಹೀಗಾಗಿ, ಕನಕ ಕುರಿ ಮತ್ತು ಉಣ್ಣೆ ನೇಕಾರರ ಸಹಕಾರಿ ಸಂಘಕ್ಕೆ ಹೊಂದಿಕೊಂಡಿರುವ ಜಾಗದಲ್ಲಿ ಮೂರ್ತಿ ಇರಿಸಲಾಗುವುದು. ಮೂರ್ತಿ ಸಿದ್ಧಪಡಿಸಲು 10 ಲಕ್ಷ ರೂ., ಖರ್ಚಾಗಲಿದೆ. ವೃತ್ತದ ಅಭಿವೃದ್ಧಿಗೆ ನಗರಾಭಿವೃದ್ಧಿ ಪ್ರಾಧಿಕಾರವು 25 ಲಕ್ಷ ರೂ., ನೀಡಿದೆ. ಉಳಿದ ಕೆಲಸಗಳಿಗೆ 10ಲಕ್ಷದಿಂದ 15ಲಕ್ಷ ರೂ., ಬೇಕಾಗಬಹುದು. ನಾನೂ 1ಲಕ್ಷ ರೂ., ಕೊಡುತ್ತೇನೆ. ಎಲ್ಲರೂ ಕೈಲಾದಷ್ಟು ದೇಣಿಗೆ ನೀಡಿ, ಮೂರ್ತಿ ಪ್ರತಿಷ್ಠಾಪಿಸೋಣ ಎಂದರು.

ಕುರುಬ ಸಮುದಾಯದ ಮುಖಂಡರೂ ಆಗಿರುವ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜೀಗೌಡ್ರ ಮಾತನಾಡಿ, ಹಾವೇರಿಯ ಕಾಗಿನೆಲೆ ವೃತ್ತದಲ್ಲಿ ತಿಂಗಳ ಒಳಗಾಗಿ ಕನಕದಾಸರ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುವುದು. ಇದಕ್ಕೆ ಸಮುದಾಯದ ಜನರು ಒಗ್ಗಟ್ಟಿನಿಂದ ಸಹಕಾರ ನೀಡಬೇಕು. ಮೂರ್ತಿ ಪ್ರತಿಷ್ಠಾಪಿಸುವ ಅವಕಾಶ ಬಂದಿದೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡೋಣ. ಕಾಗಿನೆಲೆ ಗುರುಪೀಠದಲ್ಲಿ ಈ ಬಾರಿ ಕನಕ ಜಯಂತಿ ಆಚರಿಸುವ ಜವಾಬ್ದಾರಿಯನ್ನು ಹಾವೇರಿ ತಾಲೂಕಿಗೆ ನೀಡಲಾಗಿದೆ. ಕಳೆದ ಬಾರಿ ರಾಣೆಬೆನ್ನೂರಿನವರು ಅದ್ದೂರಿ ಆಚರಣೆ ಮಾಡಿದ್ದರು. ಈ ಬಾರಿ ನಾವೆಲ್ಲರೂ ದೇಣಿಗೆ ಸಂಗ್ರಹಿಸಿ ಅಭೂತಪೂರ್ವ ಆಚರಣೆ ಮಾಡೋಣ ಎಂದರು.

ಸಮುದಾಯದ ಮುಖಂಡರಾದ ಮಹಾದೇವಗೌಡ್ರ ಗಾಜೀಗೌಡ್ರ, ನಾಗರಾಜ ಅನ್ವೇರಿ, ಅಶೋಕ ಬಣಕಾರ, ಹನುಮಂತಗೌಡ್ರ ಗಾಜೀಗೌಡ್ರ, ಬಸಣ್ಣ ಕಂಬಳಿ, ಅಶೋಕ ಮುದಕಣ್ಣನವರ, ವಿಜಯಕುಮಾರ ಮುದಕಣ್ಣನವರ, ಬಸವರಾಜ ಕೋಟಿ ಹಾಗೂ ತಾಲೂಕಾ ಅಧ್ಯಕ್ಷ ವಿರೂಪಾಕ್ಷ ಹುಲ್ಲೂರ, ನಿಂಗಪ್ಪ ತುಕ್ಕಣ್ಣನವರ ಇತರರಿದ್ದರು.



ಕಿರುಸುದ್ದಿ

ಮೇ 9, 10ರಂದು ಕ್ರೀಡಾಕೂಟ

ಬೆಳಗಾವಿ: ಜಿಲ್ಲಾ ಕಾಂಟ್ರಾಕ್ಟ್ ಬ್ರಿಡ್ಜ್ ಅಸೋಸಿಯೇಷನ್ ಹಾಗೂ ರಾಜ್ಯ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಮೇ 9 ಮತ್ತು 10 ರಂದು 'ಬ್ರಿಡ್ಜ್' ಕ್ರೀಡೆ ರಾಜ್ಯ ಮಟ್ಟದ ಬೃಹತ್ ಕ್ರೀಡಾಕೂಟ ಆಯೋಜನೆಯಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಎಸ್.ವೈ.ಪ್ರಭು ಹೇಳಿದರು. ಗುರುವಾರ ಬೆಳಗಾವಿ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಗರದ ಖಾನಾಪುರ ರಸ್ತೆ ಹೋಟೆಲ್ ನೇಟಿವ್‌ನಲ್ಲಿ ಎರಡು ದಿನಗಳ ಕಾಲ ರಾಜ್ಯ ಮಟ್ಟದ ಬ್ರಿಡ್ಜ್ ಟೂರ್ನಿ ನಡೆಯಲಿದೆ. ಈ ಪ್ರತಿಷ್ಠಿತ ಕ್ರೀಡಾಕೂಟದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳು ಸೇರಿದಂತೆ ಮುಂಬೈ, ಪುಣೆ, ಸಾತಾರಾ, ಸಾಂಗ್ಲಿ, ಕೊಲ್ಹಾಪುರ, ರತ್ನಗಿರಿ ಹಾಗೂ ಗೋವಾ ರಾಜ್ಯಗಳಿಂದ ನೂರಾರು ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ವಿಜೇತರಿಗೆ ಒಂದು ಲಕ್ಷ ರೂ. ಅಧಿಕ ನಗದು ಬಹುಮಾನ ಹಾಗೂ ಆಕರ್ಷಕ ಟ್ರೋಫಿ ನೀಡಲಾಗುವುದು. ಈ ಬಹುಮಾನ ಕರ್ನಾಟಕ ಬ್ರಿಡ್ಜ್ ಅಸೋಸಿಯೇಷನ್ ಹಾಗೂ ಸಿದ್ಧಾರ್ಥ್ ಚಾಂದಗಡ್ಕರ್, ಅಭಿಜಿತ್ ಭಾಗವತ್ ಮತ್ತು ನಿತಿನ್ ಲೋಕೂರ್ ಹಿರಿಯರ ಸ್ಮರಣಾರ್ಥ ಪ್ರಾಯೋಜಿಸಿದ್ದಾರೆ ಎಂದರು. ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಸಕ್ತರು ಭಾಗವಹಿಸುವಂತೆ ಕೋರಿದ್ದಾರೆ. ಈ ವೇಳೆ ಎಂ.ಐ. ಹೆಗಡೆ, ಎನ್.ವಿ ದೇಶಪಾಂಡೆ, ಆರ್. ಎಲ್. ಬರವೆ, ಸಂತೋಷ ಮಮದಾಪೂರ ಸೇರಿದಂತೆ ಇತರರು ಇದ್ದರು.

ಆಶಾಗೆ ಉತ್ತಮ ಸೇವಾ ಪ್ರಶಸ್ತಿ

ಯರಗಟ್ಟಿ: ಪಟ್ಟಣದ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವಸತಿ ನಿಲಯ ಪಾಲಕ ಆಶಾ ಪರೀಟಗೆ ಉತ್ತಮ ಸೇವೆ ಪ್ರಶಸ್ತಿ ನೀಡಿ, ಗೌರವಿಸಲಾಯಿತು.



ಇತ್ತೀಚಿಗೆ ಬೆಳಗಾವಿ ಕುಮಾರ ಗಂಧರ್ವ ಕಲಾಮಂದಿರದಲ್ಲಿ ಬೆಂಗಳೂರು ಕರ್ನಾಟಕ ರಾಜ್ಯ ಸರ್ಕಾರಿ ಮಹಿಳೆಯರ ನೌಕರ ಸಂಘದ ವತಿಯಿಂದ ನಡೆದ ಜಿಲ್ಲಾ ಮತ್ತು ತಾಲೂಕು ಘಟಕ ಉದ್ಘಾಟನೆ ಮತ್ತು ಪ್ರದಗ್ರಹಣ ಆಶಾಗೆ ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಿ, ಗೌರವಿಸಲಾಗಿದೆ. ಅವರನ್ನು ಸವದತ್ತಿ-ಯರಗಟ್ಟಿ ತಾಲೂಕಾ ನೌಕರ ಸಂಘ, ವಸತಿ ನಿಲಯ ಪಾಲಕರು ಮತ್ತು ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ನೆಲಕ್ಕುರುಳಿದ ಬೃಹತ್ ಮರ; ತಪ್ಪಿದ ಭಾರಿ ಅನಾಹುತ

ಬೆಳಗಾವಿ: ನಗರದ ಮಾಳಮಾರುತಿ ಪೊಲೀಸ್ ಠಾಣೆಗೆ ತೆರಳುವ ಮಾರ್ಗದಲ್ಲಿ ಬುಧವಾರ ರಾತ್ರಿ ಬೃಹತ್ ಮರವೊಂದು ಬುಡಸಮೇತ ಕಿತ್ತು ಬಿದ್ದ ಘಟನೆ ನಡೆದಿದೆ.



ಘಟನೆ ಸಂಭವಿಸಿದ ವೇಳೆ ರಸ್ತೆಯಲ್ಲಿ ವಾಹನ ಸಂಚಾರ ವಿರಳವಾಗಿದ್ದರಿಂದ ಯಾವುದೇ ಪ್ರಾಣಾಪಾಯ ಅಥವಾ ದೊಡ್ಡ ಅನಾಹುತ ಸಂಭವಿಸಿಲ್ಲ. ಮರ ರಸ್ತೆ ಮಧ್ಯ ಬಿದ್ದ ಪರಿಣಾಮ ಕೆಲಕಾಲ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಸ್ಥಳೀಯರು ಹಾಗೂ ಪೊಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ನಿಯಂತ್ರಣಕ್ಕೆ ತೆಗೆದುಕೊಂಡರು. ಬಳಿಕ ಮರವನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿ ಸಂಚಾರ ಪುನಃ ಸುಗಮಗೊಳಿಸಲಾಯಿತು. ಘಟನೆಯಿಂದ ಸ್ಥಳೀಯರಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ನ್ಯಾಟ್ ಗ್ರೀಡ್ ತಂತ್ರಾಂಶದಿಂದ ವ್ಯಕ್ತಿ ಪತ್ತೆ

ಬೆಳಗಾವಿ: ಅಧಿಕ ಸಾಲ ಮಾಡಿಕೊಂಡ ಯುವಕನೊಬ್ಬ ಮೂರು ವರ್ಷಗಳ ಹಿಂದೆ ಮನೆ ಬಿಟ್ಟು ಹೋಗಿದ ಯುವಕನ್ನು ಬೆಳಗಾವಿ ಪೊಲೀಸರು ನ್ಯಾಟ್ ಗ್ರೀಡ್ ತಂತ್ರಾಂಶದ ಮೂಲಕ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಮುಸ್ತಫಾ ಅಪ್ಪಾಸಾಹೇಬ ಅಲಿಯಾಸ್ ಅಪ್ಪಾಸಾಬ ಜಮಾದಾರ (22) ಕಾಣೆಯಾಗಿದ ಯುವಕ, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರ ಪಟ್ಟಣದ ಶಿಂದೆ ಚಾಳ ಹಲಿಮಾ ಅಪ್ಪಾಸಾಬ ಜಮಾದಾರ ಅವರು ಮಗ ಕಾಣೆ ಆಗಿದ್ದಾನೆ ಎಂದು ದೂರು ದಾಖಲಿಸಿದ್ದರು. ನನಗೆ ಸಾಲ ಬಹಳ ಆಗಿದ್ದರಿಂದ ನಾನು ಮನೆ ಬಿಟ್ಟು ಬೇರೆ ಕಡೆಗೆ ದುಡಿಯಲು ಹೋಗುತ್ತಿದ್ದೇನೆ. 2 ವರ್ಷ ಬಿಟ್ಟು ಬರುತ್ತೇನೆ ನನಗೆ ಹುಡುಕಾಡಬೇಡಿ ಎಂದು ಪತ್ರ ಬರೆದು ಮುಸ್ತಫಾ ಅಪ್ಪಾಸಾಹೇಬ ಮನೆ ಬಿಟ್ಟು ಹೋಗಿದ್ದ. ಈ ಕುರಿತು ಸಂಕೇಶ್ವರ ಪೊಲೀಸ್ ಠಾಣೆ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡು, ಯುವಕನ ಭಾವಚಿತ್ರವನ್ನು ನ್ಯಾಟ್ ಗ್ರೀಡ್ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿದರು. ನಂತರ ಮೊಬೈಲ್ ನಂಬರ್ ಪತ್ತೆ ಮಾಡಿ ಟಾವರ್ ವಿಳಾಸ ಸಹಾಯದಿಂದ ವ್ಯಕ್ತಿ ಗೋವಾದ ಮಾಂದ್ರುಮನಲ್ಲಿ ಪತ್ತೆಯಾಗಿದ್ದಾನೆ. ಈ ಕಾರ್ಯಕ್ಕೆ ಪೊಲೀಸರಿಗೆ ಕೃತಜ್ಞತೆ ಸಲ್ಲಿಸಿದ ಕುಟುಂಬಸ್ಥರು.



ರಾಯಬಾಗ: ಗ್ರಾಮ ದೇವತೆ ಜಾತ್ರಾಮಹೋತ್ಸವದ ನಿಮಿತ್ತ ಗುರುವಾರ ದೇವಿ ಪಲ್ಲಕ್ಕಿ ಭವ್ಯ ಮೆರವಣಿಗೆ ಪಟ್ಟಣದ ಜೈಹನುಮಾನ ಮಂದಿರದಿಂದ ಕುಂಬಾ ಗಲ್ಲಿಯಲ್ಲಿರುವ ಮಹಾಲಕ್ಷ್ಮೀದೇವಿ ದೇವಸ್ಥಾನದವರೆಗೆ ನಡೆಯಿತು. ತಹಶೀಲ್ದಾರ್ ಮಹಾದೇವ ಸನಮುರಿ ಪಲ್ಲಕ್ಕಿ ಮೆರವಣಿಗೆಗೆ ಚಾಲನೆ ನೀಡಿದರು. ಜಾತ್ರಾಕಮೀಟಿ ಸದಸ್ಯರು, ಜಾತ್ರಾ ಹಕ್ಕುದಾರರು ಹಾಗೂ ಭಕ್ತಾಧಿಗಳು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರ ಮೇ 10ರಂದು

ಗೋಕಾಕ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ ಹಾಗೂ ಬೆಳಗಾವಿ ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಭಗೀರಥ ಜಯಂತಿ ಉತ್ಸವ ಹಾಗೂ ಉಪ್ಪಾರ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮೇ 10ರಂದು ಬೆಳಗಾವಿ ಕುಮಾರ ಗಂಧರ್ವ ರಂಗಮಂದಿರದಲ್ಲಿ ಬೆಳಗ್ಗೆ 10.30ಕ್ಕೆ ಜರುಗಲಿದೆ. ಹೊಸದುರ್ಗ ಭಗೀರಥ ಪೀಠದ ಡಾ.ಪುರುಷೋತ್ತಮಾನಂದ ಪುರಿ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸುವರು. ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸುವರು. ಶಾಸಕ ರಾಜು ಶೇಠ ಅಧ್ಯಕ್ಷತೆ ವಹಿಸುವರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಶಾಸಕರುಗಳಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ, ಲಖನ ಜಾರಕಿಹೊಳಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ಅಧ್ಯಕ್ಷ ಭರಮಣ್ಣ ಉಪ್ಪಾರ ಸೇರಿದಂತೆ ಜಿಲ್ಲೆಯ ಶಾಸಕರು ಭಾಗವಹಿಸುವರು. ಎಸ್ಸೆಸ್ಸೆಲ್ಸಿ ಮತ್ತು ಪಿಯೂಸಿ ಪರೀಕ್ಷೆಯಲ್ಲಿ 85% ಪ್ರತಿಶತಕ್ಕಿಂತ ಹೆಚ್ಚಿನ ಅಂಕ ಪಡೆದ ಉಪ್ಪಾರ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಮೇ 8ರೊಳಗಾಗಿ ಬೆಳಗಾವಿ ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಜಿ.ಎಸ್.ಉಪ್ಪಾರ ಹಾಗೂ ಜಿಲ್ಲಾ ಪದಾಧಿಕಾರಿಗಳಿಗೆ ಅರ್ಜಿಸಲ್ಲಿಸುವಂತೆ ನ್ಯಾಯವಾದಿ ಹಾಗೂ ಗೋಕಾಕ ತಾಲೂಕ ಭಗೀರಥ ಉಪ್ಪಾರ ಸಂಘದ ಉಪಾಧ್ಯಕ್ಷ ಕುಶಾಲ ಗುಡೇನ್ನವರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ : ಕೃಷಿ ಇಲಾಖೆ ವತಿಯಿಂದ ನಗರದ ಸಾಯಿ ಮಂದಿರದಲ್ಲಿ ಸುರಕ್ಷಿತ ಕೀಟನಾಶಕ ಬಳಕೆ ಹಾಗೂ ಬೀಜೋಪಚಾರ ಆಂದೋಲನ ಕಾರ್ಯಕ್ರಮ ಆಯೋಜಿಸಲಾಯಿತು. ಕೃಷಿ ಉಪನಿರ್ದೇಶಕ ಸಲೀಂ ಸಂಗತ್ರಾಸ ಮಾತನಾಡಿದರು. ಸಹಾಯಕ ಕೃಷಿ ನಿರ್ದೇಶಕ ಎಂ.ಎಸ್. ಪಟಗುಂದಿ, ಮತ್ತಿಕೊಪ್ಪ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಜಿ.ಬಿ.ವಿಶ್ವನಾಥ, ಸುತ್ತಮುತ್ತಲಿನ ರೈತರು, ಕೃಷಿ ಅಧಿಕಾರಿಗಳು, ಆತ್ಮ ಮತ್ತು ಕೃಷಿ ಸಂಜೀವಿನಿ ಸಿಬ್ಬಂದಿ, ಕೃಷಿ ಸಖಿಯರು ಹಾಗೂ ಕರಷಿ ಪರಿಕರ ಸೇರಿದಂತೆ ಹಲವರು ಇದ್ದರು.

ಕುಡಿಯುವ ನೀರಿನ ಕುರಿತು ಸಭೆ

ಅನಧಿಕೃತ ನೀರಿನ ನಳ ತೆರವು

ಯರಗಟ್ಟಿ : ಬಿಸಿಲಿನ ತಾಪಮಾನಕ್ಕೆ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಮುಂಜಾಗ್ರತವಾಗಿ ಗ್ರಾಮದಲ್ಲಿ 19 ಅನಧಿಕೃತ ನೀರಿನ ನಳಗಳ ಪಟ್ಟಿ ಮಾಡಲಾಗಿದೆ ಇವುಗಳನ್ನು ತೆರವುಗೊಳಿಸಲಾಗುತ್ತಿದೆ.

ಇತ್ತೀಚಿಗೆ ಬೆಳಗಾವಿಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಳಗಾವಿ ಹಾಗೂ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯ ಕುಡಿಯುವ ನೀರಿನ ಪರಿಸ್ಥಿತಿ ಹಾಗೂ ಆಡಳಿತಾತ್ಮಕ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ.

ಮೇಲಾಧಿಕಾರಿಗಳ ಆದೇಶದ ಮೇರೆಗೆ ಅನಧಿಕೃತ ನೀರಿನ ನಳಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಬಗ್ಗೆ ನಿರ್ದಿಷ್ಟ ಮಾಹಿತಿ ಲಭ್ಯವಿಲ್ಲ. ಹೆಚ್ಚಿನ ಮಾಹಿತಿಗಾಗಿ ಸ್ಥಳೀಯ ಅಧಿಕಾರಿಗಳನ್ನು ಸಂಪರ್ಕಿಸಿ ಅನಧಿಕೃತ ನೀರಿನ ನಳಗಳ ಪಟ್ಟಿ ಮಾಡಿ ತೆರವು ಕಾರ್ಯಾಚರಣೆ ಆರಂಭವಾಗಿದೆ. ಸತ್ತಿಗೇರಿ ಗ್ರಾಮದಲ್ಲಿ ಸದ್ಯ 8 ಅನಧಿಕೃತ ನೀರಿನ ನಳಗಳನ್ನು ತೆರವು ಗೊಳಿಸಲಾಗಿದೆ ಎಂದು ಆರ್‌ಡಬ್ಲ್ಯೂಎಸ್ ಎಇಇ ಪ್ರೇಮು ರಾಠೋಡ ತಿಳಿಸಿದ್ದಾರೆ.



ಈ ವೇಳೆ ಜೂನಿಯರ್ ಇಂಜಿನಿಯರ್ ಅಕ್ಷಯ ವಡವಟಗಿ, ಗುತ್ತಿಗೆದಾರ ಅಡಿವೆಪ್ಪ ಸುಣಗಾರ, ಗ್ರಾಪಂ ಸಿಬ್ಬಂದಿ ವರ್ಗದವರು ಹಾಜರಿದ್ದರು.

> **ಯರಗಟ್ಟಿ-ಸವದತ್ತಿ ತಾಲೂಕಿನಲ್ಲಿ ಸದ್ಯಕ್ಕೆ ಎಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಇಲ್ಲವೆಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದರೆ ಯಾವುದಾದರೂ ಗ್ರಾಪಂ ವ್ಯಾಪ್ತಿಯಲ್ಲಿ ನೀರಿನ ಕೊರತೆ ಉಂಟಾದಲ್ಲಿ, ತಕ್ಷಣ ಟ್ಯಾಂಕರ್ ಮೂಲಕ ನೀರು ಪೂರೈಸುವಂತೆ ಸೂಚನೆ ನೀಡಲಾಯಿತು. ಟ್ಯಾಂಕರ್‌ಗಳಿಲ್ಲದ ಗ್ರಾಪಂ ಅವುಗಳನ್ನು ಖರೀದಿಸುವಂತೆ ತಿಳಿಸಲಾಗಿದೆ.**
>
> ■ ವಿಶ್ವಾಸ ವೈದ್ಯ, ಶಾಸಕರು ಸವದತ್ತಿ ಮತಕ್ಷೇತ್ರ

ಭೂಮಿ ಅತಿಕ್ರಮಣ: ತಹಶೀಲ್ದಾರ್‌ಗೆ ದೂರು

ಬೆಳಗಾವಿ : ರೈತರ ಕೃಷಿ ಭೂಮಿ ಅಕ್ರಮವಾಗಿ ಅತಿಕ್ರಮಣ ಮಾಡಿ, ಭೂ ಮಾಲೀಕರಿಗೆ ಬೆದರಿಕೆ ಹಾಕಿ ದಾದಾಗಿರಿ ನಡೆಸುತ್ತಿರುವವರ ವಿರುದ್ಧ ತಕ್ಷಣ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಮಾನವ ಹಕ್ಕುಗಳ ಮತ್ತು ಭ್ರಷ್ಟಾಚಾರ ನಿರ್ಮೂಲನಾ ಸಮಿತಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ದೂರಿನ ಪ್ರಕಾರ, ಜಿಲ್ಲೆಯ ಸಾಂಬ್ರಾ ರಸ್ತೆಯಲ್ಲಿರುವ ಅಶೋಕ ಶೇರಿಗೆ ಸೇರಿದ ಸರ್ವೆ ನಂ. 781/9ರ ಕೃಷಿ ಭೂಮಿಯನ್ನು ಕಿಶೋರ ಗಲೋಟ್ ಎಂಬುವವರು ಅಕ್ರಮವಾಗಿ ಅತಿಕ್ರಮಣ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಅಶೋಕಶೇರಿ ಕುಟುಂಬವು ಪೀಳಿಗೆಯಿಂದ ಪೀಳಿಗೆಗೆ ಈ ಜಮೀನಿನಲ್ಲಿ ಕೃಷಿ ನಡೆಸುತ್ತಿದ್ದು, ಅವರ ಒಟ್ಟು 5 ಎಕರೆ 25 ಗುಂಟೆ ಜಾಗದಲ್ಲಿ ಸುಮಾರು 1.25 ಗುಂಟೆ ಪ್ರದೇಶ ಹದ್ದುಬಸ್ತು ಮೀರಿ ಬಲವಂತವಾಗಿ ವಶಪಡಿಸಿಕೊಳ್ಳಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಭೂ ಸರ್ವೆ ಇಲಾಖೆಯಿಂದ ದೃಢೀಕರಿಸಲ್ಪಟ್ಟ ಅಧಿಕೃತ ನಕ್ಷೆ, ದಾಖಲೆಗಳು ಹಾಗೂ ಪ್ರಮಾಣ ಪತ್ರಗಳು ಇದ್ದರೂ ಆರೋಪಿಗಳು ಯಾವುದೇ ಕಾನೂನು ಭಯವಿಲ್ಲದೆ ಭೂಮಿ ಒತ್ತುವರಿ ಮಾಡಿಕೊಂಡು ರೈತರ ಹಕ್ಕುಗಳನ್ನು ಧಿಕ್ಕರಿಸುತ್ತಿದ್ದಾರೆ ಎಂದು ರೈತ ಸಂಘ ಕಿಡಿಕಾರಿದೆ.

ಸಂತ್ರಸ್ತ ರೈತರ ಪರವಾಗಿ ಉತ್ತರ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಗಂಗಾಧರ ದೊಡ್ಡಮನಿ ಸರ್ಕಾರ, ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸಿ, ರೈತರ ಭೂಮಿ ರಕ್ಷಿಸಲು ಸರ್ಕಾರ ವಿಫಲವಾದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿ ಎಂದು ಎಚ್ಚರಿಸಿದರು.

ಈ ಪ್ರಕರಣ ಗಂಭೀರವಾಗಿ ಪರಿಗಣಿಸಿರುವ ರೈತ ಸಂಘವು, ತಕ್ಷಣ ಸ್ಥಳ ಪರಿಶೀಲನೆ ನಡೆಸಿ ಅಕ್ರಮ ಅತಿಕ್ರಮಣ ತೆರವುಗೊಳಿಸಬೇಕು. ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ, ಧರಣಿ, ಹೋರಾಟ ಮಾಡುವುದಾಗಿ ಹೇಳಿದರು.



ಹೇಮರೆಡ್ಡಿ ಮಲ್ಲಮ್ಮ ಜಯಂತಿ ಮೇ 10ಕ್ಕೆ

ಬೆಳಗಾವಿ: ಜಿಲ್ಲಾಡಳಿತ,ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ, ಹೇಮರಡ್ಡಿ ಮಲ್ಲಮ್ಮ ಜಯಂತಿ ಮೇ 10ರಂದು ಸಂಜೆ 5ಕ್ಕೆ ನಗರದ ರೆಡ್ಡಿ ಭವನ ಸದಾಶಿವ ನಗರದಲ್ಲಿ ಜರಗಲಿದೆ. ಸಚಿವ ಸತೀಶ ಜಾರಕಿಹೊಳಿ ಅಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಶಾಸಕ ಆಸೀಫ್ ಸೇಠ್ ಅಧ್ಯಕ್ಷತೆ ವಹಿಸುವರು. ಸಾಹಿತಿ ಡಾ.ರೇಣುಕಾ ಕಠಾರಿ ವಿಶೇಷ ಉಪನ್ಯಾಸ ನೀಡುವರು. ಸರ್ಕಾರಿ ಮುಖ್ಯ ಸಚೇತಕ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ-2 ಪ್ರಕಾಶ ಹುಕ್ಕೇರಿ, ವಾಸಾನಿ ಅಧ್ಯಕ್ಷ ಭರಮಗೌಡ ಕಾಗೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ಅಧ್ಯಕ್ಷ ಭರಮಣ್ಣ ಉಪ್ಪಾರ, ಬೆಳಗಾವಿ ರೆಡ್ಡಿ ಸಂಘ ಅಧ್ಯಕ್ಷ ರಾಮಣ್ಣ ಮುಳ್ಳೂರ ಆಗಮಿಸುವರು. ಸಂಸದರಾದ ಈರಣ್ಣ ಕಡಾಡಿ, ಪ್ರಿಯಾಂಕಾ ಜಾರಕಿಹೊಳಿ, ಜಗದೀಶ್ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ ಗೌರವಾನ್ವಿತ ಅತಿಥಿಗಳಾಗಿ ಆಗಮಿಸುವರು. ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಅಧಿಕಾರ ಸ್ವೀಕಾರ

ಬೆಳಗಾವಿ : ಬೆಳಗಾವಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹುದ್ದೆಯ ಕರ್ತವ್ಯ ಪ್ರಭಾರವನ್ನು ಬಸವರಾಜ ವೈ ಕುರಿಹುಲಿ ಅವರು ಮೇ 2 ರಂದು ವಹಿಸಿಕೊಂಡಿದ್ದಾರೆ. ಕಚೇರಿಗೆ ಸಂಬಂಧಿಸಿದ ಸರ್ಕಾರಿ ಹಾಗೂ ಅರೆ ಸರ್ಕಾರಿ ಪತ್ರಗಳ ವ್ಯವಹಾರಗಳನ್ನು ಬಸವರಾಜ ವೈ ಕುರಿಹುಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಬೆಳಗಾವಿ ಜಿಲ್ಲೆ, ಸುವರ್ಣ ವಿಧಾನಸೌಧ, 2ನೇ ಮಹಡಿ, ಕೊಠಡಿ ಸಂಖ್ಯೆ:204,205 ಮತ್ತು 206, ಹಲಗ ಬೆಳಗಾವಿ, ಇ-ಮೇಲ್: dobcmbelgaumm@gmail.com ಈ ಮೇಲಿನ ವಿಳಾಸದೊಂದಿಗೆ ವ್ಯವಹರಿಸಲು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾರ್ಕ್‌ಗಳಲ್ಲಿ ಸ್ವಚ್ಛತೆ, ಭದ್ರತೆ ಕಾಪಾಡಿ: ಆಯುಕ್ತರಿಗೆ ಮನವಿ

ಬೆಳಗಾವಿ: ನಗರದ ಶಹಾಪುರ ಭಾಗದಲ್ಲಿ ಇರುವ ಛತ್ರಪತಿ ಶಿವಾಜಿ ಮಹಾರಾಜರ ಉದ್ಯಾನವನಕ್ಕೆ ಪ್ರತಿದಿನ ಹಲವರು ವಾಯು ವಿಹಾರಕ್ಕೆ ಆಗಮಿಸುತ್ತಾರೆ.

ವಾಯುವಿಹಾರಕ್ಕೆ ಬಂದ ಜನತೆಗೆ ಸ್ವಚ್ಛತೆ ಹಾಗೂ ಭದ್ರತೆ ಸಮಸ್ಯೆ ಇರುವುದರಿಂದ, ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ವೀರ ಮದಕರಿ ಘರ್ಜನೆ ಸಂಘಟನೆಯಿಂದ ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಲಾಗಿತು.

ವೀರ ಮದಕರಿ ಘರ್ಜನೆ ಸಂಘಟನೆ ರಾಜ್ಯಾಧ್ಯಕ್ಷ ಆನಂದ ಶಿರೂರ ನೇತೃತ್ವದಲ್ಲಿ ಶಿವಾಜಿ ಉದ್ಯಾನವನದಲ್ಲಿ ವಾಯು ವಿಹಾರಕ್ಕೆ ಬಂದ ಜನತೆ ಇಲ್ಲಿಯೇ ಕೆಲ ತಿನುಸುಯ ತಿಂದು ಇಲ್ಲಿಯೇ ಬಿಸಾಕುವುದರಿಂದ ಇಲ್ಲಿನ ವಾತಾವರಣ ಸಂಪೂರ್ಣವಾಗಿ ಹಾಳಾಗುತ್ತಿದ್ದು, ಇಲ್ಲಿ ಬಿಸಾಕಿರುವ ಪದಾರ್ಥ ತಿನ್ನುವುದಕ್ಕೆ ನಾಯಿಗಳು ಹಾಗೂ ಇತರ ಪಕ್ಷಿಗಳು ಆಗಮಿಸುತ್ತಿದ್ದಾವೆ . ಇದರಿಂದಾಗಿ ಬೆಳಗ್ಗೆ, ಸಂಜೆ ವೇಳೆ ಸಾರ್ಜಜನಿಕರು ವಾಯುವಿಹಾರಕ್ಕೆ ಬರುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ ಎಂದು ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದ ಬಳಿಕ ಪಾಲಿಕೆ ಆಯುಕ್ತ ಕಾರ್ತಿಕ್ ಎಂ. ಉದ್ಯಾನವನಕ್ಕೆ ಬೇಟಿ ನೀಡಿ ಸ್ವಚ್ಚತೆ ಕಾರ್ಯ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಉದ್ಯಾನವನದಲ್ಲಿ ಧೂಮಪಾನ, ಮದ್ಯಪಾನ ಸೇರಿದಂತೆ ಆಹಾರ ಪದಾರ್ಥ ನಿಷೇಧಿಸುವಂತೆ ಅಧಿಕಾರಿಗಳು ನಗರ ಸೇವಕರಿಗೆ ಆದೇಶಿಸುವ ಮೂಲಕ ಎಚ್ಚರಿಕೆ ನೀಡಿದರು. ಇದಕ್ಕೂ ಮೊದಲು ವೀರ ಮದಕರಿ ಘರ್ಜನೆ ಸಂಘಟನೆ ಕಾರ್ಯಕರ್ತರು ಕೆಲವೊಂದಿಷ್ಟು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು. ಉದ್ಯಾನವನದಲ್ಲಿ ಸಿಸಿ ಕ್ಯಾಮೆರಾ ಅಳವಡಿಸಬೇಕು. ಇನ್ನೂ ಹೆಚ್ಚಿನ ವಿದ್ಯುತ್ ವ್ಯವಸ್ಥೆ ಮಾಡಬೇಕು. ಸಾರ್ವಜನಿಕರ ಸುರಕ್ಷತೆಗಾಗಿ ಸಂಜೆ ವೇಳೆ ಪೊಲೀಸ್ ನಿಗಾ ವಹಿಸಬೇಕು. ವಿಷಯಗಳ ಬೇಡಿಕೆಗಾಗಿ ಮನವಿ ನೀಡಿದ್ದು, ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಆಯುಕ್ತರು ಭರವಸೆ ನೀಡಿದರು.

ಈ ವೇಳೆ ವಾಲ್ಮೀಕಿ ಸಮುದಾಯದ ಪ್ರಮುಖರು ವಿಜಯ ತಳವಾರ, ಬಲರಾಮ ಮಾಸೆನಟ್ಟಿ, ದತ್ತಾ ಬಿಲಾವರ, ಡಾ.ಉತ್ತಮ ಪಾಟೀಲ, ಮಂಜು ಕಾಂಬ್ಳೆ, ಆಕಾಶ ಧಾಮನೇಕರ, ರೂತುಜಾ ಶಿರೂರ, ರೇಣುಕಾ ಹೊಸೂರ, ಸೀಮಾ ಪವಾರ, ವೈಶಾಲಿ ಸುತಾರ ಸೇರಿದಂತೆ ಇತರರು ಇದ್ದರು.



ಭಾಷೆ ಬದುಕಿನ ಅನುಭವದ ಜೀವಾಳ: ತೋಳ್ಪಾಡಿ

ಬೆಳಗಾವಿ: ಭಾಷೆ ಎನ್ನುವುದು ಜೀವಂತ ಪದಾರ್ಥ. ಅದು ನಮ್ಮ ಬದುಕಿನ ಪ್ರತಿಯೊಂದು ಅನುಭವದ ಜೀವಾಳವಾಗಿದ್ದು, ಅದನ್ನು ಅತ್ಯಂತ ಮುತುವರ್ಜಿಯಿಂದ ಮತ್ತು ಮನಸ್ಸಿನಿಂದ ಬಳಸಬೇಕು. ಕೇವಲ ತಾಂತ್ರಿಕವಾಗಿ ಭಾಷೆ ಬಳಸುವುದರಿಂದ ಸೃಜನಶೀಲತೆ ಅರಳುವುದಿಲ್ಲ ಎಂದು ಸಂಸ್ಕೃತಿ ಚಿಂತಕ ಲಕ್ಷ್ಮೀಶ ತೋಳ್ಪಾಡಿ ಹೇಳಿದರು.

ನಗರದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕನ್ನಡ ಸಂಘವು ಕುವೆಂಪು ಸಭಾಭವನದಲ್ಲಿ ಆಯೋಜಿಸಿದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಸಾಹಿತ್ಯ ಮತ್ತು ತತ್ವಜ್ಞಾನಕ್ಕೆ ಸಮಾನ ಮಹತ್ವವಿದೆ. ಭಾಷೆಯು ಇವೆರಡರ ಮಧ್ಯೆ ಸೇತುವೆಯಂತೆ ಕಾರ್ಯನಿರ್ವಹಿಸುತ್ತದೆ. ಅದರ ಪ್ರತಿಯೊಂದು ಅಕ್ಷರವೂ ನಮ್ಮ ಬದುಕಿಗೆ ಆಧಾರವಾಗಿದೆ. ಮಾತಿನ ಶಕ್ತಿ ಮತ್ತು ಶಬ್ದದ ಅರ್ಥ ಬಹಳ ವಿಶಾಲವಾದದ್ದು, ನಾವು ಒಂದು ವಿಚಾರ ಹೇಗೆ ಅರ್ಥಮಾಡಿಕೊಳ್ಳುತ್ತೇವೆ ಎಂಬುದು ನಮ್ಮ ಬದುಕಿನ ದಿಕ್ಕನ್ನೇ ನಿರ್ಧರಿಸುತ್ತದೆ ಎಂದರು.



ಕುಲಪತಿ ಪ್ರೊ.ಸಿ.ಎಂ.ತ್ಯಾಗರಾಜ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ದಿನಗಳಲ್ಲಿ ನಾವು ಸಹಜತೆಯನ್ನು ಮರೆತು ಕೃತಕ ಬುದ್ಧಿಮತ್ತೆಯ ಹಿಂದೆ ಓಡುತ್ತಿದ್ದೇವೆ. ನಮ್ಮ ಮನಸ್ಸು ಮತ್ತು ಬದುಕಿನ ಅಂತರಾಳವನ್ನು ಶೋಧಿಸಿಕೊಳ್ಳುವ ಅಗತ್ಯ ಹೆಚ್ಚಾಗಿದೆ. ಅಂತಹ ಆತ್ಮಾವಲೋಕನದ ಹಾದಿಯನ್ನು ತೋರಿದ ಲಕ್ಷ್ಮೀಶ ತೋಳ್ಪಾಡಿ ಅವರಿಗೆ ವಿಶ್ವವಿದ್ಯಾಲಯ ಸದಾ ಕೃತಜ್ಞವಾಗಿರುತ್ತದೆ ಎಂದರು.

ಕನ್ನಡ ಸಂಘದ ಅಧ್ಯಕ್ಷ ಡಾ. ಗಜಾನನ ನಾಯ್ಕ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಿಂಡಿಕೇಟ್ ಸದಸ್ಯ ಹಾಗೂ ಬರಹಗಾರ ಪ್ರೊ.ಎಸ್.ಎಸ್.ಅಂಗಡಿ, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಎಸ್.ಗಂಗಾಧರ, ಕನ್ನಡ ಸಂಘದ ಸದಸ್ಯ ಕಾರ್ಯದರ್ಶಿ ಡಾ. ಹನುಮಂತಪ್ಪ ಸಂಜೀವಣ್ಣನವರ, ಉಪಾಧ್ಯಕ್ಷ ಡಾ.ಕನಕಪ್ಪ ಪೂಜಾರ ಸೇರಿದಂತೆ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅಭಿಮಾನೋತ್ಸವ: ಮಲ್ಲೇಶ ಶ್ರೀಗಳಿಗೆ ಆಹ್ವಾನ

ಬೆಳಗಾವಿ: ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಬಿ.ಎಸ್.ಯಡಿಯೂರಪ್ಪ ರಾಜ್ಯಕೀಯದಲ್ಲಿ, ಸುಮಾರು 50 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ್ದು, ಅವರ ಹುಟ್ಟು ಹಬ್ಬದ ನಿಮಿತ್ತ ಅಭಿಮಾನೋತ್ಸವ ದೊಡ್ಡ ಮಟ್ಟದಲ್ಲಿ ಆಯೋಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅಬಿಮಾನೋತ್ಸವದ ಆಮಂತ್ರಣ ಪತ್ರಿಕೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪಟ್ಟಣದ ಹತ್ತಿರದ ಮರಕುಂಬಿಯಶ್ರೀಚಕ್ರ ಸಮೇತಚಾಮುಂಡೇಶ್ವರಿ ಹಾಗೂ ಗೌಡಗೆರೆ ಚಾಮುಂಡೇಶ್ವರಿ ದೇವಸ್ಥಾನದ ಧರ್ಮದರ್ಶಿಗಳಾದ ಜಿ.ಬಿ.ಮಲ್ಲೇಶ್ ಗುರೂಜಿ ಅವರಿಗೆ ನೀಡಿ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.



ಈ ವೇಳೆ ಬಿಜೆಪಿ ಮಂಡಲ ಅಧ್ಯಕ್ಷ ಸುಭಾಷ ತುರಮರಿ, ಬಿಜೆಪಿ ಜಿಲ್ಲಾ ಮಾಧ್ಯಮ ಸಲಹೆಗಾರ ಸಚಿನ ಕಡಿ, ಮುಖಂಡರಾದ ಪ್ರವೀಣ ಶಿಂಗಾರಿ, ರಾಜು ಗುಡಿಮನಿ ಸೇರಿದಂತೆ ಬಿಜೆಪಿಯ ಪ್ರಮುಖರು ಪಾಲ್ಗೊಂಡಿದ್ದರು.

ಕೌಶಲ್ಯ ತರಬೇತಿ ಪ್ರವೇಶಾತಿಗೆ ಮೇ 10 ಅಂತಿಮ ದಿನ

ಬೆಳಗಾವಿ: ಕೌಶಲ್ಯಪೂರ್ಣ ಮಾನವ ಸಂಪನ್ಮೂಲಕ್ಕೆ ಜಾಗತಿಕ ಬೇಡಿಕೆ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು ವಿದ್ಯಾರ್ಥಿಗಳಿಗೆ ಜಾಗತಿಕ ಅಗತ್ಯಕ್ಕೆ ಅನುಗುವಣವಾಗಿ ತರಬೇತಿ ನೀಡಿ ಉದ್ಯೋಗವಕಾಶಗಳನ್ನು ಒದಗಿಸುತ್ತದೆ. ಜಿಟಿಟಿಸಿ ಸಂಸ್ಥೆಯಲ್ಲಿ ಕೋರ್ಸ್ ಪೂರೈಸಿದ ಬಹಳಷ್ಟು ವಿದ್ಯಾರ್ಥಿಗಳು ಯಶಸ್ವಿ ಉದ್ಯಮಿಗಳು ಮತ್ತು ಪ್ರತಿಷ್ಠಿತ ಕೈಗಾರಿಕೆಗಳಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ ಎಂದು ಸರ್ಕಾರಿ ಉಪಕರಣಾಗಾರ, ತರಬೇತಿ ಕೇಂದ್ರದ ಪ್ರಾಂಶುಪಾಲ ಯಲ್ಲಪ್ಪ ಸವದತ್ತಿ ಹೇಳಿದರು.



ನಗರದ ವಾರ್ತಾ ಭವನದಲ್ಲಿ ಇತ್ತೀಚಿಗೆ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಉಪಕರಣ ಮತ್ತು ಅಚ್ಚು ಶಾಸ್ತ್ರದಲ್ಲಿ ಉತ್ತಮ ಗುಣಮಟ್ಟದ ತರಬೇತಿ, ಆರ್ಥಿಕವಾಗಿ ಹಿಂದುಳಿದ ಹಾಗೂ ಗ್ರಾಮೀಣ ಅಭ್ಯರ್ಥಿಗಳಿಗೆ ಆರ್ಥಿಕ ಸ್ವಾವಲಂಬನೆ ಪಡೆಯಲು ಅಗತ್ಯ ತರಬೇತಿ ತಂತ್ರಜ್ಞಾನ ರೂಪಿಸುವುದು ಸಂಸ್ಥೆ ಮುಖ್ಯ ಉದ್ದೇಶವಾಗಿದೆ ಎಂದರು.

ಸಂಸ್ಥೆಯಲ್ಲಿ ಪ್ರಸಕ್ತ ಸಾಲಿನ ಪ್ರವೇಶಾತಿಗಳು ಪ್ರಾರಂಭವಾಗಿದ್ದು, ಮೇ. 10 ಪ್ರವೇಶಾತಿಗೆ ಅಂತಿಮ ದಿನವಾಗಿರುತ್ತದೆ. ಪ್ರತಿ ವರ್ಷ 150 ವಿದ್ಯಾರ್ಥಿಗಳಿಗೆ ಪೂರ್ಣಾವಧಿ ಹಾಗೂ 500 ವಿದ್ಯಾರ್ಥಿಗಳಿಗೆ ಅಲ್ಪಾವಧಿ ತರಬೇತಿ ನೀಡಲಾಗುವುದು. ಸಂಸ್ಥೆಯಿಂದ ಸುಮಾರು 1011 ವಿದ್ಯಾರ್ಥಿಗಳು ಡಿಪ್ಲೋಮಾತರಬೇತಿಪೂರ್ಣಗೊಳಿಸಿ ಪ್ರತಿಷ್ಠಿತ ಕೈಗಾರಿಕೆಗಳಲ್ಲಿ ಉತ್ತಮ ವೇತನದೊಂದಿಗೆ ಕಾರ್ಯ ನಿರ್ವಹಿಸುತ್ತಿರುತ್ತಾರೆ ಎಂದರು.

ಸಂಸ್ಥೆ ಸಮನ್ವಯಾಧಿಕಾರಿ ಬಿ.ಜಿ.ಮೊಗೇದ ಮಾತನಾಡಿ, ಸಂಸ್ಥೆಯಿಂದ ತರಬೇತಿ ಪಡೆದಂತಹ ನೂರಕ್ಕೂ ಹೆಚ್ಚಿನ ವಿಧ್ಯಾರ್ಥಿಗಳು ಉತ್ತಮ ವೇತನದೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸಕ್ತ ಸಾಲಿನಲ್ಲಿ ಮೂವತ್ತಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ತರಬೇತಿ ಪೂರ್ಣಗೊಳಿಸಿದ್ದು, ಎಲ್ಲ ವಿದ್ಯಾರ್ಥಿಗಳಿಗೆ ವಿವಿಧ ಕೈಗಾರಿಕೆಗಳಿಂದ ಉದ್ಯೋಗದ ಖಾತ್ರಿ ದೊರೆಕಿರುತ್ತದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ವಿಭಾಗದ ಮುಖ್ಯಸ್ಥ ರಾಮನಾಥ, ಆಡಳಿತಾಧಿಕಾರಿ ಬಸವರಾಜ ಪಾಟೀಲ ಉಪಸ್ಥಿತರಿದ್ದರು.

ಜಾತ್ರೆಗಳು ಸಂಬಂಧ ಬೆಸೆಯುವ ಕೊಂಡಿ: ಕಾಡಸಿದ್ದೇಶ್ವರ ಶ್ರೀಗಳು

ರಾಯಬಾಗ: ಜಾತ್ರೆಯು ಕೇವಲ ಹೋಳಿಗೆ ಊಟ, ಹೊಸಬಟ್ಟೆ ಸಂಭ್ರಮ, ನಾಟಕ, ಆರ್ಕೆಸ್ಟ್ರಾಗಳ ಆಡಂಬರ ಮಾತ್ರವಲ್ಲ, ಯಾವುದೋ ಕಾರಣದಿಂದ ಕಳಚಿ ಹೋದ ಸಂಬಂಧ ಬೆಸೆಯುವ ಕೊಂಡಿಯಾಗಿದೆ ಎಂದು ಕನ್ನೇರಿ ಮಠದ ಅದೃಶ್ಯ ಕಾಡಸಿದ್ಧೇಶ್ವರ ಶ್ರೀಗಳು ಹೇಳಿದರು.

ಐದು ವರ್ಷಗಳಿಗೊಮ್ಮೆ ನಡೆಯುವ ನಗರದ ಶ್ರೀಮಹಾಲಕ್ಷ್ಮೀದೇವಿಯ ಜಾತ್ರೆ ನಿಮಿತ್ತಗೋಪೂಜೆ ನೆರವೇರಿಸಿ ಜಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಹಿರಿಯರು ವೈಮನಸ್ಸು ಮರೆತು ಎಲ್ಲರೂ ಒಂದಾಗಿ ಬಾಳಲಿ ಎಂದು ಒಟ್ಟಿಗೆ ಸೇರಿಸುವ ಉದ್ದೇಶದಿಂದ ಜಾತ್ರೆ ಮಾಡುತ್ತ ಬಂದಿದ್ದಾರೆ. ದೇವರುಗಳು ಮಾತನಾಡುವದಿಲ್ಲ, ಆದರೆ ಒಡೆದ ಮನಸ್ಸುಗಳನ್ನು ಒಟ್ಟುಗೂಡಿಸುವ ಶಕ್ತಿ ದೇವರುಗಳಿಗಿದೆ. ಗ್ರಾಮದೇವತೆ ಜಾತ್ರೆ ಜಾತಿ, ಮತ, ಬೇಧಭಾವವಿಲ್ಲದೆ ಶ್ರದ್ಧೆ, ಭಕ್ತಿಯಿಂದ ಅಸಂಖ್ಯಾತ ಭಕ್ತರು ತನು, ಮನ, ಧನದಿಂದ ದೇವಿಯ ಸೇವೆ ಮಾಡುತ್ತಿರುವುದು ಸಂತಸವಾಗುತ್ತಿದೆ. ಒಂದು ವೇಳೆ ನಾನು ಬಾರದೇ ಹೋಗಿದ್ದರೆ ಈ ಸುದಿನ ನೋಡುಲು ಆಗುತ್ತಿರಲಿಲ್ಲ ಎಂದರು. ಹೋಳಿಗೆ ತಯಾರಿಸಿ ಅಸಂಖ್ಯಾತ ಭಕ್ತರಿಗೆ ಹೋಳಿಗೆ ಮಹಾಪ್ರಸಾದ ಉಣಬಡಿಸಿದರು. ಜಿಪಂ ಮಾಜಿ ಸದಸ್ಯ ಹಾಗೂ ಅಭಾಜಿ ಫೌಂಡೇಶನ್ ಅಧ್ಯಕ್ಷ ಪ್ರಣಯ ಪಾಟೀಲ, ಬಸವರಾಜ ಸನದಿ, ಜಯದೀಪ ದೇಸಾಯಿ, ವಿಠ್ಠಲ ಹೆಗಡೆ, ಕುಮಾರ ದಾವಣೆ, ಚಿದಾನಂದ ಮುರಗುಡೆ, ಸಿದ್ದವ್ವ ಮೇತ್ರಿ, ರಾಕೇಶ ಅವಳೆ, ರಮೇಶ ಕುಂಬಾರ, ಸುಭಾಷ್ ಘೋಡಕೆ, ಸುನೀಲ ಕುಲಗುಡೆ, ಸುನೀಲ ಪೇಟಕರ, ಪ್ರತಾಪ ಹೊಸಮನಿ, ಅಮಿತ ಹೋಂಕಳೆ, ಸದಾನಂದ ಹಳಿಂಗಳಿ, ಜಾತ್ರಾ ಹಕ್ಕುದಾರರು, ಜಾತ್ರಾ ಕಮೀಟಿ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಕನ್ನಡ ಬ್ಯಾನರ್ ಹರಿದು ಅವಮಾನ: ಕ್ರಮಕ್ಕೆ ಆಗ್ರಹ

ಬೆಳಗಾವಿ: ತಾಲೂಕಿನ ಬಂಬರಗೆ ಗ್ರಾಮದಲ್ಲಿ ಕನ್ನಡ ಭಾಷೆಯ ಬ್ಯಾನರ್ ಹರಿದು ಹಾಕಿರುವ ಘಟನೆ ಭಾಷಾಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದೆ. ಈ ಕುರಿತು ಕರ್ನಾಟಕ ರಕ್ಷಣೆ ವೇದಿಕೆ ಯುವ ಸೇನೆಯ ಪದಾಧಿಕಾರಿಗಳು ಕಾಕತಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಬೆಳಗಾವಿ ತಾಲೂಕಿನ ಕಾಕತಿ ಪೊಲೀಸ್ ಠಾಣಾ ವ್ಯಾಪ್ತಿಯ ಬಂಬರಗೆ ಗ್ರಾಮದಲ್ಲಿ ಶ್ರೀಮಹಾಲಕ್ಷ್ಮಿ ಜಾತ್ರೆ ನಿಮಿತ್ತ ಗಣ್ಯರನ್ನು ಸ್ವಾಗತಿಸಲು ಹಾಕಿದ ಕನ್ನಡ ಭಾಷೆಯ ಬ್ಯಾನರ್‌ಗಳು ಕಿಡಿಗೇಡಿಗಳು ಹರಿದು ಹಾಕಿ ಭಾಷೆಗೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಕೃತ್ಯದ ವಿರುದ್ಧ ಕರ್ನಾಟಕ ರಕ್ಷಣೆ ವೇದಿಕೆ ಯುವ ಸೇನೆಯ ಬೆಳಗಾವಿ ಜಿಲ್ಲಾಧ್ಯಕ್ಷ ಬಾಳಪ್ಪ ಗುಡುಗೇನಟ್ಟಿ ಹಾಗೂ ಕಾರ್ಯಾಧ್ಯಕ್ಷರ ನೇತೃತ್ವದಲ್ಲಿ ಕಾಕತಿ ಪೊಲೀಸರಿಗೆ ಅಧಿಕೃತವಾಗಿ ಮನವಿ ಸಲ್ಲಿಸಲಾಯಿತು. ಜಿಲ್ಲಾಧ್ಯಕ್ಷರು ಮತ್ತು ಇತರ ಕನ್ನಡಪರ ಹೋರಾಟಗಾರರು ಠಾಣೆಗೆ ಭೇಟಿ ನೀಡಿ, ಕನ್ನಡ ವಿರೋಧಿ ಕೃತ್ಯ ಎಸಗಿದವರ ವಿರುದ್ಧ ತಕ್ಷಣವೇ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.



ಕನ್ನಡ ಭಾಷೆ ಅಸ್ಮಿತೆಗೆ ಧಕ್ಕೆ ತಂದಿರುವ ಕಿಡಿಗೇಡಿಗಳ ವಿರುದ್ಧ ಕೇವಲ ಕೇಸ್ ದಾಖಲಿಸುವುದಷ್ಟೇ ಅಲ್ಲದೇ, ಅವರ ವಿರುದ್ಧ ರೌಡಿಶೀಟ್ ತೆರೆಯಬೇಕೆಂದು ಸಂಘಟನೆ ಆಗ್ರಹಿಸಿದೆ. ಒಂದು ವೇಳೆ ಪೊಲೀಸರು ಈ ನಿಟ್ಟಿನಲ್ಲಿ ನಿರ್ಲಕ್ಷ್ಯ ವಹಿಸಿದರೆ, ಕಾಕತಿ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕುವುದಾಗಿ ಮತ್ತು ಬಂಬರಗೆ ಗ್ರಾಮದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಜಿಲ್ಲಾಧ್ಯಕ್ಷ ಬಾಳಪ್ಪ ಗುಡುಗೇನಟ್ಟಿ ಎಚ್ಚರಿಕೆ ನೀಡಿದ್ದಾರೆ.

ಈ ವೇಳೆ ಕರ್ನಾಟಕ ರಕ್ಷಣೆ ವೇದಿಕೆ ಯುವ ಸೇನೆಯ ಕಾರ್ಯಕರ್ತರು ಸೇರಿದಂತೆ ಹಲವರು ಇದ್ದರು.

ಕಿರುಸುದ್ದಿ

ಅರ್ಜಿ ಆಹ್ವಾನ

◆**ಬೆಳಗಾವಿ:** 2026–27ನೇ ಸಾಲಿನ ರಾಮದುರ್ಗ ತಾಲೂಕಿನ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಎಂಜಿನಿಯರಿಂಗ್ ಕೋರ್ಸುಗಳಾದ ಸಿವಿಲ್,ಇಇ,ಇಸಿ ಮತ್ತು ಕಂಪ್ಯೂಟರ್ ಸೈನ್ಸ್ ವಿಭಾಗಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್ http://dtek.karnataka.gov.in ಮೂಲಕ ಅರ್ಜಿ ಪಡೆದುಕೊಂಡು ಮೇ30 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು ಎಂದು ಪ್ರಾಚಾರ್ಯರು ಸರ್ಕಾರಿ ಪಾಲಿಟೆಕ್ನಿಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾನ ವೈಭವ ಮೇ 10ರಂದು

◆**ಬೆಳಗಾವಿ:** ಕನ್ನಡ ಚಲನಚಿತ್ರರಂಗದ ಅಮರ ಗಾನಗಂಧರ್ವ, ನಟಸಾರ್ವಭೌಮ ಡಾ.ರಾಜಕುಮಾರ ಅವರ ಸ್ಮರಣಾರ್ಥವಾಗಿ ಮೇ 10ರಂದು ಸಂಜೆ 5ಕ್ಕೆ ನಗರದ ಲೋಕಮಾನ್ಯ ರಂಗಮಂದಿರದಲ್ಲಿ ಸುಮಧುರ ಕನ್ನಡ ಗೀತೆಗಳ ಗಾನ ವೈಭವ ಕರೋಕೆ ಸಂಗೀತ ಕಾರ್ಯಕ್ರಮ ಎಸ್.ಬಿ.ಕರೋಕೆ ತಂಡ ಆಯೋಜಿಸಿದೆ. ವೇಣುನಾದ ತಂಡದ ಪ್ರತಿಭಾವಂತ ಹಾಡುಗಾರರು ಹಾಗೂ ಹಾಡುಗಾರ್ತಿಯರು ಡಾ.ರಾಜಕುಮಾರ ಅಮರ ಗೀತೆಗಳನ್ನು ಕರೋಕೆ ಶೈಲಿಯಲ್ಲಿ ಮನಮೋಹಕವಾಗಿ ಪ್ರಸ್ತುತಪಡಿಸಲಿದ್ದಾರೆ. ಉಚಿತ ಪ್ರವೇಶವಿದ್ದು, ಕನ್ನಡಾಭಿಮಾನಿಗಳು ಹಾಗೂ ಸಂಗೀತ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

◆**ಬೆಳಗಾವಿ:** ಹುವಿಸಕಂನಿ ವತಿಯಿಂದ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳುತ್ತಿರುವುದರಿಂದ ಮೇ 9ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ 33ಕೆವಿ ಲೋಂಡಾ ಉಪಕೇಂದ್ರದಿಂದ ಸರಬರಾಜು ಆಗುವ ನಾಗರಗಾಳಿ, ನಾಗರಗಾಳಿ ರೇಲ್ವೆ ನಿಲ್ದಾಣ, ಮುಂಡವಾಡ, ಕುಂಬರ್ಡಾ, ತಾರವಾಡ, ಲೋಂಡಾ, ಲೋಂಡಾ ರೇಲ್ವೆ ನಿಲ್ದಾಣ, ಗುಂಜಿ, ಮೋಹಿಶೇಟ, ವಾಟ್ರೆ, ಭಾಲ್ಕೆ ಬಿ.ಕೆ, ಭಾಲ್ಕೆ ಕೆ.ಎಚ್, ಶಿಂದೋಳ್ಳಿ, ಹೊನ್ಕಲ, ಸಾವರಗಾಳಿ, ಅಂಬೇವಾಡಿ, ತಿವೊಳ್ಳಿ ಹಾಗೂ ಡೋಕೆಗಾಳಿ ಗ್ರಾಮಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಹುವಿಸಕಂನಿ ಕಾ ಮತ್ತು ಪಾ ಗ್ರಾಮೀಣ ವಿಭಾಗ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

◆**ಬೆಳಗಾವಿ:** 2026–27ನೇ ಶೈಕ್ಷಣಿಕ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಡಾ.ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಮೌಲಾನಾ ಆಜಾದ ಆಂಗ್ಲ ಮಾಧ್ಯಮ ಮಾದರಿ ಶಾಲೆಗಳಲ್ಲಿ ಖಾಲಿ ಇರುವ ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ವಿಜ್ಞಾನ, ಸಮಾಜ ವಿಜ್ಞಾನ, ದೈಹಿಕ ಶಿಕ್ಷಕ ಹಾಗೂ ಗಣಿತ ಅತಿಥಿ ಶಿಕ್ಷಕರ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಮೇ 16 ರೊಳಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಅಲ್ಪಸಂಖ್ಯಾತರ ಇಲಾಖೆಗೆ ಅರ್ಜಿ ಸಲ್ಲಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಅಥಣಿಯಲ್ಲಿ ಕೆಲವೆಡೆ ಮಳೆ



◆**ಅಥಣಿ:** ತಾಲೂಕಿನಲ್ಲಿ ದಗ ದಗ ಬಿಸಿಲಿನ ತಾಪಮಾನಕ್ಕೆ ಜನರು ತತ್ತರಿಸಿಹೋಗಿದ್ದರು. ಬುಧವಾರ ಕೆಲವೆಡೆ ಸಂಜೆ ವೇಳೆ ಮಳೆರಾಯನ ಆಗಮನ ಪ್ರಾರಂಭವಾಯಿತು. ಇದರಿಂದಾಗಿ ರೈತರು ಮತ್ತು ಜನರು ಸ್ವಲ್ಪ ನಿರಾಳವಾದರು. ರೈತರು ಈಗ ಕಬ್ಬು ಮತ್ತು ಅರಿಸಿನ ಬೆಳೆ ನಾಟಿ ಮಾಡಲು ಸಿದ್ಧತೆ ಮಾಡಿಕೊಂಡಿದರು. ಅಂತಹ ರೈತರಿಗೆ ಈ ಮಳೆ ಕೆಲಸ ಪ್ರಾರಂಭಿಸಲು ಅನಕೂಲವಾಗಿದೆ.

ಅರ್ಜಿ ಆಹ್ವಾನ

◆**ಕುಡಚಿ:** ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಉತ್ತೀರ್ಣರಾದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಘದ ತಾಲೂಕು ಅಧ್ಯಕ್ಷ ಉಮೇಶ ಭೂಪಾಲ ಪೋಳ ತಿಳಿಸಿದ್ದಾರೆ. ಆಸಕ್ತರು ಮೇ 25 ರೊಳಗಾಗಿ ವೆಬ್‌ಸೈಟ್ https://powermedia.info ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ KSGEA NEWS YouTube ಸಂಪರ್ಕಿಸಲು ತಿಳಿಸಿದ್ದಾರೆ.





ಬೆಳಗಾವಿ: ನಗರದ ಕಾರಂಜಿಮಠ 299ನೇ ಮಾಸಿಕ ಶಿವಾನುಭವ ಕಾರ್ಯಕ್ರಮದ ನಿಮಿತ್ತ ಇತ್ತೀಚೆಗೆ ನಡೆದ ವಿಶ್ವಗುರು ಬಸವಣ್ಣನವರ ಜಯಂತಿಯಲ್ಲಿ ಜೆಎನ್‌ಎಂಸಿ ನಿವೃತ್ತ ಪ್ರಾಚಾರ್ಯ ಡಾ.ಎಚ್ ಬಿ. ರಾಜಶೇಖರನ ಮಾತನಾಡಿದರು. ಕಾರಂಜಿಮಠದ ಪೀಠಾಧಿಕಾರಿ ಗುರುಸಿದ್ಧ ಶ್ರೀಗಳು ಪಾವನ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಶಿರಡಿ ಸಾಯಿಬಾಬಾ ಮಂದಿರ ಲೋಕಾರ್ಪಣೆ

◆**ಬೆಳಗಾವಿ:** ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಧಾರ್ಮಿಕ ಕೇಂದ್ರಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹೇಳಿದರು. ಜಿಲ್ಲೆಯ ಬಸವನ ಕುಡಚಿಯ ಸಾಯಿ ಕಾಲೋನಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀಶಿರಡಿ ಸಾಯಿಬಾಬಾ ಮಂದಿರದ ಲೋಕಾರ್ಪಣೆ, ವಿಗ್ರಹ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಸಮಾರಂಭದಲ್ಲಿ ಮಾತನಾಡಿ, ಶಿರಡಿ ಸಾಯಿಬಾಬಾ ಮಾನವಕುಲಕ್ಕೆ ಅಮೂಲ್ಯ ಸಂದೇಶವನ್ನು ನೀಡಿದ್ದು, ಅವರ ಆದರ್ಶಗಳು ಇಂದಿನ ಸಮಾಜಕ್ಕೂ ದಾರಿದೀಪವಾಗಿವೆ. ಇಂತಹ ಮಂದಿರಗಳು ಕೇವಲ ಪೂಜಾ ಸ್ಥಳಗಳಾಗದೇ, ಸಮಾಜವನ್ನು ಒಗ್ಗೂಡಿಸುವ ಆಧ್ಯಾತ್ಮಿಕ ಕೇಂದ್ರಗಳಾಗಬೇಕು ಎಂದರು. ದೇವಸ್ಥಾನದ ಸಂಸ್ಥಾಪಕರು ಹಾಗೂ ನವಜೀವನ್ ಫೌಂಡೇಷನ್ ಮುಖ್ಯಸ್ಥ ಡಾ.ಸತೀಶ.ಆರ್.ಚೌಲಿಗೇರ್ ಅವರನ್ನು ಅಭಿನಂದಿಸಿದ ಚನ್ನರಾಜ ಹಟ್ಟಿಹೊಳಿ, ಸಮಾಜಮುಖಿ ಕಾರ್ಯಗಳೊಂದಿಗೆ ಧಾರ್ಮಿಕ ಸೇವೆ ಕೈಗೊಂಡಿರುವುದು ಶ್ಲಾಘನೀಯ ಎಂದರು. ವಿಶೇಷ ಪೂಜೆ, ಹೋಮ–ಹವನ, ವಿಗ್ರಹ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ವಿಧಿವಿಧಾನಗಳು ಭಕ್ತಿಭಾವದಿಂದ ನೆರವೇರಿದವು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಾಯಿಬಾಬಾರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಗುರು–ಹಿರಿಯರು, ಸ್ಥಳೀಯ ನಿವಾಸಿಗಳು, ಮಾಜಿ ಸೈನಿಕರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.



ಬೆಳಗಾವಿ: ಜಿಲ್ಲೆಯ ಬಸವನ ಕುಡಚಿಯ ಸಾಯಿ ಕಾಲೋನಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀಶಿರಡಿ ಸಾಯಿಬಾಬಾ ಮಂದಿರವನ್ನು ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಲೋಕಾರ್ಪಣೆ ಮಾಡಿದರು.ಗುರು–ಹಿರಿಯರು, ಸ್ಥಳೀಯ ನಿವಾಸಿಗಳು, ಮಾಜಿ ಸೈನಿಕರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

ಕೆರೆ ಅಭಿವೃದ್ಧಿ ಕಾಮಗಾರಿ ಪರಿಶೀಲನೆ | ಮಹಮ್ಮದ್ ಗೌಸ್ ಕಾರ್ಮಿಕರಿಗೆ ಸಲಹೆ

ಜೀವ ವಿಮೆ ಸೌಲಭ್ಯ ಪಡೆದುಕೊಳ್ಳಿ

◆**ಚ.ಕಿತ್ತೂರು:** ಉಗರಖೋಡ ಗ್ರಾಪಂ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಂಡಿರುವ ಕೆರೆ ಹೂಳು ಎತ್ತುವ ಕಾಮಗಾರಿಗೆ ಸಹಾಯಕ ನಿರ್ದೇಶಕ ಮಹಮ್ಮದ್ ಗೌಸ್ ರಿಸಲ್ದಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾಮಗಾರಿ ಪ್ರಗತಿ ಅವಲೋಕಿಸಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಸಂಗ್ರಹ ಸಾಮರ್ಥ್ಯ ಹೆಚ್ಚಿಸುವ ಹಾಗೂ ಭೂಗರ್ಭ ಜಲಮಟ್ಟ ಅಭಿವೃದ್ಧಿಗೆ ಕೆರೆ ಅಭಿವೃದ್ಧಿ ಕಾಮಗಾರಿಗಳು ಸಹಕಾರಿಯಾಗುತ್ತವೆ ಎಂದರು.

ಬೇಸಿಗೆ ಸಂದರ್ಭದಲ್ಲಿ ನೀರಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತಾ ಕ್ರಮವಾಗಿ ಇಂತಹ ಕಾಮಗಾರಿ ಗುಣಮಟ್ಟದೊಂದಿಗೆ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಕಾರ್ಮಿಕರೊಂದಿಗೆ ಸಂವಾದ ನಡೆಸಿದ ಅವರು, ಉದ್ಯೋಗ ಖಾತರಿ ಯೋಜನೆಯು ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸುವ ಜೊತೆಗೆ ಗ್ರಾಮಾಭಿವೃದ್ಧಿಗೂ ಸಹಕಾರಿಯಾಗುತ್ತಿದೆ ಎಂದರು.

ಕಾರ್ಮಿಕರು ಸರ್ಕಾರದ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಧಾನಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ ಕುರಿತು ಮಾಹಿತಿ ನೀಡಿದ ಅವರು, ಅತಿ ಕಡಿಮೆ ವಾರ್ಷಿಕ ಪ್ರೀಮಿಯಂನಲ್ಲಿ ಜೀವ ವಿಮೆ ಸೌಲಭ್ಯ ದೊರೆಯುವ ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾಗಿದೆ. 18ರಿಂದ 50 ವರ್ಷದೊಳಗಿನವರು ಯೋಜನೆಗೆ ನೋಂದಣಿ ಮಾಡಿಕೊಳ್ಳಬಹುದಾಗಿದ್ದು, ವಿಮೆದಾರರ ಅನಿರೀಕ್ಷಿತ ನಿಧನ ಸಂಭವಿಸಿದಲ್ಲಿ ಕುಟುಂಬಕ್ಕೆ 2 ಲಕ್ಷ ರೂ. ವಿಮಾ ಪರಿಹಾರ ದೊರೆಯುತ್ತದೆ ಎಂದು ವಿವರಿಸಿದರು.



> **ಪ್ರಧಾನಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ ಕುರಿತು ಮಾಹಿತಿ ನೀಡಿದ ಅವರು, ಅತಿ ಕಡಿಮೆ ವಾರ್ಷಿಕ ಪ್ರೀಮಿಯಂನಲ್ಲಿ ಜೀವ ವಿಮೆ ಸೌಲಭ್ಯ ದೊರೆಯುವ ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾಗಿದೆ. 18ರಿಂದ 50 ವರ್ಷದೊಳಗಿನವರು ಯೋಜನೆಗೆ ನೋಂದಣಿ ಮಾಡಿಕೊಳ್ಳಬಹುದಾಗಿದ್ದು, ವಿಮೆದಾರರ ಅನಿರೀಕ್ಷಿತ ನಿಧನ ಸಂಭವಿಸಿದಲ್ಲಿ ಕುಟುಂಬಕ್ಕೆ 2 ಲಕ್ಷ ರೂ. ವಿಮಾ ಪರಿಹಾರ ದೊರೆಯುತ್ತದೆ**
> ■ **ಮಹಮ್ಮದ್ ಗೌಸ್ ರಿಸಲ್ದಾರ್, ಸಹಾಯಕ ನಿರ್ದೇಶಕ**

ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಇಂತಹ ಯೋಜನೆಗಳು ಭದ್ರತೆ ನೀಡುವುದರಿಂದ ಅರ್ಹರು ಕಡ್ಡಾಯವಾಗಿ ಯೋಜನೆಯ ಸೌಲಭ್ಯ ಪಡೆಯಬೇಕು ಎಂದರು.

ಕಾಮಗಾರಿ ಸ್ಥಳದಲ್ಲಿ ಕಾರ್ಮಿಕರಿಗೆ ಮೂಲ ಸೌಲಭ್ಯ ಸಮರ್ಪಕವಾಗಿ ಒದಗಿಸಬೇಕು ಹಾಗೂ ಕಾಮಗಾರಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಪಿಡಿಒ ಜಗದೀಶ ಗೌಡರ, ಐಇಸಿ ಸಂಯೋಜಕಿ ಎಸ್.ಬಿ.ಜವಳಿ, ಗ್ರಾಮ ಕಾಯಕ ಮಿತ್ರ ಕಸ್ತೂರಿ ಚಕಡಿ, ಬಿಎಫ್‌ಟಿ ರಾಯನಗೌಡ ದೊಡವಾಡ , ಡಿಇಒ ಸುಂದರ ತೆಳಗಡೆ ಹಾಗೂ ಕೂಲಿಕಾರ್ಮಿಕರು ಉಪಸ್ಥಿತರಿದ್ದರು.

ರೋಬೋಟಿಕ್ ತಂತ್ರಜ್ಞಾನ ಕಾರ್ಯಾಗಾರ

◆**ಬೈಲಹೊಂಗಲ:** ದಿನ ಆಧುನಿಕ ಯುಗದಲ್ಲಿ ರೋಬೋಟಿಕ್ ಹಾಗೂ ಎಐ ದಂತಹ ತಂತ್ರಜ್ಞಾನ ನಮ್ಮ ಶಿಕ್ಷಕರು ಅಳವಡಿಸಿಕೊಳ್ಳುವದು ಅತೀ ಅವಶ್ಯವಾಗಿದೆ ಎಂದು ಗೋವಾ ಸರ್ಕಾರದ ಜಲ ಸಂಪನ್ಮೂಲ ಸಚಿವ ಸುಭಾಷ ಶಿರೋಡಕರ ಹೇಳಿದರು.

ಅವರು ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಕಿತ್ತೂರ ರಾಣಿ ಚನ್ನಮ್ಮ, ಶಿಕ್ಷಣ ಸಂಸ್ಥೆಯಲ್ಲಿ ಮಕ್ಕಳ ಹಾಗೂ ಶಿಕ್ಷರಿಗಾಗಿ ಆಯೋಜಿಸಲಾದ ರೋಬೋಟಿಕ್ ತಂತ್ರಜ್ಞಾನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ದೇಶ, ಮಕ್ಕಳ ಉಜ್ವಲ ಭವಿಷ್ಯ ಯಾವಗಲೂ ಸ್ಪೂರ್ತಿ ಹಾಗೂ ಪ್ರೇರಣೆ ಮೇಲೆ ನಿರ್ಧಾರವಾಗಿದೆ ಹಾಗಾಗಿ ಶಿಕ್ಷರು ನಿರಂತರವಾಗಿ ಮಕ್ಕಳಿಗೆ ಪಾಠ ಮಾಡುವಾಗ ಸದಾ ಸ್ಪೂರ್ತಿಯ ಚಿಲುಮೆಯಂತೆ ಅವರ ಬದುಕು ರೂಪಿಸಬೇಕು ಎಂದರು.

ಸಂಸ್ಥೆಯ ಚೇರಮನ್ ಡಾ.ವಿಶ್ವನಾಥ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಬಾದಲಾಗುವದು ಅನಿವಾರ್ಯವಾಗಿದ್ದು , ಈ ನಿಟ್ಟಿನಲ್ಲಿ ಕಂಪ್ಯೂಟರ್ ಶಿಕ್ಷಣದೊಂದಿಗೆ ತಂತ್ರಜ್ಞಾನಗಳ ಜೊತೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದು ಅವಶ್ಯವಾಗಿದೆ. ಶಿಕ್ಷಣ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಅಪಾರವಾಗಿದ್ದು ಶಿಕ್ಷಕಕರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಅವರನ್ನು ದೇಶದ ಒಳ್ಳೆಯ ಪ್ರಜೆಗಳನ್ನಾಗಿ ಮಾಡಲು ಪಣ ತೊಡಬೇಕು ಎಂದರು.

ಕ್ಯೂರಿಎಸ್ ಮೈಂಡ್ ಸಂಸ್ಥಾಪಕ ಮನೋಜ ಶ್ಯಾಮ ಸಾಂಡೇಕರ ಕಾರ್ಯಾಗಾರದ ಕುರಿತು ವಿವರವಾಗಿ ಶಿಕ್ಷಕರಿ ಮನವರಿಕೆ ಮಾಡಿದರು.

ಸಂಸ್ಥೆಯ ಕಾರ್ಯದರ್ಶಿ ಸಂಜಯ ಗಡತರನವರ, ಖಜಾಂಚಿ ಮಹಾಂತೇಶ ವಾಲಿ, ಉಪಸಮಿತಿ ಚೇರಮನ್ ಎನ್.ಎಸ್. ಪಾಟೀಲ, ನಿರ್ದೇಶಕ ಶೀರಿಷ ತುಡವೇಕರ, ದೀಪಕ ಸಂಗೊಳ್ಳಿ, ರೋಬೋಟಿಕ್ ಘಟಕದ ವೆನಿಲಾ ಗೋರೆ ಇದ್ದರು.

ಪದವಿ ಮಹಾವಿದ್ಯಾಲಯ ಬಿಬಿಎ, ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯ ಬಿ.ಬಿ. ಬೂದಿಹಾಳ, ಸುದೀಂದ್ರ ದೇಶಮುಖ ಎಂ.ಎಸ್.ಇಂಚಲ, ಸಾಂಲಿ ಘಟಕದ ಸಂದೀಪ ನಾಗಣೆ, ಸಹಾಯಕ ಪ್ರಾಧ್ಯಾಪಕರು ಹಾಗು ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕ ಶಿಕ್ಷಕಿಯರು ತರಬೇತಿಯಲ್ಲಿ ಹಾಜರಿದ್ದರು.

ಕಾರ್ಯಾಗಾರದ ಸಂಯೋಜಕ ಆಂಗ್ಲ ಮಾಧ್ಯಮ ಪ್ರಾಚಾರ್ಯ ಮಲ್ಲಿಕಾರ್ಜುನ ಬಿರಾದಾರ ಸ್ವಾಗತಿಸಿ, ನಿರೂಪಿಸಿದರು.

ಗೋವಾ ಸರಕಾರದ ಜಲ ಸಂಪನ್ಮೂಲ ಸಚಿವ ಸುಭಾಷ ಶಿರೋಡಕರ ರಾಣಿ ಚನ್ನಮ್ಮಾಜಿ ಸಮಾಧಿಗೆ ಬೇಟಿ ನೀಡಿ ಚನ್ನಮ್ಮಾಜಿ ಮೂರ್ತಿಗೆ ಗೌರವ ಸಲ್ಲಿಸಿದರು. ಪೌರಾಯುಕ್ತೆ ಭಾಗ್ಯಾಶ್ರೀ ಹುಗ್ಗಿ ಹಾಗೂ ನಗರಸಭೆ ಸಿಬ್ಬಂದಿ ಹಾಜರಿದ್ದರು.



ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ

◆**ತೆಲಸಂಗ:** ಸರ್ಕಾರಿ ಶಾಲೆ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ರ್‍ಯಾಂಕ್ ಪಡೆದಿರುವುದು ನಮ್ಮ ಭಾಗಕ್ಕೆ ಹೆಮ್ಮೆಯ ವಿಷಯ. ಇದು ವಿದ್ಯಾರ್ಥಿಗಳ ಶ್ರಮ ಮತ್ತು ಉಪನ್ಯಾಸಕರ ಗುಣಮಟ್ಟದ ಬೋಧನೆಗೆ ಸಂದ ಜಯ ಎಂದು ಪ್ರಾಚಾರ್ಯ ಸುರೇಶ ಮಜ್ಜಗಿ ಶ್ಲಾಘಿಸಿದರು.

ಸಮೀಪದ ಕೊಟ್ಟಲಗಿ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು 2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ 5ನೇ ರ್‍ಯಾಂಕ್ ಪಡೆದಿದ್ದಕ್ಕೆ ಕಾಲೇಜು ಆವರಣದಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿ, ಸರ್ಕಾರಿ ಶಾಲೆಗಳು ಕೇವಲ ಶಿಕ್ಷಣ ನೀಡುವ ಕೇಂದ್ರಗಳಲ್ಲ, ಅವು ಸಮಾನತೆ ಅಡಿಪಾಯ. ಬಡವ–ಶ್ರೀಮಂತ ಎಂಬ ಭೇದವಿಲ್ಲದೆ ಸಮಾಜದ ಕಟ್ಟಕಡೆ ಮಗುವಿಗೂ ಗುಣಮಟ್ಟದ ಶಿಕ್ಷಣ ತಲುಪಿಸುವಲ್ಲಿ ಇವುಗಳ ಪಾತ್ರ ಅನನ್ಯ. ಇಂದು ರಾಜ್ಯಮಟ್ಟದಲ್ಲಿ ರ್‍ಯಾಂಕ್ ಪಡೆಯುತ್ತಿರುವ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿನ ಬದ್ಧತೆ ಮತ್ತು ಅಲ್ಲಿನ ಉಪನ್ಯಾಸಕರ ಪರಿಣಿತಿಗೆ ಸಾಕ್ಷಿಯಾಗಿದ್ದಾರೆ. ಸರ್ಕಾರಿ ಶಾಲೆಗಳನ್ನು ನಾವು ಎಷ್ಟು ಪ್ರೋತ್ಸಾಹಿಸುತ್ತೇವೆಯೋ, ಅಷ್ಟು ಹೆಚ್ಚು ಪ್ರತಿಭಾವಂತರು ಹೊರಬರಲು ಸಾಧ್ಯ. ಈ ಕಾಲೇಜಿನ ಸಾಧನೆ ಸರ್ಕಾರಿ ಶಾಲೆಗಳ ಮೇಲಿನ ನಂಬಿಕೆ ಮತ್ತಷ್ಟು ಹೆಚ್ಚಿಸಿದೆ ಎಂದರು.

ಕಾಲೇಜು ಅಭಿವೃದ್ಧಿ ಸಮಿತಿ, ಗ್ರಾಮದ ಹಿರಿಯರ ನೇತೃತ್ವದಲ್ಲಿ ನಡೆದ ಈ ಸಮಾರಂಭದಲ್ಲಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳಲ್ಲಿ ಅತ್ಯುತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು, ರಾಜ್ಯಕ್ಕೆ 5ನೇ ರ್‍ಯಾಂಕ್ ಪಡೆದ ವಿದ್ಯಾ ಆನಂದ ಮಾಳಿ, ಉಪನ್ಯಾಸಕರು, ಕಾಲೇಜಿನ ಸಿಬ್ಬಂದಿ ವರ್ಗದವರನ್ನು ಗ್ರಾಮಸ್ಥರು ಸತ್ಕರಿಸಿದರು.

ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಸಿದ್ದಣ್ಣ ದೊಡ್ಡನಿಂಗಪ್ಪಗೋಳ, ಸತೀಶ ಉಪಾಸೆ, ಮಲ್ಲೇಶ ಗುರವ, ಮಲ್ಲನಗೌಡ ಪಾಟೀಲ, ಬಸವರಾಜ ಖಿಲಾಟಿ, ಶ್ರೀಶೈಲ ಸಿಂಧೂರ, ಕಲ್ಲಪ್ಪ ಮಾನಿಂಗಪ್ಪಗೋಳ, ಧರೆಪ್ಪ ಅನಂತಪುರ, ಆನಂದ ಮಾಳಿ ಸೇರಿದಂತೆ ಪಾಲಕರು, ಗ್ರಾಮಸ್ಥರು ಉಪಸ್ಥಿತರಿದ್ದರು. ಉಪನ್ಯಾಸಕ ಬಾಬಾಗೌಡ ಪಾಟೀಲ ನಿರೂಪಿಸಿ ವಂದಿಸಿದರು.



ಮಕ್ಕಳಿಗೆ ಸಂಸ್ಕಾರ ನೀಡಿ: ಶ್ರೀಗಳು

◆**ಸಂಕೇಶ್ವರ:** ಮಕ್ಕಳಿಗೆ ಪಾಲಕರು ಉತ್ತಮ ಸಂಸ್ಕಾರ ನೀಡಿದರೆ ಭವಿಷ್ಯದಲ್ಲಿ ಮಕ್ಕಳು ಉತ್ತಮ ಪ್ರಜೆಗಳಾಗಿ ಬದುಕಬಲ್ಲರು ಎಂದು ನಿರಂಜನ ಶ್ರೀಗಳು ಹೇಳಿದರು.

ಸಮೀಪದ ಅಮ್ಮಣಗಿ ಗ್ರಾಮದಲ್ಲಿ ನಡೆದ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿ, ತಂದೆ, ತಾಯಿ, ಶಿಕ್ಷಕರು ಹಾಗೂ ಸಮಾಜದ ಗುರುಹಿರಿಯರು ಮಕ್ಕಳಿಗೆ ಬೇಗನೆ ಏಳುವುದನ್ನು, ಸ್ವಚ್ಛತೆ, ಮನೆಯಲ್ಲಿನ ಹಿರಿಯರಿಗೆ ಗೌರವ ಕೊಡುವುದು, ಯೋಗ ಮತ್ತು ಧ್ಯಾನ ಕಲಿಸಬೇಕು. ಉತ್ತಮವಾದ ಪೌಷ್ಟಿಕ ಆಹಾರ, ವಿವಿಧ ಹಣ್ಣುಗಳು ಸೇವನೆ, ಹೆಚ್ಚು ನೀರು ಸೇವನೆಯಂಥ ಜೀವನ ಕ್ರಮಗಳನ್ನು ಮಕ್ಕಳಲ್ಲಿ ರೂಢಿಸಬೇಕು ಎಂದರು.

ನೈತಿಕ ಶಿಕ್ಷಣವನ್ನು ಶಿಕ್ಷಕರು ಮಕ್ಕಳಿಗೆ ನೀಡಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುಚಟಿಕೆಗಳಲ್ಲಿಯೂ ಮಕ್ಕಳು ಕ್ರಿಯಾಶೀಲರಾಗಿ ಪಾಲ್ಗೊಳ್ಳಲು ಶಿಕ್ಷಕರು ಪ್ರೇರಣೆ ನೀಡಬೇಕು ಎಂದರು.



ಪಾಲಕರ ಪ್ರತಿಯೊಂದು ಚಲನವಲನ ಮಕ್ಕಳು ಸೂಕ್ಷ್ಮವಾಗಿ ಗಮನಿಸುತ್ತಿರುತ್ತವೆ. ಪಾಲಕರು ತಾವು ಮೊದಲು ನೈತಿಕತೆ ಬೆಳೆಸಿಕೊಳ್ಳಬೇಕು ಎಂದರು.

ಸಮಾರಂಭದಲ್ಲಿ ಅಂದಾನಯ್ಯ ಹಿರೇಮಠ, ಶಂಕರಯ್ಯಾ ಮಠಪತಿ, ನಾಗರಾಜ ದೇಸಾಯಿ, ಶಂಕರ ಮುತ್ನಾಳಿ, ಬಾಳಪ್ಪಾ ಮಂಜರಗಿ,ಬಸ್ಸಪ್ಪಾ ಖಾನಾಪೂರಿ, ಕೆಂಪನ್ನಾ ಹುದ್ದಾರ ಮುಂತಾದವರು ಉಪಸ್ಥಿತರಿದ್ದರು.

ರೈತರು ಜಾನುವಾರುಗಳಿಗೆ ಲಸಿಕೆ ಹಾಕಿಸಿ: ಮೋಹನ

◆**ಮೂಡಲಗಿ:** ರೈತರು ಜಾನುವಾರುಗಳಿಗೆ ಕಾಲುಬಾಯಿ ಬೇನೆ ಲಸಿಕೆ ಹಾಕಿಸಿ ಅವುಗಳ ಆರೋಗ್ಯದ ಬಗ್ಗೆ ಕಾಳಜಿವಹಿಸಬೇಕು ಎಂದು ಮೂಡಲಗಿ ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಮೋಹನ ಕಮತ ಹೇಳಿದರು.

ಇಲ್ಲಿಯ ಶಿವಬೋಧರಂಗ ಮಠದಲ್ಲಿ ಗೋಶಾಲೆಯಲ್ಲಿ ಪಶುಪಾಲನಾ ಇಲಾಖೆ ಹಾಗೂ ಪಶುವೈದ್ಯಕೀಯಸೇವಾಇಲಾಖೆಯಿಂದಜರುಗಿದ ಉಚಿತಕಾಲುಬಾಯಿ ರೋಗಅಭಿಯಾನದ ಚಾಲನೆ ಕಾರ್ಯಕ್ರಮದಲ್ಲಿ ಮಾತನಾಡಿದಅವರುದೇಶದ ಮತ್ತು ಕೃಷಿ ಪ್ರಗತಿಯಲ್ಲಿ ಪಶುಗಳ ಮಹತ್ವದವಿದೆ. ಪಶುಗಳನ್ನು ಮಾನವರಂತೆ ಕಾಳಜಿವಹಿಸುವುದು ಅವಶ್ಯವಿದೆಎಂದರು.

ಕಾಲುಬಾಯಿ ರೋಗವು ವೈರಾಣುವಿನಿಂದ ಬರುವರೋಗವಾಗಿದೆ. ರೋಗ ಪೀಡಿತ ಜಾನುವಾರುಗಳಲ್ಲಿ ವಿಪರೀತವಾದಜ್ವರ, ಬಾಯಲ್ಲಿ ಹುಣ್ಣು, ಜೊಲ್ಲು ಸೋರುವಿಕೆ ಮತ್ತು ಕಾಲುಗಳಲ್ಲಿ ಹುಣ್ಣಾಗುತ್ತವೆ. ಇದರಿಂದ ಹಾಲು ಉತ್ಪಾದನೆಕುಂಠಿತವಾಗುತ್ತದೆ ಮತ್ತು ಅವುವಗಳಲ್ಲಿ ಕಾರ್ಯಕ್ಷಮತೆಕ್ಷೀಣಿಸುತ್ತದೆಎಂದರು.

ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕಎಸ್.ಎಸ್. ರೊಡ್ಡನವರಹಸುವಿಗೆ ಕಾಲುಬಾಯಿ ಬೇನೆಯ ಲಸಿಕೆಯನ್ನು ಹಾಕುವುದರ ಮೂಲಕ 9ನೇ ಸುತ್ತಿನಅಭಿಯಾನಕ್ಕೆ ಚಾಲನೆ ನೀಡಿದರು.

ಡಾ. ಪ್ರಶಾಂತ ಕುರಬೇಟ, ಎಸ್ .ಪಿ.ಆದಪ್ಪಗೋಳ, ಎಸ್.ಜಿ. ಮಿಲಾನಟ್ಟಿ, ಮಹಾಂತೇಶ ಹೊಸೂರ, ಸರಸ್ವತಿ ಮುರಗೋಡ ಹಾಗೂ ಲಸಿಕಾ ಸಿಬ್ಬಂದಿಯವರು ಇದ್ದರು.

ನಿರ್ದೇಶಕಎಸ್.ಎಸ್. ರೊಡ್ಡನವರ, ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಮೋಹನ ಕಮತ ಹಸುವಿಗೆ ಲಸಿಕೆ ನೀಡಿ ಚಾಲನೆ ನೀಡಿದರು.



ಕಬಡ್ಡಿಗೆ ಬೆಳಗಾವಿ ತವರೂರು: ಹಾಲಪ್ಪ ಹುಕ್ಕೇರಿ

◆**ಮೂಡಲಗಿ:** ಅಪ್ಪಟ ಗ್ರಾಮೀಣ ಆಟವಾದಕಬಡ್ಡಿ ಬೆಳಗಾವಿ ಜಿಲ್ಲೆಯ ಹಳ್ಳಿಗಾಡಿನ ಯುವಕರ ನೆಚ್ಚಿನ ಆಟವಾಗಿ ಬೆಳೆದು ಬಂದಿದೆ. ಇಲ್ಲಿಯ ಆಟಗಾರರು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಬಡ್ಡಿ ಕೊಂಡೊಯ್ದಿದ್ದು, ಕಬಡ್ಡಿಗೆ ಈಗ ಬೆಳಗಾವಿಯೇ ತವರಾಗಿದೆ ಎಂದು ಬೆಳಗಾವಿ ಜಿಲ್ಲಾ ಅಮೆಚೂರು ಕಬಡ್ಡಿ ಅಸೋಷಿಯೇಷನ್ ಪ್ರಧಾನ ಕಾರ್ಯದರ್ಶಿ ಹಾಲಪ್ಪ ಹುಕ್ಕೇರಿ ಹೇಳಿದರು.

ಮೂಡಲಗಿ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಣ ಮಹಾವಿದ್ಯಾಲಯ ಹಾಗೂ ಕಲಾ ವಾಣಿಜ್ಯ ಹಾಗೂ ಬಿಸಿಎ ಮಹಾವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ ಜರುಗುತ್ತಿರುವ ಬೆಳಗಾವಿ ರಾಣಿಚನ್ನಮ್ಮ ವಿಶ್ವವಿದ್ಯಾಲಯದ ವಲಯ ಹಾಗೂ ಅಂತರ್ ವಲಯ ಪುರುಷರ ಕಬಡ್ಡಿ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿ, ಬೆಳಗಾವಿ ಜಿಲ್ಲೆಯ ಕಬಡ್ಡಿ ಆಟಗಾರರ ಪ್ರೇಕ್ಷಕರ ಅಭಿಮಾನಿಗಳ ಸಂಘ ಸಂಸ್ಥೆಗಳ ಸಹಕಾರ ಮತ್ತು ಆಶೀರ್ವಾದ ಒಂದಿದ್ದರೆ ಬೆಳಗಾವಿ ಜಿಲ್ಲೆಯಲ್ಲಿ ಪ್ರೊ.ಕಬಡ್ಡಿ ಸಂಘಟಿ ಸುವದಾಗಿ ಹಾಲಪ್ಪ ಹೇಳಿದರು.

ಶಿಕ್ಷಣ ಸಂಸ್ಥೆಯ ಚೇರಮನ್ ವೆಂಕಟೇಶ ಸೋನವಾಲ್ಕರ ಮಾತನಾಡಿ, ಕ್ರೀಡೆಗಳಲ್ಲಿ ನಿರ್ಣಾಯಕರ ನಿರ್ಣಾಯಕ್ಕೆ ಬದ್ಧರಾಗಿರುವುದು ಬಹಳ ಮಹತ್ವದಾಗಿರುತ್ತದೆ. ಕ್ರೀಡಾಪಟುಗಳು ಕ್ರೀಡಾ ಮನೋ ಭಾವದಿಂದ ಆಟ ಆಡಬೇಕು ಎಂದರು.



ಮೂಡಲಗಿ ಶಿಕ್ಷಣ ಸಂಸ್ಥೆ ಉಪಾದ್ಯಕ್ಷ ಆರ್. ಪಿ.ಸೋನವಾಲ್ಕರ, ನಿರ್ದೇಶಕ ಎ.ವಿ.ಹೊಸಕೋಟಿ, ಲಕ್ಷ್ಮಣ ಅಡಿಹುಡಿ, ಆಡಳಿತಾಧಿಕಾರಿ ಡಾ.ಎಸ್. ಎಲ್ ಚಿತ್ರಗಾರ, ಪ್ರಾಚಾರ್ಯ ಡಾ.ಎಂ .ಕೆ.ಕಂಕಣವಾಡಿ, ಕ್ರೀಡಾ ವಿಭಾಗದ ಅಧ್ಯಕ್ಷ ಪ್ರೊ..ಎಲ್.ಬಿ.ಮಣ್ಣಾಪುರೆ ಪ್ರೊ..ಪಿ.ಬಿ.ಚೌಡಕಿ ಸಂಘಟನೆ ಕಾರ್ಯದರ್ಶಿ ಪ್ರೊ..ಭೀಮಶಿ ಬಡಗಣ್ಣವರ ಪ್ರೊ.. ಬಿ ಎಸ್‌ಕಂಬಾರ ಪ್ರೊ.ಯಲ್ಲಪ್ಪ ಭರಮಣ್ಣವರ. ಮಲ್ಲು ಮಳಲಿ. ಪೂಜಾ ಗಲಗಲಿ ಮುಂತಾದವರು ಉಪಸ್ಥಿತರಿದ್ದರು.

ಪ್ರೊ.ಭೀಮಶಿ ಬಡಗಣ್ಣವರ ಸ್ವಾಗತಿಸಿದರು. ಪ್ರೊ.ಸಂತೋಷ ಮುಗಳಿ ನಿರ್ವಹಿಸಿದರು. ಪ್ರೊ. ವೇದಾದೇಶಪಾಂಡೆ ವಂದಿಸಿದರು.

ಶಿವಯೋಗದಿಂದ ಅಂತರಂಗ ಶುದ್ಧಿ

◆**ಬೆಳಗಾವಿ:** ಕರ್ನಾಟಕ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರು ಕರುಣಿಸಿದ ಇಷ್ಟಲಿಂಗ ಪೂಜೆ ಶಿವಯೋಗದಿಂದ ಅಂತರಂಗ ಶುದ್ಧಿಯಾಗುತ್ತದೆ. ಇಷ್ಟಲಿಂಗ ಪೂಜಾ ವಿಧಿ–ವಿಧಾನ ವೈಜ್ಞಾನಿಕ, ವೈಚಾರಿಕವಾಗಿ ನಿರೂಪಿಸಲಾಗಿದೆ. ಇದನ್ನು ಪ್ರತಿಯೊಂದು ಮನೆಯ ಹಿರಿಯರು ತಮ್ಮ ಕಿರಿಯರಿಗೆ ಇದರ ವಿಶೇಷತೆ ಕಲಿಸಬೇಕೆಂದು ಜೆಎನ್‌ಎಂಸಿ ನಿವೃತ್ತ ಪ್ರಾಚಾರ್ಯ ಡಾ.ಎಚ್ ಬಿ. ರಾಜಶೇಖರ ಹೇಳಿದರು.

ನಗರದ ಕಾರಂಜಿಮಠ 299ನೇ ಮಾಸಿಕ ಶಿವಾನುಭವ ಕಾರ್ಯಕ್ರಮದ ನಿಮಿತ್ತ ಇತ್ತೀಚೆಗೆ ನಡೆದ ವಿಶ್ವಗುರು ಬಸವಣ್ಣನವರ ಜಂಯತಿ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರಂಜಿಮಠದ ಪೀಠಾಧಿಕಾರಿ ಗುರುಸಿದ್ಧ ಶ್ರೀಗಳು ಪಾವನ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಈ ಸಮಾರಂಭದಲ್ಲಿ ವಚನ ಸಾಹಿತ್ಯ ಆಳವಾಗಿ ಅಧ್ಯಯನ ಮಾಡಿದ ಜೆಎನ್‌ಎಂಸಿ ಪ್ರಾಧ್ಯಾಪಕರು, ಸಾಹಿತಿ ಡಾ.ಅವಿನಾಶ ಕವಿ, ವಿಶ್ವಗುರು ಬಸವಣ್ಣನವರ ಬಹುಮುಖ ವ್ಯಕ್ತಿತ್ವ ಕುರಿತು ಚಿಂತನ ಪರ ಉಪನ್ಯಾಸ ನೀಡಿದರು.

ಡಾ.ಎಫ್.ವಿ.ಮಾನ್ವಿ, ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ರತ್ನಪ್ರಭಾ ಬೆಲ್ಲದ, ಬೆಳಗಾವಿ ಬಸವೇಶ್ವರ ಕೋ–ಅಪರೇಟಿವ ಬ್ಯಾಂಕ್ ನಿರ್ದೇಶಕ ಸರಳಾ ಹೀರೇಕರ, ಪ್ರಾಚಾರ್ಯ ವಿ.ಬಿ. ದೊಡಮನಿ, ಪ್ರೊ.ಎ.ಕೆ ಪಾಟೀಲ ಸ್ವಾಗತಿಸಿ, ನಿರೂಪಿಸಿದರು. ಶರಣ ರಾಜು ಪಡಗುರಿ ಗ್ರಂಥ ಪುಷ್ಪ ಸಮರ್ಪಿಸಿದರು. ಕುಮಾರೇಶ್ವರ ಸಂಗೀತ ಪಾಠ ಶಾಲೆಯ ಮಕ್ಕಳಿಂದ ವಚನ ಪ್ರಾರ್ಥಿಸಿದರು. ವಕೀಲ ವಿ.ಕೆ.ಪಾಟೀಲ ಶರಣು ಸಮರ್ಪಣೆ ಮಾಡಿದರು.

ಅಭಿಮಾನೋತ್ಸವ: ಸಾವಿರಾರು ಕಾರ್ಯಕರ್ತರು ಭಾಗಿ

◆**ಬೈಲಹೊಂಗಲ:** ಮಾಜಿ ಮುಖ್ಯಮಂತ್ರಿ, ರೈತರ ಆಶಾಕಿರಣ ಹಾಗೂ ರಾಜ್ಯ ರಾಜಕಾರಣದಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ಬಿ.ಎಸ್.ಯಡಿಯೂರಪ್ಪ ಅವರ ಸಾರ್ವಜನಿಕ ಜೀವನದ 50 ವರ್ಷಗಳ ಸಾರ್ಥಕ ಸೇವೆಯನ್ನು ಸ್ಮರಿಸುವ ಅಂಗವಾಗಿ ಮೇ 9 ರಂದು ಮದ್ಯಾಹ್ನ 2 ಗಂಟೆಗೆ ಚಿತ್ರದುರ್ಗದಲ್ಲಿ ನಡೆಯಲಿರುವ ಜನಸೇವೆಯಲ್ಲಿ ಬಿ.ಎಸ್ .ಯಡಿಯೂರಪ್ಪ 50 ಸಾರ್ಥಕ ವರ್ಷ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಬೈಲಹೊಂಗಲ ಮತಕ್ಷೇತ್ರದಿಂದ ಸಾವಿರಾರು ಬಿಜೆಪಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ತಿಳಿಸಿದರು.

ಗುರುವಾರ ಪಟ್ಟಣದ ಬಿಜೆಪಿ ಗೃಹಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ರಾಜಕಾರಣದಲ್ಲಿ ಬಿ.ಎಸ್ .ಯಡಿಯೂರಪ್ಪ ಅವರು ರೈತರು, ಬಡವರು,ಕಾರ್ಮಿಕರುಹಾಗೂಸಾಮಾನ್ಯ ಜನರ ಪರ ಹೋರಾಟ ನಡೆಸಿ ಜನಮನ ಗೆದ್ದ ನಾಯಕ ಅವರು. ಐದು ದಶಕಗಳ ಕಾಲ ನಿಸ್ವಾರ್ಥ ಸೇವೆ ಸಲ್ಲಿಸಿರುವ ಅವರ ರಾಜಕೀಯ ಜೀವನ ಇಂದಿನ ಯುವ ರಾಜಕಾರಣಿಗಳಿಗೆ ಮಾದರಿಯಾಗಿದೆ ಎಂದರು. ಅಭಿಮಾನೋತ್ಸವದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಲಕ್ಷಾಂತರ ಬಿಜೆಪಿ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಮುಖಂಡರು ಭಾಗವಹಿಸಲಿದ್ದು, ಬೈಲಹೊಂಗಲ ಮತಕ್ಷೇತ್ರದಿಂದಲೂ ಭಾರೀ ಸಂಖ್ಯೆಯಲ್ಲಿ ಜನರನ್ನು ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮಕ್ಕೆ ತೆರಳಲು ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ ಎಂದರು.

ಬಿಜೆಪಿ ಗ್ರಾಮೀಣ ಮಟ್ಟದಲ್ಲಿ ಬಲಪಡಿಸುವಲ್ಲಿ, ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ತರುವಲ್ಲಿ ಯಡಿಯೂರಪ್ಪ ಪಾತ್ರ ಅಪಾರವಾಗಿದೆ. ರೈತರ ಸಾಲಮನ್ನಾ, ನೀರಾವರಿ ಯೋಜನೆ, ಗ್ರಾಮೀಣಾಭಿವೃದ್ಧಿ ಸೇರಿದಂತೆ ಅನೇಕ ಜನಪರ ಯೋಜನೆ ಜಾರಿಗೆ ತಂದು ಜನಮಾನಸದಲ್ಲಿ ಅಚ್ಚಳಿಯದ ಗುರುತು ಮೂಡಿಸಿದ್ದಾರೆ ಎಂದರು.

ಹೊಸ ಉತ್ಸಾಹ ತುಂಬುವ ಕಾರ್ಯಕ್ರಮವಾಗಲಿದೆ. ಪಕ್ಷದ ಎಲ್ಲ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದರು. ಮುರಗೇಶ ಗುಂಡ್ಲೂರ, ಮಡಿವಾಳಪ್ಪ ಹೋಟಿ, ಆನಂದ ಮೂಗಿ, ಅಶೋಕ ಗುಂಡ್ಲೂರ, ಹಣಮಂತ ಸಾಲಹಳ್ಳಿ, ಚಂದನ ಕೌಜಲಗಿ, ವಿಶಾಲ ಬೊಗುರ, ಬಸವರಾಜ ನೇಸರಗಿ ಹಾಗೂ ಬಿಜೆಪಿ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿದ್ದರು.



ಕಿರುಸುದ್ದಿ

ಪುರಗಿರಿಯಲ್ಲಿ ದಾನಮ್ಮದೇವಿ ಪುರಾಣ ಮಂಗಲ ಹಾಗೂ ಧಾರ್ಮಿಕ ಉತ್ಸವ

ಹುನಗುಂದ: ತಾಲೂಕಿನ ನಾಗೂರ ಸಮೀಪದ ಪುರ್ತಗೇರಿ(ಪುರಗಿರಿ) ಮಠದಲ್ಲಿ ಜಗದ್ಗುರು 1008 ಪಂಡಿತ ಕೈಲಾಸ ಲಿಂಗ ಶಿವಾಚಾರ್ಯ ಭಗವತ್ಪಾದರು ಹಿಮವತ್ ಕೇದಾರ ಅವರ 65ನೇ ಪುಣ್ಯ ಸ್ಮರಣೆ ನಿಮಿತ್ತ ಗುಡ್ಡಾಪುರ ದಾನಮ್ಮ ದೇವಿ ಪುರಾಣ ಹಾಗೂ ಜಗದ್ಗುರು ಪಂಡಿತ ಕೈಲಾಸ ಲಿಂಗ ಮಹಾಭಗವತ್ಪಾದರ ಜೀವನ ಚರಿತ್ರೆ ಪ್ರವಚನ ಮಂಗಲ ಕಾರ್ಯಕ್ರಮ ಮೇ 10ರಂದು ಸಂಜೆ 7 ಗಂಟೆಗೆ ನಡೆಯುವುದು. ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಅತ್ಯಾಚಾರಕ, ಲಿಂಗದೀಕ್ಷೆ, ಮಹಾಗಣಾರಾಧನೆ ಮತ್ತು ಪಲ್ಲಕ್ಕಿ ಉತ್ಸವ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಚೌಳಹಿರಿಯೂರು ಡಾ.ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಚಳಗೇರಿ ವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಅಂಕಸದೊಡ್ಡಿ ವಾಮದೇವ ಶಿವಾಚಾರ್ಯ ಸ್ವಾಮೀಜಿ, ಗುರಗುಂಟಾ ಸದಾನಂದ ಶಿವಾಚಾರ್ಯ ಸ್ವಾಮೀಜಿ, ಕೂಡ್ಲಿಗಿ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿ, ದೇವರಭೂಪುರ ಗಜದಂಡ ಶಿವಾಚಾರ್ಯ ಸ್ವಾಮೀಜಿ, ಕಮತಗಿ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ, ನಿಡಶೇಷಿ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ಮತ್ತು ಮಾತಾ ಮಾಣಿಕೇಶ್ವರಿ ಅಮ್ಮನವರು ಸಾನಿಧ್ಯ ವಹಿಸುವರು. ಕುಷ್ಟಗಿ ಶಾಸಕ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಉದ್ಘಾಟಿಸುವರು. ಶಾಸಕರಾದ ವಿಜಯಾನಂದ ಕಾಶಪ್ಪನವರ, ನಾರಾ ಭರತರೆಡ್ಡಿ, ಮಾಜಿ ಶಾಸಕರಾದ ವೀರಣ್ಣ ಚರಂತಿಮಠ, ಎಸ್.ಜಿ.ನಂಜಯ್ಯನಮಠ, ಅಮರೇಗೌಡ ಬಯ್ಯಾಪುರ ಮತ್ತು ಬಳ್ಳಾರಿಯ ಹಿರಿಯ ಕಾನೂನು ಅಧಿಕಾರಿ ಬಿ.ಎಸ್.ಪಾಟೀಲ ಮುಖ್ಯ ಅತಿಥಿಗಳಾಗಿರುವರು. ಸಾಹಿತಿ ಶರಣಪ್ಪ ಜುಗೇರಿ ಮತ್ತು ಇಳಕಲ್ ತಾಲೂಕು ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಚನ್ನಬಸಪ್ಪ ಲೆಕ್ಕಿಹಾಳ ಉಪನ್ಯಾಸ ಮಾಡುವರು ಎಂದು ಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೇ 10ರಂದು ಗುಡ್ಡಾಪುರ ದಾನಮ್ಮದೇವಿ ಪುರಾಣ

ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ

ಬಾಗಲಕೋಟೆ: ಪ್ರಸಕ್ತ 2026-27ನೇ ಸಾಲಿನ ಬೀಳಗಿ ಎಸ್.ಆರ್.ನಿರಾಣಿ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಡಿಪ್ಲೋಮಾ ಪ್ರವೇಶ ಕೋರ್ಸಗಳಿಗೆ ಮೆರಿಟ್ ಹಾಗೂ ರೋಷ್ಟರ ಅನುಗುಣವಾಗಿ ಆಫ್ ಲೈನ್ ಪ್ರವೇಶ ಅವಧಿಯನ್ನು ವಿಸ್ತರಿಸಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಸಿವಿಲ್ ಇಂಜಿನೀಯರಿಂಗ್, ಕಂಪ್ಯೂಟರ ಸೈನ್ಸ್, ಎಲೆಕ್ಟ್ರಾನಿಕ್ಸ್ ಕಮ್ಯೂನಿಕೇಶನ್, ಮೆಕ್ಯಾನಿಕಲ್ ಇಂಜಿನೀಯರಿಂಗ್, ಇಲೆಕ್ಟ್ರಿಕಲ್ ಇಲೆಕ್ಟ್ರಾನಿಕ್ಸ್ ಇಂಜಿನೀಯರಿಂಗ್ ಹೀಗೆ ಒಟ್ಟು 6 ಕೋರ್ಸಗಳಿದ್ದು, ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಟ ಶೇ.35 ರಷ್ಟು ಅಂಕ ಪಡೆದು ಉತ್ತೀರ್ಣರಾದವರಿಗೆ ಮೆರಿಟ್ ಹಾಗೂ ರೋಷ್ಟರ ಅನುಗುಣವಾಗಿ ಆಫ್‌ಲೈನ್ ಮೂಲಕ ಪ್ರವೇಶ ನೀಡಲಾಗುತ್ತದೆ ಎಂದು ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರಾದ ಗೌಸ್ ಎಂ.ಸಾಲವತಿ ತಿಳಿಸಿದ್ದಾರೆ.

ಮೇ 11ರಿಂದ ಬೇಸಿಗೆ ಶಿಬಿರ

ಬಾಗಲಕೋಟೆ: ಪ್ರಸಕ್ತ ಸಾಲಿಗೆ ಜಿಲ್ಲಾ ಬಾಲಭವನದಿಂದ 6ರಿಂದ 16 ವರ್ಷದ ಮಕ್ಕಳಿಗೆ, ಮೇ 11ರಿಂದ 25ರ ವರೆಗೆ 15 ದಿನ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಚಿತ್ರಕಲೆ, ಕರಕುಶಲ, ಜೇಡಿ ಮಣ್ಣಿನ ಕಲೆ, ಸಮೂಹ ಸಂಗೀತ, ಸಮೂಹ ನೃತ್ಯ ಮತ್ತು ಯೋಗ, ಕರಾಟೆ, ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಆಸಕ್ತ ಮಕ್ಕಳು ಮೇ 11ರೊಳಗೆ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಇಲಾಖೆ, ಬಾಗಲಕೋಟೆ ಇವರಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂ ಸಂ.08354-235463ಗೆ ಸಂಪರ್ಕಿಸಬಹುದಾಗಿದೆ.

ಮೇ 18ರಿಂದ ಚಿಣ್ಣರ ಬೇಸಿಗೆ ಶಿಬಿರ

ಬಾಗಲಕೋಟೆ: ತೋಟಗಾರಿಕೆ ವಿಸ್ತರಣಾ ಶಿಕ್ಷಣ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ತೋವಿವಿ, ಬಾಗಲಕೋಟೆಯಲ್ಲಿ ಐದು ದಿನದ ಚಿಣ್ಣರ ತೋಟ-ಪಾಠ ಬೇಸಿಗೆ ಶಿಬಿರವನ್ನು ಮೇ 18ರಿಂದ 22ರ ವರೆಗೆ ಹಮ್ಮಿಕೊಳ್ಳಲಾಗಿದ್ದು, 7ರಿಂದ 14 ವರ್ಷದ ಮಕ್ಕಳ ಪಾಲಕರು, ಪೋಷಕರು ಡಾ.ದೀಪಾ ತೇರದಾಳ (7899285785), ಹೇಮಾ ಹಾದಿಮನಿ (9019708340) ಅವರನ್ನು ಸಂಪರ್ಕಿಸಿ ತಮ್ಮ ಮಗುವಿನ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ನೋಂದಣಿ ಶುಲ್ಕ 500 ರೂ. ಇದ್ದು, ಶಿಬಿರ ಬೆಳಗ್ಗೆ 10 ರಿಂದ ಮಧ್ಯಾಹ್ನ 1.30ರ ವರೆಗೆ ನಡೆಯಲಿದೆ ಎಂದು ತೋವಿವಿಯ ವಿಸ್ತರಣಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಲಾದಗಿ: ಸಮೀಪದ ಖಜ್ಜಿಡೋಣಿ ಗ್ರಾಮಕ್ಕೆ ಗುರುವಾರ ತಾಪಂ ಇಒ ಸುಭಾಸ ಸಂಪಗಾವಿ ನರೇಗಾ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ನರೇಗಾ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರ ಯೋಗಕ್ಷೇಮ ಹಾಗೂ ಕುಂದುಕೊರತೆ ಆಲಿಸಿ ಕಾರ್ಮಿಕರ ಹಾಜರಾತಿ ಪರಿಶೀಲಿಸಿ ಕಾಮಗಾರಿ ವೀಕ್ಷಣೆ ಮಾಡಿ ಪರಿಶೀಲಿಸಿದರು. ಗ್ರಾಪಂ ಪಿಡಿಒ ಎಸ್.ಎ.ಕ್ಯಾದಿಗೇರಿ, ಐಇಸಿ ಈರಣ್ಣ ಮಾಸ್ತಿ, ಬಿಎಸ್ಸಿಗಳಾದ ಮಂಜುನಾಥ ಮಾದಿಹಾಳ, ಸುಭಾಸ ಮುರನಾಳ, ಯಮುನಪ್ಪ ಬಸವನಾಯಕ ಹಾಗೂ ಸಿಬ್ಬಂದಿ ಇದ್ದರು.

ಹೋಂ ಸ್ಟೇಗಳಿಗೆ ನೋಂದಣಿ ಕಡ್ಡಾಯ

ಬಾಗಲಕೋಟೆ: ಜಿಲ್ಲೆಯಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ವೇಗವಾಗಿ ವಿಸ್ತರಿಸುತ್ತಿರುವ ಹಿನ್ನಲೆಯಲ್ಲಿ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಹೋ ಸ್ಟೇ ಘಟಕಗಳನ್ನು ನಿಯಂತ್ರಿಸಿ, ಪ್ರವಾಸಿಗರಿಗೆ ಸುರಕ್ಷಿತ ಹಾಗೂ ಗುಣಮಟ್ಟದ ವಸತಿ ವ್ಯವಸ್ಥೆ ಒದಗಿಸುವ ಉದ್ದೇಶದಿಂದ ಪ್ರವಾಸೋದ್ಯಮ ಇಲಾಖೆಯು ಕಡ್ಡಾಯ ನೋಂದಣಿ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿದೆ. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಹೋಂ ಸ್ಟೇ ಮಾಲಿಕರು ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಮಾರ್ಗಸೂಚಿಗಳ ಪ್ರಕಾರ ಕಡ್ಡಾಯವಾಗಿ ನೋಂದಣಿ ಪಡೆದು, ಕಾನೂನು ಬದ್ಧವಾಗಿ ಕಾರ್ಯಾಚರಣೆ ಮಾಡಬೇಕು. ನೋಂದಣಿ ಪ್ರಕ್ರಿಯೆಯಲ್ಲಿ ಕಟ್ಟಡದ ಸುರಕ್ಷತೆ, ಸೌಲಭ್ಯಗಳು, ಅಗ್ನಿ ನಿಯಂತ್ರಣ ವ್ಯವಸ್ಥೆ, ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯ, ಅತಿಥಿಗಳ ದಾಖಲೆ ಸಂಗ್ರಹಣೆ, ಪೊಲೀಸ್ ಪರಿಶೀಲನೆ ಸೇರಿದಂತೆ ಅನೇಕ ಅಂಶಗಳನ್ನು ಪರಿಶೀಲಿಸಲಾಗುತ್ತದೆ. ಹೋಂ ಸ್ಟೇ ಮಾಲಿಕರು ತಮ್ಮ ಘಟಕಗಳನ್ನು ನೋಂದಾಯಿಸಿಕೊಳ್ಳಲು ಅಗತ್ಯ ದಾಖಲೆಗಳಾದ ಗುರುತಿನ ಪತ್ರ, ಆಸ್ತಿ ದಾಖಲೆಗಳು, ಕಟ್ಟಡ ಅನುಮತಿ, ಪೊಲೀಸ್ ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಕೊಠಡಿ ಸಂ.137, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ ವಿಳಾಸಕ್ಕೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.



ಬಾಗಲಕೋಟೆ: ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿ ಶಾಸಕರಾಗಿ ಆಯ್ಕೆಯಾಗಿರುವ ಉಮೇಶ ಮೇಟಿ ಅವರು ಬೆಂಗಳೂರಿನಲ್ಲಿ ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ ಜಾರಕಿಹೊಳಿ ಅವರನ್ನು ಭೇಟಿಯಾಗಿ ಸತ್ಕರಿಸಿದರು. ಅವರಿಗೆ ಅಭಿನಂದನೆ ಸಲ್ಲಿಸಿ, ಜನಸೇವೆಯನ್ನೇ ಧ್ಯೇಯವಾಗಿಸಿಕೊಂಡು ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ನಿಸ್ವಾರ್ಥವಾಗಿ ಶ್ರಮಿಸಲಿ ಎಂದು ಶುಭಹಾರೈಸಿದರು.

ಶ್ರಮಿಕ ವಸತಿ ಶಾಲೆ ನಿರ್ಮಾಣಕ್ಕೆ ಭೂಮಿಪೂಜೆ | ಶಾಸಕ ಜೆಟಿಪಾ ಹೇಳಿಕೆ

35 ಕೋಟಿ ರೂ. ವೆಚ್ಚದಲ್ಲಿ ಶಾಲೆ

ಬೀಳಗಿ: ಎಂಟು ಎಕರೆ ವಿಶಾಲವಾದ ಪ್ರದೇಶದಲ್ಲಿ 35 ಕೋಟಿ ರೂ. ವೆಚ್ಚದಲ್ಲಿ ಜಿಲ್ಲೆಯಲ್ಲಿಯೇ ಮೊದಲು ನೋಂದಾಯಿತ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಮಕ್ಕಳ ವಸತಿ ಶಾಲೆ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ಜೆ.ಟಿ.ಪಾಟೀಲ ಹೇಳಿದರು.

ತಾಲೂಕಿನ ಸುನಗ ತಾಂಡಾ-2ರಲ್ಲಿ ಕರ್ನಾಟಕ ಸರ್ಕಾರ, ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಬೆಂಗಳೂರು ಅವರ ವತಿಯಿಂದ ಅಂದಾಜು 35 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಶ್ರಮಿಕ ವಸತಿ ಶಾಲೆ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ, ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಿಸಿ ಮಾತನಾಡಿದರು.

ಗುಣಮಟ್ಟದ ಕೆಲಸವಾಗಬೇಕು. ಕ್ಯೂರಿಂಗ್ ಸರಿಯಾಗಿ ಮಾಡಬೇಕು. ಕಟ್ಟಡ ನಿರ್ಮಾಣದ ಗುಣಮಟ್ಟದಲ್ಲಿ ಯಾವುದೇ ಹೊಂದಾಣಿಕೆ ಇಲ್ಲ. ಯೋಜನಾ ವರದಿ ಪ್ರಕಾರ ಕೆಲಸವನ್ನು 18 ತಿಂಗಳಲ್ಲಿ ಪೂರ್ಣಗೊಳಿಸಬೇಕೆಂದು ಗುತ್ತಿಗೆದಾರರಿಗೆ ತಾಕೀತು ಮಾಡಿದರಲ್ಲದೇ, ಕಳಪೆ ಕಾಮಗಾರಿಯಾಗದಂತೆ ನಿಗಾವಹಿಸಬೇಕೆಂದು ಎಇಇ ಅವರಿಗೆ ಶಾಸಕರು ತಾಕೀತು ಮಾಡಿದರು.

ಸುಸಜ್ಜಿತ ಕಟ್ಟಡ, ಮೂಲಭೂತ ಸೌಲಭ್ಯಗಳನ್ನು ಹೊಂದಿದ ವಸತಿ ಶಾಲೆ ಇದಾಗಿದ್ದು, ಇದರಲ್ಲಿ ತಾಲೂಕಿನ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂದು 6ನೇ ತರಗತಿಯಿಂದ ದ್ವಿತೀಯ ಪಿಯುಸಿ ವರೆಗೆ ಶಿಕ್ಷಣ ಪಡೆದುಕೊಳ್ಳಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ಹೇಳಿದರು.



ಈಗಾಗಲೇ ಮೊದಲ ಹಂತದಲ್ಲಿ ಸುನಗ, ಚಿಕ್ಕಾಲಗುಂಡಿ, ಯಡಹಳ್ಳಿ ಗ್ರಾಮಗಳಿಗೆ ಕೆಪಿಎಸ್ ಶಾಲೆ ಮಂಜೂರಿಯಾಗಿದ್ದು, ಬರುವ ದಿನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ಮಾಡಲಾಗುವುದು. ಸುನಗ ಗ್ರಾಮಕ್ಕೆ ರಸ್ತೆ ಸೇರಿದಂತೆ ವಿವಿಧ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನ ಮಾಡುತ್ತಿದ್ದೇನೆಂದು ಹೇಳಿದರು.

ಬೀಳಗಿ ಪಟ್ಟಣದಲ್ಲಿ ಕಾರ್ಮಿಕರ ಕುಟುಂಬಗಳು ಮದುವೆ ಮಾಡಿಕೊಳ್ಳಲು 2 ಎಕರೆ ಪ್ರದೇಶದಲ್ಲಿ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು. ನಿರಾಶ್ರಿತರ ಕೇಂದ್ರ ನಿರ್ಮಿಸಲು 8 ಎಕರೆ ಭೂಮಿ ನೀಡಲಾಗಿದೆ ಎಂದು ಹೇಳಿದರು.

ಯುಕೆಪಿ ಯೋಜನೆಯಲ್ಲಿ ಮುಳುಗಡೆಯಾಗಲಿರುವ ನೀರಾವರಿ ಭೂಮಿಗೆ 40, ಒಣಬೇಸಾಯ ಭೂಮಿಗೆ 30 ಲಕ್ಷ ಎಕರೆಗೆ ಪರಿಹಾರ ನಿಗದಿ ಮಾಡಿ ಪರಿಹಾರ ವಿತರಿಸಲಾಗುತ್ತಿದೆ. ಸಾಲ ತೆಗೆದಾದರೂ ಸರಿ ನಮ್ಮ ಸರ್ಕಾರ ಯುಕೆಪಿ ಯೋಜನೆ ಪೂರ್ಣಗೊಳಿಸಲಿದೆ ಎಂದು ಹೇಳಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ರಮೇಶ ಸುಂಬಡ ಮಾತನಾಡಿದರು. ಜಿಪಂ ಕೆಡಿಪಿ ಸದಸ್ಯ ಜಿ.ಆರ್.ಪಾಟೀಲ, ಕಾರ್ಮಿಕ ಇಲಾಖೆ ಎಇಇ ಎಚ್.ಅರುಣಕುಮಾರ, ತಾಲೂಕು ಕಾರ್ಮಿಕ ನಿರೀಕ್ಷಕ ರಾಜಶೇಖರ ಕುರಡಿಕರ, ಕಾರ್ಮಿಕ ಇಲಾಖೆ ಕಾರ್ಯನಿರ್ವಾಹಕ ರವಿ ನಾಗನಗೌಡರ, ಪ್ರವೀಣ ಹಿರೇಮಠ, ಚಂದ್ರಶೇಖರ ಪಂಢರಿ, ರವಿ ಲಿಂಗಣ್ಣವರ, ಹನಮಂತ ದಳವಾಯಿ, ಬಸು ಮೇಟಿ, ಭೀಮಶಿ ಎರಡೆಮ್ಮಿ, ನಾರಾಯಣ ಕಂಬಾರ, ಶಂಕರ ಡಬರಿ, ರಂಗಪ್ಪ ಕವಳ್ಳಿ, ಶಂಕರ ಲಮಾಣಿ, ಮಹೇಶ ಲಮಾಣಿ, ವಿಠ್ಠಲ ಲಗಮನಿ ಮತ್ತಿತರಿದ್ದರು.

ಶಾಸಕ ಜಗದೀಶ ಗುಡಗುಂಟಿ ಹೇಳಿಕೆ

ಅ.10ರಿಂದ ದಸರಾ ಧರ್ಮ ಸಮ್ಮೇಳನ

ಜಮಖಂಡಿ: ಜಗದ್ಗುರು ರಂಭಾಪುರಿ ಶ್ರೀಗಳ ಸಾನ್ನಿಧ್ಯದಲ್ಲಿ ಅ.10ರಿಂದ 20ರ ವರೆಗೆ ನಗರದಲ್ಲಿ ದಸರಾ ಧರ್ಮ ಸಮ್ಮೇಳನ (ದಸರಾ ದರ್ಭಾರ) ಕಾರ್ಯಕ್ರಮ ಅದ್ದೂರಿಯಾಗಿ ನಡೆಯುವುದು ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದ ಕಲ್ಯಾಣಮಠದ ಸಭಾಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ವೀರಶೈವ ಲಿಂಗಾಯತ ಧರ್ಮ ಸನಾತನವಾಗಿದೆ. ಆಧ್ಯಾತ್ಮಿಕ ತಳಹದಿಯ ಮೇಲೆ ವೀರಶೈವ ಲಿಂಗಾಯತ ಧರ್ಮ ಉಳಿಸಿ ಬೆಳೆಸಬೇಕಾಗಿದೆ. ಧರ್ಮ ಸಂಸ್ಕೃತಿ ಉಳಿವಿಗಾಗಿ ಇಂತಹ ಧರ್ಮ ಸಮ್ಮೇಳನ ಆಯೋಜಿಸಲಾಗಿದೆ. ಜಾತಿ ಮತ ಪಂಥ ಎನ್ನದೆ ವೀರಶೈವ ಲಿಂಗಾಯತದಲ್ಲಿ ಬರುವ ಒಳಪಂಗಡಗಳು ಸೇರಿ ಈ ಕಾರ್ಯಕ್ರಮ ಮಾಡಲಾಗುವುದು ಎಂದರು. ಕೃಷಿ ಮೇಳ, ಯುವ ಮೇಳ ಸೇರಿದಂತೆ ಜಾಗೃತಿ ಮೂಡಿಸುವ ಉಪನ್ಯಾಸಗಳು ಜರಗುವವು. ಪ್ರತಿದಿನ ಸುಮಾರು 30ರಿಂದ 40 ಸಾವಿರ ಜನ ಸೇರುವ ನಿರೀಕ್ಷೆ ಇದೆ. ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗುವುದು, ಪ್ರತಿ ಸಮಾಜದ ಬಂಧುಗಳು ತನು ಮನ ಧನದಿಂದ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ವೀರೇಶ ಕೂಗಮಠ ಚಂದು ಬಾಳೇಹೊಣ್ಣೂರ, ಒಲೇಮಠದ ಆನಂದ ದೇವರು, ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶ್ರೀಗಳು, ಕೊಣ್ಣೂರ ಕಲ್ಯಾಣ ಹೊರಗಿನಮಠದ ಹಾಗೂ ಸಿಂದಗಿ ಸಾರಂಗ ಮಠದ ಡಾ.ವಿಶ್ವಪ್ರಭು ಶಿವಾಚಾರ್ಯ ಶ್ರೀಗಳು, ಹಿರಿಯ ನ್ಯಾಯವಾದಿ ಎನ್.ಎಸ್ ದೇವರವರ, ಎಪಿಎಂಸಿ ಮಾಜಿ ಅಧ್ಯಕ್ಷ ಮುತ್ತಣ್ಣ ಹಿಪ್ಪರಗಿ, ಹಿರಿಯ ವೈದ್ಯ ಎಚ್.ಜಿ.ದಡ್ಡಿ, ನ್ಯಾಯವಾದಿ ಸಿ.ಎಸ್.ಬಾಂಗಿ, ಮುಖಂಡ ಏಗಪ್ಪ ಸವದಿ, ಮಹಾದೇವ ಇಟ್ಟಿ, ರಾಜೇಸಾಬ್ ಕಡಕೋಳ, ಗೀತಾ ಸೂರ್ಯವಂಶಿ, ಅಪ್ಪು ಪೋತರಾಜ ಮಾತನಾಡಿದರು.

ಕಲ್ಯಾಣಮಠದ ಗೌರಿಶಂಕರ ಶಿವಾಚಾರ್ಯ ಶ್ರೀಗಳು, ಬನಹಟ್ಟಿಯ ಶರಣಬಸವ ಶಿವಾಚಾರ್ಯ ಶ್ರೀಗಳು, ಹಿರೇಪಡಸಲಗಿಯ ಸಿದ್ಧಲಿಂಗ ಶಿವಾಚಾರ್ಯ ಶ್ರೀಗಳು, ಮಾತೋಶ್ರೀ ಸುನಂದಮ್ಮ ತಾಯಿ, ತೇರದಾಳ ಹಿರೇಮಠದ ಗಂಗಾಧರ ದೇವರು, ಜಂಗಮ ಸಮಾಜದ ಅಧ್ಯಕ್ಷ ಶಿವಪುತ್ರಯ್ಯ ಸಿದ್ಧಗಿರಿಮಠ ಇತರರು ಇದ್ದರು. ರಾಜೇಶ್ವರಿ ನ್ಯಾಮಗೌಡ ಪ್ರಾರ್ಥಿಸಿದರು. ಡಾ.ಶಾರದಾ ಮಳ್ಳೂರ ನಿರೂಪಿಸಿದರು.



ಕಸಾಪ ಕನ್ನಡದ ಉಸಿರು: ರಾಮದುರ್ಗ

ತೇರದಾಳ: ಕನ್ನಡ ಸಾಹಿತ್ಯ ಪರಿಷತ್ತು ತನ್ನದೇಯಾದ ಭವ್ಯ ಇತಿಹಾಸ ಹೊಂದಿದೆ. ಕನ್ನಡನಾಡು ನುಡಿಯ ರಕ್ಷಣೆ ಹಾಗೂ ಅದರ ಪರಂಪರೆ ಉಳಿಸುವುದಕ್ಕಾಗಿ ಹಗಲಿರುಳು ಶ್ರಮಿಸುತ್ತಲಿದೆ. ಕನ್ನಡಿಗರಲ್ಲಿ ಭಾಷಾಭಿಮಾನ ಬೆಳೆಸಲು, ಸಾಹಿತ್ಯ ಕೃಷಿ ಬೆಳವಣಿಗೆಗೆ ಕಸಾಪ ಕೊಡುಗೆ ಅಪಾರವಾಗಿದೆ ಎಂದು ರಾಜ್ಯ ನಿವೃತ್ತ ನೌಕರರ ಸಂಘದ ತಾಲೂಕು ಘಟಕ ರಬಕವಿ-ಬನಹಟ್ಟಿಯ ಮೃತ್ಯುಂಜಯ ರಾಮದುರ್ಗ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ತೇರದಾಳ ಅಲ್ಲಮಪ್ರಭುದೇವರ ದೇವಾಲಯದ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತು 112ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಾತೃಭಾಷೆಯ ಘನತೆ ಗೌರವ ಕಾಪಾಡಿಕೊಂಡು ಬರುತ್ತಲಿದೆ. ಕಾರಣ ಕಸಾಪ ಕನ್ನಡದ ಉಸಿರಾಗಿ ನಿಂತಿದೆ. ಕಸಾಪ ಕನ್ನಡ ಭಾಷೆಯ ಬಗ್ಗೆ ಜನಜಾಗೃತಿ ಮೂಡಿಸಿ ಕನ್ನಡಿಗರನ್ನು ಒಗ್ಗೂಡಿಸುವ ಕಾರ್ಯ ಮಾಡುತ್ತಿದೆ ಎಂದರು.ರಬಕವಿಯ ಹಿರಿಯ ಸಾಹಿತಿ ಶಿವಾನಂದ ದಾಶಾಳ ಕಸಾಪ ನಡೆದು ಬಂದು ದಾರಿ ಕುರಿತು ಉಪನ್ಯಾಸ ನೀಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ, ಧ್ಯೇಯೋದ್ದೇಶ ಪ್ರತಿಯೊಬ್ಬ ಕನ್ನಡಿಗನಿಗೆ ಮನವರಿಕೆ ಮಾಡಿಕೊಡುವಲ್ಲಿ ಕಸಾಪ ನಿರಂತರ ಕಾರ್ಯತತ್ಪರವಾಗಿದೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳಲ್ಲಿ ಮಂಡಿಸಲಾಗುವ ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಸರಕಾರ ಕನ್ನಡಿಗರ ಭಾವನೆಗಳಿಗೆ ಸ್ಪಂದಿಸಬೇಕೆಂದರು. ಕಸಾಪ ಗ್ರಾಮೀಣ ಭಾಗದಲ್ಲಿಯೂ ಸಮ್ಮೇಳನ ಆಯೋಜಿಸಿ ಕನ್ನಡ ಭಾಷೆ,ನೆಲ, ಜಲ, ಸಂಸ್ಕೃತಿ ಕುರಿತು ಜಾಗೃತಿ ಮೂಡಿಸುತ್ತಾ ಬಂದಿದೆ. ರಬಕವಿ-ಬನಹಟ್ಟಿ ತಾಲೂಕು ವೈಶಿಷ್ಟ್ಯಪೂರ್ಣ ಕಾರ್ಯಕ್ರಮ ಆಯೋಜಿಸುತ್ತಾ ಬರುತ್ತಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.

ತೇರದಾಳ ತಾಲೂಕು ಕಸಾಪ ಅಧ್ಯಕ್ಷ ಗಂಗಾಧರ ಮೋಪಗಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವವನ್ನು ಪ್ರತಿಯೊಬ್ಬ ಕನ್ನಡಿಗ ಪಡೆದುಕೊಳ್ಳಬೇಕೆಂದರು. ರಬಕವಿ-ಬನಹಟ್ಟಿ ತಾಲೂಕು ಕಸಾಪ ಅಧ್ಯಕ್ಷ ಮ.ಕೃ.ಮೇಗಾಡಿ, ಹಿರಿಯರಾದ ಎಂ.ಸಿ.ಕುಂಚನೂರ, ಕಾರ್ಯದರ್ಶಿ ಎಸ್.ಆರ್.ರಾವಳ, ಶಿವಾನಂದ ಗುರವ ಮಾತನಾಡಿದರು. ಸಿದ್ಧಲಿಂಗ ಕಡಕೋಳ, ಕೆ.ಡಿ.ಮಾಲಗಾಂವಿ, ಕಾರ್ಯದರ್ಶಿ ಎಸ್.ಆರ್.ರಾವಳ, ಕರ್ನಾಟಕ ಜಾನಪದ ಪರಿಷತ್ ತಾಲೂಕು ಅಧ್ಯಕ್ಷ ಅಶೋಕ ಮಹಾಲಿಂಗಪೂರ, ನಿಲಕಂಠಪ್ಪ ಜಡಿ ಇದ್ದರು.



ಇಂದಿನಿಂದ ಅಖಿಲ ಭಾರತ ದೇವಾಂಗ ಜಾಗೃತಿ ಸಮಾವೇಶ

ಬಾದಾಮಿ: ಸಮೀಪದ ಬನಶಂಕರಿಯಲ್ಲಿ ಮೇ 8, 9ರಂದು ಅಖಿಲ ಭಾರತ ದೇವಾಂಗ(ನೇಕಾರ) ಜಾಗೃತಿ ಸಮಾವೇಶ-2026, ದಯಾನಂದ ಪುರಿ ಸ್ವಾಮಿಜಿಯವರ 36ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭ ಜರುಗಲಿದ್ದು, ಭರದ ಸಿದ್ಧತೆ ನಡೆದಿದೆ. ಬನಶಂಕರಿ ಹತ್ತಿರದ ಭವ್ಯ ಜಾಗದಲ್ಲಿ 240★420 ಫೀಟ್ ಭವ್ಯ ಪೆಂಡಾಲ್ ಹಾಕಲಾಗಿದೆ. ಸುಮಾರು 60 ರಿಂದ 70 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ. ಭಾಗವಹಿಸಿದ ಎಲ್ಲರಿಗೂ ಉಪಹಾರ, ಊಟ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದು ಅಖಿಲ ಭಾರತ ದೇವಾಂಗ(ನೇಕಾರ) ಜಾಗೃತಿ ಸಮಾವೇಶದ ಸಮಿತಿಯ ಅಧ್ಯಕ್ಷ ರವೀಂದ್ರ ಕಲಬುರ್ಗಿ ಮಾಹಿತಿ ನೀಡಿದರು.

ಕಾರ್ಯಕ್ರಮದ ಸಿದ್ಧತೆ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಸಮಾಜದ ಸಂಘಟನೆ, ಜಾಗೃತಿ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಎಲ್ಲ ರಂಗಗಳಲ್ಲಿ ಸಮಾಜ ಬಾಂಧವರು ಸಂಘಟಿತರಾಗಬೇಕಿದೆ ಎಂದು ತಿಳಿಸಿದರು. ಇಂದು ಶುಕ್ರವಾರ ಬೆಳಿಗ್ಗೆ 5 ಗಂಟೆಗೆ ಬನಶಂಕರಿದೇವಿಗೆ ಅಭಿಷೇಕ, 6 ಗಂಟೆಗೆ ಸಣ್ಣಕ್ಕಿ ಬಾಗೂರು ಬನಶಂಕರಿದೇವಿ ಉತ್ಸವ ಮೂರ್ತಿಯ ಆಹ್ವಾನದೊಂದಿಗೆ ಚೌಡೇಶ್ವರಿ ದೇವಿಯ ಕತ್ತಿ ಹಬ್ಬದ ಉದ್ಘಾಟನೆಯನ್ನು ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಭೀಮಸೇನ ಚಿಮ್ಮನಕಟ್ಟಿ ನೆರವೇರಿಸುವರು.



ಹಂಪಿ ಹೇಮಕೂಟದ ದಯಾನಂದ ಪುರಿ ಸ್ವಾಮಿಗಳು, ಮುಖಂಡರಾದ ಸಿ.ಎಲ್.ಧನಪಾಲ್, ಟಿ.ರಾಜೇಶ, ಎಚ್.ಪರಮೇಶ್ವರಪ್ಪ, ಕೆ.ಸಿ.ತಿಮ್ಮಶೆಟ್ಟಿ, ಸಂಕಣ್ಣ ಕರಡಿಗುಡ್ಡ, ಟಿ.ಆರ್.ಉಮಾಪತಿ, ಚುಡಾಮನಿ ಕೇಶವಮೂರ್ತಿ, ಕುಮಾರ ಶೇಬಿನಕಟ್ಟಿ, ಮಹೇಶ ಶೇಬಿನಕಟ್ಟಿ, ಗವಿರಂಗಯ್ಯ, ಶ್ರೀಧರ ದೇವಾಂಗ, ಸತೀಶ ಸಪ್ಪರದ, ಭಾರತಿ ರಮೇಶ, ಉಮೇಶ ಕಂದಗಲ್, ದಿನೇಶ ಗಿಡ್ನಂದಿ, ಆರ್.ಜಿ.ರಾಮದುರ್ಗ, ರವಿ ಬಳಿಗೇರ, ಬಸವರಾಜ ಕುದರಿ, ಸತೀಶ ಸಪ್ಪರದ, ಹೇಮಾದ್ರೆಪ್ಪ ಕೊಪ್ಪಳ, ಬಸವರಾಜ ವಡ್ಡೊಡಗಿ, ಟಿ.ಎಂ.ಜಲೇಂದ್ರ, ನಾಗಪ್ಪ ಭಾವಿಕಟ್ಟಿ ಹಾಜರಿದ್ದರು.

ಮೇ 10ಕ್ಕೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮ: ಬಾರಿಗಿಡದ

ಇಳಕಲ್: ನಾಟ್ಯರಾಣಿ ಕಲಾಸಂಘ ಹಾಗೂ ಚಿಣ್ಣರ ಚಿಲಿಪಿಲಿ-2026ನೇ ವಾರ್ಷಿಕೋತ್ಸವ ಉದ್ಘಾಟನೆ, ಸಾಂಸ್ಕೃತಿಕ ಕಾರ್ಯಕ್ರಮ, ನಾಟಕಗಳು, ನೃತ್ಯ ಹಾಗೂ ಸನ್ಮಾನ ಕಾರ್ಯಕ್ರಮ ಮೇ 10ರಂದು ಭಾನುವಾರ ಸಂಜೆ 4 ಗಂಟೆಗೆ ಸುವರ್ಣ ರಂಗ ಮಂದಿರದಲ್ಲಿ ನಡೆಯಲಿದೆ ಎಂದು ನಾಟ್ಯರಾಣಿ ಕಲಾ ಸಂಘದ ಅಧ್ಯಕ್ಷೆ ಉಮರಾಣಿ ಬಾರಿಗಿಡದ ಹೇಳಿದರು.

ನಗರದ ಪತ್ರಿಕಾ ಕಾರ್ಯಾಲಯದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ವಿಜಯಾನಂದ ಕಾಶಪ್ಪನವರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಬಾಗಲಕೋಟೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಸಂತೋಷ ಭೋವಿ, ಹಾಲುಮತ ಸಮಾಜದ ನಾಯಕ ವಿಜಯಮಹಾಂತೇಶ ಗದ್ದನಕೇರಿ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಕೆ.ಎ. ಬನ್ನಟ್ಟಿ, ಸುಪರ ಟೈಮ್ಸ್ ಸಂಪಾದಕ ಜಬ್ಬಾರ ಕಲಬುರ್ಗಿ, ನಿವೃತ್ತ ಮುಖ್ಯಗುರು ಸಂಗಣ್ಣ ಗದ್ದಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.



ಮಹಾಂತೇಶ ಮರಿಯಮ್ಮನಹಳ್ಳಿ ತಂಡದಿಂದ ಜಾನಪದ ಗೀತೆಗಳು ಮತ್ತು ಭಕ್ತಿ ಗೀತೆಗಳು ನಡೆಯಲಿದೆ. ದಿ.ಕಂದಗಲ್ಲ ಹನುಮಂತರಾಯ್ ಅವರ ವಿರಚಿತ, ಉಮರಾಣಿ ಬಾರಿಗಿಡದ ನಿರ್ದೇಶನ, ಜ್ಯೋತಿ ಸಹ ನಿರ್ದೇಶನದ ನಾಟಕ ರಕ್ತರಾತ್ರಿ, ಹಾಗೂ ಬಿ.ಪಿ ದುತ್ತರಗಿ ರಚನೆ, ಉಮರಾಣಿ ಬಾರಿಗಿಡದ ನಿರ್ದೇಶನ, ಜ್ಯೋತಿ ಚಲವಾದಿ ವಸ್ತ್ರ ವಿನ್ಯಾಸದ ನಾಟಕ ಸಂಪತ್ತಿಗೆ ಸವಾಲ, ಪಕೀರಪ್ಪ ವರವಿ ರಚನೆಯ, ಮಹಾಂತೇಶ ಗಜೇಂದ್ರಗಡ ನಿರ್ದೇಶನದ ಅಲ್ಲಮಪ್ರಭು ಅನುಭವಮಂಟಪ ನಾಟಕ, ಎಸ್.ಎಸ್. ವೆಂಕಟೇಶಮೂರ್ತಿ ರಚನೆ, ಉಮೇಶ ಟಂಕಸಾಲಿ ನಿರ್ದೇಶನದ ಬಿಲ್ಲ ಹಬ್ಬ ನಾಟಕಗಳು ಜರುಗಲಿವೆ ಎಂದು ಹಿರಿಯ ರಂಗಕರ್ಮಿ ಮಹಾಂತೇಶ ಗಜೇಂದ್ರಗಡ ಹೇಳಿದರು.

ಸಾಮೂಹಿಕ ವಿವಾಹ ಬಡವರಿಗೆ ಅನುಕೂಲ



ಜಮಖಂಡಿ: ದುಂದುವೆಚ್ಚದ ಮದುವೆಗಳು ಬಡವರಿಗೆ ಆರ್ಥಿಕ ಹೊರೆಯಾಗುತ್ತಿರುವ ಈ ಕಾಲದಲ್ಲಿ ಸಾಮೂಹಿಕ ವಿವಾಹಗಳು ಬಡ ಕುಟುಂಬಗಳ ಆರ್ಥಿಕ ಪ್ರಗತಿಗೆ ಪೂರಕವಾಗಿವೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದ ಬಸವ ಭವನದಲ್ಲಿ ಬೋಧಿಸತ್ವ ಗೌತಮಬುದ್ಧ ನಗರ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಆಶ್ರಯದಲ್ಲಿ ಆಯೋಜಿಸಿದ್ದ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಘಟನೆಯವರು ಸಾಮೂಹಿಕ ವಿವಾಹದ ಮೂಲಕ ಬಡವರಿಗೆ ನೆರವಾಗಿರುವುದು ಶ್ಲಾಘನೀಯ ಕಾರ್ಯ ಎಂದರು. ಜಿಪಂ ಮಾಜಿ ಉಪಾಧ್ಯಕ್ಷ ಸುಶೀಲಕುಮಾರ ಬೆಳಗಲಿ, ಸಂಘದ ಅಧ್ಯಕ್ಷ ಪರಶುರಾಮ ಕಾಂಬಳೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜ್ಞಾನಜ್ಯೋತಿ ಬಂತೇಜಿ, ಬಾಗಲಕೋಟೆಯ ಧಮ್ಮಪಾಲ ಬಂತೇಜಿ 12 ಜೋಡಿಗಳಿಗೆ ವಿವಾಹ ಕಾರ್ಯಕ್ರಮ ನೆರವೇರಿಸಿದರು. ಮರೇಗುದ್ದಿಯ ವಿಜಯ ಮಹಾಂತೇಶ್ವರ ಸ್ವಾಮೀಜಿ, ಹಿಪ್ಪರಗಿ ಸಂಗಮೇಶ್ವರ ಮಠದ ಪ್ರಭುಜಿ ಬೆನ್ನಾಳೆ ಮಹಾರಾಜರು ಸಾನ್ನಿಧ್ಯ ವಹಿಸಿದ್ದರು. ಬಸವರಾಜ ದೊಡ್ಡಮನಿ ಮಾತನಾಡಿದರು.ಏಗಪ್ಪ ಸವದಿ, ಎ.ಪಿ.ಕುಲಕರ್ಣಿ, ರವಿ ಯಡಹಳ್ಳಿ, ಡಾ.ಎ.ಆರ್.ಬೆಳಗಲಿ, ಶಶಿಕಾಂತ ದೊಡ್ಡಮನಿ, ಅಶೋಕ ನಾರಾಯಣಿ ಮಾತನಾಡಿದರು. ಮುತ್ತಣ್ಣ ಹಿಪ್ಪರಗಿ, ಅಲ್ತಾಫ ಸಗರ, ನಾಗಪ್ಪ ಸನದಿ, ರವಿ ಬಬಲೇಶ್ವರ, ಬಸವರಾಜ ಹಳ್ಳದಮನಿ, ಅಬ್ದುಲ ಜಮಾದಾರ, ಯಾಸೀನ ಲೋದಿ, ರವಿ ಕಾಂಬಳೆ ಇದ್ದರು

ಅವಿರೋಧ ಆಯ್ಕೆಗೆ ಹೆಚ್ಚು ಒತ್ತು



ಜಮಖಂಡಿ: ಸಂಘ ಸಂಸ್ಥೆಗಳ ಚುನಾವಣೆಯು ಅವಿರೋಧವಾಗಿ ಆಯ್ಕೆಯಾದರೆ ಒಂದು ಮಹತ್ವವಿರುತ್ತದೆ. ಮುಂಬರುವ ದಿನಗಳಲ್ಲಿ ವಕೀಲ ಸಂಘದ ಅಧಿಕಾರಾವಧಿಯಲ್ಲಿ ಅವಿರೋಧ ಆಯ್ಕೆಗೆ ಹೆಚ್ಚು ಒತ್ತು ನೀಡಲಾಗುತ್ತದೆ ಎಂದು ನೂತನ ಅಧ್ಯಕ್ಷ ನ್ಯಾಯವಾದಿ ಎ.ಪಿ.ಕುಲಕರ್ಣಿ ಹೇಳಿದರು.

ನಗರದ ವಕೀಲರ ಸಂಘದ ಸಭಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಕಟ್ಟಡ ಕಳಪೆ ಆಗಿರುವುದರಿಂದ ಸ್ಥಳಾಂತರ ಅಗತ್ಯವಿದೆ. ಇದೇ ಜಾಗದಲ್ಲಿ ಹೊಸ ಕಟ್ಟಡ ಮಂಜೂರಾಗಿದ್ದರೂ ಕಾರ್ಯಾರಂಭವಾಗಿಲ್ಲ, ಶೀಘ್ರದಲ್ಲೇ ಈ ಕುರಿತು ಕ್ರಮ ಕೈಗೊಳ್ಳಲಾಗುತ್ತದೆ. ಜೊತೆಗೆ ಉತ್ತರ ಕರ್ನಾಟಕದ ವಕೀಲರಿಗೆ ಸಿವಿಲ್ ಜಡ್ಜ್ ಪರೀಕ್ಷೆಯಲ್ಲಿ ಅವಕಾಶ ಹೆಚ್ಚಿಸಲು ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ಸಂಘದ ಗ್ರಂಥಾಲಯ ಸುಧಾರಿಸುವುದಕ್ಕೂ ಆದ್ಯತೆ ನೀಡುತ್ತೇವೆ ಎಂದು ಹೇಳಿದರು. ಪ್ರಧಾನ ಕಾರ್ಯದರ್ಶಿ ವೈ.ಕೆ.ಕಡಪಟ್ಟಿ ಮಾತನಾಡಿ ನೂತನ ಉಪಾಧ್ಯಕ್ಷೆಯಾಗಿ ವಿ.ಎ.ಭಟ್, ಜಂಟಿ ಕಾರ್ಯದರ್ಶಿ ಹಾಗೂ ಗ್ರಂಥಾಲಯ ಕಾರ್ಯದರ್ಶಿಯಾಗಿ ಎಸ್.ಎ.ಅಂಬಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಆರ್.ಎಂ.ಝುಂಡೆ, ಎಸ್.ಕೆ.ದಳವಾಯಿ, ಎಸ್.ಕೆ.ಗೌಡಪ್ಪನವರ, ಯು.ಎಸ್.ಚರಕಿ, ಜೆ.ಆರ್.ಮಾಳಿ, ಮಹಿಳಾ ಪ್ರತಿನಿಧಿಗಳಾಗಿ ಇಬ್ಬರು ಸದಸ್ಯರು ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಆರ್.ಆರ್.ಕರೋಷಿ ಸ್ವಾಗತಿಸಿದರು. ವಿ.ಜಿ. ಆಳ್ಳಿಕಟ್ಟಿ ವಂದಿಸಿದರು.

ಉಡಿ ತುಂಬುವ ಕಾರ್ಯಕ್ರಮ

ಇಳಕಲ್: ನಗರದಲ್ಲಿ ಕೆಂಚಮ್ಮ ದೇವಿಯ ಉಡಿ ತುಂಬುವ ಕಾರ್ಯಕ್ರಮ ಹಾಗೂ ಕುಂಭ ಮೆರವಣಿಗೆಯು ಅತ್ಯಂತ ವಿಜೃಂಭಣೆ ಮತ್ತು ಭಕ್ತಿಭಾವದಿಂದ ಜರುಗಿತು.

ದೇವಿಯ ಆಶೀರ್ವಾದ ಪಡೆಯಲು ನೂರಾರು ಮಹಿಳೆಯರು ಸಾಂಪ್ರದಾಯಿಕ ಉಡಿಗೆಯೊಂದಿಗೆ ಕುಂಭ ಹೊತ್ತು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಈ ಭವ್ಯ ಕುಂಭ ಮೆರವಣಿಗೆಯು ಕೆಂಚಮ್ಮ ದೇವಸ್ಥಾನದಿಂದ ಆರಂಭಗೊಂಡು ಬಸ್ ನಿಲ್ದಾಣ ಸಮೀಪವಿರುವ ಮಾರುತಿ ದೇವಸ್ಥಾನದ ಎದುರಿನ ಹರಳಯ್ಯ ವೃತ್ತ ತಲುಪಿ ಹಳ್ಳಯ್ಯನವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ. ಅಲ್ಲಿಂದ ಪುನಃ ದೇವಸ್ಥಾನಕ್ಕೆ ತಲುಪಿತು.

ಹರಳಯ್ಯ ಸಮಾಜದ ಅಧ್ಯಕ್ಷರು ಹಾಗೂ ಸಮಾಜದ ಸರ್ವ ಸದಸ್ಯರು ಹಾಗೂ ಕೆಂಚಮ್ಮ ದೇವಿ ಸದ್ಭಕ್ತರು ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು.



ಇಂದಿನಿಂದ ಮಲ್ಲಮಾಂಬೆ ಜಾತ್ರಾ ಮಹೋತ್ಸವ

ಕಲಾದಗಿ: ಸಮೀಪದ ಖಜ್ಜಿಡೋಣಿ ಗ್ರಾಮದ ಮಹಾಸಾಧ್ವಿ ಹೇಮರಡ್ಡಿ ಮಲ್ಲಮಾಂಬೆಯ ಜಾತ್ರಾ ಮಹೋತ್ಸವದ ನಿಮಿತ್ತ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಮೇ 8ರಂದು ಶುಕ್ರವಾರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬೆಳಗ್ಗೆ ಕಳಸದ ಮೆರವಣಿಗೆ ಹಾಗೂ ವಿಶೇಷ ಪೂಜೆಯೊಂದಿಗೆ ಕಳಸಾರೋಹಣ ನೆರವೇರುವುದು. ಮೇ 9ರಂದು ಬೆಳಗ್ಗೆ ಮೃತ್ಯುಂಜಯ ಹೋಮ ರಾತ್ರಿ 9 ಗಂಟೆಗೆ ಜಾನಪದ ಗಾನ ಗಾರೂಡಿಗ ಗುರುರಾಜ ಹೊಸಕೋಟಿ ಅವರ ತಂಡದಿಂದ ಜನಪದ ರಸ ಸಂಜೆ ಕಾರ್ಯಕ್ರಮ ನಡೆಯುವುದು. ಈ ಕಾರ್ಯಕ್ರಮಕ್ಕೆ ವಿಶೇಷ ಅತಿಥಿಯಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಸಿದ್ದಪ್ಪ ಬಿದರಿ ಉಪಸ್ಥಿತರಿರುವರು. ಮೇ 10ರಂದು ಬೆಳಗ್ಗೆ 10 ಗಂಟೆಗೆ ಶಿವಶರಣೆ ಹೇಮರಡ್ಡಿ ಮಲ್ಲಮಾಂಬೆ ಬೆಳ್ಳಿ ಮೂರ್ತಿ ಪಲ್ಲಕ್ಕಿ ಉತ್ಸವ ಹಾಗೂ ಮಧ್ಯಾಹ್ನ ಮಹಾ ಪ್ರಸಾದ, ಸಂಜೆ 7ಗಂಟೆಗೆ ಲಕ್ಷ ದೀಪೋತ್ಸವ, ಸಂಜೆ 7.30 ಗಂಟೆಗೆ ಮದ್ದು ಸುಡುವುದರ ಮೂಲಕ ಕಾರ್ಯಕ್ರಮ ಮಂಗಲಗೊಳ್ಳುವುದು. ಮೇ 10ರಂದು ಭಾನುವಾರ ಸಂಜೆ 7ಗಂಟೆಗೆ ಪ್ರಥಮ ಬಾರಿಗೆ ಖಜ್ಜಿಡೋಣಿ ಗ್ರಾಮದಲ್ಲಿ ರಾಜ್ಯಮಟ್ಟದ ಗ್ರುಪ ಡ್ಯಾನ್ಸ್ ಸ್ಪರ್ಧೆ ಆಯೋಜಿಸಲಾಗಿದ್ದು, ಪ್ರಥಮ ಬಹುಮಾನವಾಗಿ 50 ಸಾವಿರ ರೂ.ಗಳು, ದ್ವಿತೀಯ ಬಹುಮಾನವಾಗಿ 40 ಸಾವಿರ ರೂ.ಗಳು, ತೃತೀಯ ಬಹುಮಾನವಾಗಿ 30 ಸಾವಿರ ರೂ., ಚತುರ್ಥ ಬಹುಮಾನವಾಗಿ 20 ಸಾವಿರ ರೂ.ಗಳನ್ನು ನೀಡಲಾಗುತ್ತಿದೆ. ಖಜ್ಜಿಡೋಣಿಯ ಶಂಕರಾಚಾರ್ಯ ಅವಧೂತ ಆಶ್ರಮದ ಶಿವಾನಂದ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಿಲಿದ್ದಾರೆ. ಭಂಟನೂರ ಗ್ರಾಮದ ಮಾತೋಶ್ರೀ ನೇತ್ರಾವತಿ ಅಮ್ಮನವರು ಸಾನ್ನಿಧ್ಯ ವಹಿಸುವರು. ಮಾಜಿ ಸಚಿವ ಎಸ್.ಆರ್.ಪಾಟೀಲ ಅಧ್ಯಕ್ಷತೆ ವಹಿಸುವರು. ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ, ವಿಧಾನ ಪರಿಷತ್ ಸದಸ್ಯರಾದ ಎಚ್.ಆರ್.ನಿರಾಣಿ, ಪಿ.ಎಚ್.ಪೂಜಾರ, ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಮುರುಗೇಶ ನಿರಾಣಿ, ಮಾಜಿ ಸಚಿವ ಅಜಯಕುಮಾರ ಸರನಾಯಕ, ಖಜ್ಜಿಡೋಣಿಯ ಖ್ಯಾತ ಪ್ರವಚನಕಾರ ಕ್ರಿಷ್ಣಾನಂದ ಶಾಸ್ತ್ರಿಗಳು ಸೇರಿದಂತೆ ಅನೇಕ ರಾಜಕೀಯ ಧುರಿಣರು, ಆಧ್ಯಾತ್ಮಿಕ ಚಿಂತಕರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ. ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸುವ ತಂಡದವರು ಸಂಜೆ 6ಗಂಟೆಯೊಳಗಾಗಿ ಆಯೋಜಕರನ್ನು ಸಂಪರ್ಕಿಸಬೇಕೆಂದು ಜಾತ್ರಾ ಮಹೋತ್ಸವ ಕಮೀಟಿಯವರು ತಿಳಿಸಿದ್ದಾರೆ.

ಕಿರುಸುದ್ದಿ

ಭೀಮಾ ನದಿಗೆ ನೀರು

ಇಂಡಿ: ತಾಲೂಕಿನಲ್ಲಿ ಹರಿಯುವ ಭೀಮಾ ನದಿಗೆ ಹದಿನಾರು ಸಾವಿರ ಕ್ಯೂಸೆಕ್ ನೀರು ಹರಿಯಬಿಡಲಾಗಿದೆ ಎಂದು ಕಂದಾಯ ಉಪವಿಭಾಗಾಧಿಕಾರಿ ಚಿದಾನಂದ ಗುರುಮೂರ್ತಿ ತಿಳಿಸಿದ್ದಾರೆ. ಗುರುವಾರ ನೀರು ಧೂಳಖೇಡವರೆಗೆ ಬಂದಿದ್ದು, ಸಂಜೆಯವರೆಗೆ ಇಂಡಿ ತಾಲೂಕು ಪ್ರವೇಶಿಸುವ ಸಾಧ್ಯತೆ ಇದೆ. ಈ ನೀರು ಇಂಡಿ ಪಟ್ಟಣಕ್ಕೆ ಕುಡಿಯುವ ನೀರಿನ ಕುರಿತು ಮತ್ತು ನದಿ ದಂಡೆಯ ಪಾತ್ರದ ಹಳ್ಳಿಗಳಿಗೆ ಜನ-ಜಾನುವಾರುಗಳಿಗೆ ಕುಡಿಯುವ ನೀರು ಉಪಯೋಗಿಸಲಾಗುವುದು ಎಂದು ತಿಳಿಸಿದ್ದಾರೆ.

ಮೇ 11ರಿಂದ ಜಾತ್ರೆ

ದೇವರಹಿಪ್ಪರಗಿ: ತಾಲೂಕಿನ ಪಡಗಾನೂರಗ್ರಾಮದ ಕೈವಲ್ಯ ಆಶ್ರಮ ಸಿದ್ಧಾರೂಢ ಮಠದಲ್ಲಿ, ಸಿದ್ಧಾರೂಢ ಸ್ವಾಮಿಗಳವರ ಪುಣ್ಯಮೂರ್ತಿ ಪ್ರಾಣ ಪ್ರತಿಷ್ಠಾಪನೆಯ ತೃತೀಯ ವರ್ಷದ ವಾರ್ಷಿಕೋತ್ಸವ, ಜಾತ್ರಾ ಮಹೋತ್ಸವ ಹಾಗೂ ಅಧ್ಯಾತ್ಮಿಕ ಪ್ರವಚನ ಕಾರ್ಯಕ್ರಮಗಳು ಮೇ 11, 12ರಂದು ಅತ್ಯಂತ ಜರುಗಲಿವೆ. ಮಠದ ಅಧಿಪತಿ ದಯಾನಂದ ಸ್ವಾಮಿಗಳವರ ನೇತೃತ್ವ ಹಾಗೂ ಡಾ.ಶಿವಕುಮಾರ ಸ್ವಾಮಿಗಳು ಚಿದಂಬರಾಶ್ರಮ ದಿವ್ಯ ಸಾನ್ನಿಧ್ಯದಲ್ಲಿ ಎಲ್ಲ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಮೇ 11ರಂದು ಸೋಮವಾರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಿದ್ಧಾರೂಢರ ಮೂರ್ತಿ ಮೆರವಣಿಗೆ, ಕುಂಭ, ಕಳಸ ಹಾಗೂ ವಿವಿಧ ವಾದ್ಯಮೇಳಗಳೊಂದಿಗೆ ಅದ್ದೂರಿಯಾಗಿ ಜರುಗಲಿದೆ. ಸಂಜೆ 6ರಿಂದ ರಾತ್ರಿ 8ರ ವರೆಗೆ ಅಧ್ಯಾತ್ಮಿಕ ಪ್ರವಚನ ನಡೆಯಲಿದ್ದು, ಮೇ 12ರಂದು ಮಂಗಳವಾರ ಬೆಳಗ್ಗೆ ಸಿದ್ಧಾರೂಢ ಮೂರ್ತಿಗೆ ಮಹಾರುದ್ರಾಭಿಷೇಕ, ಬೆಳಗ್ಗೆ 8ರಿಂದ 10ರ ವರೆಗೆ ಪ್ರವಚನ ನಡೆಯಲಿದೆ. ಹಾಗೂ ವಿವಿಧ ಗಣ್ಯರಿಂದ ತುಲಾಭಾರ ಸೇವೆ ನೆರವೇರಲಿದೆ. ಸ್ವರೂಪಾನಂದ ಸ್ವಾಮಿಗಳು ಇಂಡಿ, ಪ.ಪೂ. ಶಂಕರಾನಂದ ಸ್ವಾಮಿಗಳು ಅಥಣಿ, ಮಾತೋಶ್ರೀ ಯೋಗೇಶ್ವರಿ ತಾಯಿಯವರು ಬುರಣಾಪುರ, ಮಾತೋಶ್ರೀ ಅಕ್ಕಮಹಾದೇವಿ ತಾಯಿಯವರು ಚಿಕ್ಕಪಡಸಲಗಿ, ಪ.ಪೂ. ಅದ್ವೈತಾನಂದ ಸ್ವಾಮಿಗಳು ಯರಗಲ್ಲ ಪಾಲ್ಗೊಳ್ಳಲಿದ್ದಾರೆ. ಮೇ 8ರಿಂದ ಆರಂಭವಾಗಿರುವ ಪ್ರವಚನ ಮಾಲಿಕೆಯಲ್ಲಿ ದ್ರಾಕ್ಷಾಯಣಿ ತಾಯಿಯವರು ಹೂವಿನ ಹಿಪ್ಪರಗಿ ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ ವಿಷಯದ ಕುರಿತು ಪ್ರವಚನ ನೀಡುತ್ತಿದ್ದಾರೆ. ಮಹಾಂತೇಶ ನಾಗೋಜಿ ಸಂಗೀತ ಸೇವೆ, ಸಾಹೇಬಗೌಡ ಮುಳಸಾವಳಗಿ ಮತ್ತು ತಂಡದವರು ತಬಲಾ ಸೇವೆ ನೀಡಲಿದ್ದಾರೆ ಎಂದು ಸಿದ್ಧಾರೂಢ ಮಠದ ಭಕ್ತ ಮಂಡಳಿ ತಿಳಿಸಿದೆ.

ಪಡಿತರ ಅಕ್ಕಿ ಬಿಡುಗಡೆ

ವಿಜಯಪುರ: ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯಡಿ 2026ನೇ ಮೇ ಹಾಗೂ ಜೂನ್ ತಿಂಗಳಿಗೆ ಸಂಬಂಧಿಸಿದ ಪಡಿತರ ಅಕ್ಕಿಯನ್ನು ಮೇ ತಿಂಗಳಿನಲ್ಲಿಯೇ ವಿತರಿಸಲು ಜಿಲ್ಲೆಯ ಎಲ್ಲ ನ್ಯಾಯಬೆಲೆ ಅಂಗಡಿಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ.ಆನಂದ ಕೆ. ಅವರು ತಿಳಿಸಿದ್ದಾರೆ. ಅಂತ್ಯೋದಯ ಅನ್ನಯೋಜನೆ ಪ್ರತಿ ಪಡಿತರ ಚೀಟಿಗೆ ಎರಡೂ ತಿಂಗಳ ಪಡಿತರ ಅಕ್ಕಿ ಒಟ್ಟು 70 ಕೆಜಿ ಹಾಗೂ ಆದ್ಯತಾ (ಬಿಪಿಎಲ್) ಪಡಿತರ ಚೀಟಿಗೆ ಪ್ರತಿ ತಿಂಗಳು ಪ್ರತಿ ಸದಸ್ಯರಿಗೆ 5 ಕೆಜಿಯಂತೆ ಒಟ್ಟು 10 ಕೆಜಿ ಅಕ್ಕಿಯನ್ನು ಕಡ್ಡಾಯವಾಗಿ ಎರಡು ಪ್ರತ್ಯೇಕ ಬಯೋಮೆಟ್ರಿಕ್ ನೀಡುವ ಮೂಲಕ ಪಡಿತರ ಚೀಟಿದಾರರು ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯ ಮೇ ಹಾಗೂ ಜೂನ್ ತಿಂಗಳ ಅಕ್ಕಿಯನ್ನು 2026ನೇ ಜೂನ್ ತಿಂಗಳಲ್ಲಿ ವಿತರಣೆ ಮಾಡಲಾಗುವುದು. ಯಾವುದೇ ಕಾರಣಕ್ಕೂ ಸರ್ಕಾರವು ನೀಡುತ್ತಿರುವ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಿಕೊಳ್ಳದಿರಲು ಸೂಚಿಸಿದೆ. ಒಂದು ವೇಳೆ ಮಾರಾಟ ಮಾಡುವುದು ಕಂಡುಬಂದರೆ ಅಂತಹ ಬಿಪಿಎಲ್ ಕಾರ್ಡುಗಳನ್ನು ರದ್ದು ಪಡಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

ಅಪಘಾತ: ತುಂಡಾದ ಟ್ರ್ಯಾಕ್ಟರ್

ಸಿಂದಗಿ: ನಗರದ ಹೊರವಲಯದ ಕಲಕೇರಿ ಬೈಪಾಸ್ ಬಳಿ ಗುರುವಾರ ಟ್ರ್ಯಾಕ್ಟರ್ ಹಾಗೂ ಲಾರಿ ಮಧ್ಯದಲ್ಲಿ ಅಪಘಾತ ಸಂಭವಿಸಿದೆ. ಅದೃಷ್ಟವಶಾತ್ ಅಪಘಾತದಲ್ಲಿ ಯಾವುದೇ ರೀತಿಯ ಪ್ರಾಣ ಹಾನಿ ಸಂಭವಿಸಿಲ್ಲ ಎಂದು ಹೇಳಲಾಗುತ್ತಿದೆ. ಸಿಂದಗಿಯಿಂದ ಕಲಕೇರಿ ಮಾರ್ಗವಾಗಿ ಹೊರಟಿರುವ ಟ್ರ್ಯಾಕ್ಟರ್ ಹಾಗೂ ವಿಜಯಪುರ ಮಾರ್ಗದಿಂದ ಕಲಬುರಗಿ ಮಾರ್ಗದೆಡಗೆ ಹೊರಟಿದ್ದ ಸಿಮೆಂಟ್ ತುಂಬಿದ ಲಾರಿ ನಡುವೆ ಈ ಒಂದು ಘಟನೆ ನಡೆದಿದೆ. ಈ ಘಟನೆ ಸಿಂದಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ದೇಹದಾನ

ವಿಜಯಪುರ: ಬಸವನ ಬಾಗೇವಾಡಿ ತಾಲೂಕಿನ ದಿಂಡವಾರ ಗ್ರಾಮದ ಅಣ್ಣಪ್ಪಾ ಗುರುಸಿದ್ದಪ್ಪಗೌಡ ಪಾಟೀಲ(73) ಇಚ್ಛೆಯಂತೆ ಕುಟುಂಬ ಸದಸ್ಯರು ಪಾರ್ಥಿವ ಶರೀರವನ್ನು ಬಿಎಲ್‌ಡಿಇ ಆಸ್ಪತ್ರೆಗೆ ದಾನ ಮಾಡಿದ್ದಾರೆ. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಆಸ್ಪತ್ರೆಯ ಅಂಗರಚನಾ ಶಾಸ್ತ್ರವಿಭಾಗದ ಮುಖ್ಯಸ್ಥ ಡಾ.ಆರ್.ಎಸ್.ಬುಲಗೌಡ ಅವರು ಪಾರ್ಥಿವ ಶರೀರರ ಸ್ವೀಕರಿಸಿ ಕುಟುಂಬ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.



ಮುದ್ದೇಬಿಹಾಳ: ತಾಲೂಕು ಶರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ವೇದಿಕೆಯಿಂದ ಪ್ರತಿ ಹುಣ್ಣಿಮೆಯಂತೆ ಶರಣು ಬೆಳಗು ಹುಣ್ಣಿಮೆ ಕಾರ್ಯಕ್ರಮವನ್ನು ವೇದಿಕೆಯ ಅಧ್ಯಕ್ಷ ಕಾಶಿಬಾಯಿ ರಾಂಪುರ್ ಅವರ ಮನೆಯಲ್ಲಿ ನಡೆಸಲಾಯಿತು. ಮಹಾದೇವಿ ನಾಲತವಾಡ, ಅಶೋಕ ಪಿ.ಮಣಿ, ಬಾಪುಗೌಡ ಪಾಟೀಲ, ಶಿವಯೋಗಪ್ಪ ರಾಂಪುರ ಸೇರಿದಂತೆ ಮಹಿಳೆಯರು ಶರಣ ಬಳಗ ಅಕ್ಕಮಹಾದೇವಿ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ವಚನ ಗಾಯನ ಮಾಡಿದರು.

ಕೃಷ್ಣರಾಜ ಒಡೆಯರ ಕೊಡುಗೆ ಅಪಾರ

ಬಸವನಬಾಗೇವಾಡಿ: ಕನ್ನಡ ಸಾಹಿತ್ಯಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಕೊಡುಗೆ ಅಪಾರವಾಗಿದ್ದು ಅವರು ಸಾಹಿತ್ಯ ಲೋಕಕ್ಕೆ ಬೆಳ್ಳಿ ಚುಕ್ಕೆಯಾಗಿದ್ದರು ಎಂದು ವಿಶ್ರಾಂತ ಅಧ್ಯಾಪಕ ಸಿ.ಎಲ್.ಮುರಾಳ ಹೇಳಿದರು. ಪಟ್ಟಣದ ಬಸವೇಶ್ವರ ದೇವಸ್ಥಾನದ ಉದ್ಯಾನವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಹಾಗೂ ತಾಲೂಕು ಘಟಕಗಳ ಸಹಯೋಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ನಿಮಿತ್ತ ಹಮ್ಮಿಕೊಂಡ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಕಸಾಪ ಮಹಿಳಾ ಪ್ರತಿನಿಧಿ ಮಹಾದೇವಿ ಬಿರಾದಾರ ಮಾತನಾಡಿ, ಕನ್ನಡ ಭಾಷೆ, ನೆಲ, ಜಲಕ್ಕೆ ಸುದೀರ್ಘವಾದ ಇತಿಹಾಸವಿದೆ, ನಮ್ಮ ಮಕ್ಕಳಲ್ಲಿ ಕನ್ನಡ ಭಾಷಾಭಿಮಾನ ಬೆಳೆಸುವಲ್ಲಿ ಮುಂದಾಗಬೇಕು, ಕನ್ನಡ ಪ್ರಥಮ ಭಾಷೆಯಾಗಿ ನೋಡದೆ ಇಂದಿನ ಪೀಳಿಗೆ ಇಂಗ್ಲೀಷ ಭಾಷೆಯ ಕಡೆಗೆ ಆದ್ಯತೆ ಕೊಡುತ್ತಿದ್ದಾರೆ, ನಮ್ಮೆಲ್ಲರಲ್ಲಿ ಕನ್ನಡ ಭಾಷೆಯ ಬಗ್ಗೆ ವಿಶೇಷ ಅಭಿಮಾನವನ್ನು ಹೊಂದಿ ನಾಲ್ವಡಿ ಕೃಷ್ಣರಾಜ ಒಡೆಯರರವರ ಆಶೆಯನ್ನು ಈಡೇರಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಎಸ್.ಕೆ.ಸೋಮನಕಟ್ಟಿ ಮಾತನಾಡಿ ಕನ್ನಡ ನಾಡಿನ ಹಿರಿಮೆ ಕಸಾ ನಿರಂತರವಾಗಿ ಕಾರ್ಯನಿರ್ವಹಿಸಿಕೊಂಡು ಬರುತ್ತಿದೆ ಎಂದು ಹೇಳಿದರು. ಷಣ್ಮುಖಪ್ಪ ಅಂಬಲಿ, ಕಸಾಪ ತಾಲೂಕಾಧ್ಯಕ್ಷ ಶಿವಾನಂದ ಡೋಣೂರ ಮಾತನಾಡಿದರು. ಎಂ.ಎನ್. ಅಂಗಡಗೇರಿ, ಎಸ್.ಬಿ.ಅಂಕದ, ಬಸವರಾಜ ಮೇಟಿ, ಶ್ರೀಶೈಲ ಶಿರಗುಪ್ಪಿ, ಎಸ್.ಆರ್. ಮಠ, ಶಿಕ್ಷಕರಾದ ಶರಣು ದಳವಾಯಿ, ಬಸವರಾಜ ಚಿಂಚೊಳ್ಳಿ ಇದ್ದರು.



ಪಟ್ಟಣದ ಬಸವೇಶ್ವರ ದೇವಸ್ಥಾನದ ಉದ್ಯಾನವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಹಾಗೂ ತಾಲೂಕು ಘಟಕಗಳ ಸಹಯೋಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ನಿಮಿತ್ತ ಹಮ್ಮಿಕೊಂಡ ಸಮಾರಂಭ ಉದ್ಘಾಟಿಸಿದರು. ಷಣ್ಮುಖಪ್ಪ ಅಂಬಲಿ, ಕಸಾಪ ತಾಲೂಕಾಧ್ಯಕ್ಷ ಶಿವಾನಂದ ಡೋಣೂರ, ಎಂ.ಎನ್.ಅಂಗಡಗೇರಿ, ಎಸ್.ಬಿ.ಅಂಕದ, ಬಸವರಾಜ ಮೇಟಿ, ಶ್ರೀಶೈಲ ಶಿರಗುಪ್ಪಿ, ಎಸ್.ಆರ್.ಮಠ ಇದ್ದರು.

ಹವಾಮಾನ ಬದಲಾವಣೆ ತಡೆಗೆ ಕೈಜೋಡಿಸಿ



ವಿಜಯಪುರ: ಹವಾಮಾನ ಬದಲಾವಣೆ ತಡೆಗಟ್ಟುವಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಿ, ಕೆಪಿಐಗಳ ಅನುಷ್ಠಾನಕ್ಕೆ ಜಿಲ್ಲಾ ಪಂಚಾಯಿತಿಯಿಂದ ಸಂಪೂರ್ಣ ಸಹಕಾರ ನೀಡುವುದಾಗಿ ಜಿಲ್ಲಾ ಪಂಚಾಯತಿ ಮುಖ್ಯ ಯೋಜನಾಧಿಕಾರಿ ಸಿ.ಬಿ. ಕುಂಬಾರ ಹೇಳಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಎಂಪ್ರಿ ಸಂಸ್ಥೆಯು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕುರಿತು ಹಮ್ಮಿಕೊಂಡ ಕ್ರಿಯಾ ಯೋಜನೆ (ಕೆಎಸ್‌ಪಿಸಿಸಿ) ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಂಪ್ರಿ ಸಂಸ್ಥೆಯ ಸಂಶೋಧನಾ ವಿಜ್ಞಾನಿ ಡಾ.ಪವಿತ್ರಾ ಪಿ. ನಾಯಕ ಮಾತನಾಡಿ, ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆ ಕುರಿತು ಸವಿಸ್ತಾರವಾಗಿ ವಿವರಣೆ ನೀಡಿದರು. ಹವಾಮಾನ ಕಾರ್ಯನೀತಿ, ಕಾರ್ಯತಂತ್ರಗಳು, ವಿವಿಧ ಇಲಾಖೆಗಳ ಪಾತ್ರ ಹಾಗೂ ಅಲ್ಪಾವಧಿಯ ಹವಾಮಾನ ಮಾಲಿನ್ಯಕಾರಕಗಳ ಪರಿಣಾಮಗಳು ಮತ್ತು ಜಿಲ್ಲಾಸ್ಥರದ ದತ್ತಾಂಶಗಳ ಕುರಿತು ಸಮಗ್ರ ಮಾಹಿತಿ ನೀಡಿದರು.

ಅರಣ್ಯ ಇಲಾಖೆಯ ಶಿವರುದ್ರಪ್ಪ ಕಬಾಡಗಿ ಮಾತನಾಡಿ, ವಿಜಯಪುರ ಜಿಲ್ಲೆಯಲ್ಲಿ ಇಲಾಖೆಯು ತೆಗೆದುಕೊಂಡ ಕ್ರಮಗಳ ಕುರಿತು ವಿವರಿಸಿದರು. ಜಲ ಸಂಪನ್ಮೂಲ ವಲಯಕ್ಕೆ ಸಂಬಂಧಿಸಿದ ಹವಾಮಾನ ಕ್ರಿಯಾ ಯೋಜನೆ ಕುರಿತು ಜಲ ಸಂಪನ್ಮೂಲ ತಜ್ಞರಾದ ಡಾ.ಶಶಿಕುಮಾರ್ ಎನ್. ಸಂಕ್ಷಿಪ್ತ ಮಾಹಿತಿ ನೀಡಿದರು.

ಎನ್‌ಆರ್‌ಡಿಎಂಎಸ್ ಅಧಿಕಾರಿ ಚನ್ನಮ್ಮ ಕರೆಪ್ಪ, ಎಂಪ್ರಿ ಸಂಸ್ಥೆಯ ರುಚಿತಾ, ತರಬೇತಿ ಅಸೋಸೊಯೇಟ್ ಹಾಗೂ ತರಬೇತಿ ಸಹಾಯಕ ರಾಘವೇಂದ್ರ ಎನ್. ಸೇರಿದಂತೆ ತರಬೇತಿ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಸುಮಾರು 55 ಮಂದಿ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಶಿಕ್ಷಣ ಸಂಸ್ಥೆಗಳ ಸದಸ್ಯರು ಹಾಗೂ ಇತರೆ ಪಾಲುದಾರರು ಇದ್ದರು.

ಕಾಂಗ್ರೆಸ್ ಅನುಭವ ಮಂಟಪ: ಎಂಬಿಪಾ

ವಿಜಯಪುರ: ಕಾಂಗ್ರೆಸ್ ಪಕ್ಷವೆಂಬುದು ಅನುಭವ ಮಂಟಪ. ಈ ಅನುಭವ ಮಂಟಪದಲ್ಲಿ ಎಲ್ಲ ಜಾತಿ-ಜನಾಂಗಗಳಿಗೆ ಸಂಸ್ಥಾನ. ಆ ಸಾಮಾಜಿಕ ಹಿನ್ನಲೆಯನ್ನು ಅನುಸರಿಸಿ ಬಹಳಷ್ಟು ಹಿಂದುಳಿದ ಸಮಾಜಗಳು ಇಂದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿದ್ದಾರೆ. ಈ ಕಾರ್ಯ ಮುಂದುವರೆದಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜಗಳು ಕಾಂಗ್ರೆಸ್ ಪಕ್ಷದ ತೆಕ್ಕೆಗೆ ಬರಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಗುರುವಾರ ವಿಜಯಪುರ ನಗರದ ಗೃಹ ಕಚೇರಿಯಲ್ಲಿ ತಿಕೋಟಾ ಪಟ್ಟಣದ ತಳವಾರ ಸಮುದಾಯದ ನಾನಾ ಮುಖಂಡರನ್ನು ಕಾಂಗ್ರೆಸ್ಸಿಗೆ ಬರಮಾಡಿಕೊಂಡು ಅವರು ಮಾತನಾಡಿದರು. ಮತಕ್ಷೇತ್ರದಲ್ಲಿ ಕೈಗೊಳ್ಳಲಾದ ಅಭಿವೃದ್ಧಿ ಯೋಜನೆಗಳು ಸಕಲ ಸಮುದಾಯಗಳ ಮೆಚ್ಚುಗೆಗೆ ಪಾತ್ರವಾಗಿದ್ದು, ತಿಕೋಟಾ ತಳವಾರ ಸಮುದಾಯದ ಪ್ರಮುಖ ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ. ಬಬಲೇಶ್ವರ ಮತಕ್ಷೇತ್ರದಲ್ಲಿ ಇಂದು ರಾಜಕೀಯ ಚಿತ್ರಣವೇ ಬದಲಾಗಿದೆ. ನುಡಿದಂತೆ ನಡೆಯುವ ನಮ್ಮ ಗ್ಯಾರಂಟಿ ಸರಕಾರದ ಜನಪರ ಆಡಳಿತಕ್ಕೆ ಮನಸೋತು, ಬಿಜೆಪಿಯ ಪ್ರಮುಖರು, ಕಾರ್ಯಕರ್ತರು ತಮ್ಮ ಪಕ್ಷಕ್ಕೆ ಗುಡ್ ಬೈ ಹೇಳಿ ಕಾಂಗ್ರೆಸ್‌ಗೆ ಜೈ ಎಂದಿದ್ದಾರೆ. ನಮ್ಮ ಅಭಿವೃದ್ಧಿಯ ಹಾದಿ ಮತ್ತು ಗಟ್ಟಿಯಾದ ಸಿದ್ಧಾಂತವನ್ನು ನಂಬಿ ಬಂದ ಈ ಎಲ್ಲಾ ನಾಯಕರನ್ನು ಆತ್ಮೀಯವಾಗಿ ಸ್ವಾಗತಿಸುತ್ತೇನೆ. ಅವರ ಸೇರ್ಪಡೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಮತ್ತಷ್ಟು ಬಲ ಬಂದಿದೆ. ಮುಂಬರುವ ದಿನಗಳಲ್ಲಿ ಅವರ ಬೇಡಿಕೆಗಳಿಗೆ ಸ್ಪಂದಿಸಲಾಗುವುದು ಎಂದು ಸಚಿವರು ತಿಳಿಸಿದರು.

ಸುರೇಶ ತೊರವಿ, ಎಚ್.ಎಲ್.ತಳವಾರ, ಪರಶುರಾಮ ಕೋಳಿ, ಗಣಪತಿ ತೋರವಿ, ಅಪ್ಪಸಾಹೇಬ ಡ್ಯಾಬೇರಿ, ದಯಾನಂದ ಶಿರಹಟ್ಟಿ ಪ್ರಕಾಶ ಹಾಲಳ್ಳಿ, ಭೀಮು ಹಾಲಳ್ಳಿ, ರಮೇಶ ಗುಡದಿನ್ನಿ, ವಿಲಾಸ ಮಾಳಿ, ನಾಗಪ್ಪ ಮಾಳಿ, ಶಾಂತಾಭಾಯಿ ತಳವಾರ, ಗೀತಾ ತೋರವ, ಪುಷ್ಪಾ ತೋರವಿ, ಮಂಗಲಾ ತಳವಾರ, ಮನಿಷಾ ತಳವಾರ, ಕವಿತಾ ಹಾಲಳ್ಳಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಬಿ.ಜಿ.ವಿಭೂತಿ, ಜಿ.ಎಂ.ಪಾಟೀಲ, ಮಮ್ಮು ಮುಜಾವರ, ಬಾಪು ಚೌಧರಿ, ರಾಜುಗೌಡ ಪಾಟೀಲ, ಬಿ.ಎಲ್.ನಾಟೀಕಾರ ಮುಂತಾದವರು ಉಪಸ್ಥಿತರಿದ್ದರು.



ಬಡವರಿಗೆ ಹಕ್ಕುಪತ್ರ ನೀಡಲು ಆಗ್ರಹ



ಮುದ್ದೇಬಿಹಾಳ: ಕಳೆದ ಮೂರು ದಶಕಗಳ ಹಿಂದೆ ಸರ್ಕಾರ ಕೊಡ ಮಾಡಿದ ಇಂದಿರಾ ನಿವಾಸ ಮನೆಗಳ ಗಣಕೀಕೃತ ಉತಾರೆ ನೀಡಬೇಕು ಎಂದು ಆಗ್ರಹಿಸಿ ನಾಗರಿಕರು ನಡೆಸಿರುವ ಧರಣಿ ಸತ್ಯಾಗ್ರಹ ಗುರುವಾರ 4ನೇ ದಿನಕ್ಕೆ ಮುಂದುವರೆದಿದೆ. ಸೋಮವಾರದಿಂದ ಆರಂಭಿಸಿರುವ ಧರಣಿ ಸತ್ಯಾಗ್ರಹದಲ್ಲಿ ಹೋರಾಟಗಾರರು, ಕೊಳಚೆ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳಿಂದ ದೊರೆತ ಭರವಸೆ ಅನ್ವಯ ನಾಲ್ಕು ತಿಂಗಳಲ್ಲಿ ನಿವಾಸಿಗಳಿಗೆ ಉತಾರೆ ನಿಯಮಾನುಸಾರ ಕೊಡುತ್ತೇವೆ ಎಂದು ಭರವಸೆ ನೀಡಿದ್ದರು. ಈ ಭರವಸೆ ಅನ್ವಯ ಪುರಸಭೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯ ಮಂಡಿಸಿ ಉತಾರೆ ನೀಡಬೇಕಿತ್ತು. ಆದರೆ ಇಲ್ಲಿಯವರೆಗೆ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ, ಮೇಲಾಧಿಕಾರಿಗಳು ಸರಣಿ ಸತ್ಯಾಗ್ರಹಕ್ಕೆ ಆಗಮಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಡವರ ಆಸ್ತಿಯನ್ನು ಕಾನೂನುಬದ್ಧ ಮಾಡಲು ಅಧಿಕಾರಿಗಳು ಹಿಂದೇಟು ಹಾಕುತ್ತಿರುವುದು ಏಕೆ ಎಂದು ಪ್ರಶ್ನಿಸಿದ್ದಾರೆ. ರಿಯಾಜ್ ಉಣ್ಣಿಭಾವಿ, ರಾಜು ವಡ್ಡರ, ವಿಷ್ಣು ಗಂಗಾಪುರ, ಬಾಬು ಬಳಗಾನೂರ, ಬಸವರಾಜ ಕೋಳೂರ, ಮಹಿಬೂಬ್ ಮುಲ್ಲಾ, ಮಂಜುನಾಥ ಚಲವಾದಿ, ಬುಡ್ಡ ನಿಡಗುಂದಿ, ಅಂಬರೀಶ್ ಒಪ್ಪಲದಿನ್ನಿ, ಬಸವರಾಜ್ ಗುಂಡಕರ್ಜಗಿ, ಮಹಿಬೂಬ್ ಮಕಾಶಿ, ಹಫಿಜಾ ಜಮಾದಾರ, ಶೇಖರ ಮಹಾಲಿಂಗಪುರ ಶಿವಪ್ಪ ಬೆನಕಟ್ಟಿ, ನಾರಾಯಣ ಮಿರಜಕರ ಭಾಗವಹಿಸಿದ್ದರು.

ವೇತನ ಬಿಡುಗಡೆಗೆ ನೌಕರರ ಸಂಘದಿಂದ ಮನವಿ

ವಿಜಯಪುರ: ಅಖಂಡ ವಿಜಯಪುರ ಗ್ರಾಮೀಣ ಶೈಕ್ಷಣಿಕ ತಾಲೂಕಿನಲ್ಲಿ ಎಸ್‌ಎಸ್‌ಎ ಯೋಜನೆಯಡಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಮಾರ್ಚ್ ಹಾಗೂ ಏಪ್ರಿಲ್ ತಿಂಗಳ ವೇತನ ಆಗದೇ ಇರುವುದರಿಂದ ಸಂಕಷ್ಟ ಅನುಭವಿಸುತ್ತಿದ್ದು, ತಿಕೋಟಾ ತಾಲೂಕು ನೌಕರರ ಸಂಘದ ಅಧ್ಯಕ್ಷ ಚನ್ನಯ್ಯ ಮಠಪತಿ ಅವರ ತಂಡದಿಂದ ವೇತನ ಬಿಡುಗಡೆಗೆ ಆಗ್ರಹಿಸಿ ಬಿಇಒ ಬಸವರಾಜ ತಳವಾರ ಅವರಿಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಮಠಪತಿ ಎರಡು ತಿಂಗಳಿನಿಂದ ವೇತನ ಇಲ್ಲದೇ ಶಿಕ್ಷಕರು ಪರದಾಡುವಂತಾಗಿದೆ. ಮಕ್ಕಳ ಶಾಲಾ ಶುಲ್ಕ, ಮನೆ ಬಾಡಿಗೆ, ಸಾಲದ ಕಂತುಗಳು, ಸಂಸಾರಿಕ ಖರ್ಚು ನಿಭಾಯಿಸಲಿಕ್ಕೆ ಆಗದೇ ಸಂಕಷ್ಟ ಎದುರಿಸುತ್ತಿದ್ದಾರೆ. ಯಾವುದೇ ತಾಂತ್ರಿಕ ಸಮಸ್ಯೆ ಅಥವಾ ಬಜೆಟ್ ಸಮಸ್ಯೆ ಏನೇ ಇದ್ದರು ಈ ವಾರದೊಳಗೆ ವೇತನ ಪಾವತಿ ಮಾಡಬೇಕು. ಇಲ್ಲದಿದ್ದರೆ ಕಚೇರಿ ಮುಂದೆ ನೌಕರರ ಸಂಘದ ವತಿಯಿಂದ ವೇತನಕ್ಕಾಗಿ ಪ್ರತಿಭಟನೆಗೆ ಧರಣಿ ಕೂಡಲಾಗುವುದು ಎಂದು ಹೇಳಿದರು.

ಜಿಲ್ಲಾ ನೌಕರರ ಸಂಘದ ಕ್ರೀಡಾ ಕಾರ್ಯದರ್ಶಿ ನೀಜು ಮೇಲಿನಕೇರಿ ಮಾತನಾಡಿ, ಎಸ್‌ಎಸ್‌ಎ ಶಿಕ್ಷಕರು ರಜೆಯಲ್ಲಿ ಕುಟುಂಬ ಸದಸ್ಯರೊಂದಿಗೆ ನೆಮ್ಮದಿಯಿಂದ ಇರಲು ಆಗುತ್ತಿಲ್ಲ, ಏನೇ ಸಮಸ್ಯೆ ಇದ್ದರೂ ಬೇಗನೆ ಇತ್ಯರ್ಥ ಮಾಡಿ ವೇತನ ಮಾಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ ಜಗದೀಶ ಬೋಳಸೂರ, ಎಂ.ಆರ್. ಮರ್ತೂರ, ಇಮಾಮ್ ಸಾದಿಕ್ ನಿಂಬಾಳಕರ ಇದ್ದರು.





ರಬಕವಿ-ಬನಹಟ್ಟಿ: ಯಲ್ಲಟ್ಟಿಯ ಕೊಣ್ಣೂರ ಶಿಕ್ಷಣ ಸಮೂಹದ ಸಂಸ್ಥಾಪಕ ಪ್ರೊ. ಬಿ.ಕೆ. ಕೊಣ್ಣೂರರನ್ನು ಗುರುವಾರ ಬೆಂಗಳೂರಿನ ಸರ್ ಎಂ.ವಿ. ಆಡಿಟೋರಿಯಂನಲ್ಲಿ ರಾಜುಪಾಲ ಥಾವರಚಂದ ಗೆಹ್ಲೋಟ್‌ರಿಂದ 'ಮಹಾತ್ಮಾಗಾಂಧಿ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ಸ್ವೀಕರಿಸಿದರು.

ಮಠಗಳು ಧಾರ್ಮಿಕ, ಸಾಂಸ್ಕೃತಿಕ ಕೇಂದ್ರಗಳು: ಪ್ರಭುಲಿಂಗ ಶ್ರೀಗಳು



ಇಂಡಿ: ಮಠಗಳು ಈ ನಾಡಿನ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯ ಕೇಂದ್ರಗಳು. ಸಮಾಜವು ಸನ್ಮಾರ್ಗದಲ್ಲಿ ಸಾಗಲು ಮಠಗಳು ದಾರಿದೀಪ ಎಂದು ಅಗರಖೇಡ ವಿರಕ್ತಮಠದ ಪ್ರಭುಲಿಂಗ ಶ್ರೀಗಳು ಹೇಳಿದರು.

ತಾಲೂಕಿನ ಅಗರಖೇಡ ಗ್ರಾಮದಲ್ಲಿ ನಡೆದ ಶಂಕರಲಿಂಗ ಜಾತ್ರಾ ಮಹೋತ್ಸವ ನಿಮಿತ್ಯ ನಡೆದ ಉಡಿ ತುಂಬುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಚಳಕಾಪುರ ಆಳೂರದ ಸಿದ್ದಾರೂಢ ಮಠದ ಶಂಕರಾನಂದ ಶ್ರೀಗಳು ಮಾತನಾಡಿ, ಪ್ರತಿಯೊಬ್ಬರಲ್ಲೂ ದೇವರಿದ್ದಾನೆ. ಆ ದೇವರನ್ನು ಕಾಣಲು ನಮ್ಮಲ್ಲಿ ಅರಿವು ಮೂಡಿಸುವ ಮಠಗಳ ಗುರುಗಳು ಅಗತ್ಯ, ಗುರುವೆಂದರೆ ಕೇವಲ ಶಿಕ್ಷಣ ಜ್ಞಾನ ನೀಡುವವರಲ್ಲ, ಬದುಕಿಗೆ ಮಾರ್ಗ ತೋರುವವರು ಅವರು ತೋರುವ ಮಾರ್ಗದಲ್ಲಿ ಸಮಾಜ ಶಾಂತಿ ನೆಮ್ಮದಿ ಯಿಂದ ಬಾಳಬೇಕು ಎಂದರು. ರಾಜ್ಯ ನಿಂಬೆ ಅಭಿವೃದ್ಧಿ ಮಂಡಳಿ ಭೀಮಣ್ಣ ಕವಲಗಿ, ಮದನಕುಮಾರ ಶಿಂದೆ, ಡಾ. ಸಂಗನಬಸು ಬಿರಾದಾರ, ಸಂಗನಗೌಡ ಬಿರಾದಾರ ಮತ್ತಿತರರು ಇದ್ದರು. ಜಾತ್ರಾ ಮಹೋತ್ಸವ ನಿಮಿತ್ಯ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

ಉದ್ಯಾನವನ ನಿರ್ವಹಣೆಗೆ ಒತ್ತಾಯ



ಮುದ್ದೇಬಿಹಾಳ: ನಗರದ ಗ್ರಹ ನಿರ್ಮಾಣ ಮಂಡಳಿ ಬಡಾವಣೆಯ ಹಸಿರು ತೋರಣ ಉದ್ಯಾನವನ ಸರಿಯಾದ ನಿರ್ವಹಣೆಯಿಲ್ಲದೇ ಸಸ್ಯಗಳು ಒಣಗಿವೆ. ಕೊಳವೆ ಬಾವಿ ಕೆಟ್ಟು ಹೋಗಿದೆ. ಪ್ಲಾಸ್ಟಿಕ್, ಕಸ, ಕಡ್ಡಿ ತೆಗೆಯದೆ ಪರಿಸರ ಸಮಸ್ಯೆ ಉಂಟಾಗಿದೆ. ಕಾರಣ ಉದ್ಯಾನವನ ಸೂಕ್ತ ನಿರ್ವಹಣೆ ಮಾಡಬೇಕು ಎಂದು ಆಗ್ರಹಿಸಿ ಹಸಿರು ತೋರಣ ಬಳಗದ ಸದಸ್ಯರು ಪುರಸಭೆ ಅಧಿಕಾರಿ ವಿನಯ ಜಿಂಗಾಡೆ ಮನವಿ ಸಲ್ಲಿಸಿದರು.

ಗುರುವಾರ ಈ ಕುರಿತು ಪುರಸಭೆ ಅಧಿಕಾರಿಗಳಿಗೆ ಭೇಟಿಯಾದ ಹತೋಗೆಬ ಸಂಘಟನೆಯ ಸದಸ್ಯರು, ಹಸಿರು ಮಿತ್ರ ಯೋಜನೆ ಅಡಿಯಲ್ಲಿ ಉದ್ಯಾನವನ ನಿರ್ವಹಿಸಲು ಜೈ ಸಂತೋಷಿ ಮಾತಾ ಸಂಘದವರ ಗುತ್ತಿಗೆ ಅವಧಿ ಮುಗಿದಿದ್ದು, ಪುರಸಭೆ ವತಿಯಿಂದ ಒಬ್ಬ ಖಾಯಂ ಸಿಬ್ಬಂದಿ ನೇಮಕ ಮಾಡಿ ದಿನನಿತ್ಯ ಉದ್ಯಾನವನ ನಿರ್ವಹಣೆ ಮಾಡುವ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದ್ದಾರೆ.

ಸಂಘದ ಸದಸ್ಯರಾದ ಬಿ.ಎಸ್.ಮೇಟಿ, ಮಹಾಬಲೇಶ ಗಡೆದ, ಅಮರೇಶ ಗೂಳಿ, ವಿ.ಕೆ.ದೇಶಪಾಂಡೆ ಉಪಸ್ಥಿತರಿದ್ದರು.

ಸಾಯಿಬಾಬಾ ಜಾತ್ರಾ ಮಹೋತ್ಸವ

ವಿಜಯಪುರ: ಸೆಟಲೈಟ್ ಬಸ್ ನಿಲ್ದಾಣದ ಹತ್ತಿರ, ವಾರ್ಡ ನಂ.1ರ ಬಳಿ ಇರುವ ಸಾಯಿಬಾಬಾ 15ನೇ ವರ್ಷದ ಜಾತ್ರಾ ಮಹೋತ್ಸವ ಸಂಭ್ರಮದಿಂದ ಜರುಗಿತು. ಸಾಯಿಬಾಬಾ ಜಾತ್ರೆ ಉದ್ಘಾಟನೆ ಉಮೇಶ ವಂದಾಲ ಮಾಜಿ ಸದಸ್ಯರು, ಮಹಾನಗರಪಾಲಿಕೆ, ವಿಜಯಪುರ ಅವರು ಜ್ಯೋತಿ ಬೆಳಗಿಸುವ ಮೂಲಕ ಜಾತ್ರಾ ಮಹೋತ್ಸವದ ಉದ್ಘಾಟನೆ ನೆರವೇರಿಸಿದರು. ಭಕ್ತಾದಿಗಳಿಗೆ ಮಹಾ ಅನ್ನ ಸಂತರ್ಪಣೆ ನಡೆಯಿತು. ಈ ಸಂದರ್ಭದಲ್ಲಿ ಪವಾಡೆಪ್ಪ ಚಲವಾದಿ ರಾಜ್ಯ ಉಪಾಧ್ಯಕ್ಷರು, ಕರ್ನಾಟಕ ಪ್ರದೇಶ ಬೀದಿಬದಿ ವ್ಯಾಪಾರಿಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಆರ್. ಮನಿಗೌಡರ, ಕರ್ನಾಟಕ ಪ್ರದೇಶ ಬೀದಿಬದಿ ವ್ಯಾಪಾರಿಗಳ ಒಕ್ಕೂಟ, ಶಿವಮೊಗ್ಗದ ಅಧ್ಯಕ್ಷ ಸಿದ್ದು ಹಡಪದ, ಸಾಯಿಬಾಬಾ ತರಕಾರಿ ಮತ್ತು ಹಣ್ಣು ಸ್ಟೇಷನರಿ ಬೀದಿಬದಿ ವ್ಯಾಪಾರಸ್ಥರ ಸಂಘ, ವಿಜಯಪುರ. ನಿವೃತ್ತ ಪ್ರಾಚಾರ್ಯ ಉಮರಶರೀಫ್ ಕುಂಟೋಜಿ, ಭಾರತಿ ಕವಲಗಿ, ಅಬ್ದುಲ್ ಪೀರಾ ಜಮಖಂಡಿ ಮುಂತಾದವರು ಇದ್ದರು.



ಬಿಎಸ್‌ಎನ್‌ಎಲ್ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳಿ



ವಿಜಯಪುರ: ಕೇಂದ್ರ ಸರ್ಕಾರದ ಬಿಎಸ್‌ಎನ್‌ಎಲ್ ಕಚೇರಿಯಲ್ಲಿ ವಯಕ್ತಿಕ ಹುಟ್ಟುಹಬ್ಬ ಆಚರಣೆ ಮಾಡಿದ್ದಲ್ಲದೆ ಡಾ.ಬಿ.ಆರ್.ಅಂಬೇಡ್ಕರರವರಿಗೆ ಅಪಮಾನ ಮಾಡಿದ್ದು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿ ಡಾ. ಆನಂದ ಕೆ. ಹಾಗೂ ಮುಖ್ಯ ಪ್ರಧಾನ ವ್ಯವಸ್ಥಾಪಕರು ಬಿಎಸ್‌ಎನ್‌ಎಲ್ ಬೆಂಗಳೂರು ಇವರಿಗೆ ರೈತಪರ ಸಂಘಟನೆ ಹಾಗೂ ದಲಿತ ಸಂಘಟನೆ ಆಮ್ ಆದ್ಮಿ ಪಕ್ಷದ ವತಿಯಿಂದ ಮನವಿ ಸಲ್ಲಿಸಲಾಯಿತು.

ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ಕೇಂದ್ರ ಸರ್ಕಾರದ ಅಧೀನದಲ್ಲಿರುವ ವಿಜಯಪುರ ನಗರದ ಬಿಎಸ್‌ಎನ್‌ಎಲ್ ಕಚೇರಿಯಲ್ಲಿ ಡೆಪ್ಯೂಟಿ ಜನರಲ್ ಮ್ಯಾನೇಜರ್ ಅವರು ತಮ್ಮ ಹುಟ್ಟುಹಬ್ಬವನ್ನು ಸರ್ಕಾರಿ ಕಚೇರಿಯಲ್ಲಿ ಆಚರಿಸಿ ಸರ್ಕಾರದ ನಿಯಮಾವಳಿಗಳನ್ನು ಗಾಳಿಗೆ ತೂರಿದ್ದು ಅಲ್ಲದೇ, ಡಾ.ಬಿ.ಆರ್.ಅಂಬೇಡ್ಕರ ಜಯಂತಿಯಂದು ಡಾ.ಬಿ.ಆರ್.ಅಂಬೇಡ್ಕರ ಭಾವಚಿತ್ರವನ್ನು ಕಚೇರಿಯ ಫುಟ್‌ಪಾತ ಬಳಿ ಇರಿಸಿ ಪೂಜೆ ಮಾಡಿ ಡಾ. ಬಿ.ಆರ್.ಅಂಬೇಡ್ಕರರವರಿಗೆ ಅವಮಾನ ಎಸಗಿರುವುದನ್ನು ಖಂಡಿಸಿ ಅವರ ಮೇಲೆ ಕಾನೂನು ರೀತಿ ಕ್ರಮ ಜರುಗಿಸಿ ಸೇವೆಯಿಂದ ಖಾಯಂ ಆಗಿ ಅಮಾನತ್ತುಗೊಳಿಸಬೇಕೆಂದು ಆಗ್ರಹಿಸಿದರು.

ಸರ್ಕಾರದ ನಿಯಮಾವಳಿ ಗಾಳಿಗೆ ತೂರಿ ತಮ್ಮ ವಯಕ್ತಿಕ ಹುಟ್ಟು ಹಬ್ಬವನ್ನು ಸರ್ಕಾರಿ ಕಛೇರಿಯಲ್ಲಿ ಮಾಡಿರುವುದು ಎಷ್ಟೊಂದು ಸರಿ. ಇವರು ಮುಂದೆ ಇದೇ ರೀತಿ ತಮ್ಮ ವಯಕ್ತಿಕ ಮನೆಯ ಕಾರ್ಯಕ್ರಮಗಳನ್ನು ಕೂಡಾ ಇದೆ ಬಿಎಸ್‌ಎನ್‌ಎಲ್ ಕಚೇರಿಯಲ್ಲಿ ಮಾಡಿದರು ಕೂಡಾ ಆಶ್ಚರ್ಯಪಡಬೇಕಾಗಿಲ್ಲ. ಇಂತಹ ಘಟನೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇವರ ಸೂಕ್ತ ಕಾನೂನು ಕ್ರಮ ಜರುಗಿಸಿ ಸೇವೆಯಿಂದ ಇವರನ್ನು ಶಾಶ್ವತವಾಗಿ ಅಮಾನತ್ತು ಮಾಡಬೇಕೆಂದು ಆಗ್ರಹಿಸಿದ್ದಾರೆ.

ಆಮ್ ಆದ್ಮಿ ಜಿಲ್ಲಾಧ್ಯಕ್ಷ ಭೋಗೇಶ ಸೊಲ್ಲಾಪುರ, ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಸಿದ್ದಾಪೂರ, ದಲಿತ ಸಂಘರ್ಷ ಸಮಿತಿ ಮುಖಂಡರಾದ ಬಸವರಾಜ ಭೈರವಾಡಗಿ, ವಾಲ್ಮೀಕಿ ಸಮಾಜದ ರಾಜ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಬಟಗಿ, ಕಿರಣ ಮೇಲಿನಕೇರಿ ಇದ್ದರು.

ಭಾವೈಕ್ಯತೆಯ ಸಂಕೇತ ಉರುಸು

ಇಂಡಿ: ಅಹಿರಸಂಗ ಗ್ರಾಮದಲ್ಲಿ ಆಚರಿಸುತ್ತಿರುವ ಪೀರ ರಾಜೇನೂರ ಶಾ ಶಾಹನೂರಲಿ ಬಾಬಾ ಉರುಸು ಗ್ರಾಮದಲ್ಲಿ ಹಿಂದು-ಮುಸ್ಲಿಮ ಬಾಂಧವರು ಸಹೋದರತ್ವ ಭಾವನೆಯಿಂದ ಆಚರಿಸುತ್ತಿದ್ದು, ಭಾವೈಕ್ಯತೆ ಸಂಕೇತವಾಗಿದೆ ಎಂದು ಚೈನಾಪುರದ ರೇಣುಕಾ ಶಿವಾಚಾರ್ಯರರು ಹೇಳಿದರು.

ತಾಲೂಕಿನ ಅಹಿರಸಂಗ ಗ್ರಾಮದಲ್ಲಿ ನಡೆದ ಪೀರ ರಾಜೇನೂರ ಶಾ ಶಾಹನೂರಲಿ ಬಾಬಾ ಉರುಸು ಕಾರ್ಯಕ್ರಮದಲ್ಲಿ ಮಾತನಾಡಿದರು. ಪೀರ ರಾಜೇನೂರ ಶಾ ಶಾಹನೂರಲಿ ಬಾಬಾರವರು ಪವಾಡ ಪುರುಷರಾಗಿದ್ದರು. ಹೀಗಾಗಿ ಅವರ ಮೇಲೆ ಜನರ ಅಪಾರ ಪ್ರೇಮ ಇತ್ತು. ಜನರು ಅವರನ್ನು ಗೌರವ ಮತ್ತು ಶ್ರದ್ದೆಯಿಂದ ಕಾಣುತ್ತಿದ್ದರು. ಅವರಿಂದ ಉದ್ಧಾರ ಆದವರು ಅನೇಕರು ಎಂದರು. ಮಲ್ಲಿಕಾರ್ಜುನ ಶ್ರೀಗಳು ಅಹಿರಸಂಗ, ವಿಠ್ಠಲಗೌಡ ಯಶವಂತರಾಯಗೌಡ ಪಾಟೀಲರು, ಅಹಿರಸಂಗದ ರೇವಣಸಿದ್ದಯ್ಯ ಶಾಸ್ತ್ರೀಗಳು, ಅಶೋಕ ಬಡಿಗೇರ ದಾದಾ ಶ್ಯಾಮಣ್ಣವರ ಮಾತನಾಡಿದರು.

ಗೋಳಸಾರದ ಅಭಿನವ ಪುಂಡಲಿಂಗ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ರಜಾಕ ಯಡ್ರಾಮಿ, ಶಬಾನಾ ಶೇಖ, ಪ್ರಭುಗೌಡ ಬಿರಾದಾರ, ಮುಜಬಿರ ರಹಮಾನ ಶ್ಯಾಮಣ್ಣನವರ, ವಾಸುದೇವ ಕುಲಕರ್ಣಿ, ಲಾಲಸಾಬ ಮುಲ್ಲಾ, ಯಶವಂತ ಕಾಡೆಗೋಳ, ನಿಸಾರ ಶ್ಯಾಮಣ್ಣನವರ, ಶಿವಾನಂದ ಬ್ಯಾಗೇಳಿ, ಅಪ್ಪಾಶಾ ಇಂಗಳಗಿ ರಾಜಕುಮಾರ ವಾಲಿಕಾರ ಮತ್ತಿತರಿದ್ದರು.



ಪಾಲಿಕೆ ಆರ್ಥಿಕ ಹೊರೆ ಇಳಿಕೆ: ಯತ್ನಾಳ

ವಿಜಯಪುರ: ನಗರದಲ್ಲಿ ಹಾಲಿ ಇರುವ ಸಾಂಪ್ರದಾಯಿಕ ಬೀದಿ ದೀಪಗಳನ್ನು ಬದಲಾಯಿಸಿ ಕೇಂದ್ರಿಕೃತ ಚಾಲನೆ ಮತ್ತು ನಿರ್ವಹಣೆಯುಳ್ಳ ಇಂಧನ ಕ್ಷಮತೆಯ ಎಲ್‌ಇಡಿ ದೀಪಗಳನ್ನು ಅಳವಡಿಸುವ ಯೋಜನೆ ಶೀಘ್ರದಲ್ಲೇ ಅನುಷ್ಠಾನಗೊಳಿಸಲಾಗುವುದು ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ವಿಜಯಪುರ ನಗರದ ಸುಮಾರು 36.36 ಕೋಟಿ ಮೊತ್ತದ ಎಲ್.ಇ.ಡಿ ದೀಪಗಳ ಅಳವಡಿಕೆ ಯೋಜನೆ ಅನುಷ್ಠಾನಗೊಳಿಸಲು ಅನುಮೋದಿಸಿರುವುದಾಗಿ ಗುರುವಾರ ವಿಧಾನಸೌಧದಲ್ಲಿ ಜರುಗಿದ ಅರ್ಜಿಗಳ ಸಮಿತಿ ಸಭೆಗೆ ಹಾಜರಿದ್ದ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ದೀಪಾ ಚೋಳನ್ ಅವರು ತಿಳಿಸಿದ್ದಾರೆ.

ಬಹಳ ದಿನಗಳಿಂದ ನೆನೆಗೂದಿಗೆ ಬಿದ್ದಿದ್ದ ಅತೀ ಅವಶ್ಯಕ ಈ ಯೋಜನೆ ಅನುಷ್ಠಾನಗೊಳ್ಳುವುದರಿಂದ ವಿಜಯಪುರ ನಗರದ ಎಲ್ಲ ವಾರ್ಡ್‌ಗಳ ಪ್ರತಿಯೊಂದು ಕಾಲೊನಿಗಳಲ್ಲಿಯೂ ದೀಪ ಜಗಮಗಿಸಲಿದೆ.

ಜೊತೆಗೆ ಆಟೋಮೆಟಿಕ್ ದೀಪ ಬೆಳಗುವುದು ಮತ್ತು ಆರುವುದರಿಂದ ಹಗಲು ವೇಳೆಯಲ್ಲಿ ಅನಾಗತ್ಯವಾಗಿ ವಿದ್ಯುತ್ ವ್ಯರ್ಥವಾಗುವುದು ತಪ್ಪಲಿದೆ.

ಮಹಾನಗರ ಪಾಲಿಕೆಗೆ ಪ್ರತಿ ವರ್ಷ ಆಗುತ್ತಿರುವ ಸುಮಾರು ರೂ.12 ಕೋಟಿ ವಿದ್ಯುತ್ ಹೊರೆಯಲ್ಲಿಯೂ ಶೇ 61 ರಷ್ಟು ಇಳಿಕೆ ಆಗಲಿದೆ. ಜೊತೆಗೆ ಪ್ರಸ್ತುತ ಪಾಲಿಕೆಯಲ್ಲಿ ಸಾಂಪ್ರದಾಯಿಕ ಬೀದಿ ದೀಪ ನಿರ್ವಹಣೆಗಾಗಿ ಪ್ರತಿ ತಿಂಗಳು ಆಗುತ್ತಿರುವ ರೂ.12 ಲಕ್ಷಕ್ಕಿಂತ ಹೆಚ್ಚು ವೆಚ್ಚದಲ್ಲಿಯೂ ಪಾಲಿಕೆಗೆ ಉಳಿತಾಯವಾಗಲಿದೆ.

ಈ ಯೋಜನೆಗೆ ಸಂಬಂಧಿಸಿದಂತೆ ಎರಡು ಬಾರಿ ಟೆಂಡರ್ ಕರೆದಾಗ ಸಿಂಗಲ್ ಟೆಂಡರ್ ಆಗಿತ್ತು. ಮೂರಲೇ ಬಾರಿ ಟೆಂಡರ್ ಪ್ರಕ್ರಿಯೆ ಹಂತದಲ್ಲಿ ಕೆಲವೊಂದು ಮಾರ್ಪಾಡು ಮಾಡಿಯೂ ಯೋಜನೆ ಅನುಷ್ಠಾನ ವಿಳಂಬ ಆಗುತ್ತಿರುವ ಬಗ್ಗೆ ಅಧಿವೇಶನದಲ್ಲಿಯೂ ಸರ್ಕಾರದ ಗಮನಸೆಳೆದು ಒತ್ತಾಯಿಸಿದ್ದೆ. ಅಲ್ಲದೆ, ನಗರಾಭಿವೃದ್ಧಿ ಇಲಾಖೆ ಸಚಿವರು, ಅಧಿಕಾರಿಗಳಿಯೂ ಅನೇಕ ಭಾರಿ ಪತ್ರ ಬರೆದು ಒತ್ತಾಯಿಸಿದ್ದರಿಂದ ಯೋಜನೆ ಅನುಷ್ಠಾನಕ್ಕೆ ಅನುಮೋದನೆ ದೊರೆತಿದೆ ಎಂದು ಶಾಸಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಮೇ 8ರಿಂದ ಕರಿಯಮ್ಮದೇವಿ ಜಾತ್ರೆ

ಕುಷ್ಟಗಿ: ತಾಲೂಕಿನ ಜಿ.ಗಂಗನಾಳ ಗ್ರಾಮದಲ್ಲಿ ಗ್ರಾಮದೇವತೆ ಶ್ರೀಕರಿಯಮ್ಮದೇವಿಯ ಜಾತ್ರಾ ಮಹೋತ್ಸವವು ಮೇ 8 ಮತ್ತು 9ರಂದು ಅತ್ಯಂತ ವೈಭವದಿಂದ ಜರುಗಲಿದೆ. ಶಾಲೀವಾಹನ ಶಕೆ 1948ನೇ ವಿಶ್ವವಸುನಾಮ ಸಂವತ್ಸರದ ಪ್ರಯುಕ್ತ ಈ ವರ್ಷವೂ ಕೂಡ ಸಂಪ್ರದಾಯಬದ್ಧವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜಾತ್ರೆಯನ್ನು ಆಯೋಜಿಸಲಾಗಿದೆ.

ಜಾತ್ರಾ ಮಹೋತ್ಸವದ ಮೊದಲ ದಿನವಾದ ಮೇ 8 ಸಂಜೆ 5:30ಕ್ಕೆ ದೇವಿಯ ಪಲ್ಲಕ್ಕಿ ಉತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ಸಾಗಿ ಮಾರುತಿ ದೇವಸ್ಥಾನಕ್ಕೆ ತಲುಪಲಿದೆ. ಅಂದು ರಾತ್ರಿ 9:30ಕ್ಕೆ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ನಂತರ ರಾತ್ರಿ 11 ಗಂಟೆಗೆ ಡೊಳ್ಳು ಮಜಲು ಮತ್ತು ಸಾರ್ವಜನಿಕರ ಸಂಭ್ರಮದೊಂದಿಗೆ ಗಂಗಾಸ್ಥಳಕ್ಕೆ ಹೋಗಿ ಬರುವ ಕಾರ್ಯಕ್ರಮ ನಡೆಯಲಿದೆ.ಮೇ 9,ಶನಿವಾರ ಬೆಳಿಗ್ಗೆ ದೇವಿಗೆ ವಿಶೇಷ ನೈವೇದ್ಯವಾಗಿ ಅಕ್ಕಿ ಪಾಯಸ ಅರ್ಪಿಸಲಾಗುವುದು. ನಂತರ ಭಕ್ತಾದಿಗಳ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯಿಂದ ಅಗ್ನಿಕುಂಡ ತುಳಿಯುವ ಸಾಹಸಮಯ ಧಾರ್ಮಿಕ ವಿಧಿವಿಧಾನ ನೆರವೇರಲಿದೆ. ಅಂದು ಸಾಯಂಕಾಲ 4:30ಕ್ಕೆ ಜಾತ್ರೆಯ ಪ್ರಮುಖ ಆಕರ್ಷಣೆಯಾದ ಕರಿಯಮ್ಮದೇವಿಯ ರಥೋತ್ಸವ ಅದ್ದೂರಿಯಾಗಿ ಜರುಗಲಿದೆ. ಗ್ರಾಮದ ಮತ್ತು ಸುತ್ತಮುತ್ತಲಿನ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ತನು-ಮನ-ಧನದಿಂದ ಸೇವೆ ಸಲ್ಲಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಕರಿಯಮ್ಮದೇವಿ ಸದ್ಭಕ್ತ ಮಂಡಳಿ, ಜಿ. ಗಂಗನಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಶ್ರಮ ವಸತಿ ಶಾಲೆಗೆ ಅರ್ಜಿ ಆಹ್ವಾನ

ಕುಷ್ಟಗಿ: ತಾಲೂಕಿನ ತಾವರಗೇರಾ ಪಟ್ಟಣದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಲೆಮಾರಿ-ಅರೆಅಲೆಮಾರಿ ಜನಾಂಗದ ಆಶ್ರಮ ವಸತಿ ಶಾಲೆಗೆ ಅರ್ಜಿ ಆಹ್ವಾನಿಸಲಾಗಿದೆ. ಹಿಂದುಳಿದ ವರ್ಗದಲ್ಲಿ ಬರುವ ಅಲೆಮಾರಿ- ಅರೆ ಅಲೆಮಾರಿ ಜನಾಂಗದ ಬೈರಾಗಿ (ಬಾವ), ಬಾಲಸಂತೋಜೋ, ಬಾಜಿಗರ್, ಭರಡಿ, ಬುಡಬುಡಕಿ, ಜೋ-ಗೋಂಧಳಿ, ಚಾರ, ಚಿತ್ರಕಥಿ-ಜೋ, ಧೋಲಿ, ದೊಂಬರಿ, ಫಸಾಡಿ, ಗಾರುಡಿ, ಗೋಪಾಲ್, ಗೊಂದಳಿ, ಹೆಳವ, ಜೋಗಿ, ಕೊಲ್ಲಹಟ್ಟಿ, ಮಲ್ಲಾನಿ, ನಾಥಫಂಥಿ, ವಾಸದೇವ, ವಾಡಿ ವಾಗ್ರಿ, ಬಜನಿಯ, ಮಸಣಿಯ, ಯೋಗಿ, (ಬೆಸ್ತರ್), ಬುಂಡಬೆಸ್ತ, ಕಟುಬ, ದುರ್ವೇಶ್,ಕಪಾಡಿ, ಹಾವಗಾರ ಹಾಗೂ ಬೈಲ್ ಪತ್ತಾರ್ ಜನಾಂಗಗಳಿಂದ ವಸತಿ ಶಾಲೆಸೌಲಭ್ಯಕ್ಕಾಗಿ 1ನೇ ತರಗತಿಯಲ್ಲಿ ಖಾಲಿರುವ ಸ್ಥಾನಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಮೂಲಕ ಮೇ 30ರೊಳಗೆ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು ಎಂದು ತಾಲೂಕು ಬಿಸಿಎಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನಕಗಿರಿ: 'ಉದ್ಯೋಗ ಮೇಳ'

ಕನಕಗಿರಿ: ಪಟ್ಟಣದ ಪಂಪಣ್ಣ ಶರಣಪ್ಪ ಗುಗ್ಗಳಶೆಟ್ರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ಕೋಶದಿಂದ ಮೇ 11ಕ್ಕೆ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದ್ದು, ಕೊಪ್ಪಳ, ಹುಬ್ಬಳ್ಳಿ, ಬೆಂಗಳೂರು ಸೇರಿದಂತೆ ರಾಜ್ಯದ ಇತರೆ ಭಾಗಗಳ ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿವೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಬಜರಂಗಬಲಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಸಪೇಟೆ ಉಕ್ಕು ನಿಯಮಿತ, ಎಚ್‌ಡಿಎಫ್‌ಸಿ ಬ್ಯಾಂಕ್, ಟೊಯೋಟಾ ಕಿರ್ಲೋಸ್ಕರ್, ಮೆಡ್-ಪ್ಲಸ್, ದೊಡ್ಲಾ ಡೈರಿ, ನವ ಭಾರತ್ ಗೊಬ್ಬರ ಖಾಸಗಿ ನಿಯಮಿತ, ಕ್ರೆಡಿಟ್ ಆ್ಯಕ್ಸೆಸ್ ಗ್ರಾಮೀಣ್ ಕೋಟಾ ಲಿಮಿಟೆಡ್, ಆಗು ನೀ ಅನಿಕೇತನ ಫೌಂಡೇಶನ್ (ವಿಶಿಷ್ಟಚೇತನರಿಗೆ ಉದ್ಯೋಗಾವಕಾಶ ನೀಡುತ್ತಿರುವ ಸಂಸ್ಥೆ), ಕ್ರಿಯೇಟಿವ್ ಇಂಜಿನಿಯರ್ಸ್ ಪ್ರೈವೇಟ್ ಲಿಮಿಟೆಡ್, ಇಶಾನ್ ಗ್ಲೋಬಲ್ ಪ್ರೈವೇಟ್ ಲಿಮಿಟೆಡ್ ಹಾಗೂ ಇತರೆ ಕಂಪನಿಗಳು ಪ್ರಸ್ತುತ ಉದ್ಯೋಗ ಮೇಳದಲ್ಲಿ ಭಾಗವಹಿಸಲಿವೆ. ಎಸ್‌ಎಲ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮ್, ಕಂಪ್ಯೂಟರ್ ತರಬೇತಿ ಹಾಗೂ ಯಾವುದೇ ಪದವಿ ಅಭ್ಯರ್ಥಿಗಳು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದ್ದು, 18 ರಿಂದ 35 ವರ್ಷದೊಳಗಿನ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಹಾಗೂ ವಿಕಲಚೇತನ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಹಾಜರಾಗಬಹುದಾಗಿದೆ. ಉದ್ಯೋಗ ಮೇಳದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಹೂವಿನಹಡಗಲಿ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕ ಪಡೆದ ತಾಲೂಕಿನ ನಂದಿಹಳ್ಳಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಬಿ. ಆಶಾಬಾನು ಅವರಿಗೆ ಪಟ್ಟಣದ ನಾವಿಕ ಪ್ರತಿಷ್ಠಾನದ ವತಿಯಿಂದ ಗೌರವ ಸನ್ಮಾನ ನೆರವೇರಿಸಲಾಯಿತು. ಮಲ್ಲಿಗೆ ಯೋಗ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಕೋಡಿಹಳ್ಳಿ ಕೊಟ್ರೇಶ್, ನಾವಿಕ ಪ್ರತಿಷ್ಠಾನದ ಅಧ್ಯಕ್ಷ ಕರಣಂ ನಾಗೇಶ್ವರರಾವ್ ಕಾರ್ಯದರ್ಶಿ ಶಶಿಕಾಂತ್ ಕೆ.ತಾಲೂಕು ಜಿ.ಪ್ರಸನ್ನಕುಮಾರ್, ಗಾಯತ್ರಿ ಪಂಪಾಪತಿರಾವ್ ಇತರರಿದ್ದರು.

ಬೇಡಿಕೆ ಈಡೇರಿಕೆಗೆ ಬ್ರಾಹ್ಮಣ ಮಹಾಸಭಾ ಮನವಿ

ಕೊಪ್ಪಳ: ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಮೇಲಿದ್ದ ಜನಿವಾರ ತಗಿಸಿ ಕತ್ತರಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಘಟನೆ ನಡೆದ ಎರಡು ಶಿಕ್ಷಣ ಸಂಸ್ಥೆಗಳ ಅನುಮತಿ ರದ್ದು ಮಾಡಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಘಟಕ ಆಗ್ರಹಿಸಿದೆ.

ಘಟಕದ ಪದಾಧಿಕಾರಿಗಳು ಗುರುವಾರ ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ ಅವರಿಗೆ ಮನವಿ ಸಲ್ಲಿಸಿ 'ಬ್ರಾಹ್ಮಣ ಸಮಾಜದ ಜನರ ಭಾವನೆಗಳಿಗೆ ಧಕ್ಕೆ ತಂದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಜಿಲ್ಲಾಕೇಂದ್ರದಲ್ಲಿ ಬ್ರಾಹ್ಮಣ ಸಮಾಜಕ್ಕೆ ಪ್ರತ್ಯೇಕ ಸ್ಮಶಾನದ ಜಾಗ ಮಂಜೂರು ಮಾಡಬೇಕು. ಗವಿಸಿದ್ಧೇಶ್ವರ ಮಠದ ಹಿಂಭಾಗದಲ್ಲಿ ಮೃತದೇಹ ಸುಡುವ ಪದ್ಧತಿಯಿರುವ ಸಮಾಜದವರ ಅಂತ್ಯಕ್ರಿಯೆ ನಡೆಯುತ್ತಿದೆ. ಇದರಿಂದಾಗಿ ಬ್ರಾಹ್ಮಣ ಸಮುದಾಯದ ವಿಧಿವಿಧಾನದಂತೆ ಅಂತಿಮ ಸಂಸ್ಕಾರ ನಡೆಸಲು ಸಾಧ್ಯವಾಗುತ್ತಿಲ್ಲ, ಹಲವು ಬಾರಿ ಮೂರ್ನಾಲ್ಕು ಅಂತ್ಯಕ್ರಿಯೆಗಳು ನಡೆದಾಗ ಸರತಿಯಲ್ಲಿ ಕಾಯುವ ಪರಿಸ್ಥಿತಿ ನಿರ್ಮಾಣವಾದ ಉದಾಹರಣೆಗಳೂ ಇವೆ. ಆದ್ದರಿಂದ ಆಸಕ್ತಿ ವಹಿಸಿ ನಮ್ಮ ಸಮುದಾಯದ ಸ್ಮಶಾನಕ್ಕೆ ಒಂದು ಎಕರೆ ಭೂಮಿ ಮಂಜೂರು ಮಾಡಬೇಕು ಎಂದು ಆಗ್ರಹಿಸಿದರು.ಸಮುದಾಯದ ಮುಖಂಡರಾದ ಕೆ.ಜಿ.ಕುಲಕರ್ಣಿ, ವೇಣುಗೋಪಾಲ ಆಚಾರ್ ಜಹಗೀರದಾರ್, ರಾಜೇಂದ್ರ ಆಚಾರ್ ಬಿಸಿರಳ್ಳಿ, ಸುಶೀಲೇಂದ್ರ ದೇಶಪಾಂಡೆ, ವಿಶ್ವನಾಥ್ ದೀಕ್ಷಿತ್, ಶ್ರೀನಿವಾಸ ಜೋಶಿ, ರವಿ ಪುರೋಹಿತ್, ಪ್ರಲ್ಹಾದ ಬನ್ನಿಗೋಳ, ಆನಂದ್, ರಾಮಮೂರ್ತಿ ಸಿದ್ಧಾಂತಿ, ಶ್ರೀನಾಥ್ ಆಯಾಚಿತ್, ಹರಿಸರ್ವೋತ್ತಮಾಚಾರ್, ಮೈಲಾರಾವ್ ಕುಲಕರ್ಣಿ ಇದ್ದರು.



ಕೊಪ್ಪಳ: ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಮೇಲಿದ್ದ ಜನಿವಾರ ತಗಿಸಿ ಕತ್ತರಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಘಟನೆ ನಡೆದ ಎರಡು ಶಿಕ್ಷಣ ಸಂಸ್ಥೆಗಳ ಅನುಮತಿ ರದ್ದು ಮಾಡಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಘಟಕ ಆಗ್ರಹಿಸಿದೆ. ಮಹಾಸಭಾದ ಜಿಲ್ಲಾ ಚುನಾಯಿತ ಪ್ರತಿನಿಧಿ ಗುರುರಾಜ ಎನ್. ಜೋಶಿ, ರಾಘವೇಂದ್ರಸ್ವಾಮಿಗಳ ಇಲ್ಲಿನ ಮಠದ ವ್ಯವಸ್ಥಾಪಕ ಜಗನ್ನಾಥಚಾರ್ಯ ಹುನಗುಂದ ಇದ್ದರು.

ಜಿಲ್ಲಾ ನೀರು, ನೈರ್ಮಲ್ಯ ಮಿಷನ್ ಸಮಿತಿ ಸಭೆ

ನೀರು ಪೂರೈಕೆಗೆ ಆದ್ಯತೆ ನೀಡಿ

ಕೊಪ್ಪಳ: ಜಿಲ್ಲೆಯಲ್ಲಿ ಕುಡಿಯುವ ನೀರು ಪೂರೈಕೆಗೆ ಮೊದಲ ಆದ್ಯತೆ ನೀಡಬೇಕು ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ ಕೊಠಡಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ (ಡಿಡಬ್ಲ್ಯೂಎಸ್ಎಂ) ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕುಡಿಯುವ ನೀರಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳನ್ನು ಮೊದಲ ಆದ್ಯತೆ ಮೇರೆಗೆ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಪ್ರಸ್ತುತ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳಲ್ಲಿ ಬಾಡಿಗೆ ಆಧಾರದ ಮೇಲೆ ಖಾಸಗಿ ಕೊಳವೆ ಬಾವಿಗಳನ್ನು ತೆಗೆದುಕೊಂಡು ವಿವಿಧ ಗ್ರಾಮಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ಈ ಎಲ್ಲಾ ಕೊಳವೆ ಬಾವಿಗಳ ನೀರನ್ನು ಕಡ್ಡಾಯವಾಗಿ ಪರೀಕ್ಷಿಸಿದ ಬಳಿಕವೇ ನೀರು ಪೂರೈಸಬೇಕು. ಈಗಾಗಲೇ ಎಲ್ಲ ಗ್ರಾಪಂಗಳಲ್ಲಿ ನೀರಿನ ಪರೀಕ್ಷಾ ಕಿಟ್‌ಗಳನ್ನು ನೀಡಲಾಗಿದೆ. ಅಗತ್ಯವಿದ್ದಲ್ಲಿ ನಿಯಮಾನುಸಾರ ಪ್ರಸ್ತಾವನೆ ಸಲ್ಲಿಸಿ. ಪರೀಕ್ಷೆಯಲ್ಲಿ ನೀರು ಕುಡಿಯಲು ಯೋಗ್ಯವಿಲ್ಲವೆಂದು ಕಂಡುಬಂದಲ್ಲಿ ತಕ್ಷಣ ಅಂತಹ ನೀರನ್ನು ಬಳಕೆ ಮಾಡದಂತೆ ತ್ವರಿತ ಕ್ರಮವಹಿಸಬೇಕು. ಕುಡಿಯಲು ಯೋಗ್ಯವಿಲ್ಲದ ಬೋರ್‌ವೆಲ್ ಗಳನ್ನು ಸ್ಥಗಿತಗೊಳಿಸಬೇಕು. ಅಂತಹ ಗ್ರಾಮಗಳಿಗೆ ಟ್ಯಾಂಕರ್ ಮುಖಾಂತರವೇ ನಿರಂತರ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಬೇಕು ಎಂದರು.



> ಎಲ್ಲ ಗ್ರಾಮಗಳಲ್ಲಿರುವ ಓಎಚ್‌ಟಿ ಟ್ಯಾಂಕನ್ನು ಪ್ರತಿ ತಿಂಗಳು ಸ್ವಚ್ಛ ಮಾಡಬೇಕು. ಗ್ರಾಮಗಳಲ್ಲಿ ಈಗಾಗಲೇ ಸರಬರಾಜು ಮಾಡುತ್ತಿರುವ ನೀರಿನ ಪೈಪಲೈನ್‌ಗಳಲ್ಲಿ ಯಾವುದೇ ರೀತಿಯ ಸೋರಿಕೆ ಕಂಡುಬಂದಲ್ಲಿ 24 ಗಂಟೆಗಳಲ್ಲಿ ದುರಸ್ತಿಗೊಳಿಸಿ ನೀರು ಪೂರೈಕೆಯಾಗುವಂತೆ ಸಂಬಂಧಪಟ್ಟ ಅಧಿಕಾರಿಗಳು ನೋಡಿಕೊಳ್ಳಬೇಕು. ಖಾಸಗಿ ಬೋರ್‌ವೆಲ್ ಹಾಗೂ ಟ್ಯಾಂಕರ್ ನೀರಿಗೆ ಸರ್ಕಾರದ ನಿಯಮಾನುಸಾರ ದರ ನಿಗದಿಪಡಿಸಬೇಕು.
>
> ■ ವರ್ಣಿತ್ ನೇಗಿ, ಜಿಪಂ ಸಿಇಒ

ಜಿಲ್ಲೆಯ ಯಾವುದೇ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಉಲ್ಬಣಗೊಂಡರೆ, ಇದರ ಬಗ್ಗೆ ಪ್ರತಿ ವಾರಕ್ಕೊಮ್ಮೆ ಸಭೆ ನಡೆಸಿ ಆಯಾ ತಾಪಂ ಇಒಗಳ ಹಂತದಲ್ಲಿಯೇ ಕ್ರಮ ಕೈಗೊಳ್ಳಬೇಕು ಎಂದರು.

ಜಿಪಂ ಉಪಕಾರ್ಯದರ್ಶಿಗಳಾದ ಟಿ.ಕೃಷ್ಣಮೂರ್ತಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕೊಪ್ಪಳ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಮಹೇಶ ಶಾಸ್ತ್ರಿ ಸೇರಿದಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವಿವಿಧ ವಿಭಾಗಗಳ ಎಇಇಗಳು, ತಾಪಂ ಇಒಗಳು, ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ (ಡಿಡಬ್ಲ್ಯೂಎಸ್ಎಂ) ಸಮಿತಿಯ ಸದಸ್ಯರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಆರೋಗ್ಯಕರ ಜೀವನ ಶೈಲಿ ರೂಢಿಸಿಕೊಳ್ಳಿ

ಕಲಬುರಗಿ: ವಿದ್ಯಾರ್ಥಿಗಳು ತಮ್ಮ ಜೀವನದ ಬೆಳವಣಿಗೆಯ ಹಂತದಲ್ಲಿ ಮಾದಕ ದ್ರವ್ಯಗಳು ಮತ್ತು ಇತರ ಕೆಟ್ಟ ಅಭ್ಯಾಸಗಳ ಆಮಿಷಕ್ಕೆ ಬಲಿಯಾಗಬಾರದು ಮತ್ತು ಒತ್ತಡದಿಂದ ದೂರವಿದ್ದು, ಆರೋಗ್ಯಕರ ಜೀವನ ಶೈಲಿ ಅಳವಡಿಸಿಕೊಳ್ಳಬೇಕು ಜೊತೆಗೆ ಮೊಬೈಲ್ ನೋಡುವ ಸಮಯವನ್ನು ಕಡಿಮೆ ಮಾಡಬೇಕು ಎಂದು ಖ್ಯಾತ ಮನೋವೈದ್ಯ ಡಾ. ಸಿ.ಆರ್.ಚಂದ್ರಶೇಖರ್ ತಿಳಿಸಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಸಿ.ಆರ್. ಚಂದ್ರಶೇಖರ್, ಶರಣಬಸವ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ವಿದ್ಯಾರ್ಥಿಗಳಿಗೆ, ಭಾರತವು ವಿಶ್ವದ ಅತಿದೊಡ್ಡ ಯುವ ಜನಸಂಖ್ಯೆಯನ್ನು ಹೊಂದಿರುವುದರಿಂದ, ತನ್ನ ಕೈಗಾರಿಕೆಗಳಲ್ಲಿ ಮಾನವ ಸಂಪನ್ಮೂಲಕ್ಕೆ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಇಡೀ ಜಗತ್ತು ಭಾರತದತ್ತ ನೋಡುತ್ತಿದೆ. ಒಟ್ಟು 142 ಕೋಟಿ ಜನಸಂಖ್ಯೆಯಲ್ಲಿ ಸರಿಸುಮಾರು 45 ಕೋಟಿ ಯುವಕರಿದ್ದಾರೆ ಮತ್ತು ಈ ನಮ್ಮ ಅಗಾಧ ಶಕ್ತಿಯನ್ನು ಅಭಿವೃದ್ಧಿ ಹೊಂದಿದ ದೇಶವಾಗುವ ಗುರಿಯನ್ನು ಸಾಧಿಸಲು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶರಣಬಸವ ವಿಶ್ವವಿದ್ಯಾಲಯದಲ್ಲಿ ಗುರುವಾರ ವಿದ್ಯಾರ್ಥಿ ಸಲಹಾ ಸಮಿತಿ ಮತ್ತು ರ್‍ಯಾಗಿಂಗ್ ವಿರೋಧಿ ಸಮಿತಿ ಜಂಟಿಯಾಗಿ ಆಯೋಜಿಸಿದ್ದ 'ಮಾನಸಿಕ ಆರೋಗ್ಯ, ಯೋಗಕ್ಷೇಮ ಮತ್ತು ರ್‍ಯಾಗಿಂಗ್ ಮುಕ್ತ ಕ್ಯಾಂಪಸ್' ಶೀರ್ಷಿಕೆಯ ಕುರಿತು ಮಾತನಾಡಿದ ಡಾ. ಚಂದ್ರಶೇಖರ್, ದೇಶದ ಯುವಕರನ್ನು ಸರಿಯಾದ ಹಾದಿಯಲ್ಲಿ ಮುನ್ನಡೆಸುವುದು ಮತ್ತು ಸಮಾಜದ ದುಷ್ಕೃತ್ಯಗಳಿಗೆ ಬಲಿಯಾಗದಂತೆ ತಡೆಯುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಹೇಳಿದರು.

ದೇಶದಲ್ಲಿ ಶೇಕಡಾ 30ರಷ್ಟು ಯುವಕರು ಪದವೀಧರರಾಗಿದ್ದಾರೆ ಎಂದು ಹೆಮ್ಮೆ ಪಡಬೇಕಾದರೂ, ಕಳವಳಕಾರಿ ಸಂಗತಿಯೆಂದರೆ,ಈ ಪದವೀಧರರಲ್ಲಿ ಶೇಕಡಾ 40ರಷ್ಟು ವಿದ್ಯಾರ್ಥಿಗಳು ವಿಶೇಷವಾಗಿ ಇಂಜಿನಿಯರಿಂಗ್ ಪದವೀಧರರು, ನಿರುದ್ಯೋಗಿಗಳಾಗಿ ದ್ದಾರೆ''. ಪದವೀಧರರು ಮಾಡುತ್ತಿ ರುವ ಉದ್ಯೋಗಗಳು ಮತ್ತು ಅವರ ಅರ್ಹತೆ ಗಳ ನಡುವೆ ಹೊಂದಾಣಿಕೆಯೇ ಇಲ್ಲ, ಇಂಜಿನಿಯರಿಂಗ್ ಪದವೀಧರರು ಮತ್ತು ಎಂಬಿಬಿಎಸ್ ಪದವೀಧರರು ತಮ್ಮ ಅರ್ಹತೆಗಿಂತ ಕಡಿಮೆ ಇತರ ವೃತ್ತಿಗಳಲ್ಲಿ ಕೆಲಸ ಮಾಡುತ್ತಿರುವ ಹಲವಾರು ನಿದರ್ಶನಗಳಿವೆ ಎಂದು ತಿಳಿಸಿದರು.ಶರಣಬಸವ ವಿಶ್ವವಿದ್ಯಾಲಯದ ನಿರ್ದೇಶಕ ಪ್ರೊ.ವಿ.ಡಿ.ಮೈತ್ರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಸಮಾಲೋಚನಾ ಸಮಿತಿಯ ಅಧ್ಯಕ್ಷ ಡಾ.ಶರಣ ಶೇಗೇದಾರ ಸ್ವಾಗತಿಸಿದರು.



1,44 ಕೋಟಿ ಮೌಲ್ಯದ 785 ಮೊಬೈಲ್ ಹಸ್ತಾಂತರ

ಕಲಬುರಗಿ: ನಗರ ಪ್ರದೇಶದ ವಿವಿಧ ಪೊಲೀಸ್ ಠಾಣೆಗಳಲ್ಲಿ ಮೊಬೈಲ್ ಫೋನ್ ಕಳುವಾದ ಕುರಿತು ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಪೊಲೀಸರು 2 ತಿಂಗಳ ವಿಶೇಷ ಕಾರ್ಯಾಚರಣೆ ನಡೆಸಿ 1.44 ಕೋಟಿ ರೂಪಾಯಿ ಮೌಲ್ಯದ ಸುಮಾರು 785 ಮೊಬೈಲ್ ಫೋನ್ ಪತ್ತೆ ಹಚ್ಚಿ, ಆಯಾ ವಾರಾಸುದಾರರಿಗೆ ಹಿಂತಿರುಗಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ತಿಳಿಸಿದರು.

ನಗರ ಪೊಲೀಸರ 2 ತಿಂಗಳ ವಿಶೇಷ ಕಾರ್ಯಾಚರಣೆ

ನಗರದ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಪೊಲೀಸ್ ಆಯುಕ್ತ ಶರಣಪ್ಪ ಎಸ್ ಡಿ ಮಾರ್ಗದಲ್ಲಿ ಉಪ ಪೊಲೀಸ್ ಆಯುಕ್ತರಾದ ಶಾಲೂ (ಕಾ-ಸು) ಪ್ರವೀಣ್ ನಾಯಕ್ (ಅ-ಸಂ) ಹಾಗೂ ನಗರದ ಎಲ್ಲಾ ಸಹಾಯಕ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ಎಲ್ಲಾ ಠಾಣೆಗಳಲ್ಲಿ ಸಿಇಐಆರ್ ಪೋರ್ಟಲ್ ಮೂಲಕ ಇಲ್ಲಿಯವರೆಗೆ 1648 ಮೊಬೈಲ್ ಫೋನ್ ವಾರಾಸುದಾರರಿಗೆ ಹಿಂತಿರುಗಿಸಲಾಗಿದೆ ಎಂದರು.

ಪ್ರಸ್ತುತ 760 ಮೊಬೈಲ್ ಫೋನ್ ಅಂದಾಜು1,44,90,000ಕೋಟಿರೂಪಾಯಿ ಮೌಲ್ಯದ ಮೊಬೈಲ್ ಪತ್ತೆ ಹಚ್ಚಿದ್ದು, ಒಟ್ಟಾರೆ ಇಲ್ಲಿಯವರೆಗೆ 2408 ಮೊಬೈಲ್ ಫೋನ್ ವಾರಾಸುದಾರರಿಗೆ ಹಿಂತಿರುಗಿಸಲಾಗಿದೆ. ಸಾರ್ವಜನಿಕರು ತಮ್ಮ ಮೊಬೈಲ್ ಫೋನ್ ಕಳೆದು ಹೋದಲ್ಲಿ ಈ ಲಾಸ್ಟ್ ಮತ್ತು ಸಿಇಐಆರ್ ಪೋರ್ಟಲ್‌ನಲ್ಲಿ ದೂರು ದಾಖಲಿಸಬಹುದು ಎಂದ ಅವರು, ಸದರಿ ಮೊಬೈಲ್ ಪೋನ್ ಪತ್ತೆ ಕಾರ್ಯದಲ್ಲಿ ಯಶಸ್ವಿಯಾದ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಶ್ಲಾಘಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಉಪ ಪೊಲೀಸ್ ಆಯುಕ್ತೆ ಶಾಲೂ (ಕಾ-ಸು) ಪ್ರವೀಣ್ ಹೆಚ್ ನಾಯಕ (ಅ-ಸಂ) ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.



ಬಿಎಸ್‌ವೈ ಅಭಿಮಾನೋತ್ಸವ: ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ

ಮಾನ್ವಿ: ಬಿ.ಎಸ್.ಯಡಿಯುರಪ್ಪ ಅವರ ಅಭಿಮಾನಿಗಳು ಮೇ 9ರಂದು ಚಿತ್ರದುರ್ಗದಲ್ಲಿ ಸಾರ್ಥಕ 50 ವರ್ಷ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮವನ್ನು ಆಯೋಜಿಸಿದ್ದು, ಮಾನ್ವಿ ಮತ್ತು ಸಿರವಾರ ತಾಲೂಕುಗಳ ಬಿಜೆಪಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ ಎಂದು ಮಾಜಿ ಸಂಸದ ಬಿ.ವಿ.ನಾಯಕ ಹೇಳಿದರು.

ಪಟ್ಟಣದ ಭಾರತೀಯ ಜನತಾ ಪಾರ್ಟಿ ಪಕ್ಷದ ಕಾರ್ಯಾಲಯದಲ್ಲಿ ಸಾರ್ಥಕ 50 ವರ್ಷ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ನಡೆದ ಮಾನ್ವಿ ಮತ್ತು ಸಿರವಾರ ಮಂಡಲ ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಬಿ.ಎಸ್.ಯಡಿಯುರಪ್ಪ ಕಳೆದ 50 ವರ್ಷಗಳ ರಾಜಕೀಯ ಜೀವನದಲ್ಲಿ ರಾಜ್ಯದಲ್ಲಿ ಬಿಜೆಪಿ ಪಕ್ಷವನ್ನು ಸದೃಢವಾಗಿ ಕಟ್ಟಿ ಬೆಳೆಸಿ ರಾಜ್ಯದಲ್ಲಿ ಪ್ರಥಮವಾಗಿ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ದಕ್ಷಿಣ ಭಾರತದಲ್ಲಿ ಪ್ರಥಮವಾಗಿ ಬಿಜೆಪಿ ಪಕ್ಷಕ್ಕೆ ಹೆಬ್ಬಾಗಿಲನ್ನು ತೆರೆದ ಕೀರ್ತಿ ಕೂಡ ಬಿ.ಎಸ್.ಯಡಿಯುರಪ್ಪ ಅವರಿಗೆ ಸಲ್ಲುತ್ತದೆ ಎಂದರು.

ಮಾಜಿ ಶಾಸಕ ಗಂಗಾಧರ ನಾಯಕ ಮಾತನಾಡಿ, ಬಿಜೆಪಿ ಕಾರ್ಯಕರ್ತರು ಕೇಂದ್ರ ಸರ್ಕಾರದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯ ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ಫಲಾನುಭವಿಗಳಿಗೆ ತಿಳಿಸಿದಾಗ ಮಾತ್ರ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷವನ್ನು ಸಂಘಟಿಸಿ ಬಿಜೆಪಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಬಿಜೆಪಿ ಮಾನ್ವಿ ಮಂಡಲ ಅಧ್ಯಕ್ಷರಾದ ವೀರಭದ್ರಗೌಡ ಭೋಗಾವತಿ, ಸಿರವಾರ ಬಿಜೆಪಿ ಮಂಡಲ ಅಧ್ಯಕ್ಷ ಆರ್.ಕೆ.ಅಮರೇಶ ಸಾಹುಕರ್, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷರಾದ ದೊರೆಬಾಬು, ಜಿಲ್ಲಾ ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ಜಕ್ಕಲದಿನ್ನಿ, ಶರಣೆಗೌಡ ನಕ್ಕುಂದಿ, ವೀರನಗೌಡ ಪೋತ್ನಾಳ್ ವಕೀಲರು, ಅಯ್ಯಪ್ಪ ಮ್ಯಾಕಲ್ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದರು.




ನೀರಿನ ಸಮಸ್ಯೆಯಾಗದಿರಲಿ: ಡಿಸಿ

ರಾಯಚೂರು: ಬೇಸಿಗೆ ಇರುವುದರಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಪ್ರಥಮ ಆದ್ಯತೆ ನೀಡುವ ಮೂಲಕ ಜಿಲ್ಲೆಯ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಗಮನಕೊಡಬೇಕೆಂದು ಜಿಲ್ಲಾಧಿಕಾರಿ ಪೂವಿತಾ ಎಸ್. ತಿಳಿಸಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ. ಬಿಸಿಗಾಳಿ ಹಾಗೂ ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ಚರ್ಚಿಸಲು ಅಧಿಕಾರಿಗಳಿಗೆ ಕರೆದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ರಾಯಚೂರು ಜಿಲ್ಲೆಯ ಯಾವುದೇ ತಾಲೂಕಿನಲ್ಲಿ ನೀರಿನ ಸಮಸ್ಯೆಗಳಿರುವ ಗ್ರಾಮಗಳನ್ನು ಗುರುತಿಸಿ ಮುಂಜಾಗ್ರತೆ ವಹಿಸಬೇಕು. ಈ ಕುರಿತು ಮಾಹಿತಿ ಪಡೆಯಲು ಪ್ರತಿ ಸೋಮವಾರ ವಿಸಿ ಮೂಲಕ ಸಭೆ ಕರೆಯುತ್ತೇನೆ ತಾವು ಇಲ್ಲಿಗೆ ಬರುವುದು ಬೇಕಿಲ್ಲ ಆಯಾ ತಾಲ್ಲೂಕಿನ ಅಧಿಕಾರಿಗಳು ತಾವಿದ್ದ ಸ್ಥಳದಿಂದಲೇ ಮಾಹಿತಿ ಕೊಡಬೇಕು. ಕುಡಿಯುವ ನೀರಿನ ಸಹಾಯವಾಣಿಯಿಂದ ಬರುವ ಕರೆಗಳಿಗೆ ತಕ್ಷಣ ಸ್ಪಂದಿಸಬೇಕು ಎಂದರು.



ಜಿಪಂ ಸಿಇಓ ಈಶ್ವರ ಕುಮಾರ ಕಾಂದೂ ಮಾತನಾಡಿ, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸರಿಯಾದ ಮಾಹಿತಿ ನೀಡಬೇಕು. ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ನೀರಿನ ಸಮಸ್ಯೆಗಳಾಗಬಾರದು ಇದಕ್ಕೆ ಯಾವುದೇ ಅನುದಾನದ ಕೊರತೆ ಇಲ್ಲ ಈ ಕುರಿತು ಅಧಿಕಾರಿಗಳು ಹೆಚ್ಚಿನ ಗಮನಹರಿಸಬೇಕೆಂದು ತಿಳಿಸಿದರು.

ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೋಹಪಾತ್ರ, ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ. ಈ.ಪಂ ಯೋಜನಾ ನಿರ್ದೇಶಕ ಶರಣಬಸವರಾಜು. ರಾಯಚೂರು ತಾಲ್ಲೂಕು ತಹಶೀಲ್ದಾರ ಸುರೇಶ ವರ್ಮಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ಮುನಿರಾಬಾದ್: ಬಂಡಿ ಹರ್ಲಾಪುರ ವ್ಯಾಪ್ತಿಯ ಅಗಳಕೇರಾ, ಶಿವಪುರ, ಕವಳಿ, ಅಚಲಾಪುರ, ಮಹ್ಮದ್ ನಗರ, ಬಸಾಪುರ, ನಾರಾಯಣ ಪೇಟೆ, ರಾಜಾರಾಮ್ ಪೇಟೆ, ಹಳೇ ಬಂಡಿಹರ್ಲಾಪುರ, ಅಯೋಧ್ಯೆ ಗ್ರಾಮದಲ್ಲಿ 5.78 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕೊಪ್ಪಳದ ಶಾಸಕ ಕೆ.ರಾಘವೇಂದ್ರ ಹಿಟ್ನಾಳ್ ಗುರುವಾರ ಭೂಮಿಪೂಜೆ ನೆರವೇರಿಸಿದರು.

ಹೊಸ ಬಂಡಿಹರ್ಲಾಪುರ ಗ್ರಾಮದಲ್ಲಿ ಮಾತನಾಡಿದ ಅವರು, ನಮ್ಮ ಭಾಗದ ಹಳ್ಳಿಗಳಲ್ಲಿ ಶಿಕ್ಷಣ ಅಭಿವೃದ್ಧಿಪಡಿಸಲು ಹಲವು ಯೋಜನೆ ರೂಪಿಸಿದ್ದೇವೆ. ಅದರಲ್ಲಿ ಹೊಸ ಬಂಡಿಹರ್ಲಾಪುರ ಗ್ರಾಮದಲ್ಲಿ 4 ಕೋಟಿ ರೂ. ವೆಚ್ಚದಲ್ಲಿ ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಯನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಪರಿವರ್ತಿಸಿ ಮೂಲ ಸೌಕರ್ಯ ಒದಗಿಸುವ ಕಾಮಗಾರಿ ಕೆಪಿಎಸ್ ಶಾಲೆಗೆ ವಿಶೇಷ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಭಾಗದ ಮಕ್ಕಳಿಗೆ ಉಚಿತ ಶಿಕ್ಷಣ ಹಾಗೂ ಒಂದನೇ ತರಗತಿಯಿಂದ ಪದವಿ ಪೂರ್ವ ಶಿಕ್ಷಣದ ವರೆಗೆ ಒಂದೇ ಕ್ಯಾಂಪಸ್‌ನಲ್ಲಿ ಶಿಕ್ಷಣ ಕೊಡಿಸುವ ವ್ಯವಸ್ಥೆ ಇದಾಗಿದೆ. ಈ ಗ್ರಾಮಕ್ಕೆ ಕರ್ನಾಟಕ ಪಬ್ಲಿಕ್ ಶಾಲೆ ತರಲು ಶ್ರಮಿಸಿದ ಗ್ರಾಮದ ಶಿಕ್ಷಣ ಪ್ರೇಮಿ ಕೆ.ಚಂದ್ರಶೇಖರ್, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಸಿದ್ದಿಬಾಷ ಗೊರೆಬಾಳ ಗ್ರಾಮಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಸಹಕಾರಿ ಸಂಘದ ಅಧ್ಯಕ್ಷ ಕೆ.ಚಂದ್ರಶೇಖರ್, ಮಾಜಿ ಎಪಿಎಂಸಿ ಅಧ್ಯಕ್ಷ ವಿಶ್ವನಾಥ ರಾಜು ಕೆ.ಎಂ. ಸೈಯದ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಬಾಲಚಂದ್ರನ್, ಮೋಹನ್, ಶಂಕರ ಶ್ಯಾಶಲ್, ಯಂಕಪ್ಪ ಹೊಸಳ್ಳಿ, ಯಮುನೂರಪ್ಪ ವಡ್ಡರ್, ಚನ್ನಕೃಷ್ಣ ಗೊಲ್ಲರ, ವೆಂಕಟೇಶ್ ಟಿಡಿಬಿ, ಬಾಷುಸಾಬ ಗೊರೆಬಾಳ, ಹನುಮಂತಪ್ಪ ಕರಡಿ, ಓಬಳೇಶ್, ಕನಕರಾಯ, ಕೃಷ್ಣಾ ಗಡಾದ, ಸೋಮಶೇಖರ್ ಹಿಟ್ನಾಳ, ಅಬ್ಬುಲೆಗೆಪ್ಪ, ಹುಲುಗಪ್ಪ, ರಾಘವೇಂದ್ರ ಇಲ್ಲೂರ, ಸಿದ್ಧಿ ಬಾಷಾ ಗೊರೆಬಾಳ, ಅಶೋಕ್ ಹಿಟ್ನಾಳ, ತಹಶೀಲ್ದಾರ್ ಬಸವರಾಜ, ಅಕ್ಬರ್ ಪಲ್ಟಾನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಟಿಸಿ ನೀಡದೆ ಸತಾಯಿಸುತ್ತಿರುವ ಜೆಸ್ಕಾಂ: ಅಧಿಕಾರಿಗಳ ವಿರುದ್ಧ ರೈತರ ಆಕ್ರೋಶ

ಸಿಂಧನೂರು: ತಾಲೂಕಿನ ಉಮಲೂಟಿ ಗ್ರಾಮದ ಸರ್ವೆ ನಂ.140/1 ಜಮೀನಿನ ರೈತನಿಗೆ ವಿದ್ಯುತ್ ಪರಿವರ್ತಕ (ಟಿಸಿ) ಆನ್ ಲೈನ್‌ನಲ್ಲಿ ಮುಟ್ಟಿದೆ. ಆದರೆ ರೈತನಿಗೆ ಇಲ್ಲಿಯವರೆಗೂ ಟಿಸಿ ಕೊಟ್ಟಿಲ್ಲ, ಜೆಸ್ಕಾಂ ಕಚೇರಿಗೆ ಅಲೆದು ಅಲೆದು ಸಾಕಾಗಿ ಹೋಗಿದೆಂದು ಮಾಬು ಸುಬಾನಿ ಉಮಲೂಟಿ ಅಧಿಕಾರಿಗಳ ಕಾಲಹರಣ ನಡೆಯ ವಿರುದ್ಧ ಆಕ್ರೋಶ ಹೊರ ಹಾಕಿದರು.

ಅರ್ಜಿ ಸಲ್ಲಿಸಿ ಹದಿನೈದು ದಿನಗಳು ಕಳೆದರೂ ಟಿಸಿ ಕೊಡುತ್ತಿಲ್ಲ, ಅರ್ಜಿ ಸಲ್ಲಿಸಿ 24 ಗಂಟೆಯೊಳಗೆ ಟಿಸಿ ಕೊಡಬೇಕು ಎಂಬ ನಿಯಮವಿದ್ದರೂ, ಇಲ್ಲಿಯವರೆಗೂ ತಡೆ ಹಿಡಿದ ಕಾರಣ ಗೊತ್ತಾಗುತ್ತಿಲ್ಲ, ಇದೆಲ್ಲವನ್ನು ನೋಡಿದಾಗ ಲಂಚ ಕೊಡಬೇಕೆಂಬ ಕಾರಣಕ್ಕೆ ಈ ರೀತಿ ತಡೆಹಿಡಿದಿದ್ದಾರೆಂಬ ಅನುಮಾನ ಉಂಟಾಗಿದೆ, ಕೇಳಿದರೆ ಸ್ಟಾಕ್ ಇಲ್ಲ ಎಂಬ ಹಾರಿಕೆಯ ಉತ್ತರ ಅಧಿಕಾರಿಗಳಿಂದ ಸಿದ್ದವಾಗಿದೆ. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಟಿ.ಸಿ ಕೊಡಬೇಕಾಗಿದೆ.

ಜೆಸ್ಕಾಂ ಹೆಲ್ಪಲೈನ್ 1912ಗೆ ರೈತ ದೂರವಾಣಿ ಕರೆ ಮಾಡಿದರೆ 'ನಿಮಗೆ ಟಿ.ಸಿ ತಲುಪಿದೆ ಎಂದು ಫೈಲ್ ಕ್ಲೋಸ್ ಮಾಡಲಾಗಿದೆ ಎನ್ನುತ್ತಾರೆ. ಆದರೆ ಸ್ಥಳೀಯವಾಗಿ ಮಾತ್ರ ರೈತನಿಗೆ ಟಿಸಿ ಮುಟ್ಟಿಲ್ಲ, ಸಂಬಂಧಿಸಿದ ಜೆಇ ಬಸನಗೌಡ ಸುಖಾ ಸುಮ್ಮನೆ ಈ ವಿಚಾರವಾಗಿ ಕಾಲಹರಣ ಮಾಡುತ್ತಿದ್ದಾನೆಂದು ರೈತನು ಆಕ್ರೋಶ ಹೊರ ಹಾಕುತ್ತಿದ್ದಾನೆ.

ಈಗಾಗಲೇ ಯಾವುದೇ ಟಿಸಿಗಳನ್ನು 24 ಗಂಟೆಯಲ್ಲಿ ಕೊಟ್ಟಿದ್ದೇವೆ. ಉಮಲೂಟಿಗೆ ಸಂಬಂಧಿಸಿದ ಜೆಇ ಬಸನಗೌಡ ಇದ್ದಾನೆ.ಏನು ಮಾಡಿದ್ದಾನೊ ಗೊತ್ತಿಲ್ಲ ಘಟನೆ ಕುರಿತು ಮಾಹಿತಿ ಪಡೆದು ವಿಚಾರಣೆ ಮಾಡುತ್ತೇನೆ ಎಂದು ಎಇಇ ಜೆಸ್ಕಾಂ ಶ್ರೀನಿವಾಸ ಗೊಲ್ಲರ್ ಹೇಳಿದರು.

ಕಂದಕೂರು ಕಾಲೇಜಿಗೆ ಹೈಟೆಕ್ ವ್ಯವಸ್ಥೆ ಇರಲಿ

ಯಾದಗಿರಿ: ಗುರಮಠಕಲ್ ಕ್ಷೇತ್ರದ ಕಂದಕೂರ ಗ್ರಾಮಕ್ಕೆ ಸರ್ಕಾರ ನೂತನವಾಗಿ ಪಿಯುಸಿ ಕಾಲೇಜು ಮಂಜೂರು ಮಾಡಿದ್ದು, ಪ್ರಸಕ್ತ ಸಾಲಿನಿಂದಲೇ ವಿದ್ಯಾರ್ಥಿಗಳ ದಾಖಲಾತಿಗೆ ಸತತ ಪ್ರಯತ್ನ ಮಾಡುವಂತೆ ಶಾಸಕ ಶರಣಗೌಡ ಕಂದಕೂರ ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಗುರುವಾರ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ, ಉನ್ನತೀಕರಿಸಿದ ಪದವಿ ಪೂರ್ವ ಕಾಲೇಜಿಗೆ ಬೇಕಾದ ಸೌಲಭ್ಯಗಳ ಬಗ್ಗೆ ಪರಿಶೀಲನೆ ಮಾಡಿ ಅಧಿಕಾರಿಗಳ ಜತೆ ಔಪಚಾರಿಕ ಸಭೆ ನಡೆಸಿದ ಅವರು, ಇದು ನನ್ನ ಸ್ವಂತ ಊರು. ಕಂದಕೂರಿನಲ್ಲಿ ಪಿಯುಸಿ ಕಾಲೇಜು ಸ್ಥಾಪನೆಯಾಗಬೇಕು ಎಂಬುದು ನಮ್ಮ ತಂದೆ, ಮಾಜಿ ಶಾಸಕರಾದ ದಿ.ನಾಗನಗೌಡ ಅವರ ಬಹುದಿನಗಳ ಕನಸಾಗಿತ್ತು ಎಂದರು.

ಅವರು ಶಾಸಕರಾಗಿದ್ದಾಗಲೇ ಇಲ್ಲಿ ಕಾಲೇಜು ಸ್ಥಾಪನೆಗೆ ಸಾಕಷ್ಟು ಪ್ರಯತ್ನ ಮಾಡಿದ್ದರು. ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಮೇಲೆ ನಾನು ಹಲವು ಬಾರಿ ಮನವಿ ಮಾಡಿ ಒತ್ತಡ ಹಾಕಿದ ಮೇಲೆ ಈ ವರ್ಷದಿಂದ ಸರ್ಕಾರ ಕಂದಕೂರಿನಲ್ಲಿ ನೂತನ ಕಾಲೇಜು ಆರಂಭಿಸಿದೆ. ಪ್ರಸಕ್ತ ವರ್ಷದಿಂದಲೇ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳ ದಾಖಲಾತಿಗೆ ವಿಶೇಷ ಗಮನ ಹರಿಸುವಂತೆ ನಿರ್ದೇಶನ ನೀಡಿದರು.

ಸಭೆ ನಂತರ ಗ್ರಾಮಸ್ಥರೊಡನೆ ಮಾತನಾಡಿ, ನಮ್ಮೂರಿನ ಮಕ್ಕಳು ಕಾಲೇಜಿಗೆ ದೂರದ ಪಟ್ಟಣಗಳಿಗೆ ಅಲೆಯುವುದು ಬೇಡ ಎಂಬ ಕಾರಣಕ್ಕಾಗಿ ಸ್ಥಳೀಯವಾಗಿ ಕಾಲೇಜು ಮಂಜೂರು ಮಾಡಿಸಲಾಗಿದೆ. ಗ್ರಾಮಸ್ಥರು ತಮ್ಮ ಮಕ್ಕಳಿಗೆ ಹೊಸ ಕಾಲೇಜಿಗೆ ದಾಖಲಾತಿ ಮಾಡಿಸಿ ಎಂದು ಶಾಸಕರು ಸಲಹೆ ನೀಡಿದರು.

ಈ ವೇಳೆ ಡಿಡಿಪಿಯು ಪಂಡಿತರಾವ್ ಪವಾರ, ಬಿಇಒ ವೀರಣ್ಣ ಕನ್ನಳ್ಳಿ, ಶರಣಗೌಡ ಆಶನಾಳ, ಎಸ್ ಡಿಎಂಸಿ ಅಧ್ಯಕ್ಷ ವೆಂಕಟರಡ್ಡಿ ಮತ್ತು ಗ್ರಾಮಸ್ಥರು ಇದ್ದರು.



ಕಿರುಸುದ್ದಿ

ಜಿಂದಾಲ್ ಶಾಲೆಯ ಕರಾಟೆ ವಿದ್ಯಾರ್ಥಿಗಳು ಆಯ್ಕೆ

ಬಳ್ಳಾರಿ: ಟ್ರೆಡಿಷನಲ್ ಶೊಟೋಕಾನ್ ಕರಾಟೆ ಅಕಾಡೆಮಿ ಕರ್ನಾಟಕದ ಕರಾಟೆ ವಿದ್ಯಾರ್ಥಿಗಳು, ಅಸ್ಸಾಂ ರಾಜ್ಯದ ಗುಹಾಟಿಯಲ್ಲಿ ಮೇ 16 ಮತ್ತು 17ರಂದು ನಡೆಯಲಿರುವ 24ನೇ ಅಖಿಲ ಭಾರತ ಕರಾಟೆ ಪಂದ್ಯಾವಳಿಯಲ್ಲಿ ತೋರಣಗಲ್ಲು ಜಿಂದಾಲ್ ಶಾಲೆಯ ಕರಾಟೆ ಪಟುಗಳು, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯ ಕರಾಟೆ ಪಟುಗಳು ಕಟಾ ಮತ್ತು ಕುಮಿತೆ ವಿಭಾಗಗಳಲ್ಲಿ ತೂಕ ಮತ್ತು ವಯೋಮಿತಿಯಲ್ಲಿ 10 ಬಾಲಕರು, 3 ಬಾಲಕಿಯರು, 4 ತರಬೇತುದಾರರು ಭಾಗವಹಿಸಲಿದ್ದಾರೆ ಎಂದು ಕರಾಟೆ ಅಕಾಡೆಮಿಯ ಹಿರಿಯ ಕರಾಟೆ ತರಬೇತುದಾರರಾದ ಕಟ್ಟೆ ಸ್ವಾಮಿ ತಿಳಿಸಿದ್ದಾರೆ. ಪಂದ್ಯಾವಳಿಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಅಕಾಡೆಮಿ ಹಿರಿಯ ಕರಾಟೆ ತರಬೇತುದಾರರಾದ ಸುಭಾಷ್ ಚಂದ್ರ ಹಾಗೂ ಜಡೇಶ ಹುಲಗಣ್ಣ, ಡಿ.ನಾಗರಾಜ್, ಹನುಮಂತ ಪ್ರಸಾದ್, ನಬೀಸಾಹೇಬ, ಆನಂದ್ ಮತ್ತು ಜಿಂದಾಲ್‌ನ ಅಧಿಕಾರಿಗಳು ಕ್ರೀಡಾ ಅಭಿಮಾನಿಗಳು ಶುಭ ಹಾರೈಸಿದ್ದಾರೆ.

ಕುಡತಿನಿ: ಮೇ 14ರವರೆಗೆ ನಿಷೇಧಾಜ್ಞೆ ಜಾರಿ

ಬಳ್ಳಾರಿ: ಕುಡತಿನಿ ಕೈಗಾರಿಕಾ ಪ್ರದೇಶದ ಭೂಸ್ವಾಧೀನ ಪ್ರಕ್ರಿಯೆ ಮತ್ತು ಗಡಿ ಗುರುತಿಸುವಿಕೆ ವೇಳೆ ಉಂಟಾಗಬಹುದಾದ ಪ್ರತಿಭಟನೆ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿ ರಕ್ಷಣೆಯ ದೃಷ್ಟಿಯಿಂದ ಕುಡತಿನಿ ಪಟ್ಟಣ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 7ರಿಂದ 14ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ಉಪ-ವಿಭಾಗಾಧಿಕಾರಿ ರಾಜೇಶ್ ಎಚ್.ಡಿ. ಆದೇಶ ಹೊರಡಿಸಿದ್ದಾರೆ.ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕುಡತಿನಿ ಪ್ರದೇಶದಲ್ಲಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನಿನ ಮೋಜಣಿ ಹಾಗೂ ಗಡಿ ಗುರುತಿಸಲು ಮುಂದಾಗಿದೆ. ಈ ವೇಳೆ ಸ್ಥಳೀಯ ಭೂಸಂತ್ರಸ್ತ ರೈತರು ಹಾಗೂ ವಿವಿಧ ಸಂಘಟನೆಗಳಿಂದ ಪ್ರತಿಭಟನೆ ನಡೆಸುವ ಸಾಧ್ಯತೆ ಇದೆ ಎಂದು ಪೊಲೀಸರು ವರದಿ ನೀಡಿರುವ ಹಿನ್ನೆಲೆಯಲ್ಲಿ, ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆಗಳಿದ್ದು, ಮುಂಜಾಗ್ರತಾ ಕ್ರಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ನಿಷೇಧಾಜ್ಞೆ ಜಾರಿಯಲ್ಲಿರುವ ಪ್ರದೇಶಗಳು: ಬಳ್ಳಾರಿ ಉಪ-ವಿಭಾಗಾಧಿಕಾರಿ ರಾಜೇಶ ಎಚ್.ಡಿ. ಅವರು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163ರ ಅಡಿ ಈ ಕೆಳಗಿನ ಪ್ರದೇಶಗಳಲ್ಲಿ ನಿರ್ಬಂಧ ವಿಧಿಸಿದ್ದಾರೆ. ಸಂಪೂರ್ಣ ಕುಡತಿನಿ ಕೆಐಎಡಿಬಿ ಪ್ರದೇಶ, ಬಳ್ಳಾರಿ ಬೈಪಾಸ್ ರಸ್ತೆಯಿಂದ ಸುಲ್ತಾನಪುರ ಕ್ರಾಸ್ ಬಳಿಯ ಬೂದಿಕಣಿವೆವರೆಗೆ, ಸುಲ್ತಾನಪುರ ಕ್ರಾಸ್‌ನಿಂದ ಸುಲ್ತಾನಪುರ ಗ್ರಾಮದವರೆಗೆ, ಕುಡತಿನಿ ಪಟ್ಟಣದಿಂದ ಹರಗಿನದೋಣಿ ರಸ್ತೆಯವರೆಗೆ, ಕುಡತಿನಿ ಪಟ್ಟಣದಿಂದ ತಿಮ್ಮಲಾಪುರ ಗ್ರಾಮದವರೆಗೆ, ಕುಡತಿನಿ ಪಟ್ಟಣದಿಂದ ಏಳುಬೆಂಚಿ ರಸ್ತೆಯ ರೈಲ್ವೇ ಗೇಟ್ ವರೆಗಿನ ಪ್ರದೇಶ. ನಿಗದಿಪಡಿಸಿದ ಪ್ರದೇಶಗಳಲ್ಲಿ 4ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದನ್ನು ನಿಷೇಧಿಸಲಾಗಿದೆ. ಯಾವುದೇ ರೀತಿಯ ಮಾರಕಾಸ್ತ್ರಗಳು, ಪೆಟ್ರೋಲ್, ಡೀಸೆಲ್, ವಿಷದ ಬಾಟಲಿಗಳು, ಕಲ್ಲು, ಸೌದೆ ಅಥವಾ ಚಾಕುಗಳಂತಹ ಹರಿತವಾದ ಆಯುಧಗಳನ್ನು ಹಿಡಿದು ಓಡಾಡುವುದನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿದೆ. ಈ ಆದೇಶವು ಮೇ 7ರ ಸಂಜೆ 6 ರಿಂದ ಮೇ 14ರ ಸಂಜೆ 6ರ ವರೆಗೆ ಜಾರಿಯಲ್ಲಿರಲಿದೆ.

ಸಂಭ್ರಮದ ದುರುಗಮ್ಮ, ಮದಗಮ್ಮ ದೇವಿ ಜಾತ್ರೆ



ಹೂವಿನಹಡಗಲಿ: ತಾಲೂಕಿನ ಹೊಳಗುಂದಿ ಗ್ರಾಮದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಶ್ರೀದುರುಗಮ್ಮ ಹಾಗೂ ಮದಗಮ್ಮ ದೇವಿಯ ಜಾತ್ರಾ ಮಹೋತ್ಸವ ಸಂಭ್ರಮದಿಂದ ಜರುಗಿತು. ಕೇರಿಯ ದೇವಸ್ಥಾನದಲ್ಲಿ ದೇವಿಯ ಪಲ್ಲಕ್ಕಿಗೆ ಹೂವಿನ ಅಲಂಕಾರ ಮಾಡಿ ಬೆಳಿಗ್ಗೆ 7 ಗಂಟೆಗೆ ಗಂಗೆ ಪೂಜೆಗೆ 20 ಬೆಲ್ಲದ ಬಂಡಿ ಮುಂದೆ ಜನರು ನೀರು ಹಾಕಿಕೊಂಡು ಹೋಗುವ ಸಂಪ್ರದಾಯವಿದೆ. ಬಾವಿಹಳ್ಳಿಗೆ ಹೋಗಿ ಗಂಗೆ ಪೂಜೆ ಮುಗಿಸಿದ ನಂತರ ಮಹಿಳೆಯರು ಉಡಿ ತುಂಬುವ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ 11.30ಕ್ಕೆ ಡ್ರಮ್ಸೆಟ್ ಬಡೆಯುವುದರ ಮುಖಾಂತರ ಮತ್ತೆ ದೇವಸ್ಥಾನಕ್ಕೆ ತೆರಳಿ ಅಲ್ಲಿಂದ ನಿಶಾನೆ ಹರಾಜು ಅಂಚಿ ನಿಂಗಪ್ಪ, ಅವರಿಗೆ 25101 ರೂ.ಗೆ ಪಡೆದುಕೊಂಡರು. ದುರ್ಗಮ್ಮ ಹಾಗೂ ಮದಕಮ್ಮ ದೇವಿಯ ಪೂಜಾರಪ್ಪರು ಅಗ್ನಿಕೊಂಡ ತುಳಿಯುವುದು ದೇವಸ್ಥಾನ ಸುತ್ತಲು ಮೆರವಣಿಗೆಯಲ್ಲಿ ಯುವಕರು ಕುಣಿದರು.ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಹಾಗೂ ಪದಾಧಿಕಾರಿಗಳು, ಸರ್ವ ಸದಸ್ಯರು ಪೊಲೀಸ್ ಸಿಬ್ಬಂದಿ ಬಂದೋಬಸ್ತ್ ಒದಗಿಸಿದರು. ಕೇರಿಯ ಹಿರಿಯರು, ಮಹಿಳೆಯರು, ಯುವಕರು ಸೇರಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.



ಬಳ್ಳಾರಿ: ತೋರಣಗಲ್ಲು ಜಿಂದಾಲ್ ಶಾಲೆಯ ಕರಾಟೆ ಪಟುಗಳು, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯ ಕರಾಟೆ ಪಟುಗಳು ಕಟಾ ಮತ್ತು ಕುಮಿತೆ ವಿಭಾಗಗಳಲ್ಲಿ ತೂಕ ಮತ್ತು ವಯೋಮಿತಿಯಲ್ಲಿ 10 ಬಾಲಕರು, 3 ಬಾಲಕಿಯರು ಅಸ್ಸಾಂ ರಾಜ್ಯದ ಗುಹಾಟಿಯಲ್ಲಿ ಮೇ 16 ಮತ್ತು 17ರಂದು ನಡೆಯಲಿರುವ 24ನೇ ಅಖಿಲ ಭಾರತ ಕರಾಟೆ ಪಂದ್ಯಾವಳಿಯಲ್ಲಿ ಭಾಗವಹಿಸಲಿರುವ ವಿದ್ಯಾರ್ಥಿಗಳು.

ಬೀದಿಬದಿ ವ್ಯಾಪಾರಿಗಳಿಗೆ ಕೊಡೆಗಳ ವಿತರಣೆ

ಬಳ್ಳಾರಿ: ಬೇಸಿಗೆ ಬಿಸಿಲಿನ ಪ್ರತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಬೀದಿ ಬದಿ ವ್ಯಾಪಾರಿಗಳಿಗೆ ನೆರವಾಗಲಿ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರ ವತಿಯಿಂದ ಗುರುವಾರ ಬೃಹತ್ ಕೊಡೆಗಳ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ನಗರದ ಗಡಿಗಿ ಚನ್ನಪ್ಪ ವೃತ್ತ, ಬೆಂಗಳೂರು ರಸ್ತೆಯ ಎರಡೂ ಬದಿ ಹಾಗೂ ದೊಡ್ಡ ಮಾರುಕಟ್ಟೆ ಬಳಿ ಸೇರಿದಂತೆ ವಿವಿಧ ಕಡೆಯ ಬೀದಿ ಬದಿ ವ್ಯಾಪಾರಸ್ಥರಿಗೆ ಶಾಸಕ ನಾರಾ ಭರತ್ ರೆಡ್ಡಿ ಅವರ ವತಿಯಿಂದ ಬೃಹತ್ ಕೊಡೆಗಳನ್ನು ಬೆಂಬಲಿಗರು, ಕಾರ್ಯಕರ್ತರು, ಅಭಿಮಾನಿಗಳು ವಿತರಿಸಿದರು.

ಬಿಸಿಲಿನಿಂದ ಬಸವಳಿದಿದ್ದ ವ್ಯಾಪಾರಿಗಳು ನಗು ಮುಖದಿಂದಲೇ ಪಡೆಕೊಂಡು ನೆರಳಿನ ವ್ಯವಸ್ಥೆ ಮಾಡಿದ ಶಾಸಕರ ಕಾರ್ಯಕ್ಕೆ ಮೆಚ್ಚುವ್ಯಕ್ತಪಡಿಸಿ, ಅತ್ಯಂತ ಪ್ರೀತಿಯಿಂದ ಅಭಿನಂದಿಸಿದರು.

ಕಳೆದ ಮೂರು ದಿನಗಳಿಂದ ನಗರದಲ್ಲಿ ಕೊಡೆಗಳ ವಿತರಣೆ ನಡೆಯುತ್ತಿದ್ದು, ಮೂರನೆ ದಿನವಾದ ಗುರುವಾರವೂ ಮುಂದುವರೆಯಿತು.

ಥಿಯೇಟರ್ ಶಿವು, ದುರ್ಗಾಮೋಹನ್, ಟಿಲ್ಲು, ಬೆಣಕಲ್ ರಘು, ಕಪ್ಪೆ ಶಿವು, ಸೆವೆನ್ ಹಿಲ್ಸ್ ರಘು, ಗೌತಮ್, ಧರ್ಮಶ್ರೀ, ಭಾಸ್ಕರ್ ರೆಡ್ಡಿ, ಟಿ.ಹೆಚ್.ಸೀನಾ, ರಘು, ಬುಜ್ಜಿ, ಹನುಮಂತು, ರಸೂಲ್, ಪ್ರದೀಪ್, ಶ್ರೀಕಾಂತ್, ಸುನೀಲ್, ಶಶಿ ಸೇರಿದಂತೆ ಇತರರಿದ್ದರು.



ಬಳ್ಳಾರಿ: ಬೇಸಿಗೆ ಬಿಸಿಲಿನ ಪ್ರತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಬೀದಿ ಬದಿ ವ್ಯಾಪಾರಿಗಳಿಗೆ ನೆರವಾಗಲಿ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರ ವತಿಯಿಂದ ಗುರುವಾರ ಬೃಹತ್ ಕೊಡೆಗಳ ವಿತರಣೆ ಕಾರ್ಯಕ್ರಮ ನಡೆಯಿತು.

ಸಭೆಯಲ್ಲಿ ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ ಹೇಳಿಕೆ

'ಸ್ಟ್ರೀಟ್ ಫುಡ್ ಹಬ್' ಸ್ಥಾಪನೆಗೆ ಕ್ರಮ

ವಿಜಯನಗರ: ವಿಶ್ವವಿಖ್ಯಾತ ಪ್ರವಾಸಿ ತಾಣ ಹಂಪಿಯಲ್ಲಿ ಪ್ರವಾಸಿಗರಿಗೆ ಹಾಗೂ ಸ್ಥಳೀಯರಿಗೆ ಒಂದೇ ಸೂರಿನಡಿ ತರಹೇವಾರಿ ಗುಣಮಟ್ಟದ ಆಹಾರ ಖಾದ್ಯಗಳ ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ 'ಪಿ.ಎಂ. ಸ್ವನಿಧಿ' ಯೋಜನೆಯಡಿ ಅತ್ಯಾಧುನಿಕ 'ಸ್ಟ್ರೀಟ್ ಫುಡ್ ಹಬ್' ಸ್ಥಾಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದರು.

ಹೊಸಪೇಟೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪಿಎಂ ಸ್ವನಿಧಿ ಯೋಜನೆಯಡಿ ಸ್ಟ್ರೀಟ್ ಫುಡ್ ಹಬ್ ಸ್ಥಾಪನೆಗೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಂಪಿಗೆ ಬರುವ ಸಾವಿರಾರು ದೇಶಿ-ವಿದೇಶಿ ಪ್ರವಾಸಿಗರಿಗೆ ಒಂದೇ ಸೂರಿನಡಿ ಸ್ವಚ್ಛ ಹಾಗೂ ವೈವಿಧ್ಯಮಯ ಆಹಾರಗಳನ್ನು ಒದಗಿಸುವುದು ಈ ಫುಡ್ ಹಬ್‌ನ ಮುಖ್ಯ ಉದ್ದೇಶವಾಗಿದೆ. ಇದರಿಂದ ಸ್ಥಳೀಯ ಬೀದಿ ಬದಿ ವ್ಯಾಪಾರಿಗಳಿಗೂ ಆರ್ಥಿಕ ಸಬಲೀಕರಣಕ್ಕೆ ಅವಕಾಶ ಸಿಗಲಿದ್ದು, ಹಂಪಿಯ ಪ್ರವಾಸೋದ್ಯಮಕ್ಕೆ ಹೊಸ ಮೆರುಗು ಸಿಗಲಿದೆ. ಕೇಂದ್ರ ಸರ್ಕಾರದ ಪಿ.ಎಂ.ಸ್ವನಿಧಿ ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳ ಉಪ ಘಟಕದಡಿ ಈ ಯೋಜನೆ ಹಮ್ಮಿಕೊಳ್ಳಲಾಗಿದೆ. ಅದರಂತೆ ರಾಜ್ಯದಲ್ಲಿ ಚಾಮುಂಡಿ ಬೆಟ್ಟ, ಬೇಲೂರು-ಹಳೇಬೀಡು, ಗಾಣಗಾಪುರ, ಪಟ್ಟದಕಲ್ಲು ಹಾಗೂ ಹಂಪಿ ಸೇರಿ 5 ಪ್ರದೇಶಗಳಲ್ಲಿ ಸ್ಟ್ರೀಟ್ ಫುಡ್ ಹಬ್ ಸ್ಥಾಪಿಸಲು ನಿರ್ಧರಿಸಲಾಗಿದೆ. ಅದರಲ್ಲಿ ನಮ್ಮ ಹಂಪಿಯೂ ಸೇರಿದ್ದು, ಹೆಮ್ಮೆಯ ಸಂಗತಿಯಾಗಿದೆ ಎಂದರು.

ಈಗಾಗಲೇ ದೊಡ್ಡ ಆಲದ ಮರದ ಎದುರು ಹಾಗೂ ಹಂಪಿ ಪಾರ್ಕಿಂಗ್ ಸ್ಥಳದ ಹತ್ತಿರ ಗುತ್ತಿಲ್ಯಾಂಡ್ ಸೇರಿ ಎರಡು ಕಡೆ ಸ್ಥಳ ಸಹ ಗುರುತಿಸಲಾಗಿದ್ದು, ಭೂಮಿ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಈ ನಿಟ್ಟಿನಲ್ಲಿ ಒಂದು ಸ್ಟ್ರೀಟ್ ಫುಡ್ ಹಬ್‌ನಲ್ಲಿ 50 ಜನ ವ್ಯಾಪಾರಗಾರರಿಗೆ ಅವಕಾಶವಿದ್ದು, ದೇಶ ವಿದೇಶಗಳಿಂದ ಆಹಾರ ಹರಸಿ ಬರುವವರಿಗೆ ಶುಚಿ ಮತ್ತು ರುಚಿಯಾದ ಶುದ್ಧ ಆಹಾರ ಒದಗಿಸಬೇಕು. ಜತೆಗೆ ಗ್ರಾಹಕರಿಗೆ ನೀರು, ನೆರಳು ಸೇರಿ ಅಗತ್ಯ ಮೂಲ ಸೌಕರ್ಯಗಳನ್ನೊಳಗೊಂಡಂತೆ ಮಳಿಗೆಗಳ ಸುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದರು.

ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮನೋಹರ್, ಹಂಪಿ ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ರಮೇಶ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಜಿಲ್ಲಾ ಅಭಿಯಾನ ವ್ಯವಸ್ಥಾಪಕ ದೇವರಾಜ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.



> **ಸ್ಟ್ರೀಟ್ ಫುಡ್ ಹಬ್ ಸ್ಥಾಪಿಸಲು ಒಂದು ಕ್ಲಸ್ಟರ್‌ಗೆ 4 ಕೋಟಿ ವೆಚ್ಚದಲ್ಲಿ ತಾತ್ಕಾಲಿಕ ಮಳಿಗೆ ಸ್ಥಾಪಿಸಿ ವ್ಯಾಪಾರ ನಡೆಸಲು ಅನುಮತಿ ನೀಡಲಾಗುವುದು. ಈ ಯೋಜನೆಯ ಅನುಷ್ಠಾನಕ್ಕಾಗಿ ಹಂಪಿ ಗ್ರಾಮ ಪಂಚಾಯಿತಿ ಹಾಗೂ ಕಮಲಾಪುರ ಪುರಸಭೆ ಜಂಟಿಯಾಗಿ ಕಾರ್ಯನಿರ್ವಹಿಸಲಿವೆ. ಈಗಾಗಲೇ ಈ ಯೋಜನೆಗಾಗಿ ಮಳಿಗೆ ಸ್ಥಾಪಿಸಲು 3 ಸ್ಥಳ ಗುರುತಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ.**
> ■ ಕವಿತಾ ಎಸ್.ಮನ್ನಿಕೇರಿ, ಜಿಲ್ಲಾಧಿಕಾರಿ

ಉತ್ತಮ ತಳಿಯ ಬೀಜ ಬಳಸಿ

ಸಿರುಗುಪ್ಪ: ಹತ್ತಿಯಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯಲು ಸಮರ್ಪಕ ನೀರಾವರಿ, ಸಾವಯವ ಗೊಬ್ಬರ ಮತ್ತು ಸಾಂದ್ರ ಪದ್ಧತಿಯ ಕೃಷಿ ಪದ್ಧತಿ ಅಳವಡಿಸಿಕೊಳ್ಳುವುದು ಅತ್ಯಗತ್ಯ. ಸಕಾಲದಲ್ಲಿ ಕೀಟ ಮತ್ತು ರೋಗ ನಿರ್ವಹಣೆ ಇಳುವರಿ ಹೆಚ್ಚಳವಾಗಲಿದೆ ಎಂದು ರಾಯಚೂರು ವಿಶ್ವವಿದ್ಯಾಲಯದ ಸಂಶೋಧನಾ ಸಹಾಯಕ ನಿರ್ದೇಶಕ ನಿಡಗುಂಡಿ ಜಯಪ್ರಕಾಶ್ ಹೇಳಿದರು.

ತಾಲೂಕಿನ ಹಚ್ಚೊಳ್ಳಿ ಹೋಬಳಿಯ ಮಿಟ್ಟೆಸೂಗುರು ಗ್ರಾಮದಲ್ಲಿ ಕೃಷಿ ಇಲಾಖೆ, ಅಖಿಲ ಭಾರತ ಹತ್ತಿ ಅಭಿವೃದ್ಧಿ ಯೋಜನೆ, ಎಐಸಿಆರ್ಪಿ, ಸಿಐಸಿಆರ್, ಐಸಿಎಆರ್ ನ್ಯೂ ದೆಹಲಿ ಆಶ್ರಯದಲ್ಲಿ ಬಿಟಿ ಹತ್ತಿಯಲ್ಲಿ ಅಧಿಕ ಇಳುವರಿಗಾಗಿ ಬೇಸಾಯ ತಾಂತ್ರಿಕತೆಗಳ ಕಾರ್ಯಗಾರ ಮತ್ತು ಧರ್ತಿ ಮಾತಾ ಬಚಾವೋ ಅಭಿಯಾನದ ನಿಮಿತ್ತ ಹಮ್ಮಿಕೊಂಡಿದ್ದ ಸಮತೋಲಿತ ರಸಗೊಬ್ಬರಗಳ ಬಳಕೆ ಕುರಿತು ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ರೆಡ್ಡಿ ಮಾತನಾಡಿ, ರೈತರು ಒಂದೇ ತಳಿಯ ಒಂದೇ ಕಂಪನಿಯ ಬೀಜಗಳಿಗೆ ಅಂಟಿಕೊಳ್ಳದೇ ಮಾರುಕಟ್ಟೆಯಲ್ಲಿ ಸಿಗುವ ಇತರೆ ಕಂಪನಿಗಳ ಅಧಿಕ ಇಳುವರಿ ತರುವ ಬೀಜಗಳನ್ನು ಖರೀದಿಸಬೇಕು. ಬೀಜಗಳನ್ನು ಖರೀದಿಸುವಾಗ ರೈತರು ತಪ್ಪದೇ ರಸೀದಿಯನ್ನು ಪಡೆಯಬೇಕು. ಮಾರುಕಟ್ಟೆಯಲ್ಲಿ ಸಿಗುವ ಅನಧಿಕೃತ ಅಪ್ರಮಾಣಿತ ಬೀಜಗಳನ್ನು ಖರೀದಿಸಬಾರದು. ನೆರೆ ರಾಜ್ಯಗಳಿಂದ ಬೀಜಗಳನ್ನು ಖರೀದಿಸುವಾಗ ಎಚ್ಚರ ವಹಿಸಬೇಕು ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಧರ್ತಿ ಮಾತಾ ಬಚಾವೋ ಆಂದೋಲನದ ಅಂಗವಾಗಿ ಹಮ್ಮಿಕೊಂಡ ಸಮತೋಲಿತ ರಸಗೊಬ್ಬರಗಳ ಬಳಕೆ ಕುರಿತು ಮಾಹಿತಿ ನೀಡಿದರು.

ಸಿರುಗುಪ್ಪ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರಾದ ಮಂಜುನಾಥ ರೆಡ್ಡಿ, ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಶಿವಾನಂದ ಹಂಚಿನಾಳ, ಕೃಷಿ ಅಧಿಕಾರಿಗಳಾದ ಬಾಲಜಿ ನಾಯಕ್, ಪುರುಷೋತ್ತಮ್, ಪರಮೇಶ್ವರ್ ರೆಡ್ಡಿ ಮತ್ತು ಊರಿನ ಮುಖಂಡರಾದ ವೆಂಕಟರೆಡ್ಡಿ, ಬೊಮ್ಮಲಾಪುರ, ಕೊತ್ತಲ್ ಚಿಂತಾ, ಅಗಸನೂರು, ರಾವಿಹಾಳ ಗ್ರಾಮಗಳ ರೈತರು ಭಾಗವಹಿಸಿದ್ದರು. ಆತ್ಮ ಯೋಜನೆಯ ಅಧಿಕಾರಿಗಳಾದ ಹರೀಶ್ ನಾಯಕ್ ಮತ್ತು ಹುಸೇನ್ ಭಾಷಾ ಭಾಗವಹಿಸಿದ್ದರು.



ಗುರಿ ಸ್ಪಷ್ಟವಾಗಿದ್ದರೆ ಯಶಸ್ಸು ಖಚಿತ: ರಾಜುಗೌಡ

ಹುಣಸಗಿ: ವಿದ್ಯಾರ್ಥಿಗಳು ಏಕಾಗ್ರತೆ, ಸಹನೆ ಮತ್ತು ದೃಢ ಸಂಕಲ್ಪದೊಂದಿಗೆ ಶಿಕ್ಷಣದಲ್ಲಿ ಮುಂದುವರಿದರೆ ಬದುಕಿನಲ್ಲಿ ಉನ್ನತ ಮಟ್ಟದ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ಮಾಜಿ ಸಚಿವ ರಾಜುಗೌಡ ಅಭಿಪ್ರಾಯಪಟ್ಟರು.

ಪಟ್ಟಣದ ಅಮ್ಮನ ಮನೆ ಆವರಣದಲ್ಲಿ ಮಾತೋಶ್ರೀ ಸುಶೀಲಮ್ಮ ಪಟ್ಟಣಶೆಟ್ಟಿ ಸ್ಮಾರಕ ಪ್ರತಿಷ್ಠಾನ ವತಿಯಿಂದ ತಾಲೂಕಿನ ವಿವಿಧ ಶಾಲೆಗಳ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳು ಪರಿಶ್ರಮ, ನಿಯಮಿತ ಜೀವನಶೈಲಿ ಮತ್ತು ಸ್ಪಷ್ಟ ಉದ್ದೇಶದೊಂದಿಗೆ ವಿದ್ಯಾಭ್ಯಾಸ ಮಾಡಿದರೆ ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡಬಹುದು. ಪ್ರತಿಯೊಬ್ಬರೂ ತಮ್ಮ ಜೀವನ ಗುರಿಯನ್ನು ನಿಗದಿಪಡಿಸಿಕೊಂಡು ನಿರಂತರ ಅಭ್ಯಾಸಕ್ಕೆ ಒತ್ತು ನೀಡಬೇಕು ಎಂದು ಹೇಳಿದರು.

ದೇವಾಪುರ ಗ್ರಾಮದ ಶ್ರೀಗಳಾದ ಶಿವಮೂರ್ತಿ ಶಿವಚಾರ್ಯ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಅಸಾಧಾರಣ ಪ್ರತಿಭೆ ಅಡಗಿದೆ. ಆ ಪ್ರತಿಭೆಯನ್ನು ಗುರುತಿಸಿ ಉತ್ತೇಜಿಸುವ ಕಾರ್ಯವನ್ನು ಪ್ರತಿಷ್ಠಾನ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಗ್ರಾಮೀಣ ಭಾಗದ ಮಕ್ಕಳಿಗೆ ಮಾರ್ಗದರ್ಶನ ಹಾಗೂ ನೆರವು ನೀಡುತ್ತಿರುವ ಡಾ.ಎಸ್.ಪಿ.ದಯಾನಂದ ಅವರ ಸೇವೆಯನ್ನು ಅವರು ಪ್ರಶಂಸಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಚನ್ನಬಸಪ್ಪ ಮುದೋಳ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷೆ ಮಮತಾ ದಯಾನಂದ, ಉದ್ಯಮಿ ಎಸ್.ಪಿ.ದಯಾನಂದ ಮಾತನಾಡಿದರು. ನೂರಕ್ಕೂ ಹೆಚ್ಚು ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ 5 ಸಾವಿರ ನಗದು ಬಹುಮಾನ, ಪ್ರಶಸ್ತಿ ಫಲಕ ಮತ್ತು ಪದಕ ನೀಡಿ ಗೌರವಿಸಲಾಯಿತು. ಜೊತೆಗೆ ತಾಲೂಕಿನ 15 ಶಾಲೆಗಳು ಶೇ.100 ಫಲಿತಾಂಶ ದಾಖಲಿಸಿದ್ದ ಹಿನ್ನೆಲೆ ಮುಖ್ಯ ಶಿಕ್ಷಕರನ್ನು ಸನ್ಮಾನಿಸಲಾಯಿತು. ಕನಕಪ್ಪ ವಾಗನಗೇರಿ, ಶ್ರೀನಿವಾಸ, ಚಂದ್ರಶೇಖರ ಪಟ್ಟಣಶೆಟ್ಟಿ, ವೀರೇಶ್ ಚಿಂಚೋಳಿ, ಚಂದ್ರಶೇಖರ್ ದಂಡಿನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಅಮರಯ್ಯ ಸ್ವಾಮಿ ಜಾಲಿಬೆಂಚಿ ಕಾರ್ಯಕ್ರಮ ನಿರೂಪಿಸಿದರು. ಬಸವರಾಜ್ ವಜ್ಜಲ್ ವಂದಿಸಿದರು.



ಸಂತರ ವಿಚಾರಗಳು ಸಾರ್ವಕಾಲಿಕ: ಶ್ವೇತಾ

ಹೂವಿನಹಡಗಲಿ: ಸಂತರ ವಿಚಾರಧಾರೆಗಳು ಯಾವುದೇ ಒಂದು ಕಾಲಕ್ಕೆ ಸೀಮಿತವಾಗದೇ, ಎಲ್ಲ ಕಾಲಗಳಲ್ಲಿಯೂ ಮಾನವ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತವೆ ಎಂದು ಉಪನ್ಯಾಸಕಿ ಶ್ವೇತಾ ಬೀರಬ್ಬಿ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಗವಿಸಿದ್ದೇಶ್ವರ ಶಾಖಾಮಠದಲ್ಲಿ ಆಯೋಜಿಸಿದ್ದ ಮಾಸಿಕ 215 ಶಿವಾನುಭವ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದರು.

ಸಂತರ ಸಂದೇಶಗಳು ಮಾನವೀಯತೆ, ಸಮಾನತೆ, ಶಾಂತಿಯ ತತ್ವಗಳನ್ನು ಒಳಗೊಂಡಿವೆ. ಬಸವಣ್ಣ ಅವರು ಪ್ರತಿಪಾದಿಸಿದ ಕಾಯಕವೇ ಕೈಲಾಸ ತತ್ವ ಇಂದಿಗೂ ಪ್ರಸ್ತುತವಾಗಿದ್ದು, ಶ್ರಮದ ಗೌರವವನ್ನು ಎತ್ತಿಹಿಡಿಯುತ್ತದೆ ಎಂದರು.

ಪತ್ರಕರ್ತ ದಯಾನಂದ ಎಂ. ಮಾತನಾಡಿ, ಗೌತಮ ಬುದ್ಧ ಅವರ ಅಹಿಂಸೆ ಕರುಣೆಯ ಮಾರ್ಗವು ಇಂದಿನ ಸಮಾಜದಲ್ಲಿ ಹೆಚ್ಚುತ್ತಿರುವ ಅಶಾಂತಿಗೆ ಪರಿಹಾರವಾಗಿದೆ. ಜೊತೆಗೆ ಕಬೀರ ದಾಸ್ ತುಕಾರಾಮ ಅವರು ಸಾರಿದ ಭಕ್ತಿ, ಸರಳತೆ ಸಮಾನತೆಯ ಸಂದೇಶಗಳು ಮನುಕುಲದ ಏಕತೆಗೆ ದಾರಿಯಾಗಿದೆ ಎಂದರು.

ಸಂತರ ವಿಚಾರಗಳು ಕೇವಲ ಧಾರ್ಮಿಕ ಚೌಕಟ್ಟಿಗೆ ಸೀಮಿತವಾಗದೇ, ಸಾಮಾಜಿಕ ಬದಲಾವಣೆಗೆ ಪ್ರೇರಣೆ ನೀಡುವ ಶಕ್ತಿಯಾಗಿವೆ. ಇವುಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕ ಎಂದರು.



ಪುರಸಭೆ ಮುಖ್ಯಾಧಿಕಾರಿ ಹನುಮಂತಪ್ಪ ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆಯನ್ನು ಡಾ.ಹಿರಿಶಾಂತವೀರ ಸ್ವಾಮೀಜಿ ವಹಿಸಿದ್ದರು. ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಟಿ.ಎಂ.ನಾಗಭೂಷಣ, ಪತ್ರಕರ್ತ ನಾಗರಾಜ ಮಲ್ಕಿಒಡೆಯರ, ನಿವೃತ್ತ ಅಭಿಯಂತರ ಎಚ್.ಎಂ.ಶಶಿಧರಯ್ಯ, ತೇರಿನ ಮನಿ ಕಳಕರಡ್ಡಿ, ಜ್ಯೋತಿ ಪ್ರಕಾಶ, ಟಿ.ಗಂಗಮ್ಮ ಇತರರಿದ್ದರು.

ನಂತರ ಭಕ್ತಿಸೇವೆ ಗೈದ ಭಕ್ತರಿಗೆ ಗುರು ರಕ್ಷೆ ನೀಡಿ ಗೌರವಿಸಲಾಯಿತು. ಸೋಮಶೇಖರ ಬಳೆಗಾರ ಭಾವಗೀತೆಗಳನ್ನು ಹಾಡಿದರು. ವಿದ್ಯಾರ್ಥಿ ಹರ್ಷಾ, ದೇವಪ್ಪ ಒಂದಾಲಿ, ಎಚ್.ಬಿ.ರಾಜಣ್ಣ, ಎಚ್.ಎಂ.ಚನ್ನಬಸಯ್ಯ ನಿರೂಪಿಸಿದರು.

ಜೆಡಿಎಸ್ ತಾಲೂಕು ಅಧ್ಯಕ್ಷರ ನೇಮಕ: ಆದೇಶ ಪತ್ರ ವಿತರಣೆ

ಬಳ್ಳಾರಿ: ನಗರದ ಜೆಡಿಎಸ್ ಜಿಲ್ಲಾ ಕಚೇರಿ ಸಭಾಂಗಣದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರ ನೇತೃತ್ವದಲ್ಲಿ ತಾಲೂಕು ಅಧ್ಯಕ್ಷರನ್ನೂ ನೂತನವಾಗಿ ಆಯ್ಕೆ ಮಾಡಿ, ನೇಮಕಾತಿ ಆದೇಶ ಪತ್ರವನ್ನು ವಿತರಿಸಲಾಯಿತು.

ಕಂಪ್ಲಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ನೂತನ ಅಧ್ಯಕ್ಷರಾಗಿ ಎಳ್ಳೆ ಮೇಘರಾಜ, ಸಂಡೂರು ವಿಧಾನಸಭಾ ಕ್ಷೇತ್ರಕ್ಕೆ ನೂತನ ತಾಲೂಕು ಅಧ್ಯಕ್ಷರಾಗಿ ಹೊಸಿಗೇರಪ್ಪ, ಸಿರುಗುಪ್ಪ ತಾಲೂಕು ಅಧ್ಯಕ್ಷರಾಗಿ ಶಿವನಾರಾಯಣ, ಜಿಲ್ಲಾ ಉಪಾಧ್ಯಕ್ಷರಾಗಿ ರಾಮಾಂಜಿನೇನಿ ಹಾಗೂ ಕಂಪ್ಲಿ ವಿಧಾನಸಭಾ ಕ್ಷೇತ್ರದ ಯುವ ಘಟಕದ ಅಧ್ಯಕ್ಷರಾಗಿ ಭರತ್ ಕುಮಾರ್ ಅವರನ್ನು ಆಯ್ಕೆ ಮಾಡಿ, ಎಲ್ಲರಿಗೂ ಆದೇಶ ಪತ್ರಗಳನ್ನು ವಿತರಿಸಲಾಯಿತು.

ಇದಕ್ಕೂ ಮುನ್ನ ಕಚೇರಿಯಲ್ಲಿ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರ ಅಧ್ಯಕ್ಷತೆಯಲ್ಲಿ ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳ ಕುರಿತು ಸಭೆ ನಡೆಸಿ ಚರ್ಚೆ ನಡೆಸಲಾಯಿತು.



ಜೆಡಿಎಸ್ ರಾಜ್ಯ ಮಹಾ ಪ್ರಧಾನ ಕಾರ್ಯದರ್ಶಿ ಸೋಮಪ್ಪ ಕುರೆಕುಪ್ಪ, ಯಲ್ಲನಗೌಡ, ಜಿಲ್ಲಾ ಕಾರ್ಯಾಧ್ಯಕ್ಷ ವಿಜಯ್‌ಕುಮಾರ್ ಮಧುರೈ, ಉಪಾಧ್ಯಕ್ಷ ರಾಮಾಂಜಿನೇನಿ, ಬಾಷಾ, ಮಲ್ಲಿಕಾರ್ಜುನ, ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಜೆ., ಶಿವಗಂಗಾ, ವಿಜಯ, ಶಮೀಮ್ ಬಾನು, ರಮಾದೇವಿ ಸೇರಿದಂತೆ ಪಕ್ಷದ ವಿವಿಧ ಗಣ್ಯರು, ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಕುಡಿಯುವ ನೀರಿನ ಸಮಸ್ಯೆ ಆಗದಂತೆ ಜಾಗ್ರತೆ ವಹಿಸಿ

ಹಗರಿಬೊಮ್ಮನಹಳ್ಳಿ: ತಾಲೂಕಿನ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಾಗೂ ಕ್ಷೇತ್ರದ ಕೊಟ್ಟೂರು, ಮರಿಯಮ್ಮನಹಳ್ಳಿ ಹಾಗೂ ಹಗರಿಬೊಮ್ಮನಹಳ್ಳಿ ಪ್ರತಿ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಮುಂಜಾಗ್ರತೆ ವಹಿಸಿ ಎಂದು ಕ್ಷೇತ್ರದ ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ಬುಧವಾರ ಪಟ್ಟಣದ ಸರ್ಕ್ಯೂಟ್ ಹೌಸ್‌ನಲ್ಲಿ ಶಾಸಕರ ನೇತೃತ್ವದಲ್ಲಿ ಕರೆಯಲಾಗಿದ್ದ ಕುಡಿಯುವ ನೀರಿಗೆ ಸಂಬಂಧಿಸಿದ ಟಾಸ್ಕ್ ಫೋರ್ಸ್ ಸಭೆಯಲ್ಲಿ ಮಾತನಾಡಿದ ಅವರು, ಹೊಳೆ ನೀರಿನ ಸಂಪರ್ಕ ಬಂದ್ ಆಗುವ ಲಕ್ಷಣಗಳಿವೆ. ಎಲ್ಲೆಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಲ್ಲೆಲ್ಲಿ ಬೋರ್‌ವೆಲ್‌ಗಳ ಅಗತ್ಯತೆ ಇದೆ ತಿಳಿಸಿ ಕುಡಿಯುವ ನೀರಿನ ಟ್ಯಾಂಕ್‌ಗಳ ಸ್ವಚ್ಛತೆಗೆ ಚರಂಡಿಗಳ ಸ್ವಚ್ಛತೆಗೆ ಆದ್ಯತೆ ನೀಡಿ ನಾವು ಹಳ್ಳಿಗಳಿಗೆ ಹೋದಾಗಲೆಲ್ಲ ಚರಂಡಿಯ ಸ್ವಚ್ಛತೆಗಳ ಬಗ್ಗೆ ಹೆಚ್ಚು ದೂರುಗಳು ಬರುತ್ತಿದ್ದು ಈ ಬಗ್ಗೆ ಗಮನ ಹರಿಸಬೇಕು ಎಂದು ಸೂಚಿಸಿದರು.

ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳು ಮಾತನಾಡಿ, ಕೊಟ್ಟೂರಿನಲ್ಲಿ ಸದ್ಯದ ಮಟ್ಟಿಗೆ ಯಾವುದೇ ರೀತಿಯ ಕುಡಿಯುವ ನೀರಿನ ಸಮಸ್ಯೆ ಇಲ್ಲ ಮರಿಯಮ್ಮನಹಳ್ಳಿಯಲ್ಲಿಗೆ ಬರುವ ಜಾಕ್ವಲ್‌ನಲ್ಲಿ ನೀರು ಕಡಿಮೆ ಆಗಿದೆ ಎಂದರು. ಮರಬ್ಬಿಹಾಳು ಗ್ರಾಪಂಗೆ ಎಸ್ಎಲ್ಆರ್‌ನಿಂದ ಪ್ರತಿ ವರ್ಷ 50 ಲಕ್ಷ ತೆರಿಗೆ ವಸೂಲಿ ಮಾಡಲಾಗುತ್ತದೆ ಎಂದು ಪಿಡಿಒ ರತ್ನಮ್ಮ ಮಾಹಿತಿ ನೀಡಿದರು.

ಉದ್ಯೋಗ ಖಾತ್ರಿ ಅಧಿಕಾರಿ ರಮೇಶ್ ಮಹಾಲಿಂಗಪುರ, ಕುಡಿಯುವ ನೀರು ಸರಬರಾಜು ಇಲಾಖೆಯ ಬಸವರೆಡ್ಡಿ, ಪಶು ಸಂಗೋಪನೆ ಇಲಾಖೆಯ ಡಾ.ಸೂರಪ್ಪ, ಲೋಕೋಪಯೋಗಿ ಇಲಾಖೆಯ ಅಧಿಕಾರಿ ಸತೀಶ್ ನಾಯ್ಕ್ ವಿವಿಧ ಇಲಾಖೆಗಳ ಅಧಿಕಾರಿಗಳು ಪಿಡಿಒಗಳು ಮಾಹಿತಿ ನೀಡಿದರು.



> **ತಾಲೂಕಿನ 21 ಗ್ರಾಪಂಗಳ ಪೈಕಿ 14 ಗ್ರಾಪಂ ವ್ಯಾಪ್ತಿಯ 26 ಹಳ್ಳಿಗಳನ್ನು ಸಮಸ್ಯಾತ್ಮಕ ಹಳ್ಳಿಗಳೆಂದು ಗುರುತಿಸಲಾಗಿದೆ.ನೀರಿನ ಸಮಸ್ಯೆ ಇರುವ ಕಡೆ ಹೀಗಾಗಲೇ 10 ಖಾಸಗಿ ಬೋರವೆಲ್ ಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.**
> ■ ವಿಶ್ವನಾಥ ಪಲ್ಲಾಯನಕೋಟೆ, ತಾಪಂ ಇಒ

> **ಹಗರಿಬೊಮ್ಮನಹಳ್ಳಿ 23 ವಾರ್ಡ್‌ಗಳ ವ್ಯಾಪ್ತಿಯಲ್ಲಿ 107 ಬೋರ್‌ವೆಲ್ ಗಳಿವೆ. ಇದರಲ್ಲಿ 66 ರನ್ನಿಂಗ್ ಇವೆ. ಉಳಿದಂತೆ ಕೆಲ ಬೋರ್‌ವೆಲ್ ಕಾಯ್ದಿರಿಸಲಾಗಿದೆ. 40 ಮಿನಿ ಟ್ಯಾಂಕ್‌ಗಳಿವೆ. ಬೋರ್‌ವೆಲ್‌ಗಳಿಗೆ 25 ವಿದ್ಯುತ್ ಪರಿವರ್ತಕಗಳು ಬೇಕಿವೆ.**
> ■ ಎಂ.ಕೆ.ಮುಗಳಿ, ಮುಖ್ಯಾಧಿಕಾರಿ

ಅಭಿಮಾನೋತ್ಸವದಲ್ಲಿ ಭಾಗವಹಿಸಿ: ಶಾಸಕ

ಬೀದರ: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸಾರ್ಥಕ ರಾಜಕೀಯ ಬದುಕಿನ ಗೌರವಾರ್ಥವಾಗಿ ಮೇ 9ರಂದು ಚಿತ್ರದುರ್ಗದಲ್ಲಿ ಏರ್ಪಡಿಸಲಾಗಿರುವ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಅಭಿಮಾನಿಗಳು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಜಿ ಸಚಿವರು, ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಮನವಿ ಮಾಡಿದ್ದಾರೆ

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಬಿ.ಎಸ್.ಯಡಿಯೂರಪ್ಪ ಅವರು ನಾಡು ಕಂಡ ಅಪರೂಪದ ರಾಜಕಾರಣಿ. ಸಮಾಜಮುಖಿ ಹೋರಾಟಗಳ ಮುಖಾಂತರ ರಾಜಕೀಯಕ್ಕೆ ಬಂದ ಇವರು, ಮುಖ್ಯಮಂತ್ರಿಯಾಗಿ ಸಲ್ಲಿಸಿದ ಸೇವೆ ಅವಿಸ್ಮರಣೀಯ. ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದು ಪಕ್ಷ ಸಂಘಟನೆಯನ್ನು ರಾಜ್ಯದ ಮೂಲೆ ಮೂಲೆಗೂ ವಿಸ್ತರಿಸಿದ ಶ್ರೇಯಸ್ಸು ಅವರದ್ದಾಗಿದೆ ಎಂದು ಬಣ್ಣಿಸಿದ್ದಾರೆ.

ರೈತರಿಗಾಗಿ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ದೇಶದ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ರೈತರಿಗೆ ಶೂನ್ಯ ಬಡ್ಡಿದರ ಸಾಲ, ನೀರಾವರಿ ಯೋಜನೆಗಳಿಗೆ ವೇಗ, ಬೆಳೆ ಪರಿಹಾರ ವಿತರಣೆಯಲ್ಲಿ ಪಾರದರ್ಶಕತೆ ಸೇರಿದಂತೆ ಹಲವು ರೈತಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರು. ಬಡ ಹೆಣ್ಣು ಮಕ್ಕಳಿಗಾಗಿ ಭಾಗ್ಯಲಕ್ಷ್ಮೀ ಯೋಜನೆ, ಸೈಕಲ್ ವಿತರಣೆಯಂತಹ ಅನೇಕ ಜನಪರ ಯೋಜನೆಗಳ ಮೂಲಕ ಜನಮನ ಗೆದ್ದಿದ್ದಾರೆ ಎಂದು ತಿಳಿಸಿದ್ದಾರೆ.

ಲಕ್ಷಾಂತರ ಕಾರ್ಯಕರ್ತರ ಸಮ್ಮುಖದಲ್ಲಿ ಐತಿಹಾಸಿಕವಾಗಿ ಕಾರ್ಯಕ್ರಮ ನಡೆಯಲಿದ್ದು, ಯಡಿಯೂರಪ್ಪ ಅಭಿಮಾನಿಗಳು, ಮುಖಂಡರು, ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಬೇಕೆಂದು ಶಾಸಕರು ಮನವಿ ಮಾಡಿದ್ದಾರೆ.

ಭಗೀರಥ ಮಹರ್ಷಿ ಜಯಂತಿ ಆಚರಣೆ

ಹಗರಿಬೊಮ್ಮನಹಳ್ಳಿ: ಭೂಮಿಗೆ ಗಂಗೆಯನ್ನು ಕರೆ ತಂದ ಭಗವಂತ ಭಗೀರಥಮಹರ್ಷಿಜಯಂತೋತ್ಸವ ಅಂಗವಾಗಿ ಭಗೀರಥ ಮಹರ್ಷಿ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ ಹೊಸದುರ್ಗದ ಮಠದ ಡಾ.ಶ್ರೀಪುರುಷೋತ್ತಮನಂದಪುರಿ ಸ್ವಾಮೀಜಿ ಮೆರವಣಿಗೆಗೆ ಚಾಲನೆ ನೀಡಿದರು.

ಹಗರಿ ಆಂಜನೇಯ ದೇವಸ್ಥಾನದಿಂದ ಭಗೀರಥ ಭವನದವರೆಗೆ ಡೊಳ್ಳು ನಂದಿಕೋಲು ಸಮಾಳ ವಿವಿಧ ವಾದ್ಯ ಮೇಳದೊಂದಿಗೆ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಅದ್ದೂರಿ ನಡೆಯಿತು.

ಶಾಸಕ ಕೆ.ನೇಮಿರಾಜ್ ನಾಯ್ಕ್, ಉಪ್ಪಾರ ಸಮಾಜದ ತಾಲೂಕು ಅಧ್ಯಕ್ಷ ಕನಕಪ್ಪ ಮುಖಂಡರಾದ ಗುಂಡ್ರು ಹನುಮಂತಪ್ಪ, ಉಪ್ಪಾರ ವೆಂಕಟೇಶ್, ನಿವೃತ್ತ ಶಿಕ್ಷಕ ಕೊಟ್ರೇಶಪ್ಪ, ಹೂಗಾರ, ಮಂಜುನಾಥ ವಿವಿಧ ಗ್ರಾಮಗಳಿಂದ ಬಂದ ಉಪ್ಪಾರ ಸಮಾಜದ ಹಿರಿಯರು ಮಹಿಳೆಯರು ಮಕ್ಕಳು ಯುವಕರು ಪಾಲ್ಗೊಂಡಿದ್ದರು.

